ಭಾನುವಾರ, ಜೂನ್ 28, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಪರಾರಿಯಾದ ಚಾಲಕ: 60 ಕಿ.ಮೀ ಬೆನ್ನಟ್ಟಿ ಹಿಡಿದ ಪೊಲೀಸರು

ಮಾನಪುರ (ಛತ್ತೀಸಗಢ) (ಪಿಟಿಐ): ಅತಿವೇಗದಲ್ಲಿ ಸಾಗುತ್ತಿದ್ದ ಟ್ರಕ್ ಚಾಲಕನೊಬ್ಬ 11 ವರ್ಷದ ಬಾಲಕಿಗೆ ಟ್ರಕ್ ಡಿಕ್ಕಿ ಹೊಡೆಸಿ, ಪೊಲೀಸ್ ಬ್ಯಾರಿಕೇಡ್ ಅನ್ನೂ ಮೀರಿ ಪರಾರಿಯಾಗಲು ಯತ್ನಿಸಿದ್ದ. ಬಳಿಕ ಪೊಲೀಸರು 60 ಕಿ.ಮೀ ಬೆನ್ನಟ್ಟಿ ಛತ್ತೀಸಗಢ- ಮಹಾರಾಷ್ಟ್ರ ಗಡಿ ಸಮೀಪ ಆತನನ್ನು ಬಂಧಿಸಿದ್ದಾರೆ.

ಮೊಹ್ಲಾ-ಮಾನಪುರ-ಅಂಬಗಢ ಚೌಕಿ ಮಾರ್ಗದಲ್ಲಿ ಅತಿ ವೇಗವಾಗಿ ಸಾಗುತ್ತಿದ್ದ ಚಾಲಕನನ್ನು ಸತತ ಎರಡು ತಾಸು ಬೆನ್ನಟ್ಟಿ, ಮಹಾರಾಷ್ಟ್ರ ಗಡಿಯಿಂದ ಕೇವಲ 6 ಕಿ.ಮೀ ದೂರದಲ್ಲಿ ಬಂಧಿಸಲಾಗಿದೆ. ಪೊಲೀಸರ ಕೈಯಿಂದ ತಪ್ಪಿಸಿಕೊಳ್ಳಲು ಚಾಲಕ ವೇಗವಾಗಿ ಸಾಗುತ್ತಿರುವ ಸಂದರ್ಭದ ಕೆಲವು ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


'ಟ್ರಕ್ ಗುದ್ದಿದ ರಭಸಕ್ಕೆ ಬಾಲಕಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾಳೆ' ಎಂದು ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪಿತಾಂಬರ್ ಪಟೇಲ್ ತಿಳಿಸಿದ್ದಾರೆ.

'ಆರೋಪಿಯು ಬಾಲಕಿಗೆ ಟ್ರಕ್ ಅನ್ನು ಗುದ್ದಿಸಿದ ಬಳಿಕ ವಾಹನವನ್ನು ನಿಲ್ಲಿಸದೆ ಪರಾರಿಯಾಗಲು ಯತ್ನಿಸಿದ್ದ. ವಿಷಯ ತಿಳಿದ ತಕ್ಷಣವೇ ಚಾಲಕನನ್ನು ಬಂಧಿಸಲು ಮೊಹ್ಲಾ ಪೊಲೀಸ್ ಠಾಣೆ ಬಳಿ ಬ್ಯಾರಿಕೇಡ್ ಹಾಕಲಾಗಿತ್ತು. ಆದರೆ ಚಾಲಕ ಬ್ಯಾರಿಕೇಡ್‌ಗಳಿಗೆ ಲಾರಿಯನ್ನು ಡಿಕ್ಕಿ ಹೊಡೆಸಿ ಮುಂದಕ್ಕೆ ಸಾಗಿದ. ಪೊಲೀಸರು ಆತನನ್ನು ಬೆನ್ನಟ್ಟಿದ್ದರು. ಬಳಿಕ ಪೊಲೀಸರು ಮಾನಪುರದ ಎಸ್‌ಡಿಎಂ ಕಚೇರಿ ಬಳಿ ಮತ್ತೊಂದು ಬ್ಯಾರಿಕೇಡ್ ಹಾಕಿದ್ದರು. ಮತ್ತೆ ಬ್ಯಾರಿಕೇಡ್‌ಗೆ ವಾಹನವನ್ನು ಗುದ್ದಿಸಿ ಮುಂದಕ್ಕೆ ಸಾಗಿದ. ಈ ಸಂದರ್ಭದಲ್ಲಿ ಪೊಲೀಸರ ಮೇಲೂ ವಾಹನ ಹತ್ತಿಸಲು ಯತ್ನಿಸಿದ್ದ. ಆದರೆ ಮಹಾರಾಷ್ಟ್ರ ಗಡಿಯಿಂದ 6 ಕಿ.ಮೀ ದೂರದ ಕೋರ್ಕೊಟ್ಟಿ ಗ್ರಾಮದ ಸಮೀಪ ಬಂದಾಗ ವಾಹನವು ಚಾಲಕನ ನಿಯಂತ್ರಣ ಕಳೆದುಕೊಂಡಿತು. ಬಳಿಕ ಪೊಲೀಸರು ಚಾಲಕನನ್ನು ಬಂಧಿಸಿದರು' ಎಂದು ಪಟೇಲ್ ಹೇಳಿದ್ದಾರೆ.

ಚಾಲಕ ಗಾಯಗೊಂಡಿದ್ದು, ಮದ್ಯ ಸೇವಿಸಿದ್ದ ಎಂದು ಹೇಳಲಾಗಿದೆ. ಆತನನ್ನು ಮಾನಪುರ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಮಹಾರಾಷ್ಟ್ರದ ನೋಂದಣಿ ಸಂಖ್ಯೆ ಇರುವ ವಾಹನವನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶವ ಇಟ್ಟು ಪ್ರತಿಭಟನೆ



ಈ ಮಧ್ಯೆ ಗ್ರಾಮಸ್ಥರು ಬಾಲಕಿಯ ಮೃತದೇಹವನ್ನು ರಸ್ತೆಯ ಮೇಲಿಟ್ಟು ವಾಹನ ಸಂಚಾರ ಬಂದ್ ಮಾಡಿ ಪ್ರತಿಭಟಿಸಿದರು. ಇದರಿಂದಾಗಿ ಎರಡು ತಾಸು ವಾಹನದಟ್ಟಣೆ ಉಂಟಾಗಿತ್ತು. ಚಾಲಕನ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ಭರವಸೆ ನೀಡಿದ ಬಳಿಕವೇ ಗ್ರಾಮಸ್ಥರು ಪ್ರತಿಭಟನೆಯನ್ನು ಕೈಬಿಟ್ಟರು.

ತಮಿಳು ಹಿರಿಯ ನಟ ಕೆ.ಭಾಗ್ಯರಾಜ್ ನಿಧನ

ಚೆನ್ನೈ (ಪಿಟಿಐ): ತಮಿಳು ಚಿತ್ರರಂಗದ ಪ್ರಸಿದ್ಧ ಚಿತ್ರ ನಿರ್ಮಾಪಕ, ನಟ ಕೆ.ಭಾಗ್ಯರಾಜ್ (73) ಅವರು ಹೃದಯ ಸ್ತಂಭನದಿಂದ ಶನಿವಾರ ನಿಧನ ಹೊಂದಿದರು.



ಕೆ.ಭಾಗ್ಯರಾಜ್

ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿ ಜನಿಸಿದ್ದ ಕೃಷ್ಣಸ್ವಾಮಿ ಭಾಗ್ಯರಾಜ್ ಅವರು, ಪ್ರಸಿದ್ಧ ಚಿತ್ರ ನಿರ್ಮಾಪಕ ಭಾರತಿರಾಜ (ಇತ್ತೀಚೆಗೆ ನಿಧನರಾದರು) ಅವರ ಸಹಾಯಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು.

'ಸುವರಿಲ್ಲಾದ ಚಿತ್ತಿರಂಗಳ್', 'ಡಾರ್ಲಿಂಗ್ ಡಾರ್ಲಿಂಗ್ ಡಾರ್ಲಿಂಗ್' ಮತ್ತು 'ಇದ್ ನಮ್ಮ ಆಳ್' ಚಿತ್ರಗಳೊಂದಿಗೆ ಯಶಸ್ವಿ ನಿರ್ದೇಶಕರಾಗಿ ಹೊರಹೊಮ್ಮಿದ ಅವರು, 'ಅಂದ ಏಳ್ ನಾಟ್ಕಲ್', 'ಮುಂದನೈ ಮುಡಿಚು', 'ಚಿನ್ನ ವೀಡ್' ಮತ್ತು 'ಎಂಗ ಚಿನ್ನ ರಾಸಾ' ರೀತಿಯ ಜನಪ್ರಿಯ ಚಿತ್ರಗಳಲ್ಲಿ ನಿರ್ದೇಶನದೊಂದಿಗೆ ಮುಖ್ಯ ಪಾತ್ರದಲ್ಲಿ ನಟಿಸಿದ್ದರು. ಐದು ದಶಕಗಳಿಗೂ ಹೆಚ್ಚಿನ ತಮ್ಮ ವೃತ್ತಿ ಜೀವನದಲ್ಲಿ ಹಲವಾರು ಹಿಟ್ ಚಿತ್ರಗಳನ್ನು ನೀಡಿರುವ ಅವರು, ಸುಮಾರು 25 ಚಿತ್ರಗಳನ್ನು ನಿರ್ದೇಶಿಸಿ, 75ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಹಾಸ್ಯ ಸಂಭಾಷಣೆಗಳೊಂದಿಗೆ ಪ್ರೇಕ್ಷಕರನ್ನು ತಲುಪುತ್ತಿದ್ದ ಅವರ ಪಾತ್ರಗಳು ಮಧ್ಯಮ ವರ್ಗದ ಜೀವನದ ಕತೆಗಳನ್ನು ಹೇಳುತ್ತಿದ್ದವು.

ಚಲನಚಿತ್ರ ಮಾತ್ರವಲ್ಲದೆ, ಅವರು 'ಭಾಗ್ಯ' ಎಂಬ ತಮಿಳು ವಾರಪತ್ರಿಕೆಯ ಸಂಪಾದಕರಾಗಿದ್ದರು. ಜೊತೆಗೆ, ಹಲವಾರು ಕಾದಂಬರಿಗಳನ್ನು ಬರೆದಿದ್ದರು. ಅವರಿಗೆ ಪತ್ನಿ, ಮಾಜಿ ನಟಿ ಪೂರ್ಣಿಮಾ, ಮಕ್ಕಳಾದ ನಟ ಶಂತನು ಮತ್ತು ನಟಿ ಸರಣ್ಯ ಇದ್ದಾರೆ.

ದೇಣಿಗೆ ಲೆಕ್ಕ: ಎಸ್‌ಒಪಿ ಉಲ್ಲಂಘನೆ

ಅಯೋಧ್ಯೆ ರಾಮಮಂದಿರ ಕಾಣಿಕೆ ಕಳವು ವಿವಾದ: ಎಸ್‌ಐಟಿ ವರದಿಯಲ್ಲಿ ಉಲ್ಲೇಖ

ಲಖನೌ (ಪಿಟಿಐ): ಅಯೋಧ್ಯೆಯ ರಾಮಮಂದಿರದ ಕಾಣಿಕೆ ಕಳವು ವಿಚಾರದಲ್ಲಿ ಆಡಳಿತ ಮಂಡಳಿಯ ಹಲವು ದೋಷಗಳನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ಪತ್ತೆಹಚ್ಚಿದೆ. ಈ ಸಂಬಂಧ ಕಾಣಿಕೆ ಹಾಗೂ ದೇಣಿಗೆಯಾಗಿ ಸ್ವೀಕರಿಸಿದ್ದ ಆಭರಣಗಳ ಲೆಕ್ಕ ಹಾಗೂ ಮೇಲ್ವಿಚಾರಣೆ ನಡೆಸುತ್ತಿದ್ದ 8 ಮಂದಿಯನ್ನು ಈಗಾಗಲೇ ಬಂಧಿಸಿದೆ.

ಕಾಣಿಕೆ ಹಣ ಹಾಗೂ ದೇಣಿಗೆಯನ್ನು ಅಕ್ರಮವಾಗಿ ಹೇಗೆ ವರ್ಗಾಯಿಸಲಾಯಿತು ಹಾಗೂ ಎಷ್ಟು ಮೊತ್ತ ನಗದು ಕಳವು ಮಾಡಲಾಗಿದೆ ಎಂಬುದರ ಕುರಿತು ತನಿಖೆ ಮುಂದುವರಿದಿದೆ. ಆದರೂ, ಟ್ರಸ್ಟ್‌ನ ಗಂಭೀರ ಲೋಪಗಳನ್ನು ಪ್ರಾಥಮಿಕ ವರದಿಯಲ್ಲಿ ಎಸ್‌ಐಟಿ ಬೊಟ್ಟು ಮಾಡಿ ತೋರಿಸಿದೆ.

ಎಸ್‌ಒಪಿ ಸ್ಪಷ್ಟ ಉಲ್ಲಂಘನೆ: ನಗದು ಲೆಕ್ಕ ಹಾಕುವ ವೇಳೆ ಭದ್ರತಾ ಸಿಬ್ಬಂದಿಗಳ ನಿಯೋಜನೆ, ಕಾಣಿಕೆ ಲೆಕ್ಕ ಮಾಡುವ ಸಿಬ್ಬಂದಿಯು ಕೊಠಡಿಗೆ ಪ್ರವೇಶ ಹಾಗೂ ಹೊರಗೆ ತೆರಳುವ ವೇಳೆ ಕೂಲಂಕಷ ಪರಿಶೀಲನೆ, ದೇಣಿಗೆ ಲೆಕ್ಕದ ವೇಳೆ ಸೆರೆಹಿಡಿದ ಸಿ.ಸಿ.ಟಿವಿ ದೃಶ್ಯಗಳನ್ನು 180 ದಿನಗಳವರೆಗೂ ರಕ್ಷಿಸಿಡುವುದು ಸೇರಿದಂತೆ 'ಪ್ರಮಾಣಿತ ಕಾರ್ಯಾಚರಣಾ ವಿಧಾನ'ವನ್ನು (ಎಸ್‌ಒಪಿ) ಪಾಲನೆ ಮಾಡಿರಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ಎಸ್‌ಒಪಿ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ, ಹುಂಡಿಯ ಹಲವು ಕೀಗಳನ್ನು ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ತಮ್ಮ ಬಳಿಯೇ ಇರಿಸಿಕೊಂಡಿದ್ದರು ಎಂದು ತಿಳಿಸಿದೆ. ರಾಮಶಂಕರ್ ಯಾದವ್ ಅವರು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರ ಚಾಲಕನಾಗಿ ಈ ಹಿಂದೆ ಕೆಲಸ ಮಾಡುತ್ತಿದ್ದರು. ಈಗ ಬಂಧನದಲ್ಲಿದ್ದಾರೆ.

> ದೇವಾಲಯವನ್ನು ಲೂಟಿ ಮಾಡುವ ಬಿಜೆಪಿಯ ಹಿಂದುತ್ವವನ್ನು ತಿರಸ್ಕರಿಸಬೇಕು. ಬಿಜೆಪಿಮುಕ್ತ ರಾಮನ ಅಗತ್ಯವಿದ್ದು, ಇದರ ಹೋರಾಟವನ್ನು ಶಿವಸೇನಾವೇ ಮುನ್ನಡೆಸಲಿದೆ
>
> **ಉದ್ಧವ್ ಠಾಕ್ರೆ,** ಅಧ್ಯಕ್ಷ ಶಿವಸೇನಾ (ಉದ್ಧವ್ ಬಣ)

'ಮಂದಿರದಲ್ಲಿ ಹಲವು ಹುಂಡಿಗಳಿದ್ದವು. ರಾಮಶಂಕರ್ ಯಾದವ್ ಅವರು ಹೊಂದಿದ್ದ ಕೀಗಳ ಹುಂಡಿಯ ಹಣದ ಲೆಕ್ಕಾಚಾರದ ವೇಳೆ ಎಸ್‌ಒಪಿ ಪಾಲನೆಯಾಗಿಲ್ಲ. ಆದರೂ, ಕಳವು ನಡೆದಿದ್ದು ಹೇಗೆ ಎಂಬುದರ ಕುರಿತು ತನಿಖೆ ಮುಂದುವರಿಸಲಾಗಿದೆ' ಎಂದು ಎಸ್‌ಐಟಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಣಿಕೆ ಎಣಿಕೆಯಲ್ಲಿ ತಪ್ಪು ನಡೆಯುತ್ತಿದೆ ಎಂದು ಟ್ರಸ್ಟ್‌ನ ಅಧಿಕಾರಿಗಳಿಗೆ ಅನುಮಾನ ಕಂಡುಬಂದ ನಂತರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಪ್ರತಿನಿಧಿಗಳ ಜೊತೆ ಸಭೆ ನಡೆಸಿ, 2025ರಲ್ಲಿ ಎಸ್‌ಒಪಿಯನ್ನು ಅಂತಿಮಗೊಳಿಸಿದ್ದರು. ಮಂದಿರದ ಟ್ರಸ್ಟ್‌ನ ಪ್ರಮುಖ ಸದಸ್ಯ ಅನಿಲ್ ಮಿಶ್ರಾ ಹಾಗೂ ಎಸ್‌ಬಿಐನ ಅಧಿಕಾರಿ ಗೋವಿಂದ್ ಮಿಶ್ರಾ ಅವರು ಎಸ್‌ಒಪಿಗೆ ಸಹಿ ಹಾಕಿದ್ದರು.

'ನೂತನ ಎಸ್‌ಒಪಿಯ ಪ್ರಕಾರ, ಕಾಣಿಕೆ ಎಣಿಕೆ ಮಾಡುವ ಸಿಬ್ಬಂದಿ ಕಿಸೆ ಹೊಂದಿರದ ಬಟ್ಟೆ ಧರಿಸಬೇಕು. ಈ ವೇಳೆ ಸೈನಿಕ್ ಸೆಕ್ಯೂರಿಟಿ ಸರ್ವಿಸಸ್ (ಎಸ್‌ಐಎಸ್)ನ ಭದ್ರತಾ ಸಿಬ್ಬಂದಿ ನಿಯೋಜಿಸಬೇಕು, ಕಾಣಿಕೆ ಹಾಗೂ ದೇಣಿಗೆ ಕೊಠಡಿಗೆ ತೆರಳುವ ಸಿಬ್ಬಂದಿಯ ನಿರಂತರ, ದಿಢೀರ್ ಪರಿಶೀಲನೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಈ ಯಾವುದು ಕೂಡ ಪಾಲನೆಯಾಗಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ದೇಣಿಗೆ ಎಣಿಕೆಯ ಉಸ್ತುವಾರಿ ಹೊಂದಿದ್ದ ಹಾಗೂ ಈಗ ಬಂಧಿತರಾಗಿರುವ ಆರೋಪಿ ಸುಭಾಶ್ ಶ್ರೀವಾಸ್ತವ, ಈಗ ಕಾರ್ಯಾಚರಣೆಯಲ್ಲಿರುವ ಶ್ರೀರಾಮಮಂದಿರ ಟ್ರಸ್ಟ್‌ನ ಮೂವರು ಸದಸ್ಯರ ಪೈಕಿ ಒಬ್ಬರ ಶಿಫಾರಸಿನ ಮೇಲೆ ಹುದ್ದೆಗೆ ನೇಮಕಗೊಂಡಿದ್ದರು ಎಂದು ತಿಳಿಸಿದೆ.

ಚಂಪತ್ ರಾಯ್ ರಾಜೀನಾಮೆ: ಈಗ ಎದ್ದಿರುವ ಊಹಾಪೋಹಗಳಿಗೆ ಕಿವಿಗೊಡದಂತೆ ಮನವಿ ಮಾಡಿರುವ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್, ಪ್ರಧಾನ ಕಾರ್ಯದರ್ಶಿ ಚಂಪತ್‌ರಾಯ್ ರಾಜೀನಾಮೆ ನೀಡಿರುವುದನ್ನು ಖಚಿತಪಡಿಸಿದೆ.

ರಾಯ್ ಹಾಗೂ ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರಾ ರಾಜೀನಾಮೆ ನೀಡಿದ್ದಾರೆ ಎಂದು ಟ್ರಸ್ಟ್‌ನ ಖಜಾಂಚಿ ಸ್ವಾಮಿ ಗೋವಿಂದ್ ದೇವ್ ಗಿರಿ ತಿಳಿಸಿದ್ದಾರೆ.



ತನಿಖೆಯಲ್ಲಿ ಪತ್ತೆಯಾಗಿದ್ದೇನು?

- ಎಸ್‌ಒಪಿ ಉಲ್ಲಂಘಿಸಿ ದೇಣಿಗೆ ದುರುಪಯೋಗ, ಕಾಣಿಕೆ ಕಳವು
- ದೇವಾಲಯದ ದೈನಂದಿನ ನಿರ್ವಹಣೆಯಲ್ಲಿ ಆಡಳಿತ ಮಂಡಳಿಯ ಸ್ಪಷ್ಟ ನಿರ್ಲಕ್ಷ್ಯ
- ಮಹಾಕುಂಭಮೇಳದ ವೇಳೆ ಬೃಹತ್ ಕಾಣಿಕೆ ಸಂಗ್ರಹ- ಲೆಕ್ಕ ಸಿಕ್ಕಿಲ್ಲ
- ಇದುವರೆಗೂ ವಿದೇಶಿ ಕರೆನ್ಸಿ ಸೇರಿದಂತೆ ₹80 ಲಕ್ಷ ನಗದು ಪತ್ತೆ
- ದೇಣಿಗೆ ಎಣಿಕೆ ಸ್ಥಳದ ಪಕ್ಕದ ಶೌಚಾಲಯದಲ್ಲಿ ₹2.5 ಲಕ್ಷ ನಗದು ಪತ್ತೆ

ಮೋದಿ ಮೌನ ಪ್ರಶ್ನಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ರಾಮಮಂದಿರದ ಕಾಣಿಕೆ– ದೇಣಿಗೆ ಕಳವು ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನು ಕಾಂಗ್ರೆಸ್ ಪ್ರಶ್ನಿಸಿದ್ದು, ಈ ಹಗರಣದಲ್ಲಿ ಭಾಗಿಯಾಗಿರುವವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದೆ.

'ಭ್ರಷ್ಟಾಚಾರವು ಆಳವಾಗಿ ಬೇರೂರಿರುವುದರಿಂದ ಈ ಹಗರಣದ ಕುರಿತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು' ಎಂದು ಕಾಂಗ್ರೆಸ್ ವಕ್ತಾರ ಅಖಿಲೇಶ್ ಪ್ರಸಾದ್ ಸಿಂಗ್ ಆಗ್ರಹಿಸಿದ್ದಾರೆ. 'ತಪ್ಪಿತಸ್ಥರನ್ನು ತಕ್ಷಣವೇ ಬಂಧಿಸಬೇಕು. ಜನರ ನಂಬಿಕೆ ಕಳೆದುಕೊಂಡಿರುವ ಈಗಿನ ಟ್ರಸ್ಟ್ ಅನ್ನು ತಕ್ಷಣವೇ ವಿಸರ್ಜಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಕಳವು ನಡೆದಿರುವುದು ದುರಂತ'

ವಯನಾಡ್(ಕೇರಳ): 'ಅಯೋಧ್ಯೆಯ ರಾಮಮಂದಿರ ಕಾಣಿಕೆ ಕಳವು ನಡೆದಿರುವುದು ದುರದೃಷ್ಟಕರ ಹಾಗೂ ನಾಚಿಕೆಗೇಡಿನ ವಿಚಾರವಾಗಿದೆ. ದೇಣಿಗೆ ಸಂಗ್ರಹಿಸುವ ಹಾಗೂ ರಕ್ಷಿಸುವ ಜವಾಬ್ದಾರಿ ಹೊಂದಿದವರನ್ನು ಹೊಣೆಗಾರಿಕೆ ಮಾಡಬೇಕು' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದೆ ಪ್ರಿಯಾಂಕ ಗಾಂಧಿ ವಾದ್ರಾ ಒತ್ತಾಯಿಸಿದ್ದಾರೆ.

'ರಾಮನ ಮೇಲೆ ನಂಬಿಕೆಯುಳ್ಳವರು ದೇಣಿಗೆ ನೀಡಿದ್ದರು. ಮಹಿಳೆಯರು, ಬಡವರು ಕೂಡ ದೇಣಿಗೆ ನೀಡಿದ್ದಾರೆ. ಇದು ಕೇವಲ ದೊಡ್ಡ ಉದ್ಯಮಿಗಳು ನೀಡಿದ ದೇಣಿಗೆಯಲ್ಲ. ಸಾಮಾನ್ಯ ಜನರೇ ನೀಡಿದ ದೇಣಿಗೆಯಾಗಿತ್ತು. ಈಗ ಅದೇ ಹಣವು ಕಳವಾಗಿದೆ. ನಿಜಕ್ಕೂ ಇದು ದುರಂತ, ನಾಚಿಕೆಗೇಡಿನ ವಿಚಾರವಾಗಿದೆ' ಎಂದು ಟೀಕಿಸಿದ್ದಾರೆ.

'ದುಡ್ಡು ಹೊಡೆದಿಲ್ಲವೆಂದು ಹೇಗೆ ನಂಬುವುದು?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಯೋಧ್ಯೆಯ ರಾಮ ಮಂದಿರ ನಿರ್ಮಾಣಕ್ಕಾಗಿ ಸಂಗ್ರಹಿಸಿದ್ದ ದೇಣಿಗೆ ಹಣದ ದುರುಪಯೋಗ ಆರೋಪಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಸರ್ಕಾರ ಮೌನ ಮುರಿದು ಸ್ಪಷ್ಟನೆ ನೀಡಬೇಕು' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಬಿಜೆಪಿಯವರು ರಾಮನ ಹೆಸರಲ್ಲಿ ಮೋಸ ಮಾಡುತ್ತಿದ್ದಾರೆಂದು ಹಿಂದೆಯೇ ಹೇಳಿದ್ದೆ. ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡಿ ಪೂಜೆ ಮಾಡಿದವರು ಮೋದಿ. ದುಡ್ಡು ಹೊಡೆದಿಲ್ಲ ವೆಂದು ಹೇಗೆ ನಂಬುವುದು' ಎಂದು ಪ್ರಶ್ನಿಸಿದರು.

'ರಾಮನ ಹೆಸರಿನಲ್ಲಿ ಐದು ವರ್ಷಗಳಲ್ಲಿ ₹500 ಕೋಟಿ ಹೊಡೆದಿದ್ದಾರೆ. ಈ ಬಗ್ಗೆ ಯಾವಾಗ ಮನ್ ಕೀ ಬಾತ್ ಮಾಡುತ್ತೀರಾ, ಪರೀಕ್ಷೆ ಪೇ ಚರ್ಚೆ ಮಾಡುತ್ತೀರಾ' ಎಂದು ಪ್ರಧಾನಿಯನ್ನು ಪ್ರಶ್ನಿಸಿದರು.

ಬಿಡದಿ ಟೌನ್‌ಶಿಪ್ ವಿವಾದದ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ನೀತಿ ಕುರಿತ ವಿಚಾರಗಳನ್ನು ಬೀದಿಯಲ್ಲಿ ಚರ್ಚೆ ಮಾಡುವ ಸಂಸ್ಕೃತಿ ಸರಿಯಲ್ಲ' ಎಂದರು.

'ಸರ್ಕಾರ ಚರ್ಚೆಗೆ ಆಹ್ವಾನಿಸಿದಾಗ ದಿನ ಸರಿ ಹೊಂದುವುದಿಲ್ಲ ಎನ್ನುವವರು, ಬಳಿಕ ಬೀದಿಯಲ್ಲಿ ಚರ್ಚೆ ನಡೆಸೋಣ ಎನ್ನುವುದು ಸರಿಯಲ್ಲ. ಯಾರದ್ದೇ ಸಮಸ್ಯೆಯಾದರೂ ಅದನ್ನು ಅಧಿಕೃತ ವೇದಿಕೆಯಲ್ಲಿ ಚರ್ಚಿಸುವುದು ಸೂಕ್ತ. ಬೀದಿಯಲ್ಲಿ ಚರ್ಚೆ ನಡೆಸುವ ಪ್ರವೃತ್ತಿ ಪ್ರಜಾಪ್ರಭುತ್ವದ ಸಂಪ್ರದಾಯಕ್ಕೆ ಹೊಂದಿಕೆ ಆಗುವುದಿಲ್ಲ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಸಚಿವ ಸಂಪುಟ ವಿಸ್ತರಣೆ ಆದಷ್ಟು ಬೇಗ ಮುಗಿಸುತ್ತೇವೆ. ವಾರ, ಹತ್ತು ದಿನದೊಳಗೆ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ' ಎಂದು ಹೇಳಿದರು.

'ಬಿಜೆಪಿ ನಾಯಕರಿಗೆ ಯೋಗ್ಯತೆ ಇದೆಯೇ?'

'ಅಯೋಧ್ಯೆಯ ಶ್ರೀರಾಮನ ಹೆಸರಿನಲ್ಲಿ ನಿರ್ಮಾಣವಾದ ದೇವಸ್ಥಾನದ ಕಾಮಗಾರಿ ನಿರ್ವಹಣೆಯಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರದ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಉತ್ತರ ನೀಡಲು ಬಿಜೆಪಿ ನಾಯಕರಿಗೆ ಯೋಗ್ಯತೆ ಇದೆಯೇ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದರು.

'ನಾ ಖಾವೂಂಗಾ, ನಾ ಖಾನೇ ದೂಂಗಾ' ಎಂದು ಬೊಬ್ಬೆ ಹೊಡೆದಿದ್ದವರು ಈಗ ಬಾಯ್ತೆರೆದು ಮಾತನಾಡುವುದು ಬಿಡಿ, ಮುಖ ಕೂಡ ತೋರಿಸುತ್ತಿಲ್ಲ ಯಾಕೆ? ಬಾಯಿ ಬಿಟ್ಟರೆ ಮುಖವಾಡ ಕಳಚುವ ಭಯವೇ' ಎಂದು ಕೇಳಿದರು.

'ಶ್ರೀರಾಮನನ್ನು ರಾಜಕೀಯವಾಗಿ ಬಳಸಿಕೊಂಡವರು, ಶ್ರೀರಾಮನ ಹೆಸರಿನಲ್ಲಿ ಒಂದೊಂದು ಮತಗಳನ್ನು ಕೇಳಿ ಪಡೆದವರು, ಅದೇ ಶ್ರೀರಾಮನಿಗೆ ಜನ ಸಾಮಾನ್ಯರು ನೀಡಿದ ದೇಣಿಗೆಯ ಒಂದೊಂದು ರೂಪಾಯಿಯ ಲೆಕ್ಕ ಕೊಡಲು ಬಿಜೆಪಿ ನಾಯಕರಿಗೆ ಧೈರ್ಯ ಇಲ್ಲವೇ? ರಾಮನ ಹೆಸರನ್ನು ರಾಜಕೀಯಕ್ಕೆ ಬಳಸಬಹುದು. ರಾಮನ ಹೆಸರಿನಲ್ಲಿ ನಡೆದ ಪ್ರತಿಯೊಂದು ರೂಪಾಯಿಯ ಲೆಕ್ಕದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದರು.

ಚುಟುಕೆ ಸುದ್ದಿ

ಎಲ್‌ಪಿಎಸ್‌ಸಿ ನಿರ್ದೇಶಕರಾಗಿ ಜಯನ್ ನೇಮಕ

ತಿರುವನಂತಪುರ (ಪಿಟಿಐ): ಹಿರಿಯ ಬಾಹ್ಯಾಕಾಶ ಎಂಜಿನಿಯರ್ ಎನ್. ಜಯನ್ ಅವರನ್ನು ಇಸ್ರೊದ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ ಸೆಂಟರ್‌ನ (ಎಲ್‌ಪಿಎಸ್‌ಸಿ) ನೂತನ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ.

ಜಯನ್ ಅವರು ಇಸ್ರೊದ ಪ್ರೊಪಲ್ಷನ್ ತಂತ್ರಜ್ಞಾನಕ್ಕೆ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇದಕ್ಕೂ ಮುನ್ನ ಜಯನ್ ಅವರು, ಎಲ್‌ಪಿಎಸ್‌ಸಿಯ ಸಹ ನಿರ್ದೇಶಕರಾಗಿ, ರಾಕೆಟ್‌ಗಳ ಕ್ರಯೋಜನಿಕ್ ಹಂತದ ಯೋಜನೆಯ ನಿರ್ದೇಶಕರಾಗಿ ಮತ್ತು ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದ ಎಸ್‌ಎಸ್‌ಎಲ್‌ವಿ ಯೋಜನೆಯ ಯೋಜನಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.

ಇವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಬಾಹ್ಯಾಕಾಶ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಸೇವೆಗಾಗಿ 2025ರಲ್ಲಿ ಇವರಿಗೆ ರಾಷ್ಟ್ರೀಯ ವಿಜ್ಞಾನ ಪುರಸ್ಕಾರ ಲಭಿಸಿದೆ.

ಜಾಮೀನಿಗೆ ವಚನಾನಂದ ಸ್ವಾಮೀಜಿ ಅರ್ಜಿ

ಹರಿಹರ (ದಾವಣಗೆರೆ ಜಿಲ್ಲೆ): ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಸತಿ ನಿಲಯದಲ್ಲಿದ್ದ ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ವಚನಾನಂದ ಸ್ವಾಮೀಜಿ ಅವರು ಶನಿವಾರ ದಾವಣಗೆರೆ ಜಿಲ್ಲಾ ಪೋಕ್ಸೊ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದರು.

ಸಂತ್ರಸ್ತ ಬಾಲಕನ ತಾಯಿ ನೀಡಿದ ದೂರಿನ ಮೇರೆಗೆ ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ನೀಡಿದ್ದ ದೂರನ್ನು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿತ್ತು. ಪ್ರಕರಣ ದಾಖಲಾಗುವ ಮುನ್ನವೇ ಸ್ವಾಮೀಜಿ ವಿಶೇಷ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದರು.

ಅದನ್ನು ಪ್ರಶ್ನಿಸಿ ಸಂತ್ರಸ್ತ ಬಾಲಕನ ತಾಯಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್, ವಿಶೇಷ ನ್ಯಾಯಾಲಯ ನೀಡಿದ್ದ ನಿರೀಕ್ಷಣಾ ಜಾಮೀನನ್ನು ರದ್ದುಪಡಿಸಿ, ನಿಯಮಿತ ಜಾಮೀನು ಪಡೆಯುವಂತೆ ಸೂಚಿಸಿದೆ.

ಎಮ್ಮೆಗಳ ಸ್ನಾನ

–ಪಿಟಿಐ ಚಿತ್ರ



ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಬಿಸಿಲ ಝಳದಿಂದ ತಪ್ಪಿಸಿಕೊಳ್ಳಲು ಎಮ್ಮೆಗಳು ಗಂಗಾ ನದಿಯಲ್ಲಿ ಈಜುತ್ತಿದ್ದ ವೇಳೆ ವ್ಯಕ್ತಿಯೊಬ್ಬರು ಅವುಗಳಿಗೆ ನೀರು ಎರಚಿದರು

ಮನೆ ಸುಪರ್ದಿ ಬಳಿಕವೂ ಪರಿಹಾರ: 'ಸುಪ್ರೀಂ'



ನವದೆಹಲಿ (ಪಿಟಿಐ): 'ಫ್ಲ್ಯಾಟ್ ಖರೀದಿಸಿದ ಬಳಿಕ, ಒಪ್ಪಂದದಂತೆ ನಿಗದಿತ ದಿನಾಂಕಕ್ಕೆ ಮನೆ ನೀಡದಿದ್ದರೆ ಖರೀದಿದಾರನು ಬಿಲ್ಡರ್‌ನಿಂದ ಪರಿಹಾರ ಪಡೆಯಬಹುದು. ಖರೀದಿದಾರನು ಫ್ಲ್ಯಾಟ್ ಅನ್ನು ಸುಪರ್ದಿಗೆ ಪಡೆದುಕೊಂಡ ಬಳಿಕವೂ ಪರಿಹಾರ ಕೋರಿ ಅರ್ಜಿ ಸಲ್ಲಿಸಬಹುದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2003ರಲ್ಲಿ ದೆಹಲಿಯ ಸಹಕಾರಿ ಸಂಘವೊಂದರ ವಸತಿ ಸೊಸೈಟಿಯಲ್ಲಿ ಫ್ಲ್ಯಾಟ್ ಖರೀದಿಸಿದವರೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ವಿ. ಮೋಹನಾ ಅವರ ಪೀಠ ನಡೆಸಿತು.

ರಸ್ತೆ ಅಪಘಾತದಲ್ಲಿ ಅಂಗವೈಕಲ್ಯಕ್ಕೆ ಪರಿಹಾರ: 'ಸುಪ್ರೀಂ' ಮಹತ್ವದ ತೀರ್ಪು

'ಆದಾಯ ನಷ್ಟವನ್ನೂ ಪರಿಗಣಿಸಬೇಕು'


ಪ್ರಜಾವಾಣಿ ವಾರ್ತೆ

ನವದೆಹಲಿ: 'ರಸ್ತೆ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಯೊಬ್ಬರ ಅಂಗವೈಕಲ್ಯದ ಪ್ರಮಾಣವನ್ನು ಮಾತ್ರ ಪರಿಗಣಿಸದೆ ಆ ವ್ಯಕ್ತಿಯ ವೃತ್ತಿ ಮತ್ತು ಅದರಿಂದ ಬರುತ್ತಿದ್ದ ಆದಾಯಕ್ಕೆ ಆದ ನಷ್ಟವನ್ನು ಗಣನೆಗೆ ತೆಗೆದುಕೊಂಡು ಪರಿಹಾರವನ್ನು ಲೆಕ್ಕಾಚಾರ ಮಾಡಬೇಕು' ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ರಸ್ತೆ ಅಪಘಾತಗಳಲ್ಲಿ ಶಾಶ್ವತವಾಗಿ ಅಂಗವಿಕಲರಾದವರಿಗೆ ಈ ತೀರ್ಪಿನಿಂದ ಬಹಳ ಅನುಕೂಲವಾಗಲಿದೆ.

ಬಡಗಿ ಕೆಲಸ ಮಾಡುತ್ತಿದ್ದ ಶಂಕರ್ ದತ್ ಎಂಬುವರಿಗೆ 2004ರಲ್ಲಿ ಅಪಘಾತವಾಗಿತ್ತು. ಅತಿವೇಗವಾಗಿ ಬಂದ ಜೀಪ್‌ವೊಂದು ದತ್ ಅವರ ಬೈಕ್‌ಗೆ ಗುದ್ದಿತ್ತು. ಅಪಘಾತದಿಂದ ಬಲಗಾಲಿನ ಮಂಡಿಯಿಂದ ಕೆಳಗಿನ ಭಾಗವನ್ನು ದತ್ ಅವರು ಕಳೆದುಕೊಂಡರು. ಇವರ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠ ನಡೆಸಿತು.

'ಕೃತಕ ಕಾಲಿನ ನಿರ್ವಹಣೆಗೂ ಹಣ'



'ದತ್ ಅವರು ತಿಂಗಳಿಗೆ ₹8 ಸಾವಿರದಿಂದ ₹10 ಸಾವಿರದವರೆಗೆ ದುಡಿಯುತ್ತಿದ್ದರು. ಇದನ್ನು ಪುಷ್ಟೀಕರಿಸುವ ಸಾಕ್ಷ್ಯಗಳೂ ಇದ್ದವು. ಆದರೆ, ಉತ್ತರಾಖಂಡ ಹೈಕೋರ್ಟ್, ದತ್ ಅವರ ತಿಂಗಳ ಆದಾಯವು ₹5,000 ಎಂದು ಪರಿಗಣಿಸಿ ಪರಿಹಾರ ಘೋಷಿಸಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿತು. ಹೈಕೋರ್ಟ್‌ನ ಈ ನಿರ್ಧಾರವನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ಟೀಕಿಸಿದೆ.

ಅಪಘಾತವಾದ ಸಂದರ್ಭದಲ್ಲಿ ದತ್ ಅವರಿಗೆ 38 ವರ್ಷ ಎನ್ನುವುದನ್ನೂ ಗಮನಿಸಿದ ಸುಪ್ರೀಂ ಕೋರ್ಟ್, 2004ರಿಂದ ಇಲ್ಲಿಯವರೆಗೆ ತಿಂಗಳಿಗೆ ₹10 ಸಾವಿರ ಆದಾಯವನ್ನು ಲೆಕ್ಕಾಚಾರ ಮಾಡಿ, ₹35.9 ಲಕ್ಷ ಪರಿಹಾರ ಘೋಷಿಸಿದೆ. ಜೊತೆಗೆ, ಕೃತಕ ಕಾಲಿನ ನಿರ್ವಹಣೆಗಾಗಿ ಹೆಚ್ಚುವರಿ ₹ 10 ಲಕ್ಷವನ್ನೂ ಘೋಷಿಸಿದೆ.

> ವೈದ್ಯಕೀಯ ವೆಚ್ಚ, ಆದಾಯ ನಷ್ಟದ ಜೊತೆಗೆ, ಭವಿಷ್ಯದ ದೃಷ್ಟಿಯಿಂದಲೂ ಪರಿಹಾರವನ್ನು ಲೆಕ್ಕಾಚಾರ ಮಾಡಬೇಕು. ಸಾಮಾನ್ಯ ಜೀವನ ನಡೆಸಲು ಕಷ್ಟವಾಗುವಂಥ ಸ್ಥಿತಿ, ಕಾಲು ಕಳೆದುಕೊಂಡಿದ್ದರಿಂದ ಆದ ನೋವು, ಭಯ ಮತ್ತು ಸಂಕಟವನ್ನೂ ಪರಿಗಣಿಸಬೇಕು
>
> ಸುಪ್ರೀಂ ಕೋರ್ಟ್ ಪೀಠ

ದತ್ ಅವರು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದಾಗಿನಿಂದ ಆರಂಭಗೊಂಡು ತೀರ್ಪು ಬರುವಲ್ಲಿವರೆಗಿನ ದಿನದವರೆಗೆ ಲೆಕ್ಕಾಚಾರ ಮಾಡಿ, ದತ್ ಅವರಿಗೆ ನೀಡುವ ಪರಿಹಾರದ ಮೊತ್ತವನ್ನು ₹35.95 ಲಕ್ಷಕ್ಕೆ ಹೆಚ್ಚಿಸಿದೆ. ಈ ಪರಿಹಾರ ಮೊತ್ತಕ್ಕೆ ವಾರ್ಷಿಕ ಶೇ 6ರಷ್ಟು ಬಡ್ಡಿ ಸೇರಿಸಿ ಕೊಡಬೇಕು ಎಂದೂ ಪೀಠ ಹೇಳಿದೆ.

ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿಯು ದತ್ ಅವರಿಗೆ ₹4.77 ಲಕ್ಷ ಪರಿಹಾರ ಘೋಷಿಸಿತ್ತು. ಬಳಿಕ, ದತ್ ಅವರು ಉತ್ತರಾಖಂಡ ಹೈಕೋರ್ಟ್ ಮೆಟ್ಟಿಲೇರಿದರು. ಪರಿಹಾರ ಮೊತ್ತವನ್ನು ₹11.51 ಲಕ್ಷಕ್ಕೆ ಏರಿಸಿ ಆದೇಶಿಸಲಾಗಿತ್ತು. 'ಕಾಲು ಕತ್ತರಿಸಿದ್ದರಿಂದ ನನಗೆ ನನ್ನ ವೃತ್ತಿ ಮುಂದುವರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪರಿಹಾರ ಮೊತ್ತ ಹೆಚ್ಚಿಸಿ' ಎಂದು ಕೋರಿ ದತ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

'ದತ್ ಅವರ ಅಂಗವೈಕಲ್ಯದ ಪ್ರಮಾಣವು ಶೇ 70ರಷ್ಟಿದೆ ಎಂದು ವೈದ್ಯಕೀಯ ಪ್ರಮಾಣಪತ್ರ ನೀಡಲಾಗಿದೆ. ಆದರೆ, ಈ ಪ್ರಮಾಣವು ಅವರಿಗಾದ ಆರ್ಥಿಕ ನಷ್ಟವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುವುದಿಲ್ಲ. ಆದ್ದರಿಂದ ಅವರ ಅಂಗವೈಕಲ್ಯದ ಪ್ರಮಾಣವನ್ನು ಶೇ 100 ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಪೀಠ ಹೇಳಿತು.

'ಬರ ಎದುರಿಸಲು ಸಿದ್ಧರಾಗೋಣ'

ನಾವೆಲ್ಲರೂ ಒಟ್ಟಾಗಿ ರೈತರನ್ನು ಉಳಿಸಬೇಕು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂರು ವರ್ಷಗಳಿಂದ ಉತ್ತಮ ಮಳೆಯಾಗಿತ್ತು. ಆದರೆ, ಈ ವರ್ಷ ಇಡೀ ದೇಶದಲ್ಲಿ ಬರಗಾಲ ಎದುರಾಗುವ ಸ್ಥಿತಿ ಇದೆ. ಎಲ್ಲರೂ ಸೇರಿ ಬರಗಾಲ ಎದುರಿಸಬೇಕು' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ ನೀಡಿದರು.

ಯಲಹಂಕದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಮಿತಿಯು ಶನಿವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.



'ಈಗಾಗಲೇ ಮಳೆ ಕೊರತೆಯಾಗಿದೆ. ನಮ್ಮ ರಾಜ್ಯ ಮಾತ್ರವಲ್ಲ, ಬೇರೆ ಎಲ್ಲ ಕಡೆಯೂ ವಾಡಿಕೆಯಷ್ಟು ಮಳೆಯಾಗಿಲ್ಲ. ಹೀಗಾಗಿ ಬಿತ್ತನೆ ಕಾರ್ಯಕ್ಕೆ ಹಿನ್ನಡೆಯಾಗಲಿದ್ದು, ಬೆಳೆಗಳಿಗೆ ನೀರು ಒದಗಿಸಿಕೊಳ್ಳಲು ರೈತರಿಗೆ ಕಷ್ಟವಾಗಲಿದೆ. ರೈತರು ಭೂಮಿ ತ್ಯಾಗ ಮಾಡಿದ ಕಾರಣಕ್ಕೇ ಈ ಬೆಂಗಳೂರು ಇಷ್ಟು ಪ್ರಮಾಣದಲ್ಲಿ ಬೆಳೆದಿದೆ. ಹೀಗಾಗಿ ನಾವೆಲ್ಲರೂ ಒಟ್ಟಾಗಿ ರೈತರನ್ನು ಉಳಿಸಬೇಕು' ಎಂದರು.

'ತುಂಗಭದ್ರಾ ಅಣೆಕಟ್ಟು ಉಳಿಸಲು ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಕೇಂದ್ರ ಜಲಶಕ್ತಿ ಸಚಿವರ ಸಮ್ಮುಖದಲ್ಲಿ ತೀರ್ಮಾನ ಮಾಡಿದ್ದೇವೆ. ಈ ಹಿಂದೆ ಇಂದಿರಾಗಾಂಧಿ ಅವರ ನೇತೃತ್ವದಲ್ಲಿ ಕಾವೇರಿ ಕುಡಿಯುವ ನೀರಿನ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಅದೇ ರೀತಿ ಕೇಂದ್ರ ಜಲಶಕ್ತಿ ಸಚಿವರ ನೇತೃತ್ವದಲ್ಲಿ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಹಾಗೂ ನಾನು ಸೇರಿ ಸಭೆ ನಡೆಸಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ' ಎಂದರು.

'ಲಂಬಾಂತರ ಬೆಳವಣಿಗೆಗೆ ಚಿಂತನೆ': 'ಬೆಂಗಳೂರಿನಲ್ಲಿ ಉತ್ತಮ ಶಿಕ್ಷಣ, ಆರೋಗ್ಯ ಸೇವೆ ಮತ್ತು ವೃತ್ತಿ ದೊರೆಯುತ್ತದೆ. ಹೀಗಾಗಿ ಇಲ್ಲಿ ಬದುಕು ಕಟ್ಟಿಕೊಳ್ಳಬಹುದು ಎಂದು ಪ್ರತಿದಿನ ಸಾವಿರಾರು ಜನರು ಇಲ್ಲಿಗೆ ಬರುತ್ತಿದ್ದಾರೆ. ನಗರವು ದಿನೇದಿನೇ ವಿಸ್ತಾರವಾಗಿ ಬೆಳೆಯುತ್ತಿದೆ. ನಗರಕ್ಕೆ ಬರುವವರನ್ನು ತಡೆಯಲಾಗದು. ಆದತರೆ ಅವರೆಲ್ಲರನ್ನೂ ಒಳಗೊಳ್ಳಲು ಬೆಂಗಳೂರಿನ 'ಲಂಬಾಂತರ' ಬೆಳವಣಿಗೆ ಬಗ್ಗೆ ನಾನು ಯೋಚಿಸುತ್ತಿದ್ದೇನೆ' ಎಂದು ಶಿವಕುಮಾರ್ ಹೇಳಿದರು.

'ಎಲ್ಲ ಧರ್ಮ, ಜಾತಿಗಳ ಜನರು ಇಲ್ಲಿ ಬದುಕು ಕಟ್ಟಿಕೊಳ್ಳಲು ನಾವು ಅಸ್ಪದ ನೀಡಬೇಕಿದೆ. ಬೆಂಗಳೂರನ್ನು ಮತ್ತೆ ಉದ್ಯಾನ ನಗರಿಯನ್ನಾಗಿ ಮಾಡಬೇಕಿದೆ. ಇದಕ್ಕಾಗಿ 15 ಲಕ್ಷ ಸಸಿಗಳನ್ನು ನೆಡಲಾಗುತ್ತಿದೆ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಅರಣ್ಯ ಇಲಾಖೆ ಜಾಗಗಳಲ್ಲಿ ಉದ್ಯಾನ ನಿರ್ಮಿಸಲು ತೀರ್ಮಾನಿಸಲಾಗಿದೆ. ಆ ಮೂಲಕ ಬೆಂಗಳೂರಿನಲ್ಲಿ ಹಸಿರನ್ನು ವೃದ್ಧಿಸಲಾಗುವುದು' ಎಂದರು.

'ಹಿಂಗಾರು ಕೊರತೆ...'

'ಎಲ್ ನಿನೋ ಕಾರಣದಿಂದ ಈ ವರ್ಷದಲ್ಲಿ ಮುಂಗಾರು ಜತೆಗೆ ಹಿಂಗಾರು ಮಳೆಯೂ ಕೊರತೆಯಾಗುವ ಸಾಧ್ಯತೆ ದಟ್ಟವಾಗಿದೆ' ಎಂದು ಭೂವಿಜ್ಞಾನಿ ಎಚ್.ಎಸ್.ಎಂ.ಪ್ರಕಾಶ್ ಹೇಳಿದ್ದಾರೆ.

'ಸಮುದ್ರದ ನೀರಿನ ಆವಿಯ ಮೂಲಗಳು ಜ್ವಾಲಾಮುಖಿಗಳು. ಅವುಗಳ ಚಟುವಟಿಕೆ ಇಳಿಮುಖವಾಗಿರುವ ಕಾರಣಕ್ಕೆ ಈಗಾಗಲೇ ಮುಂಗಾರು ಮಳೆಯ ಕೊರತೆಯಾಗಿದೆ. ಇನ್ನೂ ಆರು ತಿಂಗಳು ಇದೇ ಪರಿಸ್ಥಿತಿ ಮುಂದುವರೆಯಲಿದೆ ಎಂಬುದು ಜ್ವಾಲಾಮುಖಿಗಳ ಚಟುವಟಿಕೆಗಳ ಅಧ್ಯಯನ ವರದಿಯಿಂದ ಗೊತ್ತಾಗಿದೆ. ಹೀಗಾಗಿ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಹಿಂಗಾರು ಮಳೆ ಕೊರತೆಯಾಗಲಿದೆ' ಎಂದು ಅವರು ವಿವರಿಸಿದ್ದಾರೆ.

₹2.98 ಕೋಟಿ ನಗದು ಪತ್ತೆ: ಐ.ಟಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುರುಬರಹಳ್ಳಿಯ ಕೈಗಾರಿಕಾ ಶೆಡ್‌ನಲ್ಲಿ ದೊರೆತ ₹2.98 ಕೋಟಿ ನಗದು ಮೊತ್ತಕ್ಕೆ ಸಂಬಂಧಿಸಿದಂತೆ ಮಹಾಲಕ್ಷ್ಮಿ ಲೇಔಟ್ ಠಾಣೆಯ ಪೊಲೀಸರು, ಆದಾಯ ತೆರಿಗೆ ಇಲಾಖೆಗೆ (ಐ.ಟಿ) ಪತ್ರ ಬರೆದು ಹಣದ ಮೂಲ ಪತ್ತೆ ಮಾಡುವಂತೆ ಕೋರಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಮಹಾಲಕ್ಷ್ಮಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದರು. ಇಬ್ಬರೂ ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕುರುಬರಹಳ್ಳಿಯಲ್ಲಿರುವ 'ಶೇಷಾದ್ರಿ ಇಂಡಸ್ಟ್ರೀಸ್' ಹೆಸರಿನ ಶೆಡ್‌ನಲ್ಲಿ ಭಾರಿ ಪ್ರಮಾಣದ ನಗದು ಹಣವನ್ನು ಅಕ್ರಮವಾಗಿ ಇಡಲಾಗಿದೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ಲಭ್ಯವಾಗಿತ್ತು. ಶೆಡ್‌ಗೆ ತೆರಳಿ ತಪಾಸಣೆ ನಡೆಸಿದಾಗ ನಾಲ್ಕು ದೊಡ್ಡ ಬ್ಯಾಗ್‌ಗಳಲ್ಲಿ ತುಂಬಿಟ್ಟಿದ್ದ ನೋಟುಗಳ ಕಂತೆಗಳು ಪತ್ತೆಯಾಗಿದ್ದವು ಎಂದು ಮೂಲಗಳು ಹೇಳಿವೆ.

'ಹಣವು ತಾವರೆಕೆರೆ ನಿವಾಸಿ ನಾಗರಾಜ್ ಅವರಿಗೆ ಸೇರಿದ್ದು ಎಂದು ಗೊತ್ತಾಗಿದೆ. ನಾಗರಾಜ್ ಈ ಹಣವನ್ನು ಕುರುಬರಹಳ್ಳಿಯ ಸ್ನೇಹಿತ ವೆಂಕಟೇಶ್ ಅವರ ಶೆಡ್‌ನಲ್ಲಿ ಇಟ್ಟಿದ್ದರು' ಎಂದು ಮೂಲಗಳು ಹೇಳಿವೆ.

'ಗಾಜಾ: ಭಾರತದ ಮೌನ ಖಂಡನೀಯ'

ನವದೆಹಲಿ (ಪಿಟಿಐ): ಇಸ್ರೇಲ್ ಸೇನೆ ಗಾಜಾದಲ್ಲಿ ನಡೆಸುತ್ತಿರುವ 'ನರಮೇಧ'ದ ಬಗ್ಗೆ ಕೇಂದ್ರ ಸರ್ಕಾರದ 'ಮೌನ ಮತ್ತು ನಿಷ್ಕ್ರಿಯತೆ'ಯನ್ನು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಖಂಡಿಸಿದ್ದಾರೆ.



ಸೋನಿಯಾ ಗಾಂಧಿ

'ಮೋದಿ ಸರ್ಕಾರದ ಮೌನವು ಖಂಡನೀಯ ಮಾತ್ರವಲ್ಲದೆ, ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಕೋನದಿಂದ ಸಮರ್ಥಿಸಲಾಗದ್ದು' ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗೆ ಬರೆದ ಲೇಖನದಲ್ಲಿ ಅವರು ತಿಳಿಸಿದ್ದಾರೆ.

'ಇಡೀ ಜಗತ್ತು ಇಸ್ರೇಲ್‌ನಿಂದ ದೂರ ಸರಿಯುತ್ತಿರುವ ಈ ಸಂದರ್ಭದಲ್ಲಿ ಭಾರತ ಮಾತ್ರ ಆ ದೇಶಕ್ಕೆ ಮತ್ತಷ್ಟು ಹತ್ತಿರವಾಗುತ್ತಿದೆ' ಎಂದು ಆರೋಪಿಸಿದ್ದಾರೆ. ಇರಾನ್ ಮೇಲೆ ಇಸ್ರೇಲ್-ಅಮೆರಿಕದ ಜಂಟಿ ದಾಳಿಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದು, ಇತಿಹಾಸದ ಪುಟಗಳಲ್ಲಿ 'ದಿಗ್ಭ್ರಮೆಗೊಳಿಸುವ ನಿರ್ಧಾರ'ವಾಗಿ ದಾಖಲಾಗಲಿದೆ ಎಂದಿದ್ದಾರೆ.

'ಭಯೋತ್ಪಾದನೆಗೆ ಆಶ್ರಯ ನೀಡುತ್ತಿರುವ ಪಾಕಿಸ್ತಾನಕ್ಕೆ ಮಧ್ಯಸ್ಥಿಕೆದಾರನ ಪಾತ್ರ ವಹಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇಸ್ರೇಲ್ ವಿರುದ್ಧ ಹೆಚ್ಚುತ್ತಿರುವ ಆಕ್ರೋಶದ ನಡುವೆ, ಭಾರತದ್ದು ಏಕೈಕ ಮೌನ ಧ್ವನಿಯಾಗಿದೆ' ಎಂದು ಪ್ರತಿಪಾದಿಸಿದ್ದಾರೆ.

'ಇಸ್ರೇಲ್ ನಡೆಸಿದ ದಾಳಿಯಿಂದ ಪ್ಯಾಲೆಸ್ಟೀನ್‌ನಲ್ಲಿ ಕನಿಷ್ಠ 20 ಸಾವಿರ ಮಕ್ಕಳು ಮೃತಪಟ್ಟಿದ್ದು, 44 ಸಾವಿರಕ್ಕೂ ಅಧಿಕ ಮಕ್ಕಳು ಗಾಯಗೊಂಡಿದ್ದಾರೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ. ಮಕ್ಕಳು ಸಂಘರ್ಷದಲ್ಲಿ ಆಕಸ್ಮಿಕವಾಗಿ ಮೃತಪಟ್ಟಿಲ್ಲ. ಅವರನ್ನು ಉದ್ದೇಶಪೂರ್ವಕವಾಗಿ ಗುರಿಪಡಿಸಲಾಗಿದೆ. ಹಲವು ಮಕ್ಕಳ ತಲೆ ಹಾಗೂ ಕುತ್ತಿಗೆಗೆ ಗುಂಡು ಹೊಡೆಯಲಾಗಿದೆ' ಎಂದು ಲೇಖನದಲ್ಲಿ ವಿವರಿಸಿದ್ದಾರೆ.

'ಬಿಜೆಪಿ ತಿರುಗೇಟು

ಗಾಜಾ ಸಂಘರ್ಷದ ಬಗ್ಗೆ ಕೇಂದ್ರ ಸರ್ಕಾರದ 'ಮೌನ ಮತ್ತು ನಿಷ್ಕ್ರಿಯತೆ' ಕುರಿತು ಸೋನಿಯಾ ಗಾಂಧಿ ಬರೆದಿರುವ ಲೇಖನಕ್ಕೆ ಬಿಜೆಪಿ ಶನಿವಾರ ಕಾಂಗ್ರೆಸ್‌ಗೆ ತಿರುಗೇಟು ನೀಡಿದೆ. ಈ ವಿಷಯದಲ್ಲಿ ಭಾರತದ ನಿಲುವಿನ ಬಗ್ಗೆ 'ತಪ್ಪು ಮಾಹಿತಿ' ಹರಡಲು ಸೋನಿಯಾ ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದೆ.

ಪದ್ಮನಾಭ ನೀಲುಗುಳಿ ದೋಷಮುಕ್ತ

ಕುಂದಾಪುರ: ಎರಡು ದಶಕಗಳ ಹಿಂದಿನ ಜೀವ ಬೆದರಿಕೆ ಪ್ರಕರಣದ ಆರೋಪಿಯಾಗಿದ್ದ ಶಂಕಿತ ನಕ್ಸಲ್ ಪದ್ಮನಾಭ ನೀಲುಗುಳಿ ಅವರನ್ನು ಕುಂದಾಪುರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ದೋಷಮುಕ್ತಗೊಳಿಸಿದೆ.



ಏಳು ಪುರುಷರು ಮತ್ತು ಒಬ್ಬ ಮಹಿಳೆ ಇದ್ದ ತಂಡವು 2005ರಲ್ಲಿ ತಾಲ್ಲೂಕಿನ ಹಳ್ಳಿಹೊಳೆಯ ಕೋಟುಗುಳಿಯ ಗುರುದತ್ತ ಅವರನ್ನು ಭೇಟಿಯಾಗಿತ್ತು. ಕೆಲಸಗಾರರಿಗೆ ಸರಿಯಾಗಿ ಸಂಬಳ ನೀಡದಿರುವ ಕುರಿತು ಅವರನ್ನು ವಿಚಾರಿಸಿತ್ತು. ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದಂತೆ ಜೀವ ಬೆದರಿಕೆಯೊಡ್ಡಿ ಸ್ಥಳದಿಂದ ತೆರಳಿತ್ತು. ಈ ಬಗ್ಗೆ ಗುರುದತ್ತ ನೀಡಿದ ದೂರಿನ ಮೇರೆಗೆ ಪದ್ಮನಾಭ ನೀಲುಗುಳಿ ಸಹಿತ ಏಳು ಮಂದಿ ವಿರುದ್ಧ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ ಮತ್ತು ಭಾರತೀಯ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಭಾನುವಾರ, ಜೂನ್ 28, 2026 ₹ 7.00
www.prajavani.net
prajavani.net prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಶ್ವಿಗೆ ಪ್ರಶಸ್ತಿ ಡಬಲ್

ಕರ್ನಾಟಕದ ಕಶ್ವಿ ವೆಂಕಟ್ ಅವರು ಜೈಪುರದಲ್ಲಿ ನಡೆದ ಏಷ್ಯನ್ ಟೆನಿಸ್ ಫೆಡರೇಷನ್ (ಎಟಿಎಫ್) 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಬಾಲಕಿಯರ ಸಿಂಗಲ್ಸ್ ಮತ್ತು ಡಬಲ್ಸ್ ಪ್ರಶಸ್ತಿ ಜಯಿಸಿದರು





ಏಷ್ಯನ್ ಗೇಮ್ಸ್‌ಗೆ ನೀರಜ್

ಭಾರತದ ಜಾವೆಲಿನ್ ಥ್ರೋ 'ಸೂಪರ್‌ಸ್ಟಾರ್' ನೀರಜ್ ಚೋಪ್ರಾ ಅವರು ಇದೇ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲಿದ್ದಾರೆ

ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ
Office of the Chief Electoral Officer, Karnataka

SIR 2026ರಲ್ಲಿ ಭಾಗವಹಿಸಿ

ವಿಶೇಷ ಸಮಗ್ರ ಪರಿಷ್ಕರಣೆ (Special Intensive Revision–SIR) ಯ ಉದ್ದೇಶವು ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದಾಗಿದೆ. ಈ ವಿಶೇಷ ಸಮಗ್ರ ಪರಿಷ್ಕರಣೆ (SIR) ಅವಧಿಯಲ್ಲಿ ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಹಾಗೂ ಖಚಿತಪಡಿಸಿಕೊಳ್ಳಿ. ಪ್ರಜಾಪ್ರಭುತ್ವದ ಭದ್ರ ಅಡಿಪಾಯವಾದ ಎಸ್ಐಆರ್‌ನ ಭಾಗವಾಗಿರಿ.

ವಿವರಣೆ	ದಿನಾಂಕ
ಅರ್ಹತಾ ದಿನಾಂಕ	1ನೇ ಅಕ್ಟೋಬರ್, 2026
ಬೂತ್ ಮಟ್ಟದ ಅಧಿಕಾರಿಗಳಿಂದ ಮನೆ ಮನೆಗೆ ಭೇಟಿ	30ನೇ ಜೂನ್, 2026 ರಿಂದ 29ನೇ ಜುಲೈ, 2026 ರವರೆಗೆ
ಕರಡು ಮತದಾರರ ಪಟ್ಟಿಯ ಪ್ರಕಟಣೆ	05ನೇ ಆಗಸ್ಟ್, 2026
ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿ	05ನೇ ಆಗಸ್ಟ್, 2026 ರಿಂದ 04ನೇ ಸೆಪ್ಟೆಂಬರ್, 2026 ರವರೆಗೆ
ಹಕ್ಕು ಮತ್ತು ಆಕ್ಷೇಪಣೆಗಳ ಕುರಿತು ನೋಟಿಸ್ ನೀಡುವಿಕೆ ಹಾಗೂ ವಿಲೇವಾರಿ ಪ್ರಕ್ರಿಯೆ	05ನೇ ಆಗಸ್ಟ್, 2026 ರಿಂದ 03ನೇ ಅಕ್ಟೋಬರ್, 2026 ರವರೆಗೆ
ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ	07ನೇ ಅಕ್ಟೋಬರ್, 2026

ಬೂತ್ ಮಟ್ಟದ ಅಧಿಕಾರಿಗಳು (BLO) ಏನು ಮಾಡುತ್ತಾರೆ?

- 2026 ಜೂನ್ 16 ರವರೆಗೆ ಮತದಾರರ ಪಟ್ಟಿಯಲ್ಲಿ ಇರುವ ಎಲ್ಲಾ ಮತದಾರರಿಗೆ ಎನ್ಯೂಮರೇಷನ್ ಫಾರಂಗಳನ್ನು ವಿತರಿಸುತ್ತಾರೆ.
- 2026 ರ ಜೂನ್ 30 ರಿಂದ ಜುಲೈ 29 ರವರೆಗೆ ನಿಮ್ಮ ಮನೆಗಳಿಗೆ ಭೇಟಿ ನೀಡುತ್ತಾರೆ.
- ಎನ್ಯೂಮರೇಷನ್ ಫಾರಂಗಳನ್ನು ದ್ವಿ ಪ್ರತಿಯಲ್ಲಿ ನಿಮಗೆ ಒದಗಿಸಿ, ಫಾರಂನ್ನು ಭರ್ತಿ ಮಾಡಲು ಸಹಾಯ ಮಾಡುತ್ತಾರೆ.
- ನಿಮ್ಮಿಂದ ಭರ್ತಿ ಮಾಡಿದ ಫಾರಂಗಳನ್ನು ಸಂಗ್ರಹಿಸಿ, ಅದಕ್ಕೆ ಸ್ವೀಕೃತಿ ನೀಡುತ್ತಾರೆ.

ಮತದಾರರಲ್ಲಿ ವಿನಂತಿ

- ಬೂತ್ ಮಟ್ಟದ ಅಧಿಕಾರಿಯು ನೀಡುವ ಎರಡು ಫಾರಂಗಳನ್ನು ಭರ್ತಿ ಮಾಡುವುದು.
- ಫಾರಂ ಮೇಲೆ ಒಂದು ಇತ್ತೀಚಿನ ಬಣ್ಣದ ಫೋಟೋ ಅಂಟಿಸುವುದು (ಇದು ಕಡ್ಡಾಯವಲ್ಲ).
- ಫಾರಂ ಭರ್ತಿ ಮಾಡಲು ಅಥವಾ ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡಲು ಅಗತ್ಯ ಸಹಾಯಕ್ಕಾಗಿ ಬೂತ್ ಮಟ್ಟದ ಅಧಿಕಾರಿಯನ್ನು ಸಂಪರ್ಕಿಸಿ.
- ಭರ್ತಿ ಮಾಡಿದ ಫಾರಂಗಳನ್ನು ಬೂತ್ ಮಟ್ಟದ ಅಧಿಕಾರಿಗೆ ಹಿಂತಿರುಗಿಸಿ ಸ್ವೀಕೃತಿಯನ್ನು ಪಡೆಯುವುದು.

ಕರಡು ಮತದಾರರ ಪಟ್ಟಿ ಪ್ರಕಟಣೆ – 05ನೇ ಆಗಸ್ಟ್, 2026 (ಬುಧವಾರ)

ಮತದಾರರಾಗಲು ಅರ್ಹತೆ

ಭಾರತದ ಸಂವಿಧಾನದ 326ನೇ ವಿಧಿಯ ಪ್ರಕಾರ:

- ಭಾರತ ದೇಶದ ನಾಗರೀಕರಾಗಿರಬೇಕು.
- ಕನಿಷ್ಠ 18 ವರ್ಷ ವಯಸ್ಸಿರಬೇಕು.
- ಸಂಬಂಧಿತ ವಿಧಾನಸಭಾ ಕ್ಷೇತ್ರದ ಸಾಮಾನ್ಯ ನಿವಾಸಿಯಾಗಿರಬೇಕು.
- ಯಾವುದೇ ಕಾನೂನು ಅಡಿಯಲ್ಲಿ ಅನರ್ಹರಾಗಿರಬಾರದು.

ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆ ಎಂಬುದನ್ನು ಹೇಗೆ ಖಚಿತಪಡಿಸಿಕೊಳ್ಳುವುದು?

ಈ ಕೆಳಕಂಡ ವಿಧಾನಗಳ ಮೂಲಕ ನೀವು ಪರಿಶೀಲಿಸಬಹುದು:

- ಬೂತ್ ಮಟ್ಟದ ಅಧಿಕಾರಿಯ (BLO) ಹತ್ತಿರವಿರುವ ಮತದಾರರ ಪಟ್ಟಿಯಿಂದ.
- ECINET ಮೊಬೈಲ್ ಅಪ್ಲಿಕೇಷನ್ ಮೂಲಕ.
- voters.eci.gov.in ನಲ್ಲಿ ಲಭ್ಯವಿರುವ ಮತದಾರರ ಪಟ್ಟಿಯ ಮೂಲಕ.
- CEO ಕರ್ನಾಟಕ ಮತ್ತು ಸಂಬಂಧಿತ ಜಿಲ್ಲಾ ಚುನಾವಣಾಧಿಕಾರಿಯ ವೆಬ್‌ಸೈಟ್‌ಗಳ ಮುಖಾಂತರ.

ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ ಏನು ಮಾಡಬೇಕು?

ನಮೂನೆ 6 ರನ್ನು ಭರ್ತಿ ಮಾಡಿ, ಘೋಷಣಾ ಫಾರಂ ಜೊತೆಗೆ ಬೂತ್ ಮಟ್ಟದ ಅಧಿಕಾರಿ (BLO) ಗೆ ಸಲ್ಲಿಸಬಹುದು ಅಥವಾ ಆನ್‌ಲೈನ್ ಮೂಲಕ voters.eci.gov.in ನಲ್ಲಿ ಅರ್ಜಿ ಸಲ್ಲಿಸಬಹುದು ಅಥವಾ ECINET ಮೊಬೈಲ್ ಆ್ಯಪ್ ಮೂಲಕವೂ ಸಲ್ಲಿಸಬಹುದು.

ಸೂಚನಾತ್ಮಕ ದಾಖಲೆಗಳ ಪಟ್ಟಿ

1. ಯಾವುದೇ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ/ ಪಿಎಸ್‌ಯುಗಳ ನಿಯಮಿತ ನೌಕರರು ಅಥವಾ ಪಿಂಚಣಿದಾರರಿಗೆ ನೀಡಿರುವ ಗುರುತಿನ ಚೀಟಿ ಅಥವಾ ಪಿಂಚಣಿ ಪಾವತಿ ಆದೇಶ.
2. ಭಾರತದಲ್ಲಿ 01.07.1987 ಕ್ಕಿಂತ ಮುಂಚೆ ಸರ್ಕಾರ/ ಸ್ಥಳೀಯ ಪ್ರಾಧಿಕಾರಗಳು/ ಬ್ಯಾಂಕುಗಳು/ ಅಂಚೆ ಕಛೇರಿ/ ಎಲ್ಐಸಿ/ ಸಾರ್ವಜನಿಕ ವಲಯದ ಸಂಸ್ಥೆಗಳು ನೀಡಿರುವ ಯಾವುದೇ ಗುರುತಿನ ಚೀಟಿ, ಪ್ರಮಾಣಪತ್ರ ಅಥವಾ ದಾಖಲೆ.
3. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಜನನ ಪ್ರಮಾಣಪತ್ರ.
4. ಪಾಸ್‌ಪೋರ್ಟ್.
5. ಮಾನ್ಯತೆ ಪಡೆದ ಮಂಡಳಿಗಳು/ವಿಶ್ವವಿದ್ಯಾಲಯಗಳು ನೀಡಿರುವ ಎಸ್‌ಎಸ್‌ಎಲ್‌ಸಿ/ಶೈಕ್ಷಣಿಕ ಪ್ರಮಾಣಪತ್ರ.
6. ರಾಜ್ಯದ ಸಕ್ಷಮ ಪ್ರಾಧಿಕಾರಗಳಿಂದ ನೀಡಲಾದ ಖಾಯಂ ನಿವಾಸಿ ಪ್ರಮಾಣಪತ್ರ.
7. ಅರಣ್ಯ ಹಕ್ಕುಗಳ ಪ್ರಮಾಣಪತ್ರ.
8. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಒಬಿಸಿ/ಎಸ್‌ಸಿ/ಎಸ್‌ಟಿ ಅಥವಾ ಯಾವುದೇ ಜಾತಿ ಪ್ರಮಾಣಪತ್ರ.
9. ರಾಷ್ಟ್ರೀಯ ನಾಗರೀಕರ ನೋಂದಣಿ (ಅಸ್ತಿತ್ವ ಇರುವ ಕಡೆ).
10. ರಾಜ್ಯ ಅಥವಾ ಸ್ಥಳೀಯ ಸರ್ಕಾರದ ಪ್ರಾಧಿಕಾರಗಳಿಂದ ನಿರ್ವಹಿಸಲಾಗಿರುವ ಕುಟುಂಬ ರಿಜಿಸ್ಟರ್.
11. ಸರ್ಕಾರದಿಂದ ನೀಡಲಾದ ಯಾವುದೇ ಭೂ/ಮನೆ ಹಂಚಿಕೆ ಪ್ರಮಾಣಪತ್ರ.
12. ಆಧಾರ್ ಸಂಬಂಧ, ಭಾರತ ಚುನಾವಣಾ ಆಯೋಗವು ಪತ್ರ ಸಂಖ್ಯೆ 23/2025–ERS/Vol.II ದಿನಾಂಕ 09.09.2025ರಲ್ಲಿ ಹೊರಡಿಸಿದ ಸೂಚನೆಗಳು ಅನ್ವಯಿಸುತ್ತದೆ.

ಅರ್ಜಿಯ ನಮೂನೆಗಳು

ನಮೂನೆ 6	ಹೊಸ ಮತದಾರರ ನೋಂದಣಿ
ನಮೂನೆ 6ಎ	ಸಾಗರೋತ್ತರ ಮತದಾರರಾಗಿ ನೊಂದಾಯಿಸಲು
ನಮೂನೆ 7	ಹೆಸರು ತೆಗೆದುಹಾಕುವಿಕೆ
ನಮೂನೆ 8	ನಿವಾಸ ಸ್ಥಳ ಬದಲಾವಣೆ/ನಮೂದುಗಳ ತಿದ್ದುಪಡಿ/ ಎಪಿಕ್ ಬದಲಾವಣೆ/ಪಿಡಬ್ಲ್ಯೂಡಿ ಗುರುತು ದಾಖಲಿಸುವುದು

ಮೇಲ್ಮನವಿಗೆ ಅವಕಾಶ

ಪ್ರಜಾ ಪ್ರತಿನಿಧಿ ಕಾಯ್ದೆ, 1950 ರ ಕಲಂ 24 ರ ಅನ್ವಯ, ಚುನಾವಣಾ ನೋಂದಣಾಧಿಕಾರಿ (ERO) ಅವರ ಯಾವುದೇ ನಿರ್ಧಾರದ ವಿರುದ್ಧ ಜಿಲ್ಲಾ ದಂಡಾಧಿಕಾರಿ / ಜಿಲ್ಲಾ ಚುನಾವಣಾಧಿಕಾರಿಯವರ ಮುಂದೆ ಮೇಲ್ಮನವಿ ಸಲ್ಲಿಸಬಹುದಾಗಿದೆ.

ECINET
ಮೊಬೈಲ್ ಅಪ್ಲಿಕೇಷನ್

ಅಪ್ಲಿಕೇಷನ್ ಡೌನ್‌ಲೋಡ್ ಮಾಡಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ANDROID APP ON Google play | Download on the App Store

ಹೆಚ್ಚಿನ ಮಾಹಿತಿಗಾಗಿ:

https://www.ceo.karnataka.gov.in

ಅಧಿಕೃತ ಪೋರ್ಟಲ್‌ಗೆ ಭೇಟಿ ನೀಡಿ
https://voters.eci.gov.in

TOLL FREE 1950
180042551950

ceokarnataka
ceo.karnataka.gov.in

ಅಪಘಾತ: ಐದು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಕುಕನೂರು (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಭಾನಾಪುರದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ನಡೆದ ರಸ್ತೆ ಅಪಘಾತದಲ್ಲಿ ಹಾವೇರಿ ಜಿಲ್ಲೆಯ ಒಂದೇ ಕುಟುಂಬದ ಮೂವರು ಸೇರಿ ಒಟ್ಟು ಐವರು ಮೃತಪಟ್ಟಿದ್ದಾರೆ. ಇತರ ಐವರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ.

ಹಾವೇರಿಯ ಕೆಂಚಮ್ಮ ಬಾಳೆ ಕಾಯಿ(34), ಅವರ ಪತಿ ಪ್ರವೀಣ ಶಿವಾಜಿ ಬಾಳೆಕಾಯಿ(40) ಹಾಗೂ ಮಗ ಚಿನ್ಮಯ(18), ಚಾಲಕ ರಮೇಶ್ ಬಳ್ಳಾರಿ(45) ಹಾಗೂ ಅದೇ ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕಿನ ಹಿರೇಕಬ್ಬಾರ ಗ್ರಾಮದ ಅಮೃತಾ ಕೋಟ್ಯಾಳ (30) ಮೃತಪಟ್ಟಿದ್ದಾರೆ.

ಇವರು ಓಮ್ನಿ ವಾಹನದಲ್ಲಿ ಹಾವೇರಿಯಿಂದ ಮಂತ್ರಾಲಯಕ್ಕೆ ತೆರಳುತ್ತಿದ್ದರು. ಮಿನಿ ಸರಕು ಸಾಗಣೆ ವಾಹನ ರಸ್ತೆ ವಿಭಜಕ ದಾಟಿ ಡಿಕ್ಕಿ ಹೊಡೆದಿದ್ದರಿಂದ ಓಮ್ನಿ ನಜ್ಜುಗುಜ್ಜಾಗಿದೆ. ಡಿಕ್ಕಿಯ ರಭಸಕ್ಕೆ ಮೃತದೇಹಗಳು ರಸ್ತೆಯ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಸಚಿವ ಸ್ಥಾನ: ಆಕಾಂಕ್ಷಿಗಳಿಂದ ಲಾಬಿ

ದೆಹಲಿಯಲ್ಲಿ ಬೀಡು ಬಿಟ್ಟಿರುವ ಶಾಸಕರಿಂದ ಹೈಕಮಾಂಡ್ ಮೇಲೆ ಒತ್ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವ ಗಾದಿಗೆ ಏರಲು ಆಕಾಂಕ್ಷಿಗಳು ಹೈಕಮಾಂಡ್ ಮಟ್ಟದಲ್ಲಿ ಲಾಬಿ ನಡೆಸಿದ್ದಾರೆ.

ಶಿವಕುಮಾರ್ ಸಂಪುಟಕ್ಕೆ ಮೊದಲ ಹಂತದಲ್ಲಿ 13 ಸಚಿವರನ್ನು ಸೇರ್ಪಡೆ ಮಾಡಲಾಗಿತ್ತು. ಈ ಪೈಕಿ, ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿದ್ದ 11 ಮಂದಿಗೆ ಮತ್ತೆ ಅವಕಾಶ ನೀಡಲಾಗಿತ್ತು. ಸಂಪುಟಕ್ಕೆ ಸೇರ್ಪಡೆಯಾದ ಮತ್ತಿಬ್ಬರು ಯು.ಟಿ.ಖಾದರ್ ಹಾಗೂ ಯತೀಂದ್ರ ಸಿದ್ದರಾಮಯ್ಯ. ಸಂಪುಟಕ್ಕೆ ಇನ್ನೂ 20 ಸಚಿವರ ಸೇರ್ಪಡೆಗೆ ಅವಕಾಶ ಇದೆ. ಜುಲೈ ಮೊದಲ ಅಥವಾ ಎರಡನೇ ವಾರದಲ್ಲಿ ಸಂಪುಟ ವಿಸ್ತರಣೆಯಾಗುವ ಸಾಧ್ಯತೆ ಇದೆ. ಹೀಗಾಗಿ, ದೆಹಲಿಯಲ್ಲಿ ಬೀಡು ಬಿಟ್ಟಿರುವ ಆಕಾಂಕ್ಷಿಗಳು ಹೈಕಮಾಂಡ್ ಮೇಲೆ ಒತ್ತಡ ಹೇರಲಾರಂಭಿಸಿದ್ದಾರೆ.

ಕಳೆದ ಮೂರು–ನಾಲ್ಕು ದಿನಗಳಲ್ಲಿ ಹಿರಿಯ ಶಾಸಕರಾದ ಎಚ್.ಕೆ.ಪಾಟೀಲ, ಬಸವರಾಜ ರಾಯರಡ್ಡಿ, ದಿನೇಶ್ ಗುಂಡೂರಾವ್, ಎನ್.ಎ.ಹ್ಯಾರಿಸ್, ವಿಧಾನ ಪರಿಷತ್ ಸದಸ್ಯರಾದ ಉಮಾಶ್ರೀ, ಪುಟ್ಟಣ್ಣ, ಆರತಿ ಕೃಷ್ಣ ಮತ್ತಿತರರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ತಮಗೆ ಅವಕಾಶ ನೀಡಬೇಕು ಎಂದು ಕೋರಿದ್ದಾರೆ. 'ಸಹಕಾರಿಗಳ ಸಭೆ ಸಂಬಂಧ ದೆಹಲಿಗೆ ಬಂದಿದ್ದೇನೆ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿಲ್ಲ' ಎಂದು ಎಚ್.ಕೆ.ಪಾಟೀಲ ಸ್ಪಷ್ಟಪಡಿಸಿದರು.

ಯುವ ಶಾಸಕರಿಗೆ ಹಾಗೂ ಮೂರು–ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ಈವರೆಗೆ ಅವಕಾಶ ನೀಡದವರಿಗೆ ಆದ್ಯತೆ ನೀಡಲು ಹೈಕಮಾಂಡ್ ಯೋಜಿಸಿದೆ. 20 ಸಚಿವ ಸ್ಥಾನಕ್ಕೆ ಸುಮಾರು 80 ಆಕಾಂಕ್ಷಿಗಳಿದ್ದಾರೆ.

'ಇದೇ ಕೊನೆಯ ಚುನಾವಣೆ. ಈ ಸಲ ಅವಕಾಶ ನೀಡಬೇಕು' ಎಂದು ಕೆಲವು ಹಿರಿಯ ಶಾಸಕರು ಹೈಕಮಾಂಡ್ ಬಳಿ ಅಲವತ್ತುಕೊಂಡಿದ್ದಾರೆ.

'ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲ ಹಿರಿಯ ಶಾಸಕರೇ ಸಚಿವರಾಗುತ್ತಿದ್ದಾರೆ. ಈ ಸಲ ಹೊಸಬರಿಗೆ ಅವಕಾಶ ಕೊಡಬೇಕು' ಎಂದು ಕೆಲವು ಶಾಸಕರು ವರಿಷ್ಠರಲ್ಲಿ ಮನವಿ ಮಾಡಿದ್ದಾರೆ. 'ಸಂಪುಟದಿಂದ ನಮ್ಮನ್ನು ಕೈಬಿಡಲು ಕಾರಣವೇನು? ಮೊದಲ ಹಂತದಲ್ಲಿ ಸಂಪುಟಕ್ಕೆ ಸೇರ್ಪಡೆಯಾಗಿರುವ 11 ಮಂದಿ (ಹಿಂದೆ ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿದ್ದವರು) ಮಾಡಿರುವ 'ವಿಶಿಷ್ಟ' ಸಾಧನೆಯೇನು? ಈ ಬಗ್ಗೆ ಹೈಕಮಾಂಡ್ ಸ್ಪಷ್ಟನೆ ನೀಡಬೇಕು' ಎಂದು ಹಿರಿಯ ಶಾಸಕರು ಆಗ್ರಹಿಸಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶ ಪ್ರವಾಸದಲ್ಲಿದ್ದು, ಜುಲೈ 6ರಂದು ವಾಪಸಾಗಲಿದ್ದಾರೆ. ಹೀಗಾಗಿ, ಅದಕ್ಕೂ ಮುನ್ನ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆಯುವ ಸಾಧ್ಯತೆ ಕಡಿಮೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜುಲೈ ಮೊದಲ ವಾರದಲ್ಲಿ ದೆಹಲಿಗೆ ಬರುವ ನಿರೀಕ್ಷೆ ಇದೆ.

ನಾಮನಿರ್ದೇಶನಕ್ಕೆ ಒತ್ತಡ

ವಿಧಾನ ಪರಿಷತ್‌ನ ನಾಮನಿರ್ದೇಶಿತ ಸದಸ್ಯರಾದ ಎಚ್.ವಿಶ್ವನಾಥ್, ಭಾರತಿ ಶೆಟ್ಟಿ, ಶಾಂತಾರಾಮ ಸಿದ್ದಿ, ತಳವಾರ ಸಾಬಣ್ಣ ಹಾಗೂ ರಮೇಶ್ ಬಾಬು ಅವಧಿ ಜುಲೈ 21ರಂದು ಮುಗಿಯಲಿದೆ. ಈ ಐದು ಸ್ಥಾನಗಳಿಗೆ 40ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಒಂಬತ್ತು ತಿಂಗಳ ಹಿಂದೆ ರಮೇಶ್ ಬಾಬು ಅವರನ್ನು ಪರಿಷತ್‌ಗೆ ನಾಮನಿರ್ದೇಶನ ಮಾಡಲಾಗಿತ್ತು. ಪರಿಷತ್ ಸದಸ್ಯರಾಗಿ ಮುಂದುವರಿಸುವುದಾಗಿ ಹೈಕಮಾಂಡ್ ಅವರಿಗೆ ಭರವಸೆ ನೀಡಿತ್ತು. ಅವರು ಮುಂದುವರಿಯುವುದು ಬಹುತೇಕ ನಿಕ್ಕಿ. ಉಳಿದ ಸ್ಥಾನಗಳಿಗೆ ಪೈಪೋಟಿ ತೀವ್ರಗೊಂಡಿದೆ.

ಎಐಸಿಸಿ ರಾಷ್ಟ್ರೀಯ ಸಂಯೋಜಕ ಆನಂದ ಕುಮಾರ್ ಅವರು ಹೈಕಮಾಂಡ್‌ನ ನಾಯಕರನ್ನು ಶನಿವಾರ ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. '37 ವರ್ಷಗಳಿಂದ ಪಕ್ಷದಲ್ಲಿ ಸಕ್ರಿಯನಾಗಿ ದುಡಿಯುತ್ತಿದ್ದೇನೆ. ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಹಲವು ಬಾರಿ ಹೆಸರು ಶಿಫಾರಸು ಆಗಿದ್ದರೂ ಅವಕಾಶ ಸಿಕ್ಕಿರಲಿಲ್ಲ. ಈ ಸಲವಾದರೂ ಪರಿಗಣಿಸಬೇಕು' ಎಂದು ಕೋರಿದ್ದಾರೆ. ಇನ್ನೂ ಕೆಲವು ಆಕಾಂಕ್ಷಿಗಳು ಒತ್ತಡ ಹೇರಿದ್ದಾರೆ.

ಸುದ್ದಿ 2 ನಿಮಿಷ

ಪಲ್ಸ್ ಪೋಲಿಯೊ ಇಂದು

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ (ಜೂನ್ 28) ಪಲ್ಸ್ ಪೋಲಿಯೊ ಹನಿ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, 5 ವರ್ಷದೊಳಗಿನ 64.84 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಂಡಿದೆ.

ಪೋಲಿಯೊ ಹನಿ ವಿತರಣೆಗೆ 36,076 ಬೂತ್‌ಗಳನ್ನು ಗುರುತಿಸಲಾಗಿದೆ. ಗುಡ್ಡಗಾಡು ಪ್ರದೇಶಗಳನ್ನು ತಲುಪಲು 988 ಮೊಬೈಲ್ ತಂಡ ರಚಿಸಲಾಗಿದೆ. 2,125 ಟ್ರಾನ್ಸಿಟ್ ತಂಡವು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಲಸಿಕೆ ವಿತರಿಸಲಿವೆ. ಈ ಕಾರ್ಯಕ್ರಮಕ್ಕೆ 1.14 ಲಕ್ಷ ಕಾರ್ಯಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ. 7,197 ಮೇಲ್ವಿಚಾರಕರನ್ನು ನೇಮಿಸಲಾಗಿದೆ.

2011ರಿಂದ ಭಾರತದಲ್ಲಿ ಪೋಲಿಯೊ ಪ್ರಕರಣ ವರದಿಯಾಗಿಲ್ಲ. ಆದರೆ, ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಅಫಘಾನಿಸ್ತಾನದಲ್ಲಿ ಪ್ರಕರಣಗಳು ವರದಿಯಾಗಿವೆ. ದೇಶದಲ್ಲಿ ಪೋಲಿಯೊ ಮುಕ್ತ ಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಲು ಪೋಲಿಯೊ ಹನಿ ವಿತರಣಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದ ಎಲ್ಲ ಆಸ್ಪತ್ರೆಗಳು, ಅಂಗನವಾಡಿಗಳು, ಗುಡ್ಡಗಾಡು ಪ್ರದೇಶ ಸೇರಿದಂತೆ ವಿವಿಧೆಡೆ ಲಸಿಕೆ ಹಾಕಲು ವ್ಯವಸ್ಥೆ ಮಾಡಲಾಗಿದೆ. ಪೋಲಿಯೊ ಹನಿ ಸಂಪೂರ್ಣ ಸುರಕ್ಷಿತವಾಗಿದ್ದು, ಯಾವುದೇ ವದಂತಿಗಳಿಗೆ ಕಿವಿಗೊಡಬಾರದು ಎಂದು ಹೇಳಿದೆ.

ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ 'Nearby Vaccination centre' ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ. ಜಿಪಿಎಸ್ ತಂತ್ರಜ್ಞಾನ ಆಧಾರಿತ ಈ ಆ್ಯಪ್‌ನ ನೆರವಿನಿಂದ ಸಮೀಪದಲ್ಲಿರುವ ಲಸಿಕಾ ಕೇಂದ್ರ ಹುಡುಕಬಹುದಾಗಿದೆ. ಕಾರಣಾಂತರಗಳಿಂದ ಭಾನುವಾರದಂದು ಲಸಿಕೆ ಹಾಕಿಸಲು ಸಾಧ್ಯವಾಗದವರಿಗೆ, ಮುಂದಿನ ಎರಡು ದಿನ ನಡೆಸುವ ಮನೆ ಮನೆ ಭೇಟಿಯ ಅವಧಿಯಲ್ಲಿ ಲಸಿಕೆ ನೀಡಲು ಕ್ರಮವಹಿಸಲಾಗುತ್ತದೆ ಎಂದು ಇಲಾಖೆ ಹೇಳಿದೆ.

ಹಿಂದೂ ವ್ಯಕ್ತಿಯ ಅಂತ್ಯಕ್ರಿಯೆ ನೆರವೇರಿಸಿದ ಮುಸ್ಲಿಂ ಮಹಿಳೆ



ಕಾಸರಗೋಡು: ಕೋಯಿಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಮೃತಪಟ್ಟ ಅನಾಥ ವ್ಯಕ್ತಿ, ಕಾಸರಗೋಡು ಜಿಲ್ಲೆಯ ಮೀಂಜ ಪಂಚಾಯಿತಿ ವ್ಯಾಪ್ತಿಯ ಚಿಗುರುಪದವು ನಿವಾಸಿ ನಾರಾಯಣ (64) ಎಂಬುವರ ಅಂತ್ಯಸಂಸ್ಕಾರವನ್ನು ಇರ್ಫಾನಾ ಇಕ್ಬಾಲ್ ಎಂಬ ಮಹಿಳೆ ನೆರವೇರಿಸಿದ್ದಾರೆ.

ಇಲ್ಲಿನ ಅಂಗಡಿಯೊಂದರ ಆವರಣದಲ್ಲಿ ಬಿದ್ದುಕೊಂಡ ಸ್ಥಿತಿಯಲ್ಲಿದ್ದ ನಾರಾಯಣ ಅವರನ್ನು ಶೇಖ್ ಸಯೀದ್ ಫೌಂಡೇಷನ್ ಸಂಸ್ಥೆಯ ಕಾರ್ಯಕರ್ತರು ಒಂದು ತಿಂಗಳ ಹಿಂದೆ ಕೋಯಿಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಿದ್ದರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಮಂಗಳವಾರ ಮೃತಪಟ್ಟಿದ್ದರು. ಮೃತದೇಹವನ್ನು ಪಡೆದುಕೊಳ್ಳಲು ಯಾರೂ ಬಂದಿರಲಿಲ್ಲ. ಈ ಕಾರಣದಿಂದ ಅಂತಿಮ ಸಂಸ್ಕಾರ ನಡೆಸಲು ಇರ್ಫಾನಾ ಇಕ್ಬಾಲ್ ಮುಂದಾಗಿದ್ದರು.

ಆಂಬುಲೆನ್ಸ್ ಮೂಲಕ ಚೆರುಗೋಳಿಯ ಸ್ಮಶಾನಕ್ಕೆ ಮೃತದೇಹವನ್ನು ಒಯ್ದು, ಅಲ್ಲಿ ಹಿಂದೂ ಸಂಪ್ರದಾಯದಂತೆ ಶುಕ್ರವಾರ ಸಂಸ್ಕಾರ ನಡೆಸಿದ್ದಾರೆ. ಇರ್ಫಾನಾ ಇಕ್ಬಾಲ್ ಮುಸ್ಲಿಂಲೀಗ್ ಪಕ್ಷದ ಜಿಲ್ಲಾ ಪಂಚಾಯಿತಿ ಸದಸ್ಯೆ. ಸಾಮಾಜಿಕ ಕಾರ್ಯಕರ್ತರಾದ ರಿಯಾಝ್ ಪಿಲಾತ್ರ, ಮೆಹಮೂದ್ ಕೈಕಂಬ ಅವರಿಗೆ ಸಹಕರಿಸಿದರು.

ಚಿಕ್ಕಬಳ್ಳಾಪುರದಲ್ಲಿ ಕೆಂಪೇಗೌಡ ಜಯಂತಿ; ಪ್ರದೀಪ್ ಈಶ್ವರ್ ವಿರುದ್ಧ ಒಕ್ಕಲಿಗರು ಕೆಂಡಾಮಂಡಲ

ಮೀಸೆ ತಿರುಗಿಸಿದ ಶಾಸಕರತ್ತ ಚಪ್ಪಲಿ ಎಸೆತ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಕನ್ನಡ ಭವನದಲ್ಲಿ ಶನಿವಾರ ನಡೆದ ಕೆಂಪೇಗೌಡ ಜಯಂತಿ ಹಲವು ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಶಾಸಕ ಪ್ರದೀಪ್ ಈಶ್ವರ್ ಅವರತ್ತ ಚಪ್ಪಲಿ ತೂರಲಾಯಿತು. ಆರಂಭದಿಂದ ಕೊನೆಯವರೆಗೂ ಗೊಂದಲದ ಗೂಡಾಗಿದ್ದು ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸರು ಗುಂಪು ಚದುರಿಸಲು ಲಘು ಲಾಠಿ ಪ್ರಹಾರ ನಡೆಸಿದರು.

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬಳಿ ಕೋಟ್ಯಂತರ ರೂಪಾಯಿ ಬೆಲೆಯ ದುಬಾರಿ ವಾಚ್‌ಗಳು ಇವೆ. ರಾಮ್‌ರಾಜ್ ಪಂಚೆ ಮಾರಾಟ ಮಾಡಿ ಅನಿತಾ ಕುಮಾರಸ್ವಾಮಿ ಬಿಡದಿಯಲ್ಲಿ 32 ಎಕರೆ ಜಮೀನು ಖರೀದಿಸಿದ್ದರೇ?' ಎಂದು ಈಚೆಗೆ ಪ್ರದೀಪ್ ಈಶ್ವರ್ ಟೀಕಿಸಿದ್ದರು.

ಕುಮಾರಸ್ವಾಮಿ ವಿರುದ್ಧದ ಟೀಕೆಗೆ ಕೆಂಪೇಗೌಡ ಜಯಂತಿಯಲ್ಲಿ ಹಾಜರಿದ್ದ ಜೆಡಿಎಸ್ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಶಾಸಕ ಪ್ರದೀಪ್ ಈಶ್ವರ್ ಕಾರ್ಯಕ್ರಮದಿಂದ ನಿರ್ಗಮಿಸಬೇಕು. ಕುಮಾರಸ್ವಾಮಿ ಅವರ ಕ್ಷಮೆ ಕೇಳಬೇಕು ಎಂದು ಪಟ್ಟು ಹಿಡಿದರು. 'ಹುಚ್ಚ ಹುಚ್ಚ', 'ಗೋ ಬ್ಯಾಕ್' ಎಂಬ ಘೋಷಣೆಗಳು ಮೊಳಗಿದವು.

> ಶಾಸಕ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ಎಸೆದಿರುವ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ಈ ಕೃತ್ಯ ಸರಿಯಲ್ಲ
>
> **ಬಿ.ಕೆ.ಹರಿಪ್ರಸಾದ್**, ಕೆಪಿಸಿಸಿ ಅಧ್ಯಕ್ಷ

ಜಿಲ್ಲಾಧಿಕಾರಿ ಜಿ.ಪ್ರಭು ಎಷ್ಟೇ ಮನವಿ ಮಾಡಿದರೂ ಉಪಯೋಗವಾಗಲಿಲ್ಲ. ಪರಿಸ್ಥಿತಿ ಉದ್ವಿಗ್ನಗೊಂಡಿದ್ದನ್ನು ಗಮನಿಸಿದ ಆದಿಚುಂಚನಗಿರಿ ಶಾಖಾ ಮಠದ ಮಂಗಳನಾಥ ಸ್ವಾಮೀಜಿ, 'ಯುವ ಸಮುದಾಯ ಉದ್ವೇಗಕ್ಕೆ ಒಳಗಾಗಬಾರದು. ಸಮುದಾಯದ ಮುಖಂಡರ ಜೊತೆ ಚರ್ಚಿಸಿ ಸಮಸ್ಯೆ ಪರಿಹರಿಸುತ್ತೇವೆ. ಶಾಂತಿ ಕಾಪಾಡಿ' ಎಂದು ಕೋರಿದರು.

ಭಾಷಣಕ್ಕೂ ಅಡ್ಡಿ: ನಂತರ ಶಾಸಕ ಪ್ರದೀಪ್ ಈಶ್ವರ್ ಭಾಷಣಕ್ಕೆ ಅಡ್ಡಿಪಡಿಸಲಾಯಿತು. 'ವಿಜಯನಗರ ಸಾಮ್ರಾಜ್ಯದ ರಾಜ ಶ್ರೀಕೃಷ್ಣದೇವರಾಯರ ಸಾಮಂತರಾಗಿದ್ದ ಕೆಂಪೇಗೌಡರ ಜಯಂತಿ ಶುಭಾಶಯಗಳು' ಎಂದು ಪ್ರದೀಪ್ ಹೇಳಿದರು.

ಮೀಸೆ ತಿರುವಿ, ಭುಜತಟ್ಟಿದ ಶಾಸಕ: ಭಾಷಣ ಮುಗಿಸಿದ ಬಳಿಕ ಶಾಸಕರು ಪೊಲೀಸ್ ಭದ್ರತೆಯಲ್ಲಿ ಕನ್ನಡ ಭವನದಿಂದ ಹೊರ ಬಂದರು. ಈ ವೇಳೆ ಕಾರಿನ ಮೇಲೆ ನಿಂತು ಜೆಡಿಎಸ್ ಕಾರ್ಯಕರ್ತರಿಗೆ ಸವಾಲು ಹಾಕುವ ರೀತಿಯಲ್ಲಿ ಮೀಸೆ ತಿರುವಿದರು. ಭುಜ ತಟ್ಟಿದರು. ಅಂಬೇಡ್ಕರ್ ಅವರಿಗೆ ಜೈ, ವಾಲ್ಮೀಕಿ ಅವರಿಗೆ ಜೈ. ಎಸ್‌ಸಿ, ಎಸ್‌ಟಿಗೆ ಜೈ ಎಂದು ಘೋಷಣೆ ಕೂಗಿದರು.

ಈ ವೇಳೆ ಜನಜಂಗುಳಿಯಿಂದ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ಎಸೆಯಲಾಯಿತು. ಅದು ಅವರ ಸಮೀಪದಲ್ಲಿ ಬಿತ್ತು. ಚಪ್ಪಲಿ ಎಸೆದ ಜೆಡಿಎಸ್ ಕಾರ್ಯಕರ್ತ ಪ್ರಕಾಶ್ ಎಂಬವರನ್ನು ಪೊಲೀಸರು ವಶಕ್ಕೆ ಪಡೆದರು. ಆಗ ಪೊಲೀಸರು ಮತ್ತು ನೆರೆದಿದ್ದವರ ನಡುವೆ ವಾಗ್ವಾದ ನಡೆಯಿತು.

ಪ್ರದೀಪ್ ಈಶ್ವರ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತವಾದರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್‌ನ ಬಹುತೇಕ ಮುಖಂಡರು ಮೌನವಾಗಿದ್ದರು.



ಚಿಕ್ಕಬಳ್ಳಾಪುರದಲ್ಲಿ ಶನಿವಾರ ನಡೆದ ಕೆಂಪೇಗೌಡ ಜಯಂತಿಯಲ್ಲಿ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಘೋಷಣೆ ಕೂಗಿದ ಜೆಡಿಎಸ್ ಕಾರ್ಯಕರ್ತರು ಮತ್ತು ಒಕ್ಕಲಿಗ ಸಮುದಾಯದವರು

ಚಾರಣದ ವೇಳೆ ಬಾ.ಮ.ಹರೀಶ್ ಪುತ್ರ ಸಾವು

ಹೊಸನಗರ: ಕನ್ನಡ ಚಲನಚಿತ್ರ ನಿರ್ಮಾಪಕ ಬಾ.ಮ. ಹರೀಶ್ ಅವರ ಪುತ್ರ ಉಲ್ಲಾಸ್ (28) ಅವರು ತಾಲ್ಲೂಕಿನ ಕೊಡಚಾದ್ರಿ ಬೆಟ್ಟದಲ್ಲಿ ಶನಿವಾರ ಚಾರಣಕ್ಕೆ ಬಂದಿದ್ದ ವೇಳೆ ತೀವ್ರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.



ಉಲ್ಲಾಸ್

ಉಲ್ಲಾಸ್ ಅವರು ತಮ್ಮ ಸ್ನೇಹಿತ ಸುರೇಶ್ ಜೊತೆ ಬೆಳಿಗ್ಗೆ 6.30ಕ್ಕೆ ಕೊಡಚಾದ್ರಿ ಬೆಟ್ಟಕ್ಕೆ ಚಾರಣಕ್ಕೆ ಬಂದಿದ್ದರು. ಅಲ್ಲಿನ ಸರ್ವಜ್ಞ ಪೀಠಕ್ಕೆ ಭೇಟಿ ನೀಡಿ ವಾಪಸ್ಸಾಗುವ ವೇಳೆ ಪ್ರವಾಸಿ ಮಂದಿರದ ಮುಂಭಾಗದಲ್ಲಿನ ದೇವಸ್ಥಾನದ ಎದುರು ತೀವ್ರ ಹೃದಯಾಘಾತಕ್ಕೆ ಒಳಗಾಗಿ ಹಠಾತ್ತನೇ ಕುಸಿದು ಬಿದ್ದಿದ್ದಾರೆ.

ಸಂಗಡಿಗರು ಉಲ್ಲಾಸ್‌ಗೆ ಸ್ಥಳದಲ್ಲೇ ಕೃತಕ ಉಸಿರಾಟಕ್ಕೆ ವ್ಯವಸ್ಥೆ ಮಾಡಿ, ನಗರ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಮೂಲಕ ಸ್ಥಳಾಂತರಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಹೊಸನಗರದ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯ ಅವರು ಮೃತಪಟ್ಟಿದ್ದಾರೆ.

ಪ್ಯಾಕೇಜ್ ಪ್ರವಾಸದಲ್ಲಿ ಕೊಡಚಾದ್ರಿ ಗಿರಿಗೆ ಶನಿವಾರ ಬೆಳಿಗ್ಗೆಯಷ್ಟೇ ಬಂದಿದ್ದ ಉಲ್ಲಾಸ್ ಅವರಿಗೆ ಇತ್ತೀಚೆಗಷ್ಟೇ ವಿವಾಹ ನಿಶ್ಚಯವಾಗಿತ್ತು. ಡಿಸೆಂಬರ್‌ನಲ್ಲಿ ಮದುವೆ ನಿಗದಿ ಆಗಿತ್ತು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಕೆಶಿ ಹಠ ಬಿಡಲಿ: ಸೋಮಣ್ಣ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತನ್ನದೇ ನಡೆಯಬೇಕು ಎಂದುಕೊಳ್ಳುವುದು ಸರಿಯಲ್ಲ. ಹಠ ಹಿಡಿದು ಒಂದೇ ಯೋಜನೆಗೆ ಜೋತು ಬೀಳುವುದೂ ಸೂಕ್ತವಲ್ಲ. ಜನರ ಕಷ್ಟಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.



ವಿ. ಸೋಮಣ್ಣ

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇಂದ್ರದ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಟೌನ್‌ಶಿಪ್ ಮಾಡಬೇಕು ಎಂದು ಮೊದಲು ಹೇಳಿದ್ದು ನಿಜ. ನಂತರ ಬೇಡ ಎಂದು ಸುಮ್ಮನಾಗಿರುವುದೂ ನಿಜ. ಅವರಿಬ್ಬರ ಕೆಸರೆರಚಾಟದಲ್ಲಿ ಜನರ ನೆಮ್ಮದಿ ಹಾಳಾಗಬಾರದು. ಜನರ ಅಭಿಪ್ರಾಯ ತೆಗೆದುಕೊಂಡು ಬೇರೆ ಕಡೆ ಟೌನ್‌ಶಿಪ್ ನಿರ್ಮಿಸುವುದು ಉತ್ತಮ' ಎಂದು ಸಲಹೆ ನೀಡಿದರು.

'ಕುಮಾರಸ್ವಾಮಿ ಹೇಳುತ್ತಿರುವುದು ಸರಿ ಇದೆ. ಅವರ ಮನವಿಗೆ ಸ್ಪಂದಿಸಿ ಟೌನ್‌ಶಿಪ್ ಯೋಜನೆ ಕೈಬಿಟ್ಟರೆ ಎಲ್ಲರಿಗೂ ಕ್ಷೇಮ. ಯಾವುದೇ ಟೌನ್‌ಶಿಪ್ ಮಾಡೋದು ಆ ಭಾಗದ ಜನರ ಅನುಕೂಲಕ್ಕಾಗಿ. ನಾವು ಕೂಡ ಸೂರ್ಯನಗರ ಪ್ರಾಜೆಕ್ಟ್ ಮಾಡಿದ್ದೇವೆ. ಒಬ್ಬ ರೈತ ಕೂಡ ಬೀದಿಗೆ ಬಾರದ ಹಾಗೆ ಕೆಲಸ ಮಾಡಿದ್ದೇವೆ. ಆನೇಕಲ್ ತಾಲ್ಲೂಕಿನ ಜಿಗಣಿ, ಸರ್ಜಾಪುರ ಟೌನ್‌ಶಿಪ್ ನೋಡಿಕೊಂಡು ಬನ್ನಿ. ರೈತರು ಬೇಡ ಎಂದಾಗ ಇನ್ನೂ ಹತ್ತು ಕಿ.ಮೀ ಮುಂದೆ ಹೋಗಬಹುದು' ಎಂದು ಹೇಳಿದರು.

ಪಾಪದ ಕೆಲಸ: 'ಶ್ರೀರಾಮ ಮಂದಿರದಲ್ಲಿ ನಡೆದಿರುವ ದೇಣಿಗೆ ಹಣ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಎಸ್‌ಐಟಿ ತನಿಖೆಗೆ ಆದೇಶಿಸಿದ್ದಾರೆ. ದೇವರ ಹೆಸರನ್ನು ಬಳಸಿಕೊಂಡು ಪಾಪದ ಕೆಲಸಗಳನ್ನು ಮಾಡಿದರೆ, ಅವರಿಗಿಂತ ದೊಡ್ಡ ಪಾಪಿಗಳು ಈ ಜಗತ್ತಿನಲ್ಲಿ ಬೇರೊಬ್ಬರಿಲ್ಲ' ಎಂದು ಸೋಮಣ್ಣ ಹೇಳಿದರು.

'ರಾಮನ ಹೆಸರನ್ನು ಹೇಳಿಕೊಂಡು ಯಾರಾದರೂ ಅಪಚಾರ ಮಾಡಲು ಯತ್ನಿಸಿದರೆ, ಅಂತವರಿಗೆ ಸ್ವತಃ ಆ ರಾಮನೇ ಶಿಕ್ಷೆ ನೀಡುತ್ತಾನೆ. ಇದರಲ್ಲಿ ಯಾರನ್ನೂ ಕ್ಷಮಿಸುವ ಪ್ರಶ್ನೆಯೇ ಇಲ್ಲ' ಎಂದರು.

ರೈತರು ಒಪ್ಪಿದರೆ ಅಡ್ಡಿಯಿಲ್ಲ: ನಿರಾಣಿ

'ಶೇ 80ರಷ್ಟು ರೈತರು ಒಪ್ಪಿಗೆ ನೀಡಿ, ಉಳಿದ ಶೇ 20 ರಷ್ಟು ರೈತರು ಭೂಮಿ ನೀಡಲು ನಿರಾಕರಿಸಿದರೂ ಭೂಸ್ವಾಧೀನ ಮಾಡಿಕೊಳ್ಳಲು ಕಾಯ್ದೆಯಲ್ಲಿ ಅವಕಾಶ ಇದೆ. ಸರ್ಕಾರ ಸರ್ವೆ ಮಾಡಿಸಲಿ, ಹೆಚ್ಚಿನ ಸಂಖ್ಯೆಯ ರೈತರು ಭೂಮಿ ನೀಡಲು ಒಪ್ಪಿಗೆ ನೀಡಿದರೆ ಮುಂದುವರಿಸಬಹುದು. ಇಲ್ಲವಾದರೆ ಯೋಜನೆ ಕೈಬಿಡುವುದು ಸೂಕ್ತ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮುರುಗೇಶ ನಿರಾಣಿ ಹೇಳಿದರು.

'ರೈತರು ಸ್ವ ಇಚ್ಛೆಯಿಂದ ಭೂಮಿ ನೀಡಿದರೆ ಯೋಜನೆ ಮುಂದುವರಿಸುವುದರಲ್ಲಿ ತಪ್ಪಿಲ್ಲ. ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೃಷಿ ಭೂಮಿಯನ್ನು ತೆಗೆದುಕೊಂಡಿರುವ ಪ್ರಮಾಣ ರಾಜ್ಯದಲ್ಲಿ ಶೇ 1 ಕ್ಕಿಂತಲೂ ಕಡಿಮೆ ಇದೆ. ಭೂಮಿ ಇಲ್ಲದೇ ಅಭಿವೃದ್ಧಿ ಮಾಡುವುದು ಅಸಾಧ್ಯ. ಸಂಬಂಧಿಸಿದ ರೈತರೊಂದಿಗೆ ಚರ್ಚಿಸಿ ಮುಂದುವರಿಯಲಿ' ಎಂದು ಸಲಹೆ ನೀಡಿದರು.

ಒಂದು ದುರುದ್ದೇಶಪೂರ್ವಕ ಅಸಿಂಧು • ವಿಜಯೇಂದ್ರಗೆ ಮಧ್ಯಂತರ ವರದಿ ಸಲ್ಲಿಸಿದ ಸಿ.ಟಿ ರವಿ

ಪರಿಷತ್: ಬಿಜೆಪಿಯ ಮೂವರಿಂದ ಅಡ್ಡಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ನಡೆದಿದ್ದ ಚುನಾವಣೆಯಲ್ಲಿ ಅಡ್ಡ ಮತದಾನ ಕುರಿತು ನಡೆಸಲಾದ ಆಂತರಿಕ ವಿಚಾರಣೆಯ ಮಧ್ಯಂತರ ವರದಿಯನ್ನು ಸಮಿತಿಯು ಶನಿವಾರ ಸಲ್ಲಿಸಿದ್ದು, ಮೂರು ಅಡ್ಡ ಮತ ಹಾಗೂ ಒಂದು ದುರುದ್ದೇಶ ಪೂರಿತ ಅಸಿಂಧು ಎನ್ನುವುದನ್ನು ಪತ್ತೆ ಮಾಡಿದೆ.

ಜೂನ್ 18ರಂದು ನಡೆದಿದ್ದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಐದನೇ ಅಭ್ಯರ್ಥಿಯಾಗಿದ್ದ ವಿನಯ ಕಾರ್ತಿಕ್‌ಗೆ 11 ಹೆಚ್ಚುವರಿ ಮತಗಳು ಬಂದಿದ್ದವು. ಇದು ಬಿಜೆಪಿ–ಜೆಡಿಎಸ್ ವಲಯದಲ್ಲಿ ತಳಮಳ ಮೂಡಿಸಿತ್ತು. ಅಡ್ಡ ಮತದಾನ ಮಾಡಿದವರ ಬಗ್ಗೆ ಮಾಹಿತಿ ಕಲೆ ಹಾಕಿ ವರದಿ ಪಡೆಯಲು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಮತ್ತು ಶಾಸಕ ಮಹೇಶ್ ಟೆಂಗಿನಕಾಯಿ ಅವರನ್ನು ಒಳಗೊಂಡ ಮೂವರು ಸದಸ್ಯರ ಸಮಿತಿಯೊಂದನ್ನು ಬಿಜೆಪಿ ರಚಿಸಿತ್ತು. ಸಿ.ಟಿ. ರವಿ ಅವರು ವರದಿಯನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಶನಿವಾರ ಸಲ್ಲಿಸಿದರು.

'ವರದಿಯಲ್ಲಿ ಯಾವ ಶಾಸಕರ ಹೆಸರು ಉಲ್ಲೇಖಿಸದಿದ್ದರೂ ಬಿಜೆಪಿಯ ಮೂವರು ಮಾತ್ರ ಪಕ್ಷಕ್ಕೆ ದ್ರೋಹ ಬಗೆದು ಅಡ್ಡ ಮಾತದಾನ ಮಾಡಿದ್ದಾರೆ. ಒಂದು ಮತ ಅಸಿಂಧುವಾಗಿದ್ದರೂ ಅದು ದುರುದ್ದೇಶಪೂರ್ವಕವಾಗಿ ನಡೆದಿದೆ. ಉಳಿದ ಏಳು ಅಡ್ಡ ಮತಗಳು ಮೈತ್ರಿ ಪಕ್ಷದ ಶಾಸಕರವು ಎನ್ನುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

'ಗೆಲ್ಲಿಸಿಕೊಳ್ಳುವಷ್ಟು ಸಂಖ್ಯಾಬಲ ಕಾಂಗ್ರೆಸ್‌ಗೆ ಇಲ್ಲದೇ ಇದ್ದರೂ ಐದನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದಾಗ ಆ ಪಕ್ಷದ ತಂತ್ರಗಾರಿಕೆಯನ್ನು ಅರಿಯುವಲ್ಲಿ ಬಿಜೆಪಿ ವಿಫಲವಾಗಿದೆ. ಅವರ ತಂತ್ರಗಾರಿಕೆಯ ಮೇಲೆ ಕಣ್ಣಿಡಬೇಕಿತ್ತು. ಸೂಕ್ತ ಪ್ರತಿ ತಂತ್ರ ರೂಪಿಸಬೇಕಿತ್ತು. ಕಾಂಗ್ರೆಸ್‌ನಂತೆ ಮೊದಲೇ ಶಾಸಕರನ್ನು ಒಟ್ಟುಗೂಡಿಸಿಕೊಂಡು ಮತದಾನದ ಕೇಂದ್ರಕ್ಕೆ ಕರೆತರಬೇಕಿತ್ತು. ಕಾಂಗ್ರೆಸ್ ನಾಯಕರು ಸಂಪರ್ಕಿಸಬಹುದಾದ, ಸಂಶಯ ಇರುವ ಶಾಸಕರ ಮೇಲೆ ನಿಗಾ ವಹಿಸಬೇಕಿತ್ತು. ಇಂತಹ ಕೆಲಸಗಳನ್ನು ನಿರ್ವಹಿಸುವಲ್ಲಿ ವೈಫಲ್ಯ ಎದ್ದು ಕಾಣುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ಖಚಿತಪಡಿಸಿವೆ.

ಬಿಜೆಪಿ ರಾಜ್ಯ ಘಟಕ ಮತದಾನದ ಪೂರ್ವದಲ್ಲಿ ಎಚ್ಚರಿಕೆ ವಹಿಸದೆ ಇರುವುದು, ಅಡ್ಡ ಮತದಾನ ತಡೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೆ ಇರುವುದು, ಪಕ್ಷದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇರುವುದು, ಎಚ್ಚರಿಕೆ ನೀಡದೆ ಇರುವುದು ಪಕ್ಷದ ನಾಯಕರ ವೈಫಲ್ಯಗಳು ಎಂದು ವರದಿ ಹೇಳಿದೆ.

'ಜೆಡಿಎಸ್‌ನ ಏಳು ಶಾಸಕರ ಅಡ್ಡಮತ'

ಬಿಜೆಪಿ ಆಂತರಿಕ ವಿಚಾರಣೆ ಪ್ರಕಾರ ಅಡ್ಡಮತದಾನವಾದ 11ರ ಪೈಕಿ, ಏಳು ಶಾಸಕರು ಜೆಡಿಎಸ್‌ನವರಾಗಿದ್ದಾರೆ. 2028ರಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮುಂದುವರಿದರೆ, ಮಿತ್ರಪಕ್ಷಗಳ ಯಾವ ಶಾಸಕರಿಗೆ ಟಿಕೆಟ್ ಸಿಗದೇ ಇರುವ ಸಾಧ್ಯತೆ ಇದೆಯೋ ಅಂತಹ ಶಾಸಕರನ್ನು ಸೆಳೆಯುವ ಪ್ರಯತ್ನವನ್ನು ಕಾಂಗ್ರೆಸ್ ಮಾಡಿದೆ. ಇದರಿಂದ ಜೆಡಿಎಸ್‌ನ ಏಳು, ಬಿಜೆಪಿಯ ಮೂವರು ಕಾಂಗ್ರೆಸ್ ಆಮಿಷಕ್ಕೆ ಒಳಗಾಗಿದ್ದಾರೆ ಎಂಬ ಅಂಶವು ವರದಿಯಲ್ಲಿದೆ ಎನ್ನಲಾಗಿದೆ.

'ಆರ್ಥಿಕ ಆಮಿಷ, ಭವಿಷ್ಯದ ಅನುಕೂಲಗಳನ್ನು ಮುಂದಿಟ್ಟು ಶಾಸಕರನ್ನು ಸೆಳೆಯಲಾಗಿದೆ. ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದಾಗ ವ್ಯಕ್ತವಾದ ವಿರೋಧವನ್ನು ಅವಲೋಕಿಸಿದ್ದರೆ ಒಂದೆರಡು ಮತ ಕಾಂಗ್ರೆಸ್ ಪಾಲಾಗುವುದನ್ನು ತಡೆಯಬಹುದಿತ್ತು' ಎಂದು ಮೂಲಗಳು ಹೇಳಿವೆ.

ಅಡ್ಡ ಮತದಾನಕ್ಕೆ ಅನೈತಿಕ ಮಾರ್ಗ: ಸಿ.ಟಿ.ರವಿ

'ಕಾಂಗ್ರೆಸ್ ಅನೈತಿಕ ಮಾರ್ಗದಿಂದ ಅಡ್ಡ ಮತದಾನ ಮಾಡಿಸಿದೆ. ಕಾಂಗ್ರೆಸ್ ಮೇಲಿನ ಅಭಿಮಾನಕ್ಕೆ ಬೇರೆ ಪಕ್ಷಗಳ ಶಾಸಕರು ಅಡ್ಡ ಮತ ಹಾಕಿಲ್ಲ. ಆಮಿಷ, ಒತ್ತಡಗಳಿಗೆ ಮಣಿದಿರಬಹುದು' ಎಂದು ಬಿಜೆಪಿ ಆಂತರಿಕ ವಿಚಾರಣಾ ಸಮಿತಿಯ ಸದಸ್ಯ ಸಿ.ಟಿ.ರವಿ ಹೇಳಿದರು.

ವರದಿ ಸಲ್ಲಿಕೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಚುನಾವಣೆಯಲ್ಲಿ ಯಾವ ಎಚ್ಚರಿಕೆ ವಹಿಸಿಲ್ಲ, ವಹಿಸಬೇಕಿತ್ತು ಎಂಬುದು ವರದಿಯಲ್ಲಿ ಇದೆ. ಅಡ್ಡಮತದಾನ ಮಾಡಿದವರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನ ವ್ಯಕ್ತವಾದವರ ಜತೆ ಚರ್ಚೆ ಮಾಡಿದ್ದೇವೆ. ಜೆಡಿಎಸ್ ಮುಖಂಡರು, ವಿರೋಧ ಪಕ್ಷದ ಮುಖಂಡರು, ಮುಖ್ಯ ಸಚೇತಕರು, ಮಾಧ್ಯಮ ಪ್ರತಿನಿಧಿಗಳ ಜತೆ ಸಮಾಲೋಚನೆ ಮಾಡಿದ್ದೇವೆ. ಸ್ಥಳೀಯ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಲಾಗಿದೆ' ಎಂದರು.

ವಧು–ವರರ ಸಮಾವೇಶದಲ್ಲಿ 300 ಸೋಂಕಿತರು ಭಾಗಿ, 10 ಜೋಡಿಗೆ ವಿವಾಹ ನಿಶ್ಚಯ

ಎಚ್‌ಐವಿ ಸೋಂಕಿತರಿಗೆ ಕಂಕಣ ಭಾಗ್ಯ!

• ಬಸವರಾಜ್ ಸಂಪಳ್ಳಿ

ವಿಜಯಪುರ: ಸಮಾಜದಲ್ಲಿ ಇತರರಂತೆ ಚೆನ್ನಾಗಿ ಬದುಕಬೇಕು, ಮದುವೆಯಾಗಬೇಕು, ಸಂಸಾರ ಮಾಡಬೇಕು, ಹೊಸ ಬಾಳನ್ನು ಕಟ್ಟಿಕೊಳ್ಳಬೇಕು ಎಂಬ ಅದಮ್ಯ ಆಸೆ ಹೊತ್ತ ಎಚ್‌ಐವಿ ಸೋಂಕಿತರಿಗಾಗಿ ವಿಜಯಪುರದಲ್ಲಿ ಪ್ರಥಮ ಬಾರಿಗೆ ವಧು–ವರರ ಸಮಾವೇಶ ನಡೆಯಿತು.

ವಿಜಯಪುರ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಸಭಾಂಗಣದಲ್ಲಿ ನಡೆದ ಎಚ್‌ಐವಿ ಸೋಂಕಿತ ವಧು, ವರರ ಸಮಾವೇಶದಲ್ಲಿ ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ, ಕಲಬುರಗಿ, ಮೈಸೂರು, ಗದಗ, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಿಂದ 75 ಯುವತಿಯರು ಸೇರಿದಂತೆ 300 ಎಚ್‌ಐವಿ ಸೋಂಕಿತರು ಪಾಲ್ಗೊಂಡಿದ್ದರು.



> ಎಚ್‌ಐವಿ ಸೋಂಕಿತ ವಧು, ವರರ ನಡುವೆಯೇ ಮದುವೆ ಮಾಡಿದರೆ ಅವರಿಗೆ ಹೊಸ ಬದುಕು ಸಿಕ್ಕಂತಾಗುತ್ತದೆ. ಸೋಂಕಿತರಿಂದ ಸಮಾಜದಲ್ಲಿ ಇತರರಿಗೆ ಸೋಂಕು ಹರಡುವಿಕೆ ತಡೆಯಬಹುದು
>
> **ಡಾ.ಮಲ್ಲನಗೌಡ ಬಿರಾದಾರ,** ಜಿಲ್ಲಾ ಏಡ್ಸ್ ನಿಯಂತ್ರಣ ಕಾರ್ಯಕ್ರಮ ಅಧಿಕಾರಿ, ವಿಜಯಪುರ

18 ವರ್ಷದಿಂದ 45 ವರ್ಷದ ಒಳಗಿನ ಎಚ್‌ಐವಿ ಸೋಂಕಿತರಿಗೆ ಸಮಾವೇಶದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ವಧು–ವರರ ಜೊತೆ ಅವರ ಪೋಷಕರು ಪಾಲ್ಗೊಂಡಿದ್ದರು. ಅವರ ಸಮ್ಮುಖದಲ್ಲೇ ಮಾತುಕತೆ ನಡೆಸಲಾಯಿತು.

ಸಮಾವೇಶಕ್ಕೆ ಬಂದವರಲ್ಲಿ ಬಹುತೇಕರು ಸರ್ಕಾರಿ, ಖಾಸಗಿ ಉದ್ಯೋಗಿಗಳಾಗಿದ್ದರು. ಇದರಲ್ಲಿ ಹಿಂದು, ಮುಸ್ಲಿಮರು ಸೇರಿದಂತೆ ವಿವಿಧ ಧರ್ಮ, ಜಾತಿಗೆ ಸೇರಿದವರು ಪಾಲ್ಗೊಂಡಿದ್ದರು. ಬಹಳಷ್ಟು ಸೋಂಕಿತರು ತಮ್ಮ ಜಾತಿಯ ವಧುವರರೇ ಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. 10 ಜೋಡಿಗಳು ಪರಸ್ಪರ ಒಪ್ಪಿಕೊಂಡು ವಿವಾಹ ನಿಶ್ಚಯ ಮಾಡಿಕೊಂಡರು.

ಶೀಘ್ರದಲ್ಲೇ ವಿಜಯಪುರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನವ ಜೋಡಿಗಳು ನೋಂದಣಿ ಮಾಡಿಕೊಂಡು, ಪರಸ್ಪರ ಸತಿಪತಿಗಳಾಗಿ ನವ ಜೀವನಕ್ಕೆ ಕಾಲಿಡಲು ಅಣಿಯಾಗಿದ್ದಾರೆ.

ಚಲನಚಿತ್ರ ನಿರ್ಮಾಪಕ, ವಿಜಯಪುರದ ಶಿವಗಿರಿ ಟ್ರಸ್ಟಿನ ಚೇರ್ಮನ್ ಬಸಂತಕುಮಾರ್ ಪಾಟೀಲ ಅವರು ಎಚ್‌ಐವಿ ಸೋಂಕಿತ ಜೋಡಿಗೆ ಉಚಿತ ವಿವಾಹ ಮಾಡಿಕೊಡುವುದಾಗಿ ವಾಗ್ದಾನ ಮಾಡಿದ್ದಾರೆ.

ರಾಜ್ಯದಲ್ಲೇ ಅಪರೂಪದ ಎಚ್‌ಐವಿ ಸೋಂಕಿತರ ವಧು–ವರರ ಸಮಾವೇಶಕ್ಕೆ ವೇದಿಕೆ ಕಲ್ಪಿಸಿದವರು ವಿಜಯಪುರ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಕಾರ್ಯಕ್ರಮ ಅಧಿಕಾರಿ ಡಾ.ಮಲ್ಲನಗೌಡ ಬಿರಾದಾರ. ಅವರ ವಿಶೇಷ ಆಸಕ್ತಿಯಿಂದ ನಡೆದ ಈ ಸಮಾವೇಶಕ್ಕೆ ಎಚ್‌ಐವಿ ಸೋಂಕಿತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

'ಸೋಂಕು ತಡೆಯಲು ವಿವಾಹ'

'ಎಚ್‌ಐವಿ ಸೋಂಕಿತರ ನಡುವೆಯೇ ಮದುವೆ ಮಾಡಿಸಿದರೆ ಶೇ 15ರಿಂದ ಶೇ 20ರಷ್ಟು ಹೊಸದಾಗಿ ಸೋಂಕು ಹರಡುವಿಕೆ ತಡೆಯಬಹುದಾಗಿದೆ' ಎಂದು ವಿಜಯಪುರ ಜಿಲ್ಲಾ ಏಡ್ಸ್ ನಿಯಂತ್ರಣ ಕಾರ್ಯಕ್ರಮ ಅಧಿಕಾರಿ ಡಾ.ಮಲ್ಲನಗೌಡ ಬಿರಾದಾರ ಹೇಳಿದರು.

'ಎಚ್‌ಐವಿ ಸೋಂಕಿತ ದಂಪತಿಗೆ ಹುಟ್ಟುವ ಮಕ್ಕಳಿಗೆ ಸೋಂಕು ಬಾರದಂತೆ ನೋಡಿಕೊಳ್ಳಬಹುದು. ಸುಮಾರು 18 ತಿಂಗಳು ಮಕ್ಕಳಿಗೆ ಆ್ಯಂಟಿ ವೈರಲ್ ಡ್ರಗ್ಸ್ ನೀಡುವುದರಿಂದ ಅವರನ್ನು ನೆಗೆಟೀವ್ ಮಾಡಬಹುದಾಗಿದೆ. ಮಗು ಜನಿಸಿದ ಬಳಿಕ ಪ್ರತಿ ನಾಲ್ಕು ತಿಂಗಳಿಗೆ ಪರೀಕ್ಷೆ ಮಾಡುತ್ತೇವೆ. ಬಹುತೇಕ 18 ತಿಂಗಳ ಒಳಗಾಗಿ ಶೇ 99.99ರಷ್ಟು ನೆಗೆಟಿವ್ ಫಲಿತಾಂಶ ಬರಲಿದೆ. ಆಕಸ್ಮಿಕವಾಗಿ ಎಚ್‌ಐವಿ ನೆಗೆಟಿವ್ ಬಾರದೇ ಇದ್ದರೇ ಚಿಕಿತ್ಸೆ ಮುಂದುವರಿಸುತ್ತೇವೆ. ಬಳಿಕ ನೆಗೆಟಿವ್ ಬರುವುದು ನಿಶ್ಚಿತ' ಎಂದರು.

ಸಂಕ್ಷಿಪ್ತ ಸುದ್ದಿ

ವ್ಯಕ್ತಿ ಮೇಲೆ ಹುಲಿ ದಾಳಿ

ಸರಗೂರು(ಮೈಸೂರು ಗ್ರಾಮಾಂತರ): ನುಗು ಅರಣ್ಯ ವಲಯದ ಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಣ್ಣೆಗೆರೆ ಗ್ರಾಮದದಲ್ಲಿ ಶನಿವಾರ ಬೆಳಗ್ಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಮೇಲೆ ಹುಲಿಯೊಂದು ದಾಳಿ ನಡೆಸಿದೆ.

ಹುಲಿ ದಾಳಿಯಲ್ಲಿ ಗ್ರಾಮದ ಕಿರಣ್ ಮಹದೇವೇಗೌಡ (25) ಎಂಬುವರು ಗಾಯಗೊಂಡಿದ್ದಾರೆ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕಿರಣ್ ಮೇಲೆ ಹಿಂದಿನಿಂದ ಹುಲಿ ದಾಳಿ ಮಾಡಿದೆ.

ಬೆನ್ನು, ಎದೆ, ಕತ್ತು, ಹೊಟ್ಟೆ ಮೇಲೆ ಪರಚಿದ ಗಾಯಗಳಾಗಿವೆ. ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರು ಕಿರುಚಿಕೊಂಡಿದ್ದರಿಂದ ಬಿಟ್ಟು ಓಡಿ ಹೋಗಿದೆ.

ಶ್ರೀರಾಮ, ರೇಣುಕಾಚಾರ್ಯರ ಅವಹೇಳನ: ಪ್ರಕರಣ ದಾಖಲು

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಬಸವಪರ ಸಂಘಟನೆಗಳ ಒಕ್ಕೂಟ'ದ ಹೆಸರಿನ ಫೇಸ್‌ಬುಕ್ ಪೇಜ್‌ನಲ್ಲಿ ಶ್ರೀರಾಮ ಮತ್ತು ರೇಣುಕಾಚಾರ್ಯರನ್ನು ತಾಲಿಬಾನಿ ಎಂದು ಅವಹೇಳನ ಮಾಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕೃಷ್ಣಾ ಗೋಣೆ ಅವರು ಶನಿವಾರ ನೀಡಿದ ದೂರಿನ ಅನ್ವಯ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಬೆಂಕಿಯಲ್ಲಿ ಬಿದ್ದ ವ್ಯಕ್ತಿ ಸಾವು

ಕುರುಗೋಡು (ಬಳ್ಳಾರಿ ಜಿಲ್ಲೆ): ಮೊಹರಂ ಹಬ್ಬದ ಅಲಾಯಿ ಕುಣಿಯಲ್ಲಿ ಬಿದ್ದು ತೀವ್ರ ಸ್ವರೂಪದ ಸುಟ್ಟ ಗಾಯಗಳಾಗಿದ್ದ ತಾಲ್ಲೂಕಿನ ಕ್ಯಾದಿಗೆಹಾಳು ಗ್ರಾಮದ ದೇವರಾಜ (28) ಶನಿವಾರ ಮೃತಪಟ್ಟರು.

ಸುಟ್ಟಗಾಯಗಳಿಂದ ನರಳುತ್ತಿದ್ದ ಅವರನ್ನು ಶುಕ್ರವಾರ ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮೃತರಿಗೆ ತಾಯಿ, ಪತ್ನಿ, ತಮ್ಮ ಇದ್ದಾರೆ. ಕಳೆದ ವರ್ಷ ವಿವಾಹವಾಗಿದ್ದ ಇವರು ಮಂಗಳೂರಿನ ನಲಪಾಡ ಪ್ರದೇಶದಲ್ಲಿನ ಖಾಸಗಿ ವಸತಿ ಶಾಲೆಯಲ್ಲಿ ನಿಲಯಪಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮೊಹರಂ ಆಚರಣೆಗಾಗಿ ಗ್ರಾಮಕ್ಕೆ ಬಂದಿದ್ದ ವೇಳೆ ಈ ಘಟನೆ ಸಂಭವಿಸಿದೆ. ಪ್ರಕರಣ ದಾಖಲಾಗಿದೆ.

ಬಂಡೀಪುರದಲ್ಲೂ ರಣಹದ್ದುಗಳು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಪರೂಪದ ರಣಹದ್ದುಗಳು ಹಿಂಡು, ಹಿಂಡಾಗಿ ಪ್ರವಾಸಿಗರಿಗೆ ಕಾಣಸಿಗುತ್ತಿವೆ.



ಅಪರೂಪದ ರಣಹದ್ದುಗಳ ಹಿಂಡು

ಮೂರು ನಾಲ್ಕು ದಿನಗಳ ಹಿಂದೆ ಮಲೆ ಮಹದೇಶ್ವರ ಹಾಗೂ ಕಾವೇರಿ ವನ್ಯಜೀವಿ ಧಾಮಗಳಲ್ಲೂ ರಣಹದ್ದುಗಳ ಹಿಂಡು ಕಾಣಿಸಿಕೊಂಡಿದ್ದವು. ಇದೀಗ ಬಂಡೀಪುರದಲ್ಲೂ ಪತ್ತೆಯಾಗಿವೆ.

ಭಾನುವಾರ, ಜೂನ್ 28, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 178 | ಪುಟ 18
www.prajavani.net prajavani.net prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೃತ್ಯದ ಸೊಬಗು...
ಮಹಾರಾಷ್ಟ್ರದ ನಾಗ್ಪುರದಲ್ಲಿ, ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ 353ನೇ ವಾರ್ಷಿಕೋತ್ಸವ ಮೆರವಣಿಗೆಯಲ್ಲಿ ನೃತ್ಯ ಪ್ರದರ್ಶಿಸಿದ ಕಲಾವಿದೆ



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಭಾರತ್ ಟ್ಯಾಕ್ಸಿ 500 ನಗರಗಳಿಗೆ ವಿಸ್ತರಣೆ: ಶಾ 5

ಕಾರಿನಲ್ಲಿ ನಾಡಬಾಂಬ್ ಸ್ಫೋಟಿಸಿದ ಯುವಕ: ಸಜೀವ ದಹನ



ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಜೋಗಿಹಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸುಟ್ಟು ಕರಕಲಾಗಿರುವ ಕಾರು

ಪ್ರಜಾವಾಣಿ ವಾರ್ತೆ

ಪ್ರಮುಖ ಅಂಶಗಳು
- ಮದುವೆ ವಿಚಾರಕ್ಕೆ ಸಂಬಂಧಿಸಿದಂತೆ ಯುವತಿ ಜೊತೆ ವೈಮನಸ್ಸು
- ಚಾಕುವಿನಿಂದ ಯುವತಿ ಮೇಲೂ ಹಲ್ಲೆ

ಶಿರಾ (ತುಮಕೂರು): ತಾಲ್ಲೂಕಿನ ಜೋಗಿಹಳ್ಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಶನಿವಾರ ಯುವಕನೊಬ್ಬ ನಾಡಬಾಂಬ್‌ನಿಂದ ಕಾರು ಸ್ಫೋಟಿಸಿಕೊಂಡು ಸಜೀವ ದಹನಗೊಂಡಿದ್ದಾನೆ.

ಅಂಕೋಲಾ ತಾಲ್ಲೂಕಿನ ನಾಗೇಂದ್ರ ಆತ್ಮಹತ್ಯೆ ಮಾಡಿಕೊಂಡ ಯುವಕ. ಬೆಂಗಳೂರಿನಲ್ಲಿ ನೆಲಸಿದ್ದ ನಾಗೇಂದ್ರ ಹಾಗೂ ಅಲ್ಲಿಯ ಖಾಸಗಿ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿದ್ದ ರಮ್ಯಾ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾಗಿದೆ. ಮದುವೆ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ವೈಮನಸ್ಸು ಮೂಡಿದ್ದೇ, ಘಟನೆಗೆ ಕಾರಣ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಪ್ರಕರಣದ ವಿವರ: ಬೆಂಗಳೂರಿನಲ್ಲಿ ರಮ್ಯಾ ಜಯನಗರ ವ್ಯಾಪ್ತಿಯ ಸಿದ್ದಾಪುರದಲ್ಲಿ ಸ್ನೇಹಿತೆ ಜತೆಗೆ ವಾಸವಿದ್ದರು. ಡೆಲಿವರಿ ಬಾಯ್ ಆಗಿದ್ದ ನಾಗೇಂದ್ರ ಶನಿವಾರ ಬೆಳಿಗ್ಗೆ 11ರ ಸುಮಾರಿಗೆ ಉಬರ್ ಕ್ಯಾಬ್‌ಅನ್ನು ಅಂಕೋಲಾಕ್ಕೆ ಬುಕ್ ಮಾಡಿದ್ದ. ಈ ವೇಳೆ ಸಿದ್ದಾಪುರಕ್ಕೆ ಹೋಗಿ ರಮ್ಯಾ ಅವರನ್ನು ಬಲವಂತದಿಂದ ಕಾರಿನಲ್ಲಿ ಕೂರಿಸಿಕೊಂಡು ಬಂದಿದ್ದ ಎನ್ನಲಾಗಿದೆ. ಈ ವಿಷಯವನ್ನು ರಮ್ಯಾ ಸ್ನೇಹಿತೆಯರು ಸಿದ್ದಾಪುರ ಪೊಲೀಸರಿಗೆ ತಿಳಿಸಿ, ದೂರು ದಾಖಲಿಸಿದ್ದರು.

ಬೆಂಗಳೂರಿನಿಂದ ತುಮಕೂರು ಮಾರ್ಗವಾಗಿ ಕಾರು ಅಂಕೋಲಾಕ್ಕೆ ತೆರಳುವಾಗ ಸಿದ್ದಾಪುರ ಪೊಲೀಸ್ ಠಾಣೆಯಿಂದ ಕಾರಿನ ಚಾಲಕನಿಗೆ ಕರೆ ಬಂದಿದೆ. ಕಾರನ್ನು ಇರುವ ಸ್ಥಳದಲ್ಲೇ ನಿಲ್ಲಿಸುವಂತೆ ಪೊಲೀಸರು ಸೂಚಿಸಿದ್ದಾರೆ. ಅನುಮಾನಗೊಂಡ ನಾಗೇಂದ್ರ, ರಮ್ಯಾ ಜತೆಗೆ ಜಗಳ ತೆಗೆದು ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ. ಇದರಿಂದ ದಿಗಿಲುಗೊಂಡ ಚಾಲಕ ಕಾರನ್ನು ಜೋಗಿಹಳ್ಳಿ ಬಳಿಯ ಹೆದ್ದಾರಿ ಪಕ್ಕದಲ್ಲೇ ನಿಲ್ಲಿಸಿದ್ದಾರೆ.

ಕಾರಿನಿಂದ ಕೆಳಗಿಳಿಯದ ನಾಗೇಂದ್ರ: ಚಾಕು ಇರಿತದಿಂದ ಗಾಯಗೊಂಡಿದ್ದ ರಮ್ಯಾ ತಕ್ಷಣವೇ ಕಾರಿನಿಂದ ಇಳಿದು ಓಡಿದ್ದಾರೆ. ಆಗ ಕಾರು ಚಾಲಕ ನಾಗೇಂದ್ರನ ಕೈಯಿಂದ ಚಾಕು ಕಿತ್ತು ಹೊರಕ್ಕೆ ಎಸೆದಿದ್ದಾರೆ. ಈ ವೇಳೆ ಬ್ಯಾಗ್‌ನಲ್ಲಿದ್ದ ನಾಡಬಾಂಬ್ ಕೈಗೆತ್ತಿಕೊಂಡು ಲೈಟರ್‌ನಿಂದ ಹೊತ್ತಿಸುವ ಪ್ರಯತ್ನದಲ್ಲಿದ್ದಾಗ ಅದನ್ನೂ ಕಿತ್ತುಕೊಂಡು ಹೊರಕ್ಕೆ ಎಸೆದಿದ್ದಾರೆ. ಕಾರಿನಿಂದ ಇಳಿಯುವಂತೆ ಎಷ್ಟೇ ಒತ್ತಾಯಿಸಿದರೂ ನಾಗೇಂದ್ರ ಕೆಳಕ್ಕೆ ಇಳಿದಿಲ್ಲ. 'ಬಾಂಬ್ ತಂದಿದ್ದಾನೆ, ದೂರ ಓಡಿಹೋಗಿ ಅಣ್ಣ' ಎಂದು ಯುವತಿ ಕೂಗಿ ಹೇಳಿದ್ದರಿಂದ ಭಯಗೊಂಡು ಕಾರಿನಿಂದ ದೂರಕ್ಕೆ ಓಡಿದೆ. ಈ ವೇಳೆ ಮತ್ತೊಂದು ನಾಡಬಾಂಬ್‌ಗೆ ಲೈಟರ್‌ನಿಂದ ಹೊತ್ತಿಸಿ, ಸ್ಫೋಟಿಸಿಕೊಂಡ' ಎಂದು ಕಾರಿನ ಚಾಲಕ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಚಾಕು ಇರಿತದಿಂದ ತಲೆ, ಕೈಗೆ ಗಾಯಗಳಾಗಿದ್ದ ಯುವತಿ ರಮ್ಯಾಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರು ಸ್ಫೋಟಗೊಂಡ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ. ಭೇಟಿ ನೀಡಿ ಪರಿಶೀಲಿಸಿದರು.

ಅಂತರ್ಜಲದಲ್ಲೂ ಪ್ಲಾಸ್ಟಿಕ್ ಕಣ

ಕರ್ನಾಟಕದ ಆರು ಜಿಲ್ಲೆಗಳಲ್ಲಿ ನಡೆದ ಅಧ್ಯಯನ • ಭೂಗರ್ಭ ಸೇರುತ್ತಿರುವ ಮೈಕ್ರೊಪ್ಲಾಸ್ಟಿಕ್ • ಎದೆಹಾಲಿನಲ್ಲೂ ಪ್ಲಾಸ್ಟಿಕ್

• ಬಿ.ವಿ.ಶ್ರೀನಾಥ್

ಕಳೆದ ವರ್ಷ 'ಇಕೋಟಾಕ್ಸಿಕಾಲಜಿ ಆ್ಯಂಡ್ ಎನ್ವಿರಾನ್‌ಮೆಂಟಲ್ ಸೇಫ್ಟಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ, ಮೈಕ್ರೊಪ್ಲಾಸ್ಟಿಕ್ ಕಣಗಳಿಗೆ ಸಂಬಂಧಿಸಿದ ಸಂಶೋಧನಾ ವರದಿ ಆಘಾತಕಾರಿ ಅಂಶದ ಮೇಲೆ ಬೆಳಕು ಚೆಲ್ಲಿತ್ತು. ಮಹಿಳೆಯರ ಅಂಡಾಶಯದ ಫಾಲಿಕ್ಯುಲರ್ ದ್ರವದಲ್ಲಿ ಮೊದಲ ಬಾರಿಗೆ ಮೈಕ್ರೊಪ್ಲಾಸ್ಟಿಕ್ ಕಣಗಳು ಕಂಡುಬಂದಿದ್ದವು. ಅವು ಅಂಡಾಣುಗಳ ಮೇಲೆ ಪರಿಣಾಮ ಬೀರಿ, ಸಂತಾನೋತ್ಪತ್ತಿ ಆರೋಗ್ಯ ಮತ್ತು ಮಹಿಳೆಯರ ಫಲವತ್ತತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ವೈದ್ಯರು ಎಚ್ಚರಿಸಿದ್ದರು


ಇದೀಗ ಕರ್ನಾಟಕದಲ್ಲಿ ನಡೆದ ಅಧ್ಯಯನವೊಂದು ಸೂಕ್ಷ್ಮ ಪ್ಲಾಸ್ಟಿಕ್ ಕಣಗಳಿಗೆ ಸಂಬಂಧಿಸಿದ ಮತ್ತೊಂದು ಮಾಹಿತಿ ಹೊರಗೆಡವಿದೆ. ಮೈಕ್ರೊಪ್ಲಾಸ್ಟಿಕ್ ಕಣಗಳು ಈಗ ಭೂಗರ್ಭದಲ್ಲೂ ಪತ್ತೆಯಾಗಿವೆ. ಕರ್ನಾಟಕದ ಪೂರ್ವ ಭಾಗದ ಹಲವು ಜಿಲ್ಲೆಗಳಲ್ಲಿ ಕುಡಿಯಲು ಬಳಸುತ್ತಿರುವ ಕೊಳವೆ ಬಾವಿಗಳ ನೀರಿನಲ್ಲಿಯೂ ಮೈಕ್ರೊಪ್ಲಾಸ್ಟಿಕ್ ಕಣಗಳು ಕಂಡು ಬಂದಿವೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಮತ್ತು ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಅಧ್ಯಯನ ನಡೆಸಿ, ವರದಿ ಬಿಡುಗಡೆ ಮಾಡಿವೆ.

ಭಾರತದಲ್ಲಿ ಭೂಮಿಯ ಮೇಲಿನ ನೀರಿನಲ್ಲಿ ಮತ್ತು ಕರಾವಳಿಯ ತೀರ ಪ್ರದೇಶಗಳಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಇರುವುದು ಈಗಾಗಲೇ ಹಲವು ಅಧ್ಯಯನಗಳಿಂದ ತಿಳಿದುಬಂದಿದೆ. ಆದರೆ, ಭೂಮಿಯೊಳಗಿನ ಗಡಸು ಕಲ್ಲಿನ ಪ್ರದೇಶದಲ್ಲಿ, ರೂಪಾಂತರ ಶಿಲೆಗಳಷ್ಟು ಆಳದಲ್ಲಿನ ನೀರಿನಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಪತ್ತೆಯಾಗಿರುವುದು ಇದೇ ಮೊದಲು. ಈ ಸಂಬಂಧ ನಡೆದ ಮೊದಲ ಅಧ್ಯಯನವೂ ಇದಾಗಿದೆ.

'ಕರೆಂಟ್ ಸೈನ್ಸ್' ಪತ್ರಿಕೆಯಲ್ಲಿ ಪ್ರಕಟವಾಗಿರುವ ಈ ಅಧ್ಯಯನ ವರದಿಯು 60ರಿಂದ 100 ಮೀಟರ್ ಆಳದಿಂದ ಕೊಳವೆ ಬಾವಿಗಳ ಮೂಲಕ ಹೊರತೆಗೆಯಲಾಗುತ್ತಿರುವ ನೀರಿನಲ್ಲಿ ಮೈಕ್ರೊಪ್ಲಾಸ್ಟಿಕ್ ಇರುವುದನ್ನು ದೃಢಪಡಿಸಿದೆ. ಭೂಮಿ ಮೇಲಿನ ನೀರು ಹಲವು ರೀತಿಗಳಲ್ಲಿ ಮಲಿನಗೊಂಡಿದ್ದರೂ ಭೂಗರ್ಭದಲ್ಲಿನ ಅತ್ಯಂತ ಹಳೆಯ ಶಿಲಾಪದರಗಳ ನಡುವಿನ ನೀರು ಮಾಲಿನ್ಯ ಮುಕ್ತ ಎಂದೇ ಇದುವರೆಗೂ ಪರಿಗಣಿಸಲಾಗಿತ್ತು. ಈ ನಂಬಿಕೆಯನ್ನು ಐಐಎಸ್‌ಸಿ ಮತ್ತು ವಿಐಟಿಯ ಸಂಶೋಧನಾ ತಂಡವು ಹುಸಿಗೊಳಿಸಿದೆ.

ಸಂಶೋಧಕರು ಪೂರ್ವ ಕರ್ನಾಟಕದ 18 ಗ್ರಾಮೀಣ ಪ್ರದೇಶಗಳ 25 ಕೊಳವೆ ಬಾವಿಗಳಿಂದ ಎರಡು ಹಂತ ಗಳಲ್ಲಿ (ನವೆಂಬರ್ 2024 ಮತ್ತು ಫೆಬ್ರುವರಿ 2025) ಅಂತರ್ಜಲದ ಮಾದರಿಗಳನ್ನು ಸಂಗ್ರಹಿಸಿದ್ದರು. ಹೆಚ್ಚಿನ ಮಾದರಿಗಳಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಕಂಡುಬಂದಿವೆ. ಒಂದು ಲೀಟರ್ ನೀರಿನಲ್ಲಿ ಮೂರು ಕಣಗಳ ಸಾಂದ್ರತೆ ಇದೆ ಎಂದು ವರದಿ ಹೇಳಿದೆ. ಪತ್ತೆಯಾದ ಶೇ 94ರಷ್ಟು ಕಣಗಳು 20 ಮೈಕ್ರೊಮೀಟರ್‌ನಿಂದ 1,000 ಮೈಕ್ರೊಮೀಟರ್‌ವರೆಗಿನ ಗಾತ್ರದಿಂದ ಕೂಡಿದೆ.

4



'ಆರೋಗ್ಯಕ್ಕೆ ಹೊಸ ಸವಾಲು'



ಭೂಗರ್ಭದ ಜಲದಲ್ಲಿಯೂ ಮೈಕ್ರೊಪ್ಲಾಸ್ಟಿಕ್ ಕಣಗಳು ಪತ್ತೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ, ಮೈಕ್ರೊಪ್ಲಾಸ್ಟಿಕ್‌ಗಳು ಮಾನವನ ರಕ್ತ, ಶ್ವಾಸಕೋಶ, ಗರ್ಭನಾಳ, ತಾಯಿಯ ಹಾಲು, ಯಕೃತ್ತು ಹಾಗೂ ರಕ್ತನಾಳಗಳ ಪ್ಲಾಕ್‌ಗಳಲ್ಲಿಯೂ ಕಂಡುಬಂದಿವೆ. ಅತ್ಯಂತ ಗಂಭೀರ ಸಂಗತಿಯೆಂದರೆ, ನವಜಾತ ಶಿಶುಗಳ ದೇಹದಲ್ಲಿಯೂ ಈ ಕಣಗಳು ಪತ್ತೆಯಾಗಿವೆ. ಇದು ಮಾನವ ಜೀವವು ಜನನಕ್ಕೂ ಮುನ್ನವೇ, ಅಂದರೆ ಗರ್ಭಾವಸ್ಥೆಯಲ್ಲಿಯೇ ಪ್ಲಾಸ್ಟಿಕ್ ಮಾಲಿನ್ಯಕ್ಕೆ ಒಳಗಾಗುತ್ತಿರುವುದನ್ನು ಸೂಚಿಸುತ್ತದೆ. ಇದು ಅನೇಕ ರೀತಿಯ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತಿದೆ.

ಸಂತಾನೋತ್ಪತ್ತಿ ಸಮಸ್ಯೆ, ವೀರ್ಯಾಣು ಗುಣಮಟ್ಟ ಕುಸಿತ, ಗರ್ಭಧಾರಣೆಯ ತೊಡಕುಗಳು, ಭ್ರೂಣದ ಬೆಳವಣಿಗೆಯ ಮೇಲಿನ ದುಷ್ಪರಿಣಾಮಗಳು, ಹೃದ್ರೋಗ ಹಾಗೂ ಕೆಲವು ವಿಧದ ಕ್ಯಾನ್ಸರ್‌ಗಳ ಅಪಾಯವನ್ನು ಇವು ಹೆಚ್ಚಿಸಬಹುದೆಂದು ಸಂಶೋಧನೆಗಳು ಸೂಚಿಸುತ್ತಿವೆ. ಇಂದು ನಾವು ಬ್ಯಾಕ್ಟೀರಿಯಾ, ಫ್ಲೋರೈಡ್, ನೈಟ್ರೇಟ್ ಮತ್ತು ಭಾರ ಲೋಹಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದೇವೆ; ಆದರೆ ಮುಂದಿನ ದಿನಗಳಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳ ಮೇಲ್ವಿಚಾರಣೆಯೂ ನೀರಿನ ಗುಣಮಟ್ಟ ಮೌಲ್ಯಮಾಪನದ ಅವಿಭಾಜ್ಯ ಭಾಗವಾಗುವ ಅವಶ್ಯಕತೆ ಇದೆ.

ಕುಡಿಯುವ ನೀರಿನ ಮೂಲಗಳಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳ ನಿರಂತರ ಮೇಲ್ವಿಚಾರಣೆ, ನಿಯಮಿತ ಪರೀಕ್ಷೆಗಳು, ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಭವಿಷ್ಯದ ಪೀಳಿಗೆಯ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಪ್ರಮುಖ ಆದ್ಯತೆಯಾಗಬೇಕಿದೆ.

ಡಾ. ಶಾಂತಕುಮಾರ ಮುರುಡ, ರೋಗನಿರ್ಣಯ ತಜ್ಞ, ಎನ್‌ಎಬಿಎಲ್ ವೈದ್ಯಕೀಯ ಪ್ರಯೋಗಾಲಯಗಳ ಮುಖ್ಯ ಮೌಲ್ಯಮಾಪಕರು



ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ಅಂಗವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಶನಿವಾರ ಬೆಂಗಳೂರಿನ ಕೆಂಪೇಗೌಡ ಬಡಾವಣೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಸಿಗಳನ್ನು ನೆಟ್ಟರು ಪ್ರಜಾವಾಣಿ ಚಿತ್ರ

13 ಲಕ್ಷ ಸಸಿ: ಗಿನ್ನಿಸ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ಅಂಗವಾಗಿ ಜೂನ್ 27ರಂದು 12 ಗಂಟೆಗಳಲ್ಲಿ 13 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗಿನ್ನಿಸ್ ದಾಖಲೆ ಸೃಷ್ಟಿಸಿದೆ.

ಬಿಡಿಎ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ, ಡಾ. ಶಿವರಾಮ ಕಾರಂತ ಹಾಗೂ ಬನಶಂಕರಿ ಬಡಾವಣೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರ ನೆರವಿನೊಂದಿಗೆ ಶನಿವಾರ ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಸಸಿಗಳನ್ನು ನೆಡಲಾಯಿತು. 'ಗಿನ್ನಿಸ್ ವರ್ಲ್ಡ್ ರೆಕಾರ್ಡ್' ಸಂಸ್ಥೆಯ ಸುಮಾರು ಒಂದು ಸಾವಿರ ಮಂದಿ ಗಿಡಗಳನ್ನು ನೆಟ್ಟಿರುವ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿದರು.

'ಹಸಿರು ಬೆಂಗಳೂರು' ಅಭಿಯಾನದಡಿ ಸುಮಾರು 250 ಎಕರೆ ಪ್ರದೇಶದಲ್ಲಿ ಸ್ಥಳೀಯ ಜಾತಿಯ 15 ಲಕ್ಷ ಸಸಿಗಳನ್ನು ನೆಡುವ ಗುರಿಯನ್ನು ಬಿಡಿಎ ಹೊಂದಿತ್ತು. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ ದಶಪಥ ರಸ್ತೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಂತರ 'ಬಸವನ ಪಾದ' ಗಿಡ ನೆಟ್ಟು ನೀರೆರೆದು, ದಾಖಲೆಯಲ್ಲಿ ತಮ್ಮ ಹೆಸರನ್ನೂ ಬರೆದರು.

ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ, ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ, ಬಿಡಿಎ ಆಯುಕ್ತ ಪಿ. ಮಣಿವಣ್ಣನ್ ಅವರೂ ಗಿಡ ನೆಟ್ಟರು.

3

ಇರಾನ್ ರೆಡಾರ್ ಸೌಲಭ್ಯದ ಮೇಲೆ ಅಮೆರಿಕ ದಾಳಿ

ವಾಷಿಂಗ್ಟನ್ (ಎಪಿ): ಹೊರ್ಮುಜ್ ಜಲಸಂಧಿ ದಾಟುತ್ತಿದ್ದ ಅಮೆರಿಕದ ಸರಕು ಸಾಗಣಿಕೆ ಹಡಗಿನ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ, ಅಮೆರಿಕವು ಇರಾನ್‌ನ ರೆಡಾರ್ ಸೌಲಭ್ಯದ ಮೇಲೆ ದಾಳಿ ನಡೆಸಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ವಿವರ 5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಂಗವಿಕಲ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕುತ್ತು ತಂದ ಸರ್ಕಾರ

ಎಂಜಿನಿಯರಿಂಗ್ ಕನಸು ಭಗ್ನ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅಂಗವಿಕಲ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಪದವಿಪೂರ್ವ ಕಾಲೇಜು (ಪಿಯುಸಿ) ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ನೀಡಿದ್ದ ಭಾಷಾ ವಿನಾಯಿತಿ, ಅವರ ಎಂಜಿನಿಯರಿಂಗ್ ಶಿಕ್ಷಣಕ್ಕೇ ಕುತ್ತಾಗಿ ಪರಿಣಮಿಸಿದೆ.

ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ಕಲಿಯುತ್ತಿದ್ದ ವಿವಿಧ ನ್ಯೂನತೆಯುಳ್ಳ ಅಂಗವಿಕಲ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆಯ ಆದೇಶದಂತೆ 2024–25 ಹಾಗೂ 2025–26ನೇ ಸಾಲಿನಲ್ಲಿ ಒಂದು ಭಾಷಾ ವಿಷಯದಿಂದ ವಿನಾಯಿತಿ ನೀಡಿ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆ ಪ್ರಕಾರ ಪ್ರಥಮ, ದ್ವಿತೀಯ ಪಿಯು ವಿದ್ಯಾರ್ಥಿಗಳು ಎರಡು ಭಾಷಾ ವಿಷಯಗಳಲ್ಲಿ ಒಂದನ್ನು ಮಾತ್ರ ಅಧ್ಯಯನ ಮಾಡಿ, ಮತ್ತೊಂದು ವಿಷಯವನ್ನು ಕೈಬಿಡಲು ಅವಕಾಶ ನೀಡಲಾಗಿತ್ತು. ಕೆಲ ವಿದ್ಯಾರ್ಥಿಗಳು ಕನ್ನಡ ವಿಷಯವನ್ನು (ಬಹುತೇಕ ನಗರ ಪ್ರದೇಶದ ಅಂಗವಿಕಲ ವಿದ್ಯಾರ್ಥಿಗಳು) ಕೈಬಿಟ್ಟು, ಕೆಲ ವಿದ್ಯಾರ್ಥಿಗಳು ಇಂಗ್ಲಿಷ್ ವಿಷಯವನ್ನು (ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳು) ಕೈಬಿಟ್ಟು ಒಂದು ವಿಷಯ ಆಯ್ಕೆಮಾಡಿಕೊಂಡಿದ್ದರು.

ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಒಂದು ವಿಷಯದ ಹೊರೆ ಕಡಿಮೆಯಾದ ಕಾರಣ ಅಂಗವಿಕಲ ವಿದ್ಯಾರ್ಥಿಗಳು 2025–26ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದರು.

5

ಲಭ್ಯವಾಗದ ಮೂರು ಕೋರ್ಸ್‌ಗಳ ಸೀಟು

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ತಮಗೆ ಇಚ್ಛೆ ಇರುವ ಕಾಲೇಜು ಹಾಗೂ ಕೋರ್ಸ್‌ಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಮೂರು ದಿನಗಳಷ್ಟೇ ಬಾಕಿ ಇದ್ದರೂ ಬಿ–ಫಾರ್ಮಾ, ಫಾರ್ಮಾ–ಡಿ, ಯೋಗ ಮತ್ತು ನ್ಯಾಚುರೋಪತಿ ಸೀಟುಗಳ ಲಭ್ಯತಾ ಪಟ್ಟಿಯನ್ನು (ಸೀಟ್ ಮ್ಯಾಟ್ರಿಕ್ಸ್) ಆರೋಗ್ಯ ಇಲಾಖೆಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ತಲುಪಿಸಿಲ್ಲ.

ಎಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ, ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿಯನ್ನು ಕೆಇಎ ಈಗಾಗಲೇ ಪ್ರಕಟಿಸಿದ್ದು, ಆಯ್ಕೆ ದಾಖಲಿಸಲು ಜೂನ್ 30ರ ಬೆಳಿಗ್ಗೆ 10ರವರೆಗೆ ಸಮಯ ನೀಡಲಾಗಿದೆ. ಆದರೆ, ಬಿ–ಫಾರ್ಮಾ, ಫಾರ್ಮಾ–ಡಿ, ಯೋಗ ಮತ್ತು ನ್ಯಾಚುರೋಪತಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಿದ್ಧತೆ ನಡೆಸಿರುವ ವಿದ್ಯಾರ್ಥಿಗಳು ಸೀಟು ಲಭ್ಯತಾ ಪಟ್ಟಿ ಪ್ರಕಟವಾಗದ ಕಾರಣ ಅನಿವಾರ್ಯವಾಗಿ ಮೂರು ಕೋರ್ಸ್‌ಗಳನ್ನು ಕೈಬಿಟ್ಟು ಇತರೆ ಕೋರ್ಸ್‌ಗಳನ್ನು ನಮೂದಿಸುತ್ತಿದ್ದಾರೆ.

5

> **ಎಐಸಿಟಿಇ ನಿಯಮದಂತೆಯೇ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ನೀಡದಿದ್ದರೆ ಪದವಿ ಮಾನ್ಯವಾಗುವುದಿಲ್ಲ. ಪಿಯು ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ ನೀಡುವಾಗ ಇಂಗ್ಲಿಷ್ ವಿಷಯದ ಅಗತ್ಯ ಮನವರಿಕೆ ಮಾಡಬೇಕಿತ್ತು**
> **ಎಚ್‌.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ


ಬಿಡದಿ ಟೌನ್‌ಶಿಪ್: ಯೋಜನೆ ಪರ- ವಿರುದ್ಧ ಹೆಚ್ಚಿದ ಹೋರಾಟದ ಕಿಚ್ಚು

ಡಿಕೆಶಿಗಾಗಿ ಕಾದು ಕುಳಿತ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಡದಿ ಟೌನ್‌ಶಿಪ್ ಕುರಿತು ಬಹಿರಂಗ ಚರ್ಚೆ ನಡೆಸಲು ಬೈರಮಂಗಲಕ್ಕೆ ಬರುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪಂಥಾಹ್ವಾನ ನೀಡಿದ್ದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ಶನಿವಾರ ಬೆಳಿಗ್ಗೆ ಬೈರಮಂಗಲಕ್ಕೆ ಬಂದು ಮಧ್ಯಾಹ್ನದವರೆಗೆ ಅವರಿಗಾಗಿ ಕಾದು ಕುಳಿತರು.

ಟೌನ್‌ಶಿಪ್ ವಿರೋಧಿಸಿ ರೈತರು ನಡೆಸುತ್ತಿರುವ ಧರಣಿ ಸ್ಥಳದಲ್ಲಿ ನಿರ್ಮಿಸಿದ್ದ ವೇದಿಕೆಯಲ್ಲಿ ಕುಳಿತ ಕುಮಾರಸ್ವಾಮಿ, ತಮ್ಮ ಪಕ್ಕದಲ್ಲಿ 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್' ಎಂಬ ನಾಮಫಲಕ ಅಂಟಿಸಿದ್ದ ಕುರ್ಚಿಯನ್ನು ಕಡೆವರೆಗೆ ಖಾಲಿ ಬಿಡಿಸಿದ್ದರು. ಆ ಮೂಲಕ, 'ನಾನು ಹೇಳಿದಂತೆ ಬೈರಮಂಗಲಕ್ಕೆ ಬಂದಿದ್ದು, ನೀವೇ ಬಂದಿಲ್ಲ' ಎಂಬ ಸಂದೇಶವನ್ನು ರವಾನಿಸಿದರು.



ಬಿಡದಿ ಟೌನ್‌ಶಿಪ್ ವಿರೋಧಿಸಿ ರಾಮನಗರ ತಾಲ್ಲೂಕಿನ ಬೈರಮಂಗಲದಲ್ಲಿ ನಡೆಯುತ್ತಿರುವ ರೈತರ ಹೋರಾಟದಲ್ಲಿ ಶನಿವಾರ ಪಾಲ್ಗೊಂಡ ಕೇಂದ್ರ ಸಚಿವ ಎಚ್‌ಡಿ.ಕುಮಾರಸ್ವಾಮಿ, ತಮ್ಮ ಪಕ್ಕದ ಕುರ್ಚಿಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗಾಗಿ ಖಾಲಿ ಬಿಟ್ಟಿದ್ದರು

ಜನರೇ ನನ್ನ ತಂಡ: 'ಯೋಜನೆ ಕುರಿತು ಚರ್ಚೆಗೆ ಮೂರ್ನಾಲ್ಕು ಜನರ ತಂಡದೊಂದಿಗೆ ವಿಧಾನಸೌಧಕ್ಕೆ ಬರುವಂತೆ ಶಿವಕುಮಾರ್ ನನ್ನನ್ನು ಆಹ್ವಾನಿಸಿದರು. ಅವರಂತೆ ಭೂಮಿ ಲೂಟಿ ಹೊಡೆಯಲು ನನಗೆ ಯಾವುದೇ ತಂಡವಿಲ್ಲ. ರಾಜ್ಯದ ಆರೂವರೆ ಕೋಟಿ ಜನರೇ ನನ್ನ ತಂಡ. ಜನರ ಸಮ್ಮುಖದಲ್ಲೇ ಚರ್ಚಿಸಲು ಬೈರಮಂಗಲಕ್ಕೆ ಬಂದಿದ್ದೇನೆ. ಆದರೆ, ಮುಖ್ಯಮಂತ್ರಿಯೇ ಬಂದಿಲ್ಲ' ಎಂದು ತಮ್ಮ ಭಾಷಣದಲ್ಲಿ ಕುಮಾರಸ್ವಾಮಿ ತಿರುಗೇಟು ನೀಡಿದರು.

5

> **ಡಿ.ಕೆ.ಶಿವಕುಮಾರ್ ಅವರಿಗೆ ಭಗವಂತ ಒಳ್ಳೆಯ ಅವಕಾಶ ಕೊಟ್ಟಿದ್ದಾನೆ. ಈಗಲಾದರೂ ತಮ್ಮ ಹಳೆಯ ಚಾಳಿ ಬಿಟ್ಟು ಜನರಿಗೆ ಒಳ್ಳೆಯ ಕೆಲಸ ಮಾಡಬೇಕು**
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಸಚಿವರ ಕಾರಿಗೆ ಕೆಂಪು ಬಾವುಟ ಪ್ರದರ್ಶನ

ಕುಮಾರಸ್ವಾಮಿ ಅವರು ಬೈರಮಂಗಲದಿಂದ ಬಿಡದಿಯ ಕಡೆಗೆ ಕಾರಿನಲ್ಲಿ ಬೆಂಬಲಿಗರೊಂದಿಗೆ ಹೊರಟಾಗ, ಅದೇ ಮಾರ್ಗದ ಕೂಗಳತೆ ದೂರದಲ್ಲಿ ಟೌನ್‌ಶಿಪ್ ಪರ ಧರಣಿ ನಡೆಸುತ್ತಿದ್ದ ರೈತರು ಕಾರು ತಡೆಯಲು ಮುಂದಾದರು.

5

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

HSR Layout

HSR LAYOUT Sector-1 SITE FOR SALE
43x30 North Facing 40 Feet Road
Prime Location, with BBMP Plan Approval Borewell, Opposite 27th Main,
Price 6Cr.
Call: 9945184508 / 7349773989



FOR SALE
28,500 SQ.FT. WITH OLD BUILDING AT KUDLU GATE - HOSUR ROAD, PLEASE CONTACT
MOB: 98804 98007

FULLY FURNISHED OFFICE SPACE FOR RENT @MILLERS ROAD
FULLY FURNISHED AIR CONDITIONED OFFICE SPACE FOR RENT AT MILLERS RD NR. CUNNINGHAM RD JUNCTION 4620 Sft WITH 43 WORKSTATIONS, 5 CABINS, RECEPTION, CONFERENCE ROOM WITH PROJECTOR, PANTRY, RESTROOMS 3 CAR PARKS, TWO WHEELER PARKING, PLUS DG POWER BACKUP
Rs 110 PER SQ Feet & Rs 6.00 Maintenance
Email: bangalore@powericaltd.com
Call: 9980497693 (Btwn: 9-6pm)

BMRDA APPROVED LAYOUT
BMRDA APPROVED UNDER PROCESS
PARTNER / INVESTOR OPPORTUNITY
Nelamangala
We are Looking for a Financial Partner / Investor for a Promising BMRDA Approved Residential Layout Project near Nelamangala



INVESTMENT OPPORTUNITY INCLUDES:
- Clear Land & Development potential
- BMRDA Approval Process/ Approved Layout Opportunity
- High-Growth Location Near Nelamangala
- Attractive Profit-Sharing Model
- Suitable for Builders, Developers & Serious Investors.

GREAT LOCATION BETTER RETURNS
94807 70227
Lets Build A Successful future Together!

Electronic City

KHB Sites
Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Banashankari

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

50×80 [WEST] BANASHANKARI 6TH Stage, 2nd Block BDA site Clear Documents 17000per sqft Ph: 9972442398

BANASHANKARI 6TH Phase BDA Corner Auction Site 775 Sq.ft., FOR SALE 1.05Cr. Non-negotiable. Brokers Excuse, Only Genuine Buyers. Call 9986789426

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

BANASHANKARI 6TH Stage 11th Block, 40x60 Site Sale, Close to 80 Feet Road, 9972338060/ 9880448478.

PRM/KA/RERA/1251/308/PR/160824/006973
DS MAX SKY SANMAN
SUPER LUXURIOUS 2 & 3-BHK APARTMENTS
BANNERGHATTA ROAD
NEAR KOPPA GATE
2-BHK HOMES STARTS @ ₹ 59.86 L*
BDA APPROVED | G+14 FLOORS
*T & C Apply



CREDAI BENGALURU
8880 013 310
www.dsmaxproperties.com



BPE BENGALURU PLOT EXPO-2026
27th – 28th June 2026
White House Convention Centre, HSR Layout
ಬೆಂಗಳೂರು ಪ್ಲಾಟ್ ಎಕ್ಸ್‌ಪೋ ೨೦೨೬
LAST DAY
BENGALURU PLOT EXPO 2026
PARKING FREE ENTRY
BOOK & WIN HOME APPLIANCE
BOOK & WIN GOLD COIN
A Better Future Begins With the Right Plot
IN ASSOCIATION WITH: KNS INFRA
CO-SPONSORED BY: Ferns Estates & Developers
SPONSOR: EARA GROUP
PREMIUM SPONSOR: SVAMITVA, iconhomz, Assetz, ADDRESS MAKER
FINEST PROPERTIES, TrustKey, GoLocale
SCAN ME FOR LOCATION
+91 8123044655 annu@mindsquaremedia.com
*T&C Apply
Organized by Mindsquare Media Exhibitions

Hosur Road

"ATTIBELE NRI LAYOUT 40x60 South facing Site for sale near TVS Factory Excellent location. 9845500019/ 7019314962"

Jakkur

JAKKUR, BDA Corner Auction Site 749 Sq.ft., FOR SALE 1.25Cr. Non-negotiable. Brokers Excuse, Only Genuine Buyers. Call 9986789426

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Nagarabhavi

SITE SALE 40x60 Nagarbhavi 50x80 8th Block Residential. 50x80 Commercial 100 Feet Road Visvesvarayya Layout. 9008418631.

"**40X70 NORTH** Facing Site for Sale in Vishveshwaraiah Layout Mallathahalli Good location, Genuine Buyers Contact: 7760388034"

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

VCNR VISTA NEAR NELAMANGALA & HESARGHATTA 30X40 & 30X50 BOOK A SITE VISIT CONTACT:9986896859

Udupi

PRIME LAND FOR Sale near Nadikoor, 60 cents, 2 km from Padubidri on Padubidri - Karkala State Highway. No Brokers. Contact : Deepak:- 8861306268.

Out-Station

8000 SQFT plot sale Kudige road, Nandi Layout, Kushalnagar, Kodagu Rs.3000/sqft Contact 9902279137

Vishweshwariah Layout

"VISVESHWARAIAH LAYOUT 8th Block 30x40 West, 5th Block 30x40 North 100% Vastu Builder location. 9448432633"

VISHWESHWARAIAH LAYOUT BDA 6th Block 20x30 West Facing 30 Feet Road Direct Owner Meeting: 6360050356

EAST FACING 30x40 site 4th Block | 120m from SMV 4th Block Double Road | 210m from Puneeth Rajkumar Park | 1.8 Cr. | Contact/WhatsApp Owner 9845712577 between 10 AM - 7 PM | Brokers excuse

VISHWESHWARAIAH LAYOUT 50x80 West Facing 40ft Road BDA 8TH Block, 40x60 North 60ft Road: 9980409820

Anjanapura

WANTED BDA SITES ANJANAPURA BANASHANKARI 6TH STAGE COMMERCIAL & RESIDENTIAL ANY MEASUREMENT CONTACT: 9845298419

SITE FOR SALE Anjanapura 5th Block, 80 feet parallel, South-East Corner- 3700 Sqft (Owner meeting) Contact: 8050009909

Outer Ring Road

SITE FOR SALE 30 x 40 Mysore - Bangalore outer Ring Road. Mob: 8217084649

House

Budigere

BUDIGERE CROSS, Pruksa Silvana Corner Row House 3BHK Vaastu friendly. Gated Community. Semi Furnished. North Facing 9789522759.

Vijayanagar

RPC Layout House for Sale
Posh House in Good Location, 2 floors, in **1st floor** - 8 Bedrooms, Modern Kitchen, Dinning Hall, Pooja Room, Fully furnished House, and in **Ground floor** - 2 Bedroom, Kitchen Dinning Hall Fully furnished House with 2 car parking & Lift. built in 50x90 site with clear title for immediate sale. Genuine parties only Contact Directly
99019 85699
No Brokers

BDA 20X25 House EF, RPC Layout, Near Post Office, By2 Coffee Hotel, Vijayanagar 1.25Cr 9739957911

Banashankari

"BANASHANKARI 2ND-STAGE 30x50, 35x55, 40x60, Banashankari 3rd Stage 40x60, Kanakapura Road 30x40. Call: 9845286505"

Malleshwaram

MALLESWARAM 25X37 West facing Price. 39000/- slightly Negotiable Beautiful location Agreement holder meeting. Contact: 9663983846

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Rajarajeshwari Nagar

RAJARAJESHWARI NAGAR 2BHK Flat Ground Floor 1289 Sft, for sale Prime Location 9880127399

Vajrahalli

PRIME CENTREO, Acacia Tower 1454 Sft Ready Flat for Sale Near Vajarahalli Metro. Contact 9962372203.

Agricultural Land

Out-Station

AGRICULTURE LAND For Sale near Hiriyur, Chitrdurga Dist. 35 acres near River with road and elctricity. Contact: No. 9448704078.

Commercial Land

Out-Station

FOR SALE: Coffee Plantation on National Highway with commercial conversion. Between Sakleshpura to Dharmasthala Road. Contact: 99456-03806

Commerical

Koramangala

7000 SFT Commercial Site on 100 Feet Road Koramangala, A Khata. Price 25,000/- sft. 9980577227.

M G Road And Around

COMMERCIAL PROPERTY for Sale CAMBRIDGE MG ROAD NEAR FULLY FURNISHED AC GUEST HOUSE CCP, LIFT, 100% POWER BACKUP. 2150 SQFT, 2.6 CR. 9740714511.

Vishweshwariah Layout

26X80 VISHWESHWARAIAH Layout Commercial BDA Site, 3rd Block North, 80ft Ullal Main Road 21,000/- Psqft Negotiable: 9845793121

Industrial & Factory

Jigani

FOR SALE MNC Tenanted INDUSTRIAL WAREHOUSE and OFFICE BLOCK at BANGALORE/ ANEKAL ROAD fetching RENT Rs. 57 Lakhs pm with 5% increase in Rent annually 4 Crores Deposit. 7.15 Acres Land (3,20,000 Sft) Industrial Zone, Sancationed Plan, 300 KVA Power, Clearance obtained from all Govt and Local Authorities. Pollution Control Board, STP Plant, Generator Rooms, Structural Design etc. Lease Period till 2032. TASK REALITY BV.Ananth Kumar: 98450-05855

Magadi Road

FOR SALE: Land for Sale in Magadi Road near to Nice Road. Suitable for Industries/ ware house/ Commercial Use. Contact: 99456-03806

Tumkur Road

SALE OR Built to Suit 10 Acres Industrial Converted Land Near Dabaspet Opposite KIADB. 9141326819

Residential/ Commercial

Devanahalli

RENT
Brand New "A" grade OFFICE / WAREHOUSE Building 20,000 Sqft
DEVENAHALLI
LOCATED BEHIND AEROSPACE SEZ, NEAR AIRPORT, FACING HIGHWAY.
with Parking For Light & Commercial Vehicles, 100% Power Backup.
Call Owners 9845035196
sterlingestatesindia.com

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

Bannerghatta

HARAPANAHALLI, NISARGA Layout Nirman Shelters Plot Size 50x80 4,000 sqft, Panchayat Approved, Near Bannerghatta National Park. 9789522759.

Commercial Building

Indiranagar

INDIRANAGAR: EXCELLENT N-E Corner (20X30 BDA) Commercial Building, 4 Floors, 3.5 Cr (Nego). M:9845178515

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact : 9902038118, 9449060605

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA-LAYOUT.Contact: 9844533371/ 9341733480

RENTAL PROPERTIES

Accommodation Available

Flats

2 BHK flats JPNagar 2nd & 5th phase for rent 32k. Call: 9886425997

Commercial

GRADE A Commercial space of 9000 sq.ft with 11 car parkings for lease in 2nd floor of Vaswani Augusta with OC, adjacent to Embassy Golf Business park, Challaghatta. Contact. No. 8618069323.

FOR RENT: Office Space Ground Floor 1000Sq.ft. at Mahalakshmipuram. Ideal for Office. Contact: 9448491761

Industrial And Factory

BUILD TO SUIT INDUSTRIAL-SHED IN HAROHALLI 3rd Phase KIADB Industrial-Area Kanakapura Road 26500sqft on-1Acre Land Facing North Call:9845045941

House

FOR RENT 2BHK 1st Floor Portion in 6th Block Koramangla. Contact 9845073898.

Accommodation Wanted

Industrial And Factory

REQUIRED INDUSTRIAL shed for rent in or around Peenya with 30 hp power & preferably with crane facility measuring 5000 to 7000 sq ft for immediate occupation. Kindly contact Zoher on 9448051537.

EDUCATIONAL

Admission

ADMISSIONS ONLINE Courses BA, Bcom, BBA, BCA,MBA, Executive MBA, Diploma, AMIIE (B.Tech), 10th,12th 9341273990

‘ಎಸ್‌.ಎಂ. ಕೃಷ್ಣ ದಶಪಥ 123 ಕಿ.ಮೀ.ಗೆ ವಿಸ್ತರಣೆ’

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌.ಎಂ. ಕೃಷ್ಣ ದಶಪಥ ರಸ್ತೆಯು 11 ಕಿಲೋ ಮೀಟರ್‌ಗೆ ಸೀಮಿತಗೊಳ್ಳುವುದಿಲ್ಲ. 123 ಕಿಲೋ ಮೀಟರ್ ರಸ್ತೆಯಾಗಿ ಪರಿವರ್ತನೆಯಾಗಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಲ್ಲಘಟ್ಟದ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಎಸ್‌.ಎಂ. ಕೃಷ್ಣ ದಶಪಥ ರಸ್ತೆ ಲೋಕಾರ್ಪಣೆ ಮತ್ತು 15 ಲಕ್ಷ ಸಸಿ ನೆಡುವ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಬೆಂಗಳೂರು ನಗರದ ಭವಿಷ್ಯಕ್ಕಾಗಿ ಮತ್ತು ಸಂಚಾರ ದಟ್ಟಣೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪೆರಿಫೆರಲ್ ರಿಂಗ್ ರೋಡ್ ನಿರ್ಮಿಸಲು ದಿಟ್ಟ ನಿರ್ಧಾರ ಕೈಗೊಳ್ಳಲಾಗಿದ್ದು, ಒಂದು ಹಂತದ ಟೆಂಡರ್ ಕೂಡ ಆಗಿದೆ. ಮುಂದೆ ಎಲೆಕ್ಟ್ರಾನಿಕ್ ಸಿಟಿಯಿಂದ ಮೈಸೂರು ರಸ್ತೆಯನ್ನು ಇದು ಸಂಪರ್ಕಿಸಲಿದೆ. ಅದಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು. ಹಿಂದಿನ ಸರ್ಕಾರಗಳು ಪೆರಿಫೆರಲ್ ರಿಂಗ್ ರೋಡ್ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿಲ್ಲ. ಆದರೆ, ಬೆಂಗಳೂರು ಉಳಿಯಬೇಕಾದರೆ ಈ ರಸ್ತೆ ಅನಿವಾರ್ಯ’ ಎಂದು ತಿಳಿಸಿದರು.

‘ಬಿಡಿಎ ಹಳೆ ದರದ ಬದಲಾಗಿ ಭೂಮಾಲೀಕರಿಗೆ ಶೇ 35 ವಾಣಿಜ್ಯ ಅಥವಾ ಶೇ 40 ಅಭಿವೃದ್ಧಿಪಡಿಸಿದ ಭೂಮಿ ನೀಡುವುದು. 2013ರ ಭೂಸ್ವಾಧೀನ ಕಾಯ್ದೆ ಅಳವಡಿಸಿಕೊಂಡು ಪರಿಹಾರ ನೀಡುವುದು, ಟಿಡಿಆರ್ (ಹಕ್ಕು ವರ್ಗಾವಣೆ ಪ್ರಮಾಣಪತ್ರ) ವ್ಯವಸ್ಥೆ ಕಲ್ಪಿಸುವುದು ಹೀಗೆ 5 ಆಯ್ಕೆ ನೀಡಲಾಗಿದೆ. ಜಮೀನುದಾರರು ತಮಗೆ ಬೇಕಾದ ಸೂಕ್ತ ಆಯ್ಕೆಯನ್ನು ಮಾಡಿಕೊಳ್ಳಬಹುದು. ಜಮೀನು ಕಳೆದುಕೊಳ್ಳುವವರ ಹಿತ ಕಾಯುತ್ತೇವೆ’’ ಎಂದು ಭರವಸೆ ನೀಡಿದರು.

‘ನಗರದಲ್ಲಿರುವ ಬಾಬು ಜಗಜೀವನ್‌ರಾಮ್ ಭವನದ ಪಕ್ಕದ ಸುಮಾರು 5 ಎಕರೆ ಜಾಗದಲ್ಲಿ ಕೆಂಪೇಗೌಡ ಭವನ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾರ್ಗದರ್ಶನದಲ್ಲಿ ₹100 ಕೋಟಿ ವೆಚ್ಚದಲ್ಲಿ ನಗರ ಯೋಜನೆ ಕಾಲೇಜು ನಿರ್ಮಿಸಲಾಗುವುದು. ಕೆಂಪೇಗೌಡರ ಹುಟ್ಟೂರು ದೇವನಹಳ್ಳಿ ಬಳಿಯ ಆವತಿಯಲ್ಲಿ ಒಂಬತ್ತೂವರೆ ಎಕರೆ ಜಾಗ ಗುರುತಿಸಲಾಗಿದ್ದು, ಮುಂದಿನ ವರ್ಷ ₹100 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಕುರಿತ ಅಧ್ಯಯನ ಕೇಂದ್ರ ತೆರೆಯಲಾಗುವುದು. ಮಾಗಡಿಯಲ್ಲಿ ಕೆಂಪೇಗೌಡರ ಕೋಟೆ ಅಭಿವೃದ್ಧಿ, ಕೆಂಪಾಪುರ ಹಾಗೂ ಕುತ್ತಿಗಾಲದಲ್ಲೂ ₹10 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ’ ಎಂದರು.

‘ಬೆಂಗಳೂರನ್ನು ಮೊದಲು ಕಟ್ಟಿದವರು ಕೆಂಪೇಗೌಡರು. ಆನಂತರ ವಿಧಾನಸೌಧವನ್ನು ನಿರ್ಮಿಸುವ ಮೂಲಕ ಎರಡನೇಯವರು ಕೆಂಗಲ್ ಹನುಮಂತಯ್ಯ, ವಿಕಾಸಸೌಧ ನಿರ್ಮಾಣ ಸಹಿತ ಅನೇಕ ಕೊಡುಗೆಗಳನ್ನು ನೀಡಿದ ಎಸ್‌.ಎಂ. ಕೃಷ್ಣ ಮೂರನೇಯವರು. ಅದಕ್ಕಾಗಿ ದಶಪಥ ರಸ್ತೆಗೆ ಕೃಷ್ಣ ಅವರ ಹೆಸರು ಇಡಲಾಗಿದೆ’ ಎಂದು ತಿಳಿಸಿದರು.

ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್ ಮಾತನಾಡಿ, ‘ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಮೂರು ವರ್ಷಗಳಲ್ಲಿ ನಗರದ ಅಭಿವೃದ್ಧಿಯಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ಕೆಂಪೇಗೌಡ ಬಡಾವಣೆ ಕೆಲಸ ಶೇ 95ಪೂರ್ಣಗೊಂಡಿದೆ. ಉಳಿದ ಕೆಲಸವೂ ಶೀಘ್ರದಲ್ಲಿ ಮುಗಿಯಲಿದೆ’ ಎಂದು ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ, ಸಚಿವರಾದ ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಶಾಸಕರಾದ ಎಸ್‌.ಟಿ. ಸೋಮಶೇಖರ್, ಎಚ್‌.ಸಿ. ಬಾಲಕೃಷ್ಣ, ಆನೇಕಲ್ ಶಿವಣ್ಣ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್‌.ಎಂ. ರೇವಣ್ಣ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಗೋವಿಂದರಾಜು, ರಾಮೋಜಿಗೌಡ, ಆರತಿ ಕೃಷ್ಣ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್ ಶ್ರೀನಿವಾಸ್, ಪ್ರೇಮಾ ಕೃಷ್ಣ ಉಪಸ್ಥಿತರಿದ್ದರು.

ಅಭಿವೃದ್ಧಿಗೆ ವಿರೋಧವೇಕೆ: ಪರಮೇಶ್ವರ

‘ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಹಲವು ಯೋಜನೆಗಳಿಗೆ ವಿರೋಧ ಪಕ್ಷಗಳು ಅನಗತ್ಯ ವಿರೋಧ ವ್ಯಕ್ತಪಡಿಸುತ್ತಿವೆ. ಬೆಂಗಳೂರು ಅಭಿವೃದ್ಧಿಯಾಗಬಾರದೇ’ ಎಂದು ಉಪಮುಖ್ಯ-ಮಂತ್ರಿ ಜಿ. ಪರಮೇಶ್ವರ ಪ್ರಶ್ನಿಸಿದರು.

‘ಸಿದ್ದರಾಮಯ್ಯ ಅವರು ಹೆಬ್ಬಾಳದಿಂದ ಚಾಲುಕ್ಯ ವೃತ್ತದವರೆಗೆ ಸ್ಟೀಲ್ ಬ್ರಿಡ್ಜ್ ಯೋಜನೆ ಮಾಡಲು ಮುಂದಾದಾಗ ವಿರೋಧಿಸಿದ್ದರು. ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡಬೇಕು ಎಂಬ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುಂದರವಾದ ಬಿಡದಿ ಟೌನ್‌ಶಿಪ್ ನಿರ್ಮಾಣ ಮಾಡಲು ಹೊರಟಿದ್ದು, ಅದಕ್ಕೂ ವಿರೋಧಿಸುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ವಿರೋಧ ಪಕ್ಷಗಳು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾದ ಸಲಹೆ-ಸೂಚನೆಗಳನ್ನು ನೀಡಬೇಕು. ಬೆಂಗಳೂರಿನ ಬೆಳವಣಿಗೆ ಮತ್ತು ಕರ್ನಾಟಕದ ಅಭಿವೃದ್ಧಿಗೆ ಸಹಕಾರ ನೀಡುವ ಮನೋಭಾವವನ್ನು ಜನರು ನಿರೀಕ್ಷಿಸುತ್ತಿದ್ದಾರೆ. ವಿನಾಕಾರಣ ಅಭಿವೃದ್ಧಿ ಕಾರ್ಯಗಳಿಗೆ ವಿರೋಧಿಸುವ ನಿಮ್ಮ ಚಿಂತನೆಗಳನ್ನು ಜನರು ಒಪ್ಪುವುದಿಲ್ಲ’ ಎಂದು ಹೇಳಿದರು.

ಸಂಚಾರ ಪೊಲೀಸ್ ವಿಭಾಗಕ್ಕೆ ಹೊಸ ಕಮಿಷನರೇಟ್

ಬೆಂಗಳೂರಿನ ಜನಸಂಖ್ಯೆ **1.40** ಕೋಟಿ ಇದ್ದರೆ, ವಾಹನಗಳ ಸಂಖ್ಯೆ **1.30** ಕೋಟಿ. ಎಷ್ಟೇ ಮೆಟ್ರೊ, ಸಾರಿಗೆ ಸಂಚಾರಗಳನ್ನು ತಂದರೂ ವಾಹನ ದಟ್ಟಣೆ ಕಡಿಮೆ ಮಾಡುವುದು ಕಷ್ಟ. ಅದಕ್ಕೊಂದು ಹೊಸ ರೂಪ ಕೊಡಬೇಕು. ಅದಕ್ಕಾಗಿ ಸಂಚಾರ ವಿಭಾಗಕ್ಕೆ ಹೊಸ ಕಮಿಷನರೇಟ್ ಮಾಡುವ ಯೋಜನೆ ಇದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಇಂದಿನ ಹವಾಮಾನ ಬದಲಾವಣೆ ಸೇರಿದಂತೆ ಹಲವು ಸಮಸ್ಯೆಗಳನ್ನು ಬಗೆಹರಿಸಲು ಕೆಂಪೇಗೌಡರೇ ಪರಿಹಾರ. ಅವರ ಹೆಸರಿನಲ್ಲಿ ಇನ್ನಷ್ಟು ಕೆಲಸಗಳು ಆಗಬೇಕಿವೆ

ನಿರ್ಮಲಾನಂದನಾಥ ಸ್ವಾಮೀಜಿ,
ಆದಿಚುಂಚನಗಿರಿ ಮಠ



ಸಮಾರಂಭದಲ್ಲಿ ಜಾನಪದ ತಂಡಗಳು ನೃತ್ಯ ಪ್ರದರ್ಶನ ನೀಡಿದವು



ಬೆಂಗಳೂರಿನ ಚಲ್ಲಘಟ್ಟದಲ್ಲಿ ಕೆಂಪೇಗೌಡರ 517ನೇ ಜಯಂತಿ ಪ್ರಯುಕ್ತ ಉದ್ಘಾಟನೆಯಾದ ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಸ್‌. ಎಂ. ಕೃಷ್ಣ ದಶಪಥ ರಸ್ತೆ ಪ್ರಜಾವಾಣಿ ಚಿತ್ರ



ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಡಿ.ಕೆ. ಶಿವಕುಮಾರ್ ಸಸಿ ನೆಟ್ಟು, ನೀರೆರೆದರು. ಎನ್‌ಎ. ಹ್ಯಾರಿಸ್, ಕೃಷ್ಣ ಬೈರೇಗೌಡ, ಜಿ. ಪರಮೇಶ್ವರ, ಎಚ್‌ಎಂ. ರೇವಣ್ಣ, ಗೋವಿಂದರಾಜ್, ಎಸ್‌ಟಿ. ಸೋಮಶೇಖರ್ ಜತೆಗಿದ್ದರು

‘ವಾಲ್ ಆಫ್ ಗ್ರ್ಯಾಟಿಟ್ಯೂಡ್’

ಮೈಸೂರು ರಸ್ತೆಯಿಂದ ಮಾಗಡಿ ರಸ್ತೆವರೆಗಿನ ಎಸ್‌.ಎಂ. ಕೃಷ್ಣ ದಶಪಥ ರಸ್ತೆ ಅಭಿವೃದ್ಧಿಗಾಗಿ ಯಾವುದೇ ವಿವಾದವಿಲ್ಲದೆ ಸ್ವಯಂಪ್ರೇರಿತವಾಗಿ ಜಮೀನು ಬಿಟ್ಟುಕೊಟ್ಟ ರೈತರು ಮತ್ತು ಸ್ಥಳೀಯರನ್ನು ಗೌರವಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮೈಸೂರು ರಸ್ತೆಯಲ್ಲಿ ‘ವಾಲ್ ಆಫ್ ಗ್ರ್ಯಾಟಿಟ್ಯೂಡ್’ (ಕೃತಜ್ಞತಾ ಫಲಕ) ನಿರ್ಮಿಸಿದೆ. ಈ ಫಲಕವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಲೋಕಾರ್ಪಣೆ ಮಾಡಿದರು.

ಬೆಂಗಳೂರಿನ ಸುತ್ತಮುತ್ತಲಿನ ಏಳು ಭಾಗಗಳಿಂದ ಮೆರವಣಿಗೆಯಲ್ಲಿ ಬಂದ ಪುರಜ್ಯೋತಿಗಳನ್ನು ಶಿವಕುಮಾರ್ ಅವರು ಎಸ್‌.ಎಂ.ಕೃಷ್ಣ ದಶಪಥ ರಸ್ತೆಯ ಬಳಿ ಸ್ವೀಕರಿಸಿದರು. ನಂತರ ಕೆಂಪೇಗೌಡರ ಕೋಟೆಯ ಪ್ರತಿಕೃತಿ ಎದುರು ಎಲ್ಲ ಪುರಜ್ಯೋತಿಗಳನ್ನು ಇಡಲಾಯಿತು.

ಇದಕ್ಕೂ ಮೊದಲು, ಚಲ್ಲಘಟ್ಟದ ನಾಡಪ್ರಭು ಕೆಂಪೇಗೌಡ ಬಡಾವಣೆ ಬಳಿ ಎಸ್‌.ಎಂ.ಕೃಷ್ಣ ದಶಪಥ ರಸ್ತೆಯಲ್ಲಿ 10 ಕೆ ರನ್, 5 ಕೆ ವಾಕಥಾನ್ ಏರ್ಪಡಿಸಲಾಗಿತ್ತು. ಸಾವಿರಾರು ಜನರು ನೂತನ ರಸ್ತೆಯಲ್ಲಿ ಓಡಿ ಸಂತಸಪಟ್ಟರು.

ಕೆಂಪೇಗೌಡರ ಹೆಸರಿಡಿ: ನಂಜಾವಧೂತಶ್ರೀ

‘ಬೆಂಗಳೂರು ಸುತ್ತಲು ಬರುವ ಪಿಆರ್‌ಆರ್, ನಮ್ಮ ಮೆಟ್ರೊ, ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ನಾಡಪ್ರಭು ಕೆಂಪೇಗೌಡ ಅವರ ಹೆಸರಿಡಬೇಕು.

ರೇಸ್‌ಕೋರ್ಸ್ ಸ್ಥಳಾಂತರವಾದ ನಂತರ ಆ ಸ್ಥಳದಲ್ಲಿ ಕೆಂಪೇಗೌಡರ ಬೃಹತ್ ಪ್ರತಿಮೆ ನಿರ್ಮಿಸಿ ಪ್ರವಾಸಿ ತಾಣವನ್ನಾಗಿ ಮಾಡಬೇಕು. ನಗರದಲ್ಲಿನ ಕೋಟೆಗಳನ್ನು ಅಭಿವೃದ್ಧಿಪಡಿಸಬೇಕು. ಎಲ್ಲ ಜಿಲ್ಲೆಗಳಲ್ಲಿ ಕೆಂಪೇಗೌಡ ಭವನ ನಿರ್ಮಿಸಬೇಕು. ಒಂದನೇ ತರಗತಿಯಿಂದ ಪಿಯುಸಿವರೆಗೆ ಕೆಂಪೇಗೌಡ ಕುರಿತು ಪಠ್ಯ ಅಳವಡಿಸಬೇಕು’ ಎಂದು ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಆಗ್ರಹಿಸಿದರು.

‘ಮುಂದಿನ ವರ್ಷ ವಿಮಾನ ನಿಲ್ದಾಣಕ್ಕೆ ಮೆಟ್ರೊ’

ದೇವನಹಳ್ಳಿ: ಮುಂದಿನ ವರ್ಷದೊಳಗೆ ವಿಮಾನ ನಿಲ್ದಾಣಕ್ಕೆ ಮೆಟ್ರೊ ಸಂಚಾರ ಕಾರ್ಯಾರಂಭ ಮಾಡಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆವರಣದಲ್ಲಿ ಶನಿವಾರ ಕೆಂಪೇಗೌಡ ಜಯಂತಿ ಅಂಗವಾಗಿ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡ ಕಂಚಿನ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

‘ಮುಂದಿನ ಎರಡು ವರ್ಷದಲ್ಲಿ 500 ಕಿಲೋ ಮೀಟರ್ ಮೆಟ್ರೊ ಜಾಲ ವಿಸ್ತರಣೆಗೆ ಯೋಜನೆ ರೂಪಿಸಲಾಗುತ್ತಿದೆ’ ಎಂದು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್

‘ನೀರಿನ ಸಮಸ್ಯೆಗೆ ನದಿ ಜೋಡಣೆಯೇ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ನೀರಿನ ವಿವಾದ ಹಲವು ವರ್ಷಗಳಿಂದ ಇದೆ. ಇದಕ್ಕೆ ನದಿಗಳ ಜೋಡಣೆಯೇ ಪರಿಹಾರವಾಗಿದ್ದು, ಗೋದಾವರಿ ಮತ್ತು ಕಾವೇರಿ ನದಿ ಜೋಡಣೆ ಯೋಜನೆಯು ಕಾರ್ಯಗತವಾಗಬೇಕು’ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಪ್ರಾಯಪಟ್ಟರು.

‘ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ’ ಶನಿವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

‘ನೀರಿನ ಕೊರತೆಯಿಂದ ಕರ್ನಾಟಕ ಹಾಗೂ ತಮಿಳುನಾಡಿನ ರೈತರು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ನನಗೆ ಅರಿವಿದೆ. ಹಿಂದೆ ತಮಿಳುನಾಡಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿದ್ದಾಗ, ನದಿ ಜೋಡಣೆಯ ಮಹತ್ವ ಸಾರಲು ತಮಿಳುನಾಡಿನಾದ್ಯಂತ 93 ದಿನಗಳ ಐತಿಹಾಸಿಕ ರಥಯಾತ್ರೆ ನಡೆಸಿದೆ. ದೇಶದ ಎಲ್ಲ ನದಿಗಳು ಒಂದಕ್ಕೊಂದು ಜೋಡಣೆಯಾಗಿ, ನೀರು ಸದುಪಯೋಗವಾಬೇಕು. ನದಿ ಜೋಡಣೆಗೆ ರಾಜಕೀಯ ಇಚ್ಛಾಶಕ್ತಿ ಕೊರತೆ ದೊಡ್ಡ ಸವಾಲಾಗಿದೆ’ ಎಂದು ಹೇಳಿದರು.

‘ನದಿಗಳ ಜೋಡಣೆ ಕೇವಲ ಒಂದು ರಾತ್ರಿಯಲ್ಲಿ ಆಗುವ ಕೆಲಸವಲ್ಲ. ಸಣ್ಣ ಸಣ್ಣ ಕಾರ್ಯಕ್ರಮಗಳ ಮೂಲಕ ಸಾಕಾರವಾಗಲಿದೆ. ಲಭ್ಯವಿರುವ ನದಿ ನೀರನ್ನು ರೈತರ ಹಿತದೃಷ್ಟಿಯಿಂದ ಸಮಾನವಾಗಿ ಹಾಗೂ ನ್ಯಾಯಯುತವಾಗಿ ಹಂಚಿಕೆ ಮಾಡಬೇಕು. ಇದು ಮಾತ್ರ ನೀರಿನ ಸಮಸ್ಯೆಗೆ ಪರಿಹಾರ’ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ಕೆಂಪೇಗೌಡರು ದೂರದೃಷ್ಟಿ ಹೊಂದಿದ್ದರು. ಇದರಿಂದಾಗಿಯೇ ಅವರು ನಿರ್ಮಿಸಿದ ಬೆಂಗಳೂರು ಈಗ ವಿಶ್ವದ ಪ್ರಮುಖ ನಗರವಾಗಿ ಹೊರಹೊಮ್ಮಿದೆ. ವಿಜ್ಞಾನ, ತಂತ್ರಜ್ಞಾನ, ನವೋದ್ಯಮ ಸೇರಿ ವಿವಿಧ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿದೆ’ ಎಂದು ಹೇಳಿದರು.

ಇದೇ ವೇಳೆ ಸಾಮಾಜಿಕ ಕ್ಷೇತ್ರದಿಂದ ಟಿ.ವಿ. ಮೋಹನ್ ದಾಸ್ ಪೈ, ಧಾರ್ಮಿಕ ಕ್ಷೇತ್ರದಿಂದ ಮಾದಾರ ಚೆನ್ನಯ್ಯ ಸ್ವಾಮೀಜಿ ಹಾಗೂ ಪರಿಸರ ಕ್ಷೇತ್ರದಿಂದ ಎ.ಸಿ.ಲಕ್ಷ್ಮಣ್ ಅವರಿಗೆ ‘ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೇಂದ್ರ ಸಚಿವ ವಿ. ಸೋಮಣ್ಣ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಎ.ಸಿ.ಲಕ್ಷ್ಮಣ್ ಹಾಗೂ ಟಿ.ವಿ. ಮೋಹನ್ ದಾಸ್ ಪೈ ಅವರಿಗೆ ಸಿ.ಪಿ. ರಾಧಾಕೃಷ್ಣನ್ ಅವರು ‘ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ’ ಪ್ರಶಸ್ತಿ ನೀಡಿ ಗೌರವಿಸಿದರು. ಥಾವರಚಂದ್ ಗೆಹಲೋತ್, ನಿರ್ಮಲಾನಂದನಾಥ ಸ್ವಾಮೀಜಿ, ಎಚ್‌ಡಿ. ಕುಮಾರಸ್ವಾಮಿ, ಸಿ.ಎನ್. ಅಶ್ವತ್ಥನಾರಾಯಣ ಉಪಸ್ಥಿತರಿದ್ದರು

ಕೆಂಪೇಗೌಡರು ಭೌತಿಕವಾಗಿ ನಗರವನ್ನು ಸೃಷ್ಟಿಸುವ ಜತೆಗೆ, ಧರ್ಮ ಪ್ರಭುಗಳಾಗಿ ಹಲವು ಸಾಮಾಜಿಕ ಕಾರ್ಯಮಾಡಿದ್ದಾರೆ. ಅವರನ್ನು ಸ್ಮರಿಸುವುದರಿಂದ ನಮ್ಮ ಬದುಕು ಪುನೀತವಾಗುತ್ತದೆ
ನಿರ್ಮಲಾನಂದನಾಥ ಸ್ವಾಮೀಜಿ
ಆದಿಚುಂಚನಗಿರಿ ಮಠ

ಬೆಂಗಳೂರು ಈಗ ನೀರಿನ ಸಮಸ್ಯೆ ಎದುರಿಸುತ್ತಿದೆ. ಕರ್ನಾಟಕಕ್ಕೆ ನೀರು ಹಂಚಿಕೆ ವಿಚಾರವಾಗಿ ಉಪರಾಷ್ಟ್ರಪತಿ ಅವರು ನಮ್ಮ ಪರವಾಗಿ ಧ್ವನಿಯೆತ್ತಿದಲ್ಲಿ ನಮಗೆ ಹೆಚ್ಚಿನ ಶಕ್ತಿ ಬರುತ್ತದೆ
ಎಚ್‌.ಡಿ. ಕುಮಾರಸ್ವಾಮಿ
ಕೇಂದ್ರ ಸಚಿವ

ಅಭಿವೃದ್ಧಿ ಅಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳದೆ ಕೆಲಸ ಮಾಡುವವರು ಬಹಳಷ್ಟು ಜನರಿದ್ದಾರೆ. ಸುಸ್ಥಿರ ಅಭಿವೃದ್ಧಿ ಹೇಗೆ ಎಂಬುದನ್ನು ಕೆಂಪೇಗೌಡರು ತೋರಿಸಿಕೊಟ್ಟಿದ್ದರು
ಸಿ.ಎನ್. ಅಶ್ವತ್ಥನಾರಾಯಣ
ಬಿಜೆಪಿ ಶಾಸಕ

‘ಹಸಿರು ನಗರ ಬೆಂಗಳೂರು’

‘ಕೆಂಪೇಗೌಡ ಅವರ ದೂರದೃಷ್ಟಿಯ ಪರಿಣಾಮ ಬೆಂಗಳೂರು ವಿಶ್ವದ ಗಮನ ಸೆಳೆದಿದೆ. ವಿಭಿನ್ನ ಆಡಳಿ-ತಗಾರರಾಗಿದ್ದ ಅವರು, ಪರಸರ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಿದ್ದರು. ದೊಡ್ಡ ಮಟ್ಟದಲ್ಲಿ ಗಿಡ–ಮರಗಳನ್ನು ಬೆಳೆಸಿ, ಜಲ ಮೂಲಗಳನ್ನು ಸಂರಕ್ಷಿಸಿದ್ದರು. ಇದರಿಂದಾಗಿ ನಗರ ನಿರ್ಮಾಣಗೊಂಡು 500 ವರ್ಷಗಳು ಕಳೆದರೂ ಬೆಂಗಳೂರು ಈಗಲೂ ಆಹ್ಲಾದಕರ ವಾತಾವರಣ ಹೊಂದಿದೆ. ದೇಶದ ಉಳಿದ ನಗರಗಳಿಗೆ ಹೋಲಿಸಿದರೆ ಬೆಂಗಳೂರು ಹೆಚ್ಚು ಹಸಿರು ನಗರವಾಗಿದೆ’ ಎಂದು ಸಿ.ಪಿ. ರಾಧಾಕೃಷ್ಣನ್ ಶ್ಲಾಘಿಸಿದರು.

13 ಲಕ್ಷ ಸಸಿ ನೆಟ್ಟು ಬಿಡಿಎ ಗಿನ್ನಿಸ್ ದಾಖಲೆ

ಒಂದನೇ ಪುಟದಿಂದ...

‘ಪೂರ್ಣ ಪ್ರಮಾಣದ ಅಂಕಿ–ಅಂಶ ಪ್ರಕಟವಾಗಲು ಇನ್ನೂ ಮೂರ್ನಾಲ್ಕು ದಿನದ ಅಗತ್ಯವಿದ್ದು, ನಂತರವಷ್ಟೇ ಅಧಿಕೃತ ಮಾಹಿತಿ ಲಭ್ಯವಾಗಲಿದೆ. ಶನಿವಾರ ರಾತ್ರಿ ವೇಳೆಗೆ ಲಭ್ಯವಾಗಿರುವ ಮಾಹಿತಿ ಪ್ರಕಾರ, 13 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಮಧ್ಯಪ್ರದೇಶದ ಇಂದೋರ್‌ನಲ್ಲಿ 2024ರ ಜುಲೈ 13ರಿಂದ 14ರ 24 ಗಂಟೆಗಳಲ್ಲಿ 11 ಲಕ್ಷ ಗಿಡಗಳನ್ನು ನೆಟ್ಟಿರುವುದು ಈವರೆಗಿನ ‘ಗಿನ್ನಿಸ್ ದಾಖಲೆ’ ಆಗಿದೆ.

ದ್ರಾವಿಡ್, ವಿಶ್ವನಾಥ್‌ಗೆ ‘ಕೆಂಪೇಗೌಡ ಪ್ರಶಸ್ತಿ’

ಬೆಂಗಳೂರು: ‘ಕೆಂಪೇಗೌಡ ಅಂತರ ರಾಷ್ಟ್ರೀಯ ಪ್ರಶಸ್ತಿ’ಯನ್ನು ಕ್ರಿಕೆಟಿಗ ರಾಹುಲ್ ದ್ರಾವಿಡ್ ಸೇರಿದಂತೆ ಮೂವರಿಗೆ ಪ್ರದಾನ ಮಾಡಲಾಯಿತು.

ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಚಲ್ಲಘಟ್ಟದಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು.

ದೇಶದ ಪ್ರಮುಖ ಕೃಷಿ ಸಂಶೋಧನೆ ಹಾಗೂ ಶಿಕ್ಷಣ ಸಂಸ್ಥೆಯಾಗಿ, ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಪಡೆದಿರುವ ಎಂಜಿನಿಯರ್ ಎಸ್‌. ವಿಶ್ವನಾಥ್ ಅವರು ಹಾಗೂ ರಾಹುಲ್ ದ್ರಾವಿಡ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಪ್ರಶಸ್ತಿಯು ₹ 5 ಲಕ್ಷ ನಗದು ಮತ್ತು ಸ್ಮರಣಿಕೆಯನ್ನು ಹೊಂದಿದೆ.

ರಾಹುಲ್ ದ್ರಾವಿಡ್ ಅವರು ವಿದೇಶದಲ್ಲಿ ಇದ್ದ ಕಾರಣಕ್ಕೆ ಅವರು ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಎಸ್‌. ವಿಶ್ವನಾಥ್, ಜಿಕೆವಿಕೆ ಸಂಸ್ಥೆಯ ಪರವಾಗಿ ಕುಲಪತಿ ಎಸ್‌.ವಿ.ಸುರೇಶ್, ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು.

ವರ್ಟಿಕಲ್ ನಗರದ ಚಿಂತನೆ: ಮುಖ್ಯಮಂತ್ರಿ

ಬೆಂಗಳೂರು: ‘ಬೆಂಗಳೂರು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ನಗರ ವಿಸ್ತರಣೆ ಆಗುತ್ತಲೇ ಇದೆ. ಈ ನಗರಕ್ಕೆ ಬರುವವರನ್ನು ನಾವು ತಡೆಯಲು ಸಾಧ್ಯವಿಲ್ಲ. ಅದಕ್ಕೆ ವರ್ಟಿಕಲ್ (ಲಂಬ) ಬೆಳವಣಿಗೆ ಬಗ್ಗೆ ಆಲೋಚನೆ ಮಾಡುತ್ತಿದ್ದೇನೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರು ಉತ್ತರ ಯಲಹಂಕ ಒಕ್ಕಲಿಗರ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನಲ್ಲಿ ವಿದ್ಯೆ, ಆರೋಗ್ಯ, ವೃತ್ತಿ ದೊರೆಯುತ್ತದೆ. ಇಲ್ಲಿ ಪ್ರತಿಯೊಬ್ಬರೂ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ಅನೇಕರು ಈ ನಗರಕ್ಕೆ ಬರುತ್ತಿದ್ದಾರೆ. ಎಲ್ಲ ಧರ್ಮ, ಜಾತಿಗಳಿಗೆ ಇಲ್ಲಿ ಬದುಕನ್ನು ಕಟ್ಟಿಕೊಳ್ಳಲು ನಾವು ಆಸ್ಪದ ನೀಡಬೇಕಿದೆ. ದೇಹಕ್ಕೆ ಹೃದಯ ಮುಖ್ಯ. ಅದೇ ರೀತಿ ರಾಜ್ಯಕ್ಕೆ ಬೆಂಗಳೂರು ಮುಖ್ಯ’ ಎಂದರು.

ಆನಂತರ ವೇದಿಕೆ ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘಕ್ಕೆ ರಿಯಾಯಿತಿ ದರದಲ್ಲಿ ಕೆಎಚ್‌ಬಿ ನಿವೇಶನ ನೀಡುವುದಾಗಿ ಘೋಷಣೆ ಮಾಡಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಶಿವಕುಮಾರ್, ಪ್ರತಿಮೆಯ ಪಾದವನ್ನು ಮುಟ್ಟಿ ನಮಸ್ಕರಿಸಿ, ಪುಷ್ಪಾರ್ಚನೆ ಮಾಡಿದರು. ನಂತರ ಪ್ರತಿಮೆಯ ಪಕ್ಕದಲ್ಲಿ ನಿರ್ಮಾಣ ಮಾಡಿರುವ ಥೀಮ್ ಪಾರ್ಕ್ ಅನ್ನು ವೀಕ್ಷಿಸಿದರು.

ವಿಧಾನಸೌಧದ ಮುಂದಿರುವ ಕುದುರೆಯ ಮೇಲೆ ವಿರಾಜಮಾನರಾಗಿರುವ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

‘ಬೆಂಗಳೂರು ನಿರ್ಮಿಸಿದ, ಪೇಟೆಗಳನ್ನು ಕಟ್ಟಿದ, ಕೆರೆಗಳನ್ನು ನಿರ್ಮಿಸಿ ಹೊಸ ಚರಿತ್ರೆ ಸೃಷ್ಟಿಸಿರುವ ಕೆಂಪೇಗೌಡರು ಒಕ್ಕಲಿಗರಾಗಿ ಹುಟ್ಟಿ ವಿಶ್ವಮಾನವನಾಗಿ ಬೆಳೆದವರು’ ಎಂದು ಶಿವಕುಮಾರ್ ಬಣ್ಣಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆ ಸಾಧ್ಯತೆ

ಪ್ರೌಢಶಾಲಾ ಹಂತದಲ್ಲೇ ವೃತ್ತಿ ಶಿಕ್ಷಣ

ಬೆಂಗಳೂರು: ಪ್ರೌಢಶಾಲಾ ಹಂತದಲ್ಲೇ ವೃತ್ತಿ ಶಿಕ್ಷಣ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದ್ದು, ಇದೇ ಶೈಕ್ಷಣಿಕ ವರ್ಷದಿಂದಲೇ 300 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಜಾರಿಯಾಗಲಿದೆ.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ ಹಾಗೂ ಗಣಿತ (ಸ್ಟೆಮ್) ಶಿಕ್ಷಣವನ್ನು ಪರಿಚಯಿಸುತ್ತಿದೆ. ಸ್ಟೆಮ್ ಶಿಕ್ಷಣವು ಪ್ರಯೋಗ ಹಾಗೂ ಯೋಜನೆ ಆಧರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡುತ್ತದೆ. ಪಠ್ಯಪುಸ್ತಕಗಳನ್ನು ಓದಿ ಬರೆಯುವ ಸಾಂಪ್ರದಾಯಿಕ ವಿಧಾನಕ್ಕಿಂತ ಪರಿಕಲ್ಪನೆಗಳನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಅರ್ಥೈಸುವುದು ಇದರ ಪ್ರಮುಖ ಉದ್ದೇಶ. ಈ ಪಠ್ಯಕ್ರಮದಲ್ಲಿ ರೋಬೋಟಿಕ್ಸ್ ಮತ್ತು ಕೋಡಿಂಗ್‌ಗೂ ಸ್ಥಾನ ನೀಡಲಾಗಿದ್ದು, ವಿದ್ಯಾರ್ಥಿಗಳಲ್ಲಿ ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ಬೆಳೆಸುವುದರ ಜತೆಗೆ ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸತನದ ಬಗ್ಗೆ ಆಸಕ್ತಿ ಮೂಡಿಸಲಾಗುತ್ತದೆ. ಸೃಜನಶೀಲತೆಯನ್ನು ಉತ್ತೇಜಿಸುತ್ತದೆ.

ರೈತ ಸಂತೆ: ಕೃಷಿ ವೈವಿಧ್ಯ ಅನಾವರಣ

ಗಾಂಧಿ ಕೃಷಿ ವಿಜ್ಞಾನ ಕೇಂದ್ರ: ಚಿಣ್ಣರ ಎತ್ತಿನ ಬಂಡಿ ಸವಾರಿ, ಖರೀದಿ ಜೋರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹಸಿ ಅವರೆಕಾಳು ಸಿಪ್ಪೆ ತೆಗೆವ ಯಂತ್ರ ಆಕರ್ಷಣೆ
- ಮೇಘಾಲಯ ಅರಿಶಿನದ ವಿಶಿಷ್ಟ ವಾಸನೆ
- 'ಗಿರ್' ಗಿಣ್ಣು, ಗೋಧಿ ಪಾಯಸದ ಸ್ವಾದ

ಬೆಂಗಳೂರು: ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಶನಿವಾರ ನಡೆದ 'ರೈತ ಸಂತೆ'ಗೆ ಜಮಾಯಿಸಿದ ಗ್ರಾಹಕರು ಸೊಪ್ಪು, ತರಕಾರಿ- ಹಣ್ಣುಗಳನ್ನು ಕೊಂಡರು. 'ಗಿರ್' ತಳಿಯ ಗಿಣ್ಣು, ಗೋಧಿ ಪಾಯಸ ಸೇರಿದಂತೆ ವಿಶೇಷ ತಿನಿಸು ಸವಿದು, ವೈವಿಧ್ಯಮಯ ಕೃಷಿ ಲೋಕವನ್ನು ಕಣ್ತುಂಬಿಕೊಂಡರು. ಚಿಣ್ಣರು ಎತ್ತಿನ ಬಂಡಿ ಸವಾರಿ ಮಾಡಿದರು.

ಆರೋಗ್ಯಕರ ಆಹಾರ, ಪೌಷ್ಟಿಕಾಂಶದ ಮಾಹಿತಿ ಪಡೆದ ಗ್ರಾಹಕರು, ಅವಕಾಡೊ ಅರ್ಥಾತ್ ಬೆಣ್ಣೆಹಣ್ಣಿನ (ಬಟರ್‌ಫ್ರೂಟ್) ಮಹತ್ವವನ್ನು ಅರಿತರು. ನಾರಿನಾಂಶ, ಪೊಟ್ಯಾಷಿಯಂ, ವಿಟಮಿನ್–ಇ ಹಾಗೂ ಉತ್ಕರ್ಷಣ ನಿರೋಧಕ ಅಂಶಗಳ ಹಣ್ಣಿನ ಸಮೃದ್ಧತೆ ಹೃದಯದ ಆರೋಗ್ಯಕ್ಕೆ ಎಷ್ಟು ಅವಶ್ಯಕ ಎಂಬುದನ್ನು ಸಿಬ್ಬಂದಿ ವಿವರಿಸಿದರು.

ಹಸಿ ಅವರೆಕಾಳು ಸಿಪ್ಪೆ ತೆಗೆಯುವ ಯಂತ್ರ ಆಕರ್ಷಿಸಿದರೆ, 'ಗಿರಿರಾಜ' ತಳಿಯ ಕೋಳಿಗಳನ್ನು ಹೋಲುವ 'ಸ್ವರ್ಣಧಾರಾ' ತಳಿ ಗಮನ ಸೆಳೆಯಿತು.

ಮಲೆನಾಡಿನಲ್ಲಿ ಬೆಳೆಯುವ ಮೇಘಾಲಯ ಅರಿಶಿನದ ವಿಶಿಷ್ಟ ವಾಸನೆ– ಗಾಢ ಹಳದಿ ಬಣ್ಣಕ್ಕೆ ಮನಸೋತ ಗ್ರಾಹಕರು, ಸೇಬು, ಬೀಟ್‌ರೂಟ್ ಹಾಗೂ ಕ್ಯಾರೆಟ್‌ನಿಂದ ಮಾಡಿದ ಕೃಷಿಕ ನ್ಯಾಚುರಲ್‌ನ ಪಾನೀಯದ ರುಚಿ ನೋಡಿದರು. ವೈವಿಧ್ಯದ ಬದನೆ, ಬೆಂಡೆ, ಸೌತೆ, ಹೀರೇ, ಸೋರೆ, ಹಾಗಲ, ದೊಡ್ಡ ಮೆಣಸು, ಹಸಿ ಮೆಣಸಿನಕಾಯಿಯನ್ನು ಖರೀದಿಸಿದರು.

ಸಿರಿಧಾನ್ಯ ಉತ್ಪನ್ನಗಳು, ಸಾವಯವ ವಸ್ತುಗಳು, ಸುಗಂಧ ಮತ್ತು ಔಷಧೀಯ ಸಸ್ಯ, ಅಲಂಕಾರಿಕ ಗಿಡಗಳು, ಮೀನುಗಳು, ಗೊಬ್ಬರ, ಕರಕುಶಲ ವಸ್ತುಗಳು, ಅಡಿಕೆ- ರೇಷ್ಮೆ ಉತ್ಪನ್ನಗಳು, ಜೇನು ತುಪ್ಪ ಕೊಂಡರು.

ಸಂತೆಗೆ ಕೃಷಿ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎಸ್.ವಿ.ಸುರೇಶ ಚಾಲನೆ ನೀಡಿದರು. ವಿಸ್ತರಣಾ ನಿರ್ದೇಶಕ ವೈ.ಎನ್.ಶಿವಲಿಂಗಯ್ಯ, ಸಹಾಯಕ ನಿರ್ದೇಶಕ ಕೆ.ಪಿ.ರಘುಪ್ರಸಾದ್ ಪಾಲ್ಗೊಂಡಿದ್ದರು.



ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಶನಿವಾರ ನಡೆದ 'ರೈತ ಸಂತೆ'ಯಲ್ಲಿ ಖರೀದಿ ನಡೆಸಿದ ನಾಗರಿಕರು

ಸುದ್ದಿ 2 ನಿಮಿಷ

ವಿಶ್ವನಾಥ್ ವಿರುದ್ಧ ಯಲಹಂಕದಲ್ಲೂ ಸ್ಪರ್ಧೆ: ಸಂಸದ ಕೆ. ಸುಧಾಕರ್

ಬೆಂಗಳೂರು: ಯಲಹಂಕ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಸಂಸದ ಕೆ.ಸುಧಾಕರ್, 'ಅವರ ವಿರುದ್ಧ ಯಲಹಂಕದಿಂದಲೂ ಸ್ಪರ್ಧಿಸಲು ಸಿದ್ಧ' ಎಂದು ಸವಾಲು ಹಾಕಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವ ಹೇಳಿಕೆ ನೀಡಿದ್ದಾರೆ. ಅವರ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಯಾವ ಪಕ್ಷದಿಂದ ನಿಂತರೂ ಅವರನ್ನು ಎದುರಿಸುತ್ತೇನೆ. ಬಿಜೆಪಿ ಅವಕಾಶ ನೀಡಿದರೆ ಯಲಹಂಕದಿಂದಲೂ ಸ್ಪರ್ಧಿಸಿ ಅವರನ್ನು ಸೋಲಿಸಲು ಸಿದ್ಧ. ನಾನು ಪಕ್ಷದ ಕಟ್ಟಾಳು. ಅವರು ಬಯಸಿದರೆ ಪಕ್ಷೇತರವಾಗಿ ನಿಂತು ಸೆಣಸಲೂ ಅಭ್ಯಂತರವಿಲ್ಲ' ಎಂದರು.



'ಯಲಹಂಕದ ಒಕ್ಕಲಿಗ ಸಮುದಾಯ ಇಲ್ಲಿಯವರೆಗೂ ಅವರ ಜತೆ ನಿಂತಿದೆ. ಸಮುದಾಯದ ಜತೆ ಗೌರವದಿಂದ ನಡೆದುಕೊಳ್ಳದಿದ್ದರೆ ಭವಿಷ್ಯದಲ್ಲಿ ಅವರೇ ಸಮಸ್ಯೆ ಎದುರಿಸುತ್ತಾರೆ. ಅಂತಹ ಗೌರವವನ್ನು ಕಳೆದುಕೊಳ್ಳಬಾರದು. ಅವರ ಅಣತಿಯಂತೆ ನಾನು ನಡೆಯಬೇಕು ಎಂದು ಅವರು ಬಯಸಿದ್ದರೆ ಅದು ತಪ್ಪು. ನಾನು ಎಂದಿಗೂ ಅವರ ಅಡಿಯಾಳಲ್ಲ' ಎಂದು ಹೇಳಿದರು.

ತರಬೇತಿ ಅವಧಿ ಇಳಿಸಲು ಅನುಮತಿ ಕೋರಿ ಪತ್ರ

ಬೆಂಗಳೂರು: 'ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆ ತರಬೇತಿ ಅವಧಿಯನ್ನು ಒಂದು ತಿಂಗಳಿಂದ ಆರು ದಿನಗಳಿಗೆ ಇಳಿಸಬೇಕು ಮತ್ತು ಈಗ ತಿಂಗಳಿಗೆ ನೀಡುತ್ತಿರುವ ₹5,000 ಶಿಷ್ಯವೇತನವನ್ನೇ ಆರು ದಿನಗಳ ತರಬೇತಿಗೂ ನೀಡಬೇಕು. ಈ ಬದಲಾವಣೆಗೆ ಅನುಮತಿ ನೀಡಿ' ಎಂದು ಕೋರಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆದಿದೆ.

'100 ಎಸ್‌ಸಿ ಅಭ್ಯರ್ಥಿಗಳಿಗೆ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆ ತರಬೇತಿ ನೀಡಲು ₹33 ಲಕ್ಷ ಅನುದಾನ ಲಭ್ಯವಿದೆ. ಆದರೆ, ಒಂದು ತಿಂಗಳ ತರಬೇತಿಗೆ ₹5,000 ಶಿಷ್ಯವೇತನ ನಿಗದಿಪಡಿಸಲಾಗಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೂ (ಎಂಎಸ್‌ಎಂಇ ಮತ್ತು ಗಣಿ) ನಿಗಮ ಈ ಪತ್ರ ರವಾನಿಸಿದೆ.

'ಪ್ರಗತಿಯ ಬುನಾದಿ ಹಾಕಿದ ಕೆಂಪೇಗೌಡರು'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ನಗರದ ಪ್ರಗತಿಗೆ ಅಡಿಪಾಯ ಹಾಕಿಕೊಟ್ಟ ದೂರದೃಷ್ಟಿ ಆಡಳಿತಗಾರ ಕೆಂಪೇಗೌಡರು. ಅವರು ನಿರ್ಮಿಸಿದ ಬೆಂಗಳೂರು ಈಗ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ಕೆಂಪೇಗೌಡ ಜಯಂತಿ ಪ್ರಯುಕ್ತ ಮಲ್ಲಸಂದ್ರದ ಪೈಪ್ ಲೈನ್ ಮುಖ್ಯರಸ್ತೆಯ ಶನಿಮಹಾತ್ಮೆ ದೇವಸ್ಥಾನದ ಮುಂಭಾಗವಿರುವ ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಮಾತನಾಡಿದರು.

'ಕೆಂಪೇಗೌಡರು ಕೇವಲ ಒಕ್ಕಲಿಗ ಜನಾಂಗಕ್ಕೆ ಸೀಮಿತವಾಗದೆ, ಎಲ್ಲ ಸಮುದಾಯದ ಜನಾಂಗಕ್ಕೂ ಸೇರಿದವರಾಗಿದ್ದಾರೆ. ವ್ಯಾಪಾರಕ್ಕೆ ಅನುಕೂಲವಾಗುವಂತೆ ನಿರ್ಮಿಸಿದ ಅರಳೇಪೇಟೆ, ಕುಂಬಾರಪೇಟೆ, ಅಕ್ಕಿಪೇಟೆ, ಚಿಕ್ಕಪೇಟೆ, ತರಗುಪೇಟೆ, ಉಪ್ಪಾರಪೇಟೆ ಹೀಗೆ ಸುಮಾರು 30ಕ್ಕೂ ಹೆಚ್ಚು ಪೇಟೆ ನಿರ್ಮಿಸಿದ ಖ್ಯಾತಿ ಅವರಿಗಿದೆ. ಕೆರೆಗಳು, ಉದ್ಯಾನಗಳು, ರಸ್ತೆಗಳು, ದೇವಸ್ಥಾನಗಳು, ಕಲ್ಯಾಣಿಗಳು, ಮಂಟಪಗಳು ಅವರ ಕೊಡುಗೆಗೆ ಇಂದಿಗೂ ಜೀವಂತ ಸಾಕ್ಷಿಯಾಗಿವೆ' ಎಂದರು. ಸ್ಥಳೀಯ ಮುಖಂಡರಾದ ಕಾರ್ಲೆ ನಂಜಪ್ಪ, ಟಿ. ಶಿವಕುಮಾರ್, ಲಕ್ಷ್ಮಣ್ ಗೌಡ, ಶೆಟ್ಟಿಹಳ್ಳಿ ಸುರೇಶ್, ವಿನೋದ್ ಗೌಡ, ಬಿ.ಟಿ. ಶ್ರೀನಿವಾಸ್, ಹುಚ್ಚರಂಗಯ್ಯ, ಪಾಂಡುರಂಗ ರಾವ್, ಉಮಾದೇವಿ ನಾಗರಾಜು, ಪದಾಧಿಕಾರಿಗಳಾದ ಬಲರಾಮ್ ಶರ್ಮ, ಸಿ.ಎನ್. ದಯಾನಂದ್, ಆನಂದ್, ನಾಗರಾಜು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಎಸ್‌.ಮುನಿರಾಜು ಅವರು ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು

ಕೆಂಪೇಗೌಡ ಜಯಂತಿ ಬಿಜೆಪಿ ಬಣಗಳ ಪ್ರತಿಷ್ಠೆ

ಪ್ರಜಾವಾಣಿ ವಾರ್ತೆ

ಯಲಹಂಕ: ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಆಚರಣೆಯು ಯಲಹಂಕದಲ್ಲಿ ಬಿಜೆಪಿಯ ಬಣಗಳ ನಡುವಿನ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿತು. ಶಾಸಕ ಎಸ್.ಆರ್. ವಿಶ್ವನಾಥ್ ಮತ್ತು ಸಂಸದ ಕೆ. ಸುಧಾಕರ್ ಬೆಂಬಲಿಗರು ಪ್ರತ್ಯೇಕವಾಗಿ ಜಯಂತಿ ಆಚರಿಸಿದರು.

ಒಂದೇ ಪಕ್ಷದ ಇಬ್ಬರು ಪ್ರಮುಖ ನಾಯಕರ ಬೆಂಬಲಿಗರು ಪ್ರತ್ಯೇಕ ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತಮ್ಮ ರಾಜಕೀಯ ಪ್ರಾಬಲ್ಯ ಪ್ರದರ್ಶಿಸಲು ಮುಂದಾದರು.

ಎಸ್.ಆರ್. ವಿಶ್ವನಾಥ್ ನೇತೃತ್ವದ ತಂಡ ನಗರದ ವಿವಿಧ ಭಾಗಗಳಿಂದ ಭವ್ಯ ಮೆರವಣಿಗೆ ನಡೆಸಿ, ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಾರ್ವಜನಿಕ ಸಭೆ ನಡೆಸಿತು. ಕಾರ್ಯಕ್ರಮದಲ್ಲಿ ಸಾವಿರಾರು ಕಾರ್ಯಕರ್ತರು, ವಿವಿಧ ಸಂಘಟನೆಗಳ ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಇನ್ನೊಂದೆಡೆ ಕೆ.ಸುಧಾಕರ್ ಬೆಂಬಲಿಗರು ಪ್ರತ್ಯೇಕವಾಗಿ ಜಯಂತಿ ಆಚರಿಸಿ, ಕೆಂಪೇಗೌಡರ ಆದರ್ಶಗಳನ್ನು ಜನರಿಗೆ ತಲುಪಿಸುವ ಸಂಕಲ್ಪ ಮಾಡಿದರು. ಕಾರ್ಯಕ್ರಮದಲ್ಲಿ ಸಮಾಜದ ವಿವಿಧ ಮುಖಂಡರು, ಕಾರ್ಯಕರ್ತರು ಹಾಗೂ ಸಮುದಾಯದ ಗಣ್ಯರು ಭಾಗವಹಿಸಿದ್ದರು.

ಉದ್ಘಾಟನೆ: ಯಲಹಂಕ ಉಪನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, 'ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗನಾಗಿ ಆದರೂ ಬೆಳೆದಿದ್ದು ವಿಶ್ವಮಾನವನಾಗಿ. ಇದನ್ನು ಯಾರೂ ಸಹ ಮರೆಯಬಾರದು. ಈ ಹಾದಿಯಲ್ಲಿಯೇ ನಾವೆಲ್ಲರೂ ನಡೆಯಬೇಕು' ಎಂದು ಕರೆ ನೀಡಿದರು.

'ಸಚಿವ ಕೃಷ್ಣ ಬೈರೇಗೌಡ ಅವರು ವಿಮಾನ ನಿಲ್ದಾಣ ರಸ್ತೆಯಲ್ಲೇ ಬೆಂಗಳೂರು ಉತ್ತರ ನಗರಪಾಲಿಕೆ ಕಚೇರಿಯನ್ನು ಕಟ್ಟಬೇಕೆಂದು ಜಾಗ ನಿಗದಿ ಮಾಡಿದ್ದಾರೆ. ಬೆಂಗಳೂರು ಅಭಿವೃದ್ಧಿ ಎಂದರೆ ಜನಸಾಮಾನ್ಯರ ಅಭಿವೃದ್ಧಿ ಹಾಗೂ ಆಸ್ತಿಯಾಗಿದ್ದು, ಇದನ್ನು ಉಳಿಸಲು ಸರ್ಕಾರ ಪ್ರಯತ್ನಿಸಲಿದೆ' ಎಂದು ಹೇಳಿದರು.

'ಕೆಎಚ್‌ಬಿ ವತಿಯಿಂದ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಂಘಕ್ಕೆ ನೀಡಿರುವ ನಿವೇಶನಕ್ಕೆ ₹ 3.5 ಕೋಟಿ ಕಟ್ಟಬೇಕು ಎಂದು ಹೇಳಲಾಗಿತ್ತು. ಇದರ ಬಗ್ಗೆ ಸಂಸದ ಸುಧಾಕರ್ ಹಾಗೂ ಮಾಜಿ ಶಾಸಕ ಗಂಟಾಗಾನಹಳ್ಳಿ ಕೃಷ್ಣಪ್ಪ ಅವರು ದರ ಕಡಿಮೆ ಮಾಡುವಂತೆ ಮನವಿ ಮಾಡಿದ್ದಾರೆ. ಎಲ್ಲರ ಮನವಿಯಂತೆ ಈ ಜಾಗಕ್ಕೆ ಶೇ 10ರಷ್ಟು ದರ ನಿಗದಿ ಮಾಡಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಅವರು ವೇದಿಕೆಯಲ್ಲೇ ರಿಯಾಯಿತಿ ಘೋಷಣೆ ಮಾಡಿದರು.

ಬೆಂಗಳೂರು ರೇಸ್

ವೇಗತ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವೇಗತ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ಯಾಲಿಕ್ಸ್ 2, ಪ್ರಿವ್ಯೂ 7, ಆಸ್ಪೀಸಿಯಸ್ ಕಿಂಗ್ 1
2ನೇ ರೇಸ್: ಮ್ಯಾಗ್ನ ಕಾರ್ಟ 4, ಮಿಚಿಕೊ 6, ಸೀ ಡೈಮಂಡ್ 2
3ನೇ ರೇಸ್: ಸ್ಟೀಲಿ ಚಾಲೆಂಜ್ 5, ಲಾಟ್ಸ್ ಆಫ್ ಲಕ್ 7, ಕ್ವೀನ್‌ಡಂ 1
4ನೇ ರೇಸ್: ನಾಟಿ ಚಾರ್ಮರ್ 1, ರೀಕೊ 5, ಡ್ರೀಮ್ ಸೆಲ್ಲರ್ 3
5ನೇ ರೇಸ್: ವೇಗತ 3, ಲಕ್ಸ್ ಎಟರ್ನ 7, ಮೆಹ್ಲರ್ 2
6ನೇ ರೇಸ್: ನೋಬಲ್ ಕಾಸ್ 3, ಕ್ಯಾರಟ್ ಲವ್ 5, ಇಲ್ ವೊಲೊ 4
7ನೇ ರೇಸ್: ಆಬ್ಸೊಲ್ಯೂಟ್ ಥಂಡರ್ 7, ಕ್ಯಾರಟ್ ಲವ್ 5, ಪ್ಲೆಡ್ಜ್ 1

ಉತ್ತಮ ಬೆಟ್: ಕ್ಯಾಲಿಕ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ: ಯುವ ಕಾಂಗ್ರೆಸ್ ನೇತೃತ್ವದಲ್ಲಿ ಪಂಜಿನ ಮೆರವಣಿಗೆ

ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದ ವಿದ್ಯಾರ್ಥಿಗಳ ಸಾವಿಗೆ ಕಾರಣರಾದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಯುವ ಕಾಂಗ್ರೆಸ್ ರಾಜ್ಯ ಘಟಕದ (ಕೆಪಿವೈಸಿ) ವತಿಯಿಂದ ಪಂಜಿನ ಮೆರವಣಿಗೆ ಶನಿವಾರ ನಡೆಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು, ಯುವಕರು ಪಂಜು ಹಿಡಿದು, 'ವಿದ್ಯಾರ್ಥಿಗಳ ಭವಿಷ್ಯ ಉಳಿಸಿ', 'ಪಾರದರ್ಶಕ ಶಿಕ್ಷಣ ವ್ಯವಸ್ಥೆ ಜಾರಿಗೊಳಿಸಿ', 'ನೀಟ್ ಅಕ್ರಮ ಕುರಿತು ನ್ಯಾಯಯುತ ತನಿಖೆ ನಡೆಸಿ' ಎಂಬ ಘೋಷಣೆಗಳನ್ನು ಕೂಗಿದರು.

ಈ ವೇಳೆ ಮಾತನಾಡಿದ ಮಂಜುನಾಥ್, 'ಪಾರದರ್ಶಕ, ಭ್ರಷ್ಟಾಚಾರ ಮುಕ್ತ ಮತ್ತು ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆ ರೂಪಿಸುವುದು ಕೇಂದ್ರದ ಜವಾಬ್ದಾರಿ. ಆದರೆ, ಅದನ್ನು ಮರೆತಿರುವ ಕೇಂದ್ರ ಬಿಜೆಪಿ ನಾಯಕರು 23 ಲಕ್ಷ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೊಳ್ಳಿ ಇಟ್ಟಿದ್ದಾರೆ' ಎಂದರು. ಜತೆಗೆ ಯುವ ಕಾಂಗ್ರೆಸ್ ಹೋರಾಟ ತಾರ್ಕಿಕ ಅಂತ್ಯ ತಲುಪುವ ವರೆಗೂ ವಿದ್ಯಾರ್ಥಿಗಳ ಜೊತೆ ನಿಲ್ಲಲಿದೆ ಎಂದರು.



ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ನೇತೃತ್ವದಲ್ಲಿ ಶನಿವಾರ ಪಂಜಿನ ಮೆರವಣಿಗೆ ನಡೆಯಿತು

ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ತಾರೀಖ್ ಭಾಗವಾನ್, ಕಾನೂನು ಘಟಕದ ಅಧ್ಯಕ್ಷ ಶ್ರೀಧರ್, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ರಾಹುಲ್ ಗೌಡ, ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಮೋನೀಶ್ ರೆಡ್ಡಿ, ಪೂರ್ವ ಜಿಲ್ಲಾ ಘಟಕದ ಅಧ್ಯಕ್ಷ ರಾಮ್ ನಾಯಕ್ ಮತ್ತಿತರರು ಇದ್ದರು.

ನಗರದಲ್ಲಿ ಇಂದು

ಮರಗಳಿಗಾಗಿ 10 ಕಿ.ಮೀ, 5 ಕಿ.ಮೀ ಓಟ, 3 ಕಿ.ಮೀ ವಾಕಥಾನ್: ಆಯೋಜನೆ: ಗ್ರೀನ್ ಪಾಥ್ ಕಮ್ಯುನಿಟಿ, ಸ್ಥಳ: ಸರ್ಕಾರಿ ಪಿಯು ಕಾಲೇಜು, 18ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 5.30

'ಸಿ.ಎ' ದಿನಾಚರಣೆ ಪ್ರಯುಕ್ತ ಸಿ.ಎ ಓಟ: ಉದ್ಘಾಟನೆ: ಕವಿತಾ ಪರಮೇಶ್, ಶ್ರೀಪಾದ್ ಎಚ್.ನಾರಾಯಣ, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಸ್ಥಳ: ಐಸಿಎಐ ಭವನ್, ವಸಂತನಗರ, ಬೆಳಿಗ್ಗೆ 6.30

3 ಪಥದ ಜೋಡಿ ಸುರಂಗ ರಸ್ತೆ ಕಾಮಗಾರಿ ಶಂಕುಸ್ಥಾಪನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಜಿ. ಪರಮೇಶ್ವರ, ಬಿ.ಎಸ್. ಸುರೇಶ್, ಎನ್.ಎ.ಹ್ಯಾರಿಸ್, ಸ್ಥಳ: ಹೆಬ್ಬಾಳ ಜಂಕ್ಷನ್, ಬೆಳಿಗ್ಗೆ 9

ಸಾಮೂಹಿಕ ಸೀಮಂತ ಕಾರ್ಯಕ್ರಮ: ಆಯೋಜನೆ: ಸಿರಿಮನೆ ಫ್ಯಾಮಿಲಿ, ಸ್ಥಳ: ಶ್ರೀವಿಜಯ ವಿನಾಯಕ ಅಮರನಾಥೇಶ್ವರ ದೇವಾಲಯ, 1355/ಸಿ, 9ನೇ ಮೇನ್ ರಸ್ತೆ, 4ನೇ ಕ್ರಾಸ್, ಆರ್‌ಪಿಸಿ ಬಡಾವಣೆ, ವಿಜಯನಗರ 2ನೇ ಹಂತ, ಬೆಳಿಗ್ಗೆ 9

ಹಾರ್ಮೋನಿಯಂ ಹಬ್ಬ: ಬಿಜಾಪುರೆ ಹಾರ್ಮೋನಿಯಂ ಪ್ರತಿಷ್ಠಾನದ ವಿದ್ಯಾರ್ಥಿಗಳಿಂದ ಕಚೇರಿ, ವಾದನ: ಕೇದಾರ್ ನಫಡೆ, ಮಧುರೈ ಟಿ.ಎನ್.ಶೇಷಗೋಪಾಲನ್, ಎಂ.ಬಿ. ಪ್ರಕಾಶ್, ರವಿ ಬೆಣ್ಣೆ, ಸಂಜೀವ್ ದಾಸ್ ಮಹಾಪಾತ್ರ, ಬದ್ರಿ ವಿಠ್ಠಲ, ಸುಭಾಷ್ ದಾಸಕ್ಕರ್, ರವೀಂದ್ರ ಗುರುರಾಜ್ ಕಟೋಟಿ, ಸಾಥ್: ಅನೂರು ಅನಂತಕೃಷ್ಣ ಶರ್ಮ, ಮೈಸೂರು ಶ್ರೀಕಾಂತ್, ಯೋಗೀಶ್ ಭಟ್, ಸುಮಿತ್ ನಾಯಕ್, ತೇಜಸ್ ಕಟೋಟಿ, ಸ್ಥಳ: ಗಾಯನ ಸಮಾಜ, ಬಸವನಗುಡಿ, ಬೆಳಿಗ್ಗೆ 9.30


'ಏಕಾದಶದಂಡಕ ಪುಷ್ಪಾಂಜಲಿ', 'ಭರತ ಭಕ್ತಿಕಾವ್ಯ' ಕೃತಿಗಳ ಲೋಕಾರ್ಪಣೆ: ಸಿ.ವಿ.ಶ್ರೀಮತಿ, ಸುರೇಶ ಪಾಟೀಲ, ಆಯೋಜನೆ: ವಾಗ್ದೇವಿ ಗಮಕಕಲಾ ಪ್ರತಿಷ್ಠಾನ, ಸ್ಥಳ: ಕುಮಾರವ್ಯಾಸ ಮಂಟಪ, 57ನೇ ಬಿ ಕ್ರಾಸ್, 4ನೇ ಬ್ಲಾಕ್, ರಾಜಾಜಿನಗರ, ಬೆಳಿಗ್ಗೆ 9.30

ರೋಟರಿ ಜಿಲ್ಲಾಧ್ಯಕ್ಷ ರವಿಶಂಕರ್ ಡಕೋಜು ಮತ್ತು ತಂಡದ ಪದಗ್ರಹಣ ಸಮಾರಂಭ: ಅತಿಥಿ: ಮನೇಕಾ ಗಾಂಧಿ, ಪಿಡಿಜಿ ಕೆ.ಪಿ.ನಾಗೇಶ್, ಆಯೋಜನೆ: ರೋಟರಿ, ಸ್ಥಳ: ಮಂಗಳ ಮಂಟಪ, ಎನ್‌ಎಂಕೆಆರ್‌ವಿ ವಿದ್ಯಾಲಯ, ಜಯನಗರ, ಬೆಳಿಗ್ಗೆ 9.30

'ಅರ್ಬುದನ ಡೈರಿ' ಕೃತಿ ಜನಾರ್ಪಣೆ: ಮುಖ್ಯ ಅತಿಥಿ: ಆರ್.ಕೆ.ಸರೋಜಾ, ಕೆ.ಎಸ್.ಪ್ರಭಾ, ಇಂದಿರಾ, ಲೇಖಕಿ: ಚಂಪಾ ಜಯಪ್ರಕಾಶ್, ಸ್ಥಳ: ಎಐಇಎ ಎಂಪ್ಲಾಯೀಸ್ ಯೂನಿಯನ್ ಆಫೀಸ್, ಸುಧಾಮ ನಗರ, ಬೆಳಿಗ್ಗೆ 10

ಗೋವಿಂದ ಜಾಲಿಹಾಳ್ ಭಕ್ತಿಗೀತೆಗಳ ಗಾಯನ ಸ್ಪರ್ಧೆ, ಬಹುಮಾನ ಪ್ರದಾನ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10

ಸಮಗ್ರ ಮತದಾರರ ಪರಿಷ್ಕರಣೆ.. ಮುಂದೇನು? ಸಾಂಸ್ಕೃತಿಕ ರಂಗದ ವಿಶ್ಲೇಷಣೆ: ಮೂಡ್ನಾಕೂಡು ಚಿನ್ನಸ್ವಾಮಿ, ಮಾವಳ್ಳಿ ಶಂಕರ್, ಎಚ್. ಜನಾರ್ದನ್, ಶ್ರೀಪಾದ್ ಭಟ್, ಯು.ಟಿ.ಫರ್ಜಾನಾ, ಬಿ.ಆರ್.ಮಂಜುನಾಥ್, ಬಿ.ಸಿ. ಬಸವರಾಜು, ವಿನಯ್ ಶ್ರೀನಿವಾಸ, ರವಿಕುಮಾರ್ ಬಾಗಿ, ಆಯೋಜನೆ: ಸಮುದಾಯ ಕರ್ನಾಟಕ, ಸ್ಥಳ: ಮೈಲಾರ ಮಹಾದೇವ ಮುಖ್ಯ ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 10



ಮೂಡ್ನಾಕೂಡು ಚಿನ್ನಸ್ವಾಮಿ

ನೃತ್ಯ ಸಮ್ಮಿಲನ: ಭರತನಾಟ್ಯ: ಮಾನಸ ರಂಗ, ದಿವ್ಯಾ ವಿಜಯಲಕ್ಷ್ಮಿ, ಅತಿಥಿ: ಭಾರದ್ವಾಜ್ ದಯಾನಿಧಿ, ಗುರುರಾಜ್ ವಶಿಷ್ಠ, ಆಯೋಜನೆ: ನಟನಂ ನೃತ್ಯ ಸಂಸ್ಥೆ, ಸ್ಥಳ: ಮೆಡೈ ದ ಸ್ಟೇಜ್, ಮ್ಯೂಸಿಯಂ ರಸ್ತೆ, ಶಾಂತಲಾ ನಗರ, ರಿಚ್‌ಮಂಡ್ ಟೌನ್, ಬೆಳಿಗ್ಗೆ 10

ಕೋಟಿ ಚೆನ್ನಯ ಕ್ರೀಡಾಕೂಟ: ಉದ್ಘಾಟನೆ: ಎನ್. ನಾಗರಾಜು, ಅಧ್ಯಕ್ಷತೆ: ಎಂ.ರಮೇಶ್ ಬಂಗೇರ, ಎಸ್. ಧ್ರುವಿ, ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣ, ಜಯನಗರ, ಬೆಳಿಗ್ಗೆ 10

ಶ್ರೀಪಾದರಾಜರ ಮಧ್ಯಾರಾಧಾನ ಮಹೋತ್ಸವ: ಶ್ರೀಪಾದರಾಜ ಮಹಿಮೆ: ಕಲ್ಲಾಪುರ ಪವಮಾನಾಚಾರ್ಯ, ಆಯನೂರು ಮಧುಸೂದನಾಚಾರ್ಯ, ದಾಸವಾಣಿ: ವಿದ್ಯಾ ದೇಶಪಾಂಡೆ, ಆಯೋಜನೆ ಮತ್ತು ಸ್ಥಳ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ರಾಜಾನುಕುಂಟೆ ಸಮೀಪ, ಯಲಹಂಕ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನ: ಬೆಳಿಗ್ಗೆ 10ರಿಂದ ಮಧ್ಯಾಹ್ನ 3.30 ರವರೆಗೆ ಮೂರು ಕಾವ್ಯ ಗೋಷ್ಠಿಗಳು, ಮಧ್ಯಾಹ್ನ 3.45ಕ್ಕೆ ಸಮಾರೋಪ: ಭಾಷಣ: ಒ.ಎಲ್. ನಾಗಭೂಷಣಸ್ವಾಮಿ, ಅತಿಥಿ: ಉದಯನ್ ವಾಜಪೇಯಿ, ಮೋಹನ್ ಕೊಂಡಜ್ಜಿ, ಕೆ.ಎನ್. ಶ್ರೀನಿವಾಸ ಜೋಗಿ, ಅಧ್ಯಕ್ಷತೆ: ಬರಗೂರು ರಾಮಚಂದ್ರಪ್ಪ, ಆಯೋಜನೆ: ಬಹುಮುಖಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ.



ಒ.ಎಲ್. ನಾಗಭೂಷಣಸ್ವಾಮಿ

ಘಂಟಸಾಲ ನೆನಪಿನ ಉಪನ್ಯಾಸ, ಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ಜಯಶಂಕರ್ ಪ್ರಕಾಶ್, ಅತಿಥಿ: ಡಿ.ಬಿ.ಮಲ್ಲಿಕಾರ್ಜುನ ಮಹಾಮನೆ, ಎಚ್. ಎಸ್.ಶಿವಲಿಂಗಯ್ಯ, ಬಿ.ಶಾಂತಕುಮಾರ್, ಆಯೋಜನೆ: ರಂಗಮಂಡಲ ಕಲಾಚಂದಿರ ಕಲಾಮಂದಿರ ಟ್ರಸ್ಟ್, ಸ್ಥಳ: ಸಿವಗಂಗ ರಂಗ ಮಂದಿರ, ಸರ್ ಎಂ.ವಿ ಬಡಾವಣೆ, ಕೆಂಗೇರಿ ಉಪನಗರ, ಬೆಳಿಗ್ಗೆ 10.30

ಶಿವಾಜಿ ಜಯಂತಿ: ಅಧ್ಯಕ್ಷತೆ: ಪಿಜಿಆರ್ ಸಿಂಧ್ಯಾ, ಅತಿಥಿ: ರಿಜ್ವಾನ್ ಅರ್ಷದ್, ಸುರೇಶ್ ರಾವ್ ಸಾತೆ, ಪೆರಿಯಸ್ವಾಮಿ, ಆಯೋಜನೆ: ವಿಜೈ ಭವಾನಿ ವೆಲ್‌ಫೇರ್ ಅಸೋಸಿಯೇಷನ್, ಸ್ಥಳ: ಕೆಕೆಎಂಪಿ ಕಲ್ಯಾಣ ಮಂಟಪ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 10.30

ರಾಜ್ಯಮಟ್ಟದ ಜಾನಪದ ಸಮ್ಮೇಳನ: ಉದ್ಘಾಟನೆ: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಸಾ.ಮ.ಶಿವಮಲ್ಲಯ್ಯ, ಅತಿಥಿ: ಆಗುಂಬೆ ಎಸ್.ನಟರಾಜ್, ಆಶಾ ಶಿವುಗೌಡ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರಂ, ಬೆಳಿಗ್ಗೆ 10.45



ಬಂಜಗೆರೆ ಜಯಪ್ರಕಾಶ್

'ಸಾವಿರ ಸಂಭ್ರಮ'– ಎಸ್. ಎನ್.ಜಯಂತ್ ಸ್ಮರಣಾರ್ಥ ದತ್ತಿ ಉಪನ್ಯಾಸ: ಸಿ.ಸೋಮಶೇಖರ್, ಉದ್ಘಾಟನೆ: ಗೊ.ರು.ಚನ್ನಬಸಪ್ಪ, ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜೆಎಸ್‌ಎಸ್ ಕಾಲೇಜು ಆವರಣ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 11

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಸಿ.ಪಿ.ರಾಧಾಕೃಷ್ಣನ್, ಅಧ್ಯಕ್ಷತೆ: ಥಾವರ್‌ಚಂದ್ ಗೆಹಲೋತ್, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಎಸ್.ಅಬ್ದುಲ್ ನಜೀರ್, ಸ್ಥಳ: ಶ್ರೀಕಂಠೀರವ ಕ್ರೀಡಾಂಗಣ, ಸಂಪಂಗಿರಾಮನಗರ, ಬೆಳಿಗ್ಗೆ 11

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

365 ಸಾಧಕಿಯರಿಗೆ ಲೀಡರ್ ಪ್ರಶಸ್ತಿ 2026 ಪ್ರದಾನ: ಭಾವನಾ, ಆಯೋಜನೆ: 'ದಿ ಸ್ತ್ರೀ' ಸಂಸ್ಥೆ, ಸ್ಥಳ: ಜೆ.ಪಿ. ನಗರದ ಹೋಟೆಲ್ ಗ್ರೀನ್ ಪಾರ್ಕ್, ಬೆಳಿಗ್ಗೆ 11

'ಮೆಟ್ರೊ ಡಬಲ್ ಡೆಕ್ಕರ್ ಮತ್ತು ಎತ್ತರಿಸಿದ ಮೇಲ್ಸೇತುವೆ ಯೋಜನೆಯಿಂದ ಬೆಂಗಳೂರು ಪರಿಸರ ಮತ್ತು ಸಂಚಾರದ ಮೇಲೆ ಪರಿಣಾಮ' ಕುರಿತು ಸಂವಾದ: ಆಶಿಶ್ ವರ್ಮಾ, ಆಯೋಜನೆ: ಸಿವಿಕ್ ಬೆಂಗಳೂರು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 2

ರಾಗಸಂಧಾನ– ಕನ್ನಡ ಸಂಗೀತ ನಾಟಕ: ಕೊರಗಿ ಶಂಕರನಾರಾಯಣ ಉಪಾಧ್ಯಾಯ, ದೀಪಿಕಾ ಭಟ್, ಸಿದ್ಧಾರ್ಥ ಬೆಳಮಣ್ಣು, ದೀಪ್ತಿ ರಾಧಾಕೃಷ್ಣನ್, ಸ್ಥಳ: ಗಾಯನ ಸಮಾಜ, ಬಸವನಗುಡಿ, ಮಧ್ಯಾಹ್ನ 2

ಸ್ವರಶ್ರೀ ಸಂಭ್ರಮ: ಸಾನ್ನಿಧ್ಯ: ದಿನೇಶ್ ಗುರೂಜಿ, ಉಪಸ್ಥಿತಿ: ಲಕ್ಷ್ಮಿ ಬಿ.ರಾವ್, ನಾಗಲಕ್ಷ್ಮಿ ಭಾಸ್ಕರ್, ರಾಜಶೇಖರ್ ಜೋಗಿನಮನೆ, ಗೀತಾ ಶ್ರೀಪಾದಸ್ವಾಮಿ, ಮುಕುಂದ ಗಂಗೂರು, ಆಯೋಜನೆ: ಸ್ವರಶ್ರೀ ಸಂಗೀತ ಶಾಲೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

ಅಂಬಿ ಉತ್ಸವ– ಅಂಬರೀಷ್ ಜನ್ಮದಿನಾಚರಣೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿ: ಎನ್.ಎ.ಹ್ಯಾರಿಸ್, ರಾಕೇಶ್ ಸಿಂಗ್, ಆಯೋಜನೆ: ಸಿಂಫೋನಿ ಸ್ವರ ಪ್ರತಿಷ್ಠಾನ, ಸ್ಥಳ: ಟೌನ್ ಹಾಲ್, ಸಂಜೆ 4.30

'ಪರಮ್ ವಿಹಾರ' ಸಾಂಸ್ಕೃತಿಕ ಸರಣಿ ಕಾರ್ಯಕ್ರಮ: ಸುಗಮ ಸಂಗೀತ: ನಿಕಿತಾ ಭಾರದ್ವಾಜ್, ವಾದ್ಯಸಂಗೀತ: ಪ್ರಮೋದ್, ರಮೇಶ್, ಭರತನಾಟ್ಯ: ಸಂಗೀತಾ ದೀಪಕ್, ನೃತ್ಯ ನಮನ: ಮೋನಿಷಾ ಕಾಂತರಾಜು, ಆಯೋಜನೆ ಮತ್ತು ಸ್ಥಳ: ಸುಚಿತ್ರಾ ಸಿನಿಮಾ ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ, ಸಂಜೆ 6

'ಒಡನಾಡಿ ಬಂಧು ಸಿಜಿಕೆ–75 ಮಾಸದ ನೆನಪು' ನಾಟಕೋತ್ಸವದ ಸಮಾರೋಪ ನಾಟಕ 'ಮತ್ತಾಯ' ಪ್ರದರ್ಶನ: ತಂಡ: ಅಸ್ತಿತ್ವ ಮಂಗಳೂರು, ಆಯೋಜನೆ: ರಂಗನಿರಂತರ, ನಿರ್ದಿಗಂತ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 7

'ಅಡವಿ' ನಾಟಕ ಪ್ರದರ್ಶನ: ನಿರ್ದೇಶನ: ಅರುಣ್ ಸೂರ್ಯ, ಆಯೋಜನೆ: ಪಯಣ, ಸ್ಥಳ: ಪ್ರಭಾತ್ ರಂಗಮಂದಿರ, ಬಸವೇಶ್ವರ ನಗರ, ಸಂಜೆ 7.15

'ಈ ಗಿಡ ಆ ಮರ', 'ಕ್ರಾಬ್ಬೀ' ನಾಟಕ ಪ್ರದರ್ಶನ: ನಿರ್ದೇಶನ: ಸಾನಂದ ಮುಖ್ಯೋಪಾಧ್ಯಾಯ, ಎಸ್. ಸುರೇಂದ್ರನಾಥ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಬೆಳಿಗ್ಗೆ 11 ಮತ್ತು ಸಂಜೆ 7.30

7 ಮನೆ ಮಾಲೀಕರ ವಿರುದ್ಧ ಪ್ರಕರಣ

ವಿದೇಶಿಯರ ವಾಸ್ತವ್ಯದ ಬಗ್ಗೆ 'ಫಾರಂ–ಸಿ' ಸಲ್ಲಿಸದೇ ನಿಯಮ ಉಲ್ಲಂಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿಯರ ವಾಸ್ತವ್ಯದ ಬಗ್ಗೆ 'ಫಾರಂ–ಸಿ' (ವಿದೇಶಿಗರ ವಿವರಗಳ ನೋಂದಣಿ ಫಾರಂ) ಸಲ್ಲಿಸದೇ ನಿರ್ಲಕ್ಷ್ಯ ವಹಿಸಿದ್ದ ಏಳು ಮನೆಗಳ ಮಾಲೀಕರ ವಿರುದ್ಧ ಪೂರ್ವ ವಿಭಾಗದ ವಿವಿಧ ಪೊಲೀಸ್ ಠಾಣೆಗಳಲ್ಲಿ 'ವಲಸೆ ಮತ್ತು ವಿದೇಶಿಯರ ಕಾಯ್ದೆ–2025' ಅಡಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗಿದೆ.

ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ 4, ಜೆ.ಬಿ ನಗರ ಠಾಣೆಯಲ್ಲಿ 1 ಹಾಗೂ ಪುಲಕೇಶಿನಗರ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಭಾರತಕ್ಕೆ ವಾಸ್ತವ್ಯಕ್ಕಾಗಿ ಬರುವ ವಿದೇಶಿ ನಾಗರಿಕರ ವಿವರಗಳನ್ನು 'ಫಾರಂ–ಸಿ' ಮೂಲಕ ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿ ಕಚೇರಿಗೆ (ಎಫ್‌ಆರ್‌ಆರ್‌ಒ) ಸಲ್ಲಿಸುವುದು ಕಡ್ಡಾಯ ಆಗಿರುತ್ತದೆ. ಹೋಟೆಲ್, ಲಾಡ್ಜ್, ಗೆಸ್ಟ್‌ಹೌಸ್, ಹೋಂಸ್ಟೇ, ಆಸ್ಪತ್ರೆಗಳು ಹಾಗೂ ವಿದೇಶಿಗರಿಗೆ ವಾಸ್ತವ್ಯ ಒದಗಿಸುವ ಎಲ್ಲ ಸಂಸ್ಥೆಗಳೂ ವಿದೇಶಿ ಅತಿಥಿಗಳು ವಾಸ್ತವ್ಯಕ್ಕೆ ಬಂದ 24 ತಾಸಿನಲ್ಲಿ ಫಾರಂ–ಸಿ ಅನ್ನು ಆನ್‌ಲೈನ್ ಮೂಲಕ ಸಲ್ಲಿಕೆ ಮಾಡಬೇಕು. ಫಾರಂ–ಸಿ ಸಲ್ಲಿಸದೇ ಇರುವುದನ್ನು ವಲಸೆ ಮತ್ತು ವಿದೇಶಿಯರ ಕಾಯ್ದೆ–2025 ಅಡಿಯಲ್ಲಿ ಗಂಭೀರ ಕಾನೂನು ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ ಎಂದು ಪೊಲೀಸರು ಎಚ್ಚರಿಸಿದ್ದಾರೆ.

ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ನಾಲ್ಕು, ಜೆಬಿ ನಗರ ಪೊಲೀಸ್ ಠಾಣೆಯಲ್ಲಿ ಒಂದು ಹಾಗೂ ಪುಲಕೇಶಿನಗರ ಠಾಣೆಯಲ್ಲಿ ಎರಡು ಸೇರಿದಂತೆ ನಿಯಮ ಉಲ್ಲಂಘಿಸಿ ಏಳು ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ನೋಂದಣಿ ಅರ್ಜಿ ಸಲ್ಲಿಸದೇ ಇರುವುದು ಗಂಭೀರ ಕಾನೂನು ಅಪರಾಧ. ಉಲ್ಲಂಘನೆ ಸಾಬೀತಾದಲ್ಲಿ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಅವಕಾಶ ಇರುತ್ತದೆ. ಜೊತೆಗೆ ಆಡಳಿತಾತ್ಮಕ ಕ್ರಮವಾಗಿ ಹೋಟೆಲ್ ಅಥವಾ ಸಂಸ್ಥೆಯ ಪರವಾನಗಿಯನ್ನೂ ಅಮಾನತು ಅಥವಾ ರದ್ದು ಪಡಿಸುವುದೂ ಸೇರಿ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಎಲ್ಲ ಹೋಟೆಲ್, ಲಾಡ್ಜ್, ಗೆಸ್ಟ್ ಹೌಸ್, ಹೋಂಸ್ಟೇ ಮತ್ತು ವಾಸ್ತವ್ಯ ಒದಗಿಸುವ ಸಂಸ್ಥೆಗಳು ಈ ಫಾರಂ ಸಲ್ಲಿಕೆ ಮಾಡುವುದು ಕಡ್ಡಾಯ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅಪಘಾತ: ಸವಾರ ಸಾವು

ಕೆ.ಆರ್. ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಆವಲಹಳ್ಳಿಯಲ್ಲಿ ಬೈಕ್‌ವೊಂದು ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು, ಗಾಯಗೊಂಡಿದ್ದ ಸವಾರ ಶುಕ್ರವಾರ ರಾತ್ರಿ ಮೃತಪಟ್ಟಿದ್ದಾರೆ.

ಆವಲಹಳ್ಳಿಯ ನಿವಾಸಿ ನಿರಂಜನ್ (35) ಮೃತಪಟ್ಟವರು.

ಜೂನ್ 21ರಂದು ರಾತ್ರಿ 8 ಗಂಟೆಯ ಸುಮಾರಿಗೆ ನಿರಂಜನ್ ಬೈಕ್‌ನಲ್ಲಿ ತೆರಳುತ್ತಿದ್ದರು. ಪಟೇಲ್ ಲೇಔಟ್ ಕಡೆಯಿಂದ ಆವಲಹಳ್ಳಿಯ ನ್ಯಾಷನಲ್ ಶಾಲೆಯ ಕಡೆಗೆ ಸಾಗುವಾಗ ಬೈಕ್ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದರು.

ಸ್ಥಳೀಯರ ನೆರವು ಪಡೆದು ಸಂಚಾರ ಪೊಲೀಸರು, ನಿರಂಜನ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ನಿರಂಜನ್ ಶುಕ್ರವಾರ ರಾತ್ರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಬೈಕ್ ನಿಯಂತ್ರಣ ತಪ್ಪಲು ಕಾರಣವಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ದ್ವಿಚಕ್ರ ವಾಹನ ಕಳ್ಳನ ಬಂಧನ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ವ್ಯಕ್ತಿಯೊಬ್ಬನನ್ನು ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ವ್ಯಕ್ತಿಯನ್ನು ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸೂರು ಮುಖ್ಯರಸ್ತೆಯ ಅಯ್ಯಪ್ಪ ದೇವಸ್ಥಾನದ ಬಳಿ ವಶಕ್ಕೆ ಪಡೆದು- ಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಏಪ್ರಿಲ್ 25ರಂದು ವೆಂಕಟೇಶ್ವರ ಲೇಔಟ್ ನಿವಾಸಿ ತಾವರೆಕೆರೆ ರಸ್ತೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಕಾಲಜಿ ಮತ್ತು ರಿಸರ್ಚ್ ಕಚೇರಿಯ ಬಳಿ ದ್ವಿಚಕ್ರ ವಾಹನ ನಿಲ್ಲಿಸಿದ್ದರು. ಆರೋಪಿ ಬೈಕ್ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ. ಅವರು ಮಡಿವಾಳ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ಆರೋಪಿಯನ್ನು ಬಂಧಿಸಿ, ಮಾಹಿತಿ ಕಲೆಹಾಕಿದಾಗ ಆತ ಇನ್ನೂ 2 ವಾಹನಗಳನ್ನು ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಅವನಿಂದ ₹67 ಸಾವಿರ ಮೌಲ್ಯದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ರೌಡಿಶೀಟರ್ ಕೊಲೆ: ಆರೋಪಿಗಳು ಪರಾರಿ

ಬೆಂಗಳೂರು: ಜೆ.ಪಿ ನಗರ ಮುಖ್ಯರಸ್ತೆಯ ಹೋಟೆಲ್‌ವೊಂದರಲ್ಲಿ ಟೀ ಕುಡಿದು ಮನೆಯತ್ತ ತೆರಳುತ್ತಿದ್ದ ರೌಡಿಶೀಟರ್‌ನನ್ನು ದುಷ್ಕರ್ಮಿಗಳ ಗುಂಪೊಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದೆ.

ಪ್ರಗತಿಪುರದ ರೌಡಿಶೀಟರ್ ರಾಜುಬಾಯ್ (29) ಕೊಲೆಯಾದವರು. ಶನಿವಾರ ಸಂಜೆ 5.30ರ ವೇಳೆಗೆ ಜೆ.ಪಿ. ನಗರ ಮುಖ್ಯರಸ್ತೆಯಲ್ಲಿ ಟೀ ಕುಡಿದು ರಾಜುಬಾಯ್ ನಡೆದು ತೆರಳುತ್ತಿದ್ದರು. ಆಗ ದುಷ್ಕರ್ಮಿಗಳು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಹಲ್ಲೆಯಿಂದ ತಪ್ಪಿಸಿಕೊಳ್ಳಲು ರಾಜು ಯತ್ನಿಸಿದ್ದರು ಆದರೂ ಬಿಡದ ಆರೋಪಿಗಳು ಅಟ್ಟಾಡಿಸಿ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದಾರೆ. ನಾಲ್ವರು ಆರೋಪಿಗಳು ಸೇರಿಕೊಂಡು ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಹೇಳಿದರು.

ಕೃತ್ಯ ನಡೆದ ಸ್ಥಳಕ್ಕೆ ಜೆ.ಪಿ. ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಹಳೇ ವೈಷಮ್ಯದ ಕಾರಣಕ್ಕೆ ಕೊಲೆ ಆಗಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಪೊಲೀಸ್ ಕಂಪ್ಯೂಟರ್ ವಿಭಾಗಕ್ಕೆ ಪ್ರಿಯಾಂಕ್ ಖರ್ಗೆ ಭೇಟಿ

ತಾಂತ್ರಿಕ ಸಾಮರ್ಥ್ಯ ವೃದ್ಧಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದ್ದು, ತಾಂತ್ರಿಕ ಸಾಮರ್ಥ್ಯವನ್ನು ಇನ್ನಷ್ಟು ಬಲಪಡಿಸಿ, ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸುವತ್ತ ಆದ್ಯತೆ ನೀಡಬೇಕು' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಎಂ.ಎಸ್.ಬಿಲ್ಡಿಂಗ್‌ನಲ್ಲಿರುವ ಪೊಲೀಸ್ ಕಂಪ್ಯೂಟರ್ ವಿಭಾಗಕ್ಕೆ ಭೇಟಿ ನೀಡಿ, ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದುಕೊಂಡರು.

ಮಾಹಿತಿ ತಂತ್ರಜ್ಞಾನದ ಸಮರ್ಪಕ ಬಳಕೆಯ ಮೂಲಕ ಪೊಲೀಸ್ ಸೇವೆಗಳನ್ನು ಇನ್ನಷ್ಟು ಪಾರದರ್ಶಕ, ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿ ರೂಪಿಸುವ ಅಗತ್ಯ ಇದೆ ಎಂದರು.



ಎಂ.ಎಸ್.ಬಿಲ್ಡಿಂಗ್‌ನಲ್ಲಿರುವ ಪೊಲೀಸ್ ಕಂಪ್ಯೂಟರ್ ವಿಭಾಗದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಪ್ರಿಯಾಂಕ್ ಖರ್ಗೆ ಮಾತನಾಡಿದರು

ರಾಜ್ಯದ ಡಿಜಿಟಲ್ ಪೊಲೀಸ್ ವ್ಯವಸ್ಥೆಗೆ ಆಧಾರ ಆಗಿರುವ ಪ್ರಮುಖ ತಾಂತ್ರಿಕ ಮೂಲಸೌಕರ್ಯಗಳಾದ ಸ್ಟೇಟ್ ಪೊಲೀಸ್ ಡೇಟಾ ಸೆಂಟರ್, ಸೈಬರ್ ಕಮಾಂಡ್ ಸೆಂಟರ್, ಸೈಬರ್ ಎಮರ್ಜೆನ್ಸಿ ನೆಟ್‌ವರ್ಕ್, ಕೆಎಸ್‌ಪಿ ಆ್ಯಪ್ ಮತ್ತು ಸ್ಮಾರ್ಟ್ ಇ-ಬೀಟ್ ಸೇರಿ ವಿವಿಧ ಡಿಜಿಟಲ್ ವೇದಿಕೆಗಳ ಕಾರ್ಯ ನಿರ್ವಹಣೆಯ ಕುರಿತು ಇದೇ ವೇಳೆ ಸಭೆಯಲ್ಲಿ ಅಧಿಕಾರಿಗಳ ಜತೆಗೆ ಗೃಹ ಸಚಿವರು ಚರ್ಚಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಹಾಗೂ ಕಂಪ್ಯೂಟರ್ ವಿಭಾಗದ ಐಜಿಪಿಯೂ ಆಗಿರುವ ಗೃಹ ಸಚಿವರ ವಿಶೇಷಾಧಿಕಾರಿ ಲಾಬು ರಾಮ್ ಹಾಜರಿದ್ದರು.

ಹಣಕಾಸು ವಿಚಾರಕ್ಕೆ ತ್ರಿವಳಿ ಕೊಲೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಸೀಗೇಹಳ್ಳಿಯ ಡಾಮಿನಿಕ್ ಲೇಔಟ್‌ನ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ನಡೆದಿದ್ದ ತ್ರಿವಳಿ ಕೊಲೆ ಪ್ರಕರಣದ ಆರೋಪಿಗಳಾದ ಶ್ವೇತಾ ಹಾಗೂ ಆಕೆಯ ಪ್ರಿಯಕರ ಕೆನೆತ್‌ನನ್ನು 15 ದಿನ ಕಸ್ಟಡಿಗೆ ಪಡೆದುಕೊಂಡಿರುವ ಪೊಲೀಸರು, ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

'ಇದುವರೆಗೂ ನಡೆದ ತನಿಖೆಯಿಂದ ಹಣಕಾಸು ವಿಚಾರಕ್ಕೆ ಕೊಲೆ ಮಾಡಿರುವುದಾಗಿ ಆರೋಪಿಗಳು ತಿಳಿಸಿದ್ದಾರೆ. ಬೇರೆ ಏನಾದರೂ ಕಾರಣವಿತ್ತೇ ಎಂಬುದರ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ಸೋಮ ಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ(48) ಹಾಗೂ ಕಿರಿಯ ಮಗಳು ಸುಪ್ರಿಯಾ(19) ಅವರ ಕೊಲೆ ನಡೆದಿತ್ತು. ಸೋಮಸುಂದರ್– ಮುತ್ತುಲಕ್ಷ್ಮಿ ಅವರ ಹಿರಿಯ ಪುತ್ರಿ ಶ್ವೇತಾ ಹಾಗೂ ಆಕೆಯ ಪ್ರಿಯಕರ ಕೆನೆತ್ ಸೇರಿಕೊಂಡು ಮೂವರನ್ನು ಕೊಲೆ ಮಾಡಿ, ಪುದುಚೆರಿಗೆ ತೆರಳಿ ತಲೆಮರೆಸಿಕೊಂಡಿ- ದ್ದರು. ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ವಿಚಾರಣೆ ನಡೆಸುತ್ತಿದ್ದಾರೆ.

'ಶ್ವೇತಾ ಹಾಗೂ ಕೆನೆತ್ ಅವರು ಸಹಜೀವನ ನಡೆಸುತ್ತಿದ್ದರು. ಅಲ್ಲದೇ ಸ್ವಂತ ಉದ್ಯಮ ಸ್ಥಾಪಿಸಲು ಶ್ವೇತಾ ಬ್ಯಾಂಕ್‌ನಿಂದ ₹30 ಲಕ್ಷ ಸಾಲ ಪಡೆದಿದ್ದರು. ಸಾಲದ ಕಂತು ಪಾವತಿಸಲು ಶ್ವೇತಾಗೆ ಸಾಧ್ಯ ಆಗುತ್ತಿರಲಿಲ್ಲ. ನೆರವಿಗಾಗಿ ತಂದೆ ಸೋಮಸುಂದರ್ ಬಳಿ ಶ್ವೇತಾ ಕೇಳಿದ್ದರು. ಸೋಮಸುಂದರ್ ಹಣ ಕೊಡಲು ಒಪ್ಪಿರಲಿಲ್ಲ. ಇದೇ ಕಾರಣಕ್ಕೆ ಗಲಾಟೆ ಆಗಿತ್ತು. ಅಲ್ಲದೇ, ಶ್ವೇತಾ ಹಾಗೂ ಕೆನೆತ್ ಒಟ್ಟಿಗೇ ಫ್ಲ್ಯಾಟ್‌ನಲ್ಲಿ ಇರುವುದು ಮುತ್ತುಲಕ್ಷ್ಮಿಗೆ ಇಷ್ಟ ಇರಲಿಲ್ಲ. ಜೂನ್ 22ರಂದು ರಾತ್ರಿ ಸೋಮಸುಂದರ್, ಮುತ್ತುಲಕ್ಷ್ಮಿ ಹಾಗೂ ಸುಪ್ರಿಯಾ ಅವರನ್ನು ಕೊಲೆ ಮಾಡಿದ್ದರು ಫ್ಲ್ಯಾಟ್‌ಗೆ ಬಂದಿದ್ದರು. ಆಗಲೂ ಗಲಾಟೆ ನಡೆದು ಮೂವರ ಕೊಲೆ ನಡೆದಿತ್ತು' ಎಂದು ಪೊಲೀಸರು ಹೇಳಿದರು.

ಚಾಲಕನ ವಿರುದ್ಧ ಪ್ರಕರಣ ದಾಖಲು



ಬೆಂಗಳೂರು: ಓಮ್ನಿ ವ್ಯಾನ್‌ನ ಹಿಂದಿನ ಬಾಗಿಲು ಏಕಾಏಕಿ ತೆರೆದುಕೊಂಡು ಶಾಲಾ ಮಕ್ಕಳು ರಸ್ತೆಯಲ್ಲಿ ಬಿದ್ದು ಗಾಯಗೊಂಡಿದ್ದ ಪ್ರಕರಣದಲ್ಲಿ ಚಾಲಕನ ವಿರುದ್ಧ ಕೆ.ಆರ್. ಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆ.ಆರ್. ಬಾಬು ನೀಡಿದ ದೂರಿನ ಮೇಲೆ ಓಮ್ನಿ ವ್ಯಾನ್ ಚಾಲಕ ಸರ್ವೇಶ್ ವಿರುದ್ಧ ಬಿಎನ್‌ಎಸ್ ಅಡಿ (ಅಜಾಗರೂಕತೆ ವಾಹನ ಚಾಲನೆ) ಹಾಗೂ ಮೋಟಾರ್ ವಾಹನ ಕಾಯ್ದೆಯ 194ಬಿ (ಸೀಟ್ ಬೆಲ್ಟ್ ಧರಿಸದಿರುವುದು) ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಸವನಪುರ ವಾರ್ಡ್‌ನ ಅಮರ ಜ್ಯೋತಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳನ್ನು ಶಾಲೆಗೆ ಬಿಡಲು ಜೂನ್ 25ರಂದು ಸರ್ವೇಶ್ ತೆರಳುತ್ತಿದ್ದರು. ಈ ವೇಳೆ ಮುಂಜಾಗ್ರತಾ ಕ್ರಮ ಕೈಗೊಳ್ಳದ ಪರಿಣಾಮ ಕೆ.ಆರ್.ಪುರದ 9ನೇ ಕ್ರಾಸ್ ಬಳಿ ಅಜಾಗರೂಕತೆಯಿಂದ ವಾಹನ ಚಾಲನೆ ವೇಳೆ ವ್ಯಾನ್ ಹಿಂಬದಿ ಡೋರ್ ತೆರೆದುಕೊಂಡು ನಾಲ್ಕು ಮಕ್ಕಳು ರಸ್ತೆಗೆ ಬಿದ್ದಿದ್ದರು. ಮಕ್ಕಳಿಗೆ ತರಚಿದ ಗಾಯ ಆಗಿದ್ದವು ಎಂದು ಸಂಚಾರ ಪೊಲೀಸರು ಹೇಳಿದರು. ಮಕ್ಕಳು ಪ್ರಯಾಣಿಸುತ್ತಿದ್ದ ವ್ಯಾನ್‌ನಲ್ಲಿ ಸುರಕ್ಷಿತ ಕ್ರಮ ಅನುಸರಿಸದೆ ನಿರ್ಲಕ್ಷ್ಯದಿಂದ ವಾಹನ ಚಾಲನೆ ಮಾಡಿದ್ದರ ಸಂಬಂಧ ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಐಎನ್‌ಟಿಯುಸಿ ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹರಿಪ್ರಸಾದ್ ಟೀಕೆ

'ಕಾರ್ಮಿಕರನ್ನು ಬೀದಿಗೆ ತಳ್ಳಿದ ಮೋದಿ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾರ್ಮಿಕ ಸಮುದಾಯವನ್ನು ಬೀದಿಗೆ ತಳ್ಳಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಟೀಕಿಸಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಶನಿವಾರ ನಡೆದ 'ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್' (ಇಂಟಕ್) ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 'ದುಡಿಯುವ ಕಾರ್ಮಿಕರ ಶಕ್ತಿಯೇ, ಈ ದೇಶದ ಶಕ್ತಿ. ದೇಶದಲ್ಲಿ ಪ್ರಬಲ ಕಾರ್ಮಿಕ ಶಕ್ತಿಯಾಗಿ ಇಂಟಕ್ ಬೆಳೆಯಬೇಕಿದೆ' ಎಂದರು.

ಮುಖ್ಯಾಂಶಗಳು

- ನರೇಗಾ ಯೋಜನೆ ಬುಡಮೇಲು ಮಾಡುವ ಪ್ರಯತ್ನ
- ಕೇಂದ್ರದ ಕಾರ್ಮಿಕ ನೀತಿಗಳಿಂದ ಪ್ರತಿಕೂಲ ಪರಿಣಾಮ

'ದುಡಿಯುವ ಕೈಗಳಿಗೆ ಕೆಲಸ ನೀಡಲು ಯುಪಿಎ ಸರ್ಕಾರ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದಿತ್ತು. ಇದು ಕೇವಲ ಕಾರ್ಯಕ್ರಮ ಆಗಿರದೆ ಉದ್ಯೋಗ ಖಾತರಿಪಡಿಸುವ ಕಾನೂನು ಆಗಿತ್ತು. ಈ ಯೋಜನೆಯನ್ನೆ ಬುಡಮೇಲು ಮಾಡಲು ಮೋದಿ ಸರ್ಕಾರ ಹೊರಟಿದೆ. ಇದರ ವಿರುದ್ಧ ತೀವ್ರ ಹೋರಾಟವನ್ನು ಸಂಘಟಿಸಬೇಕಿದೆ. ಕಾರ್ಮಿಕರ ಹಕ್ಕುಗಳಿಗಾಗಿ ಕಾಂಗ್ರೆಸ್ ಪಕ್ಷ ಬೀದಿಗಿಳಿದು ಹೋರಾಟ ಮಾಡಲಿದೆ' ಎಂದರು.



ಬಿ.ಕೆ. ಹರಿಪ್ರಸಾದ್

ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ಮಾತನಾಡಿ, '12 ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ರೈತರು ಹಾಗೂ ಕಾರ್ಮಿಕರ ಹಿತಾಸಕ್ತಿಯನ್ನು ನಿರಂತರವಾಗಿ ಕಡೆಗಣಿಸಿದೆ. ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿ ಕಾಯುವುದನ್ನೇ ತನ್ನ ಆಡಳಿತದ ಪ್ರಮುಖ ಆದ್ಯತೆ ಯನ್ನಾಗಿ ಮಾಡಿಕೊಂಡಿದೆ. ಇದರಿಂದಾಗಿ ಕಾರ್ಮಿಕರ ಹಕ್ಕುಗಳು ದುರ್ಬಲಗೊಂಡಿವೆ' ಎಂದು ದೂರಿದರು.

'ಉದ್ಯೋಗ ಭದ್ರತೆ, ನ್ಯಾಯಯುತ ವೇತನ ಮತ್ತು ಸಾಮಾಜಿಕ ಭದ್ರತೆಯಂತಹ ಮೂಲಭೂತ ಹಕ್ಕುಗಳ ಮೇಲೂ ಕೇಂದ್ರ ಸರ್ಕಾರದ ನೀತಿಗಳು ಪ್ರತಿಕೂಲ ಪರಿಣಾಮ ಬೀರಿವೆ. ದುಡಿಯುವ ವರ್ಗದ ಧ್ವನಿಯನ್ನು ನಿರ್ಲಕ್ಷಿಸಿ ಕಾರ್ಪೊರೇಟ್ ಪರ ನೀತಿಗಳನ್ನು ಜಾರಿಗೊಳಿಸಿರುವುದು ದೇಶದ ಕಾರ್ಮಿಕ ಸಮುದಾಯಕ್ಕೆ ಮಾಡುತ್ತಿರುವ ಅನ್ಯಾಯವಾಗಿದೆ' ಎಂದರು. ಕಾರ್ಮಿಕ ನಾಯಕ, ಮಾಜಿ ಸಂಸದ ಸಂಜೀವ್ ರೆಡ್ಡಿ, ಎನ್.ಎಂ. ಅಡ್ಯಂತಾಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಮತ್ತಿತರರು ಇದ್ದರು.

ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಜಾಗತಿಕ ಮಾರುಕಟ್ಟೆ ಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆಯಾಗಿ ದ್ದರೂ, ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಇಳಿಸಿಲ್ಲ. ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಂಡು ಬೆಲೆಯನ್ನು ಇಳಿಸ ಬೇಕು' ಎಂದು ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಒತ್ತಾಯಿಸಿದ್ದಾರೆ.

ಸಂಘದ ವತಿಯಿಂದ ಕೇಂದ್ರ ಸರ್ಕಾರಕ್ಕೆ ಬಹಿರಂಗ ಪತ್ರ ಬರೆದಿರುವ ಅವರು, 'ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಯುದ್ಧ ಆರಂಭಿಸುವುದಕ್ಕೂ ಮುನ್ನ ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್ ಕಚ್ಚಾತೈಲದ ಬೆಲೆ 68 ಡಾಲರ್‌ನಿಂದ 70 ಡಾಲರ್‌ನಷ್ಟು ಇತ್ತು. ಆಗ 19 ಕೆ.ಜಿ ತೂಕದ ವಾಣಿಜ್ಯ ಸಿಲಿಂಡರ್ ಬೆಲೆ ₹1,800ರಷ್ಟು ಇತ್ತು' ಎಂದು ವಿವರಿಸಿದ್ದಾರೆ.

'ಯುದ್ಧದ ಕಾರಣಕ್ಕೆ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು ಮತ್ತು ಕಚ್ಚಾತೈಲದ ಬೆಲೆ 130–140 ಡಾಲರ್ ಗಳಿಗೆ ಏರಿಕೆಯಾಗಿತ್ತು. ಕೇಂದ್ರ ಸರ್ಕಾರವು ಹಲವು ಬಾರಿ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಹೆಚ್ಚಿಸಿತು. ಪರಿಣಾಮ ವಾಗಿ ಪ್ರತಿ ಸಿಲಿಂಡರ್‌ಗೆ ₹3,198 ಪಾವತಿ ಮಾಡಬೇಕಾಗಿದೆ' ಎಂದಿದ್ದಾರೆ.

'ಈಗ ಯುದ್ಧದ ವಾತಾವರಣ ತಿಳಿಯಾಗಿದೆ. ಕಚ್ಚಾತೈಲದ ಬೆಲೆ 70 ಡಾಲರ್‌ಗಳಿಗೆ ಇಳಿಕೆಯಾಗಿದೆ. ಎಲ್‌ಪಿಜಿ ಪೂರೈಕೆಯೂ ಶೇ 70–80ರಷ್ಟು ಸಹಜ ಸ್ಥಿತಿಗೆ ಮರಳಿದೆ. ಆದರೆ ಕೇಂದ್ರ ಸರ್ಕಾರ ಮಾತ್ರ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಬೆಲೆ ಇಳಿಸುತ್ತಿಲ್ಲ. ಒಂದು ಬ್ಯಾರಲ್ ಕಚ್ಚಾತೈಲಕ್ಕೆ 140 ಡಾಲರ್ ಬೆಲೆ ಇದ್ದಾಗ ಒಂದು ಸಿಲಿಂಡರ್‌ಗೆ ₹3,198 ಪಾವತಿಸುವುದು ಸರಿ. ಆದರೆ ಕಚ್ಚಾತೈಲದ ಬೆಲೆ 70 ಡಾಲರ್‌ಗೆ ಇಳಿಕೆಯಾದಾಗಲೂ ವಾಣಿಜ್ಯ ಬಳಕೆ ಸಿಲಿಂಡರ್‌ಗೆ ಅಷ್ಟೇ ಮೊತ್ತವನ್ನು ವಸೂಲಿ ಮಾಡಲಾಗುತ್ತಿದೆ. ಇದರಿಂದ ಹೋಟೆಲ್ ಉದ್ಯಮಗಳು ನಷ್ಟ ಅನುಭವಿಸುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆಗುವ ಬದಲಾವಣೆಗೆ ಅನುಗುಣವಾಗಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನೂ ಪರಿಷ್ಕರಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಚರಂಡಿಗಳ ಹೂಳು ತೆರವಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಚರಂಡಿಗಳ ಹೂಳು ತೆರವು ಮಾಡಲು ಸಮಗ್ರ ಕಾರ್ಯಾಚರಣೆ ನಡೆಸ ಬೇಕು ಎಂದು ಪಾಲಿಕೆ ಹೆಚ್ಚುವರಿ ಅಭಿವೃದ್ಧಿ ಆಯುಕ್ತ ವೆಂಕಟಾ ಚಲಪತಿ ಅಧಿಕಾರಿಗಳಿಗೆ ಸೂಚಿಸಿದರು.

ಎಂ.ಜಿ ರಸ್ತೆ ಪ್ರದೇಶದ ಚರಂಡಿಗಳಲ್ಲಿ ಹೂಳನ್ನು ತೆರವುಗೊಳಿಸುತ್ತಿರುವ ಕಾರ್ಯವನ್ನು ಪರಿಶೀಲಿಸಿದ ಅವರು, ಚರಂಡಿಯ ಮುಚ್ಚಳ ತೆರೆಸಿ ಕಾಮಗಾರಿಯ ಪ್ರಗತಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಚರಂಡಿಯೊಳಗೆ ಸಂಗ್ರಹವಾಗಿರುವ ಹೂಳನ್ನು ಗಮನಿಸಿ ಮಳೆ ನೀರಿಗೆ ಅಡೆತಡೆಯಿಲ್ಲದೆ ಸುಗಮವಾಗಿ ಹರಿದುಹೋಗುವಂತೆ ಹೂಳನ್ನು ತೆರವುಗೊಳಿಸಲು ಸೂಚಿಸಿದರು.

ಶಾಂತಿನಗರ ವಿಭಾಗದ ಎಂ.ಜಿ.ರಸ್ತೆಯಲ್ಲಿ ಎಸ್‌ಐಪಿ ಅನುದಾನ ದಡಿಯಲ್ಲಿ ರಸ್ತೆ , ಚಿಕ್ಕಪೇಟೆ, ಲ್ಯಾವೆಲ್ಲೆ ರಸ್ತೆ ಬಳಿ ನಡೆಯುತ್ತಿರುವ ಕಾಮಗಾರಿ ವೀಕ್ಷಿಸಿ, ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದರು.

ಮುಖ್ಯ ಎಂಜಿನಿಯರ್ ಹೇಮಲತಾ, ಅಧೀಕ್ಷಕ ಎಂಜಿನಿಯರ್ ಚಂದ್ರಶೇಖರ್, ಕಾರ್ಯಪಾಲಕ ಎಂಜಿನಿಯರ್‌ಗಳಾದ ಪ್ರದೀಪ್, ಆತಿಫ್ ಹಾಜರಿದ್ದರು.

ಸುರಂಗ ರಸ್ತೆ ಕಾಮಗಾರಿಗೆ ಇಂದು ಚಾಲನೆ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಕ್ವಾರ್ಟರ್ಸ್‌ವರೆಗಿನ ಸುರಂಗ ರಸ್ತೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಭಾನುವಾರ ಬೆಳಿಗ್ಗೆ ಭೂಮಿಪೂಜೆ ನೆರವೇರಿಸಲಿದ್ದಾರೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.

ಮೇಖ್ರಿ ವೃತ್ತದಿಂದ ಹೆಬ್ಬಾಳ ಜಂಕ್ಷನ್‌ವರೆಗೆ ಸಾಕಷ್ಟು ಸಂಚಾರ ದಟ್ಟಣೆ ಉಂಟಾಗುತ್ತಿತ್ತು. ಇದರಿಂದ ವಿಮಾನ ನಿಲ್ದಾಣ ಸೇರಿದಂತೆ ಇತರೆಡೆಗೆ ಹೋಗುವುದು ಕಷ್ಟವಾಗುತ್ತಿತ್ತು. ಈ ಸಮಸ್ಯೆ ನಿವಾರಣೆಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸುರಂಗ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಸುದ್ದಿಗಾರರಿಗೆ ಶನಿವಾರ ತಿಳಿಸಿದರು.

ದರ ಏರಿಕೆ: ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್ ದರಗಳು ಹೆಚ್ಚಾಗುತ್ತಿವೆ. ಎಲ್ಲಾ ಸಾರಿಗೆ ನಿಗಮಗಳಿಗೆ ಸುಮಾರು ₹5 ಸಾವಿರ ಕೋಟಿ ನಷ್ಟವಾಗುತ್ತಿದೆ ಎಂದು ಬೈರತಿ ಸುರೇಶ್ ಹೇಳಿದರು.

ಈ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ. ಆದರೆ, ಸರ್ಕಾರಕ್ಕೆ ಇಲಾಖೆಯಿಂದ ಇದುವರೆಗೆ ಯಾವುದೇ ಪ್ರಸ್ತಾವ ಸಲ್ಲಿಸಿಲ್ಲ ಎಂದರು.

ಮುಂದಿನ ಸಂಪುಟ ಸಭೆಗಳಲ್ಲಿ ಈ ಬಗ್ಗೆ ಪ್ರಸ್ತಾವ ಮಂಡಿಸಲಾಗುತ್ತದೆ. ಮುಖ್ಯಮಂತ್ರಿಯವರು ಮತ್ತು ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ಜನ ಸಾಮಾನ್ಯರಿಗೆ ಹೊರೆ ಆಗದ ರೀತಿಯಲ್ಲಿ ಪ್ರಯಾಣ ದರ ಹೆಚ್ಚಳ ಮಾಡುವ ಚರ್ಚೆಗಳು ನಡೆದಿವೆ ಎಂದು ಅವರು ಸ್ಪಷ್ಟಪಡಿಸಿದರು.

ವಿಶೇಷ

2.228 ಕಿಲೋ ಮೀಟರ್; ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಸಿಬ್ಬಂದಿ ಕ್ವಾರ್ಟರ್ಸ್‌ವರೆಗೆ ಸುರಂಗ ರಸ್ತೆ

6 ಪಥ, ರಸ್ತೆಯ 60 ಅಡಿ ಕೆಳಭಾಗದಲ್ಲಿ ಸಾಗುವ ಸುರಂಗ ರಸ್ತೆ

3.5 ಮೀಟರ್, ಸುರಂಗ ರಸ್ತೆಯ ಒಂದು ಮಾರ್ಗದ ಅಗಲ

₹1,139 ಕೋಟಿ ಒಟ್ಟು ಅಂದಾಜು ವೆಚ್ಚ

18 ತಿಂಗಳು, ಕಾಮಗಾರಿ ಪೂರ್ಣಗೊಳಿಸುವ ಅವಧಿ

ಕರಾಚಿ: ಉಗ್ರರ ದಾಳಿ ನಾಲ್ವರು ಸೈನಿಕರ ಸಾವು

ಕರಾಚಿ (ಪಿಟಿಐ): ನಗರದಲ್ಲಿರುವ ಪಾಕಿಸ್ತಾನ ಸೇನೆಯ ಕಚೇರಿಯ ಕಾಂಪೌಂಡ್‌ಗೆ ವಾಹನ ಡಿಕ್ಕಿ ಹೊಡೆಸಿ, ಗುಂಡಿನ ದಾಳಿ ನಡೆಸಿದ ಭಯೋತ್ಪಾದಕರು ಅರೆಸೇನಾ ಪಡೆಯ ನಾಲ್ವರು ಸಿಬ್ಬಂದಿಯನ್ನು ಶನಿವಾರ ಹತ್ಯೆ ಮಾಡಿದ್ದಾರೆ.

ಯಾವುದೇ ಭಯೋತ್ಪಾದಕ ಸಂಘಟನೆ ಅಥವಾ ಪ್ರತ್ಯೇಕತಾ- ವಾದಿ ಗುಂಪು ಈ ಕೃತ್ಯದ ಹೊಣೆ ಹೊತ್ತುಕೊಂಡಿಲ್ಲ. ನಾಲ್ಕರಿಂದ ಎಂಟು ಮಂದಿ ಭಯೋತ್ಪಾದಕರು ದಾಳಿ ನಡೆಸಿದ್ದಾರೆ.

ನಿಧನ ವಾರ್ತೆ

ಸರೋಜಮ್ಮ



ಬೆಂಗಳೂರು: ಇಲ್ಲಿನ ಅಂಜನಾ ನಗರದ ನಿವಾಸಿ ಮೈಸೂರಿನ ಸರೋಜಮ್ಮ (96) ಶನಿವಾರ ನಿಧನರಾದರು. ಅವರಿಗೆ ಮೂವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಕನ್ನಳ್ಳಿ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕೆಂಪಮ್ಮ



ರಾಜರಾಜೇಶ್ವರಿ ನಗರ: ಭೀಮನಕುಪ್ಪೆ ನಿವಾಸಿಯಾದ ಸಾಮಾಜಿಕ ಕಾರ್ಯಕರ್ತೆ ಕೆಂಪಮ್ಮ (80) ನಿಧನರಾಗಿದ್ದಾರೆ. ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮೃತರಿಗೆ ರಾಮೋಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮಹೇಶ್ ಸೇರಿ ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ. ಕೆಂಪಮ್ಮ ಅವರ ಅಂತ್ಯಕ್ರಿಯೆ ಭೀಮನಕುಪ್ಪೆಯ ಅವರ ತೋಟದಲ್ಲಿ ಜೂನ್ 28ರ ಮುಂಜಾನೆ 11.30ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ

- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696


ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ನಿಮ್ಮ ಹೆಸರು ಹಾಗೂ ವಿಳಾಸದೊಂದಿಗೆ 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನೂ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.



ಕಮ್ಮನಹಳ್ಳಿಯ ನೆಹರೂ ರಸ್ತೆಯಲ್ಲಿ(ಕುಳ್ಳಪ್ಪ ಸರ್ಕಲ್ ಹತ್ತಿರ) ಮರವೊಂದರ ಬಳಿ ಹಾಕಲಾದ ಕಸ –ಮಹಾದೇವಸ್ವಾಮಿ

ವರದಿ ಪರಿಣಾಮ

'ತಿಂಗಳುಗಟ್ಟಲೆ ಕೊಳೆಯುವ ಕಸ' ಶೀರ್ಷಿಕೆಯಡಿ ಜೂನ್ 25ರಂದು ಸಚಿತ್ರ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತುಕೊಂಡ ನಗರ ಪಾಲಿಕೆಯವರು ಶನಿವಾರ ಬೆಳಿಗ್ಗೆ ಹೆಣ್ಣೂರು ಮೇಲ್ಸೇತುವೆಯಲ್ಲಿದ್ದ ತ್ಯಾಜ್ಯವನ್ನು ತೆರವು ಮಾಡಿದರು.





ಎಚ್‌ಬಿಆರ್ ಬಡಾವಣೆಯ ವಾರ್ಡ್ ನಂ.24ರ ನಾಗವಾರ ಮುಖ್ಯರಸ್ತೆಯಲ್ಲಿರುವ ನಾಗಲಿಂಗ ಗಣಪತಿ ದೇವಾಲಯದ ಎದುರಿಗೆ ವಿದ್ಯುತ್ ಕಂಬದ ಬಳಿ ಇರುವ ಕಸದ ರಾಶಿ –ಪಟ್ಟಡಿ ಎ. ಬಸವರಾಜ್



ಅಬ್ಬಿಗೆರೆಯ ಪೈಪ್ ಲೈನ್ ರಸ್ತೆಯಲ್ಲಿರುವ ಮಹಾಲಕ್ಷ್ಮಿ ದೇವಸ್ಥಾನದ ಪಕ್ಕ ಸುರಿದಿರುವ ಕಸದ ರಾಶಿ –ನಾಗರಾಜು



ಕೋಣನ ಕುಂಟೆಯಿಂದ ಕನಕಪುರ ರಸ್ತೆಗೆ ತಲುಪುವ ಡಾಕ್ಟರ್ಸ್ ಕಾಲೊನಿ ಮುಖ್ಯರಸ್ತೆಯಲ್ಲಿ ಬಿದ್ದಿರುವ ಕಸದ ರಾಶಿ –ಎಲ್.ವಿ. ಶಿವಕುಮಾರ್



ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಶ್ರೀಕಂಠೇಶ್ವರ ನಗರದ ಮುಖ್ಯರಸ್ತೆಯಲ್ಲಿ ಕಸದ ರಾಶಿ –ಪ್ರಶಾಂತ್



ಟಿ. ದಾಸರಹಳ್ಳಿಯ ಚೊಕ್ಕಸಂದ್ರದ ಮುನಿಸ್ವಾಮಪ್ಪ ಬಡಾವಣೆಯ ಮೊದಲ ಮುಖ್ಯರಸ್ತೆಯ ಎರಡನೇ ಕ್ರಾಸ್‌ನಲ್ಲಿ ಖಾಲಿ ನಿವೇಶನ ವ್ಯಾಪಿಸಿಕೊಂಡಿರುವ ತ್ಯಾಜ್ಯ –ಅಂಕುಶ ಎಸ್.ಕೆ.

'ಎಐ– ಜ್ಞಾನಪರಂಪರೆ ಬೆಸುಗೆಯೇ ಸವಾಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು; 'ದೇಶದ ಜ್ಞಾನ ಪರಂಪರೆಗಳನ್ನು ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ಮಾನವಿಕಗಳೊಂದಿಗೆ ಬೆಸೆಯುವುದು ಸದ್ಯದ ದೊಡ್ಡ ಸವಾಲು' ಎಂದು ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿಯ ಸಹ ಕುಲಪತಿ ಪ್ರೊ.ಮಧು ವೀರರಾಘವನ್ ಅಭಿಪ್ರಾಯಪಟ್ಟರು.

ಅಕಾಡೆಮಿಯ 'ಡಿಜಿಟಲ್ ಮಾನವಿಕಗಳ ಕೇಂದ್ರ'ವು ಇತ್ತೀಚೆಗೆ ಹಮ್ಮಿಕೊಂಡಿದ್ದ 'ಸಂಸ್ಕೃತ ಅಧ್ಯಯನಗಳು ಮತ್ತು ತಂತ್ರಜ್ಞಾನ: ಕೃತಕ ಬುದ್ಧಿಮತ್ತೆ, ಡಿಜಿಟಲ್ ಮಾನವಿಕಗಳು ಮತ್ತು ಭಾರತದಲ್ಲಿ ತತ್ವಶಾಸ್ತ್ರ' ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, 'ಪ್ರಾಚೀನತೆಯನ್ನು ಆಧುನಿಕತೆಯೊಂದಿಗೆ ಬೆಸೆಯುವುದಷ್ಟೇ ನಮ್ಮ ಮುಂದಿರುವ ಸವಾಲಲ್ಲ. ಅಪಾರ ಅನ್ವೇಷಣೆಯಿಂದ ಕೂಡಿದ ಮೀಮಾಂಸೆ, ತತ್ವಶಾಸ್ತ್ರ, ಗಣಿತ. ವ್ಯಾಕರಣವುಳ್ಳ ಸಂಸ್ಕೃತದಂಥ ಜ್ಞಾನ ವ್ಯವಸ್ಥೆಯನ್ನು ಇವತ್ತಿಗೆ ಹೊಂದಿಸುವುದು ಮುಖ್ಯ' ಎಂದರು.

'ಭಾರತೀಯ ವ್ಯಾಕರಣ ಪರಂಪರೆಯ ಅದ್ಭುತ ಒಳನೋಟಗಳನ್ನು ಬಳಸಿಕೊಂಡು ಆಧುನಿಕ ತಂತ್ರಜ್ಞಾನ ಹಾಗೂ ಕಂಪ್ಯೂಟಿಂಗ್ ಕ್ಷೇತ್ರದ ಸವಾಲುಗಳನ್ನು ಸಮರ್ಥವಾಗಿ ಪರಿಹರಿಸುವ ಕುರಿತು ಚಿಂತಿಸಬೇಕಾಗಿದೆ' ಎಂದರು.

'ಗಣಕೀಕೃತ ಭಾಷಾಶಾಸ್ತ್ರ, ಪ್ರಾಕೃತಿಕ ಭಾಷಾ ಸಂಸ್ಕರಣೆ, ಜ್ಞಾನ ಪ್ರಾತಿನಿಧ್ಯ ಹಾಗೂ ಕೃತಕ ಬುದ್ಧಿಮತ್ತೆ ಆಧಾರಿತ ಭಾಷಾ ತಂತ್ರಜ್ಞಾನಗಳಲ್ಲಿ ಸಂಸ್ಕೃತ ಮತ್ತು ಭಾರತೀಯ ಬೌದ್ಧಿಕ ಪರಂಪರೆಯ ಪ್ರಸ್ತುತತೆ ಕುರಿತು ಸಂಶೋಧನೆಗಳು ಇಂದಿನ ಅಗತ್ಯ' ಎಂದರು.

ಕುಕ್ಕೆಗೆ ಭಕ್ತಸಾಗರ

ಪ್ರಜಾವಾಣಿ ಚಿತ್ರ:



ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಸುತ್ತುಪೌಳಿಯಲ್ಲಿ ಶನಿವಾರ ಕಂಡುಬಂದ ಭಕ್ತರ ದಟ್ಟಣೆ

'ವ್ಯಾಜ್ಯ ಪರಿಹಾರಕ್ಕೆ ಸಂಧಾನವೇ ಮಾರ್ಗ'

ಬಿಐಎಂಎಸಿಸಿ ಸಮಾವೇಶ: ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಾಲಯಗಳಲ್ಲಿ ವ್ಯಾಜ್ಯಗಳ ಸಂಖ್ಯೆ ಏರುಗತಿಯಲ್ಲಿದ್ದು, ಮಧ್ಯಸ್ಥಿಕೆ, ಸಂಧಾನಗಳೇ ಪರಿಹಾರ ಮಾರ್ಗ ಆಗಬೇಕು. ಅದರಿಂದ ನ್ಯಾಯಾಂಗದ ಮೇಲೆ ಒತ್ತಡ ಕಡಿಮೆಯಾಗಲಿದೆ' ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರತಿಪಾದಿಸಿದರು.

ಗಾಂಧಿನಗರದ ಸಿಎಂಎಸ್ ಜೈನ್ ವಾಣಿಜ್ಯ ಶಾಲೆಯಲ್ಲಿ 'ಬೆಂಗಳೂರು ಇಂಟರ್‌ನ್ಯಾಷನಲ್ ಮೀಡಿಯೇಷನ್, ಆರ್ಬಿಟ್ರೇಷನ್ ಅಂಡ್ ಕೌನ್ಸಿಲೇಷನ್ ಸೆಂಟರ್' (ಬಿಐಎಂಎಸಿಸಿ) ಶನಿವಾರ ಆಯೋಜಿಸಿದ್ದ 'ಎರಡು ದಶಕದ ಸಂಧಾನ; ವಿಭಜನೆಗೆ ಸೇತುವೆ' ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ನ್ಯಾಯದಾನದಲ್ಲಿ ಸೋತವ, ಗೆದ್ದವ ಎಂಬ ಪಕ್ಷಪಾತ ಇರಬಾರದೆಂದು ಭಾರತೀಯ ನ್ಯಾಯ ದರ್ಶನ ಹೇಳುತ್ತದೆ. ಹಿಂದೆ ಗ್ರಾಮಗಳಲ್ಲಿ ಪಂಚಾಯಿತಿಯು ನ್ಯಾಯ ನೀಡುತ್ತಿತ್ತು. ಎಲ್ಲ ಸಮುದಾಯಗಳ ಮುಖಂಡರು ಮಾತುಕತೆ ಮೂಲಕ ವ್ಯಾಜ್ಯ ಬಗೆಹರಿಸುತ್ತಿದ್ದರು' ಎಂದು ಸ್ಮರಿಸಿದರು.

'ಸಂವಾದದಿಂದ ಸಮಾಜದಲ್ಲಿ ಸಹಾನುಭೂತಿ, ಸಂವೇದನಾಶೀಲತೆ ಮೂಡುತ್ತದೆ. ವಿವಾದಗಳು ಬಗೆಹರಿದು ಸಂಬಂಧಗಳು ಪುನರ್ ನೆಲೆಗೊಳ್ಳುತ್ತವೆ. ದೇಶದ ಆರ್ಥಿಕತೆಗೆ ವೇಗವೂ ಸಿಗುತ್ತದೆ. ಪ್ರಸ್ತುತ ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನಗಳು ವ್ಯಾಪಕವಾಗಿ ಬಳಕೆಯಾಗುತ್ತಿದ್ದು, ಮಾನವೀಯ ಸಂವೇದನೆಗಳಿಗೂ ಸಮಾನ ಅವಕಾಶ ಕೊಡಬೇಕಿದೆ' ಎಂದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಮಾತನಾಡಿ, 'ಭಿನ್ನಾಭಿಪ್ರಾಯಗಳು ಅಸಂಖ್ಯ, ವಿವಾದಗಳಾಗುವುದು ಸಹಜ. ಹೀಗಾಗಿ ಸಮಾಜದಲ್ಲಿ ಸೌಹಾರ್ದ ನೆಲೆಸಲು ಸೇತುವೆಯಾಗಿ ಕೆಲಸ ಮಾಡುವ ಮನಸ್ಸುಗಳು ಹೆಚ್ಚಾಗಬೇಕಿದೆ' ಎಂದರು.

'ಯಾವುದೇ ತೀರ್ಪು ಕುಟುಂಬಗಳ ಬಿರುಕುಗಳನ್ನು ಮುಚ್ಚಲಾರದು. ನೆರೆ–ಹೊರೆಯ ಬಿಕ್ಕಟ್ಟುಗಳನ್ನು ಶಾಶ್ವತವಾಗಿ ಬಗೆಹರಿಸದು. ಹೀಗಾಗಿ, ವಕೀಲರು ವ್ಯಾಜ್ಯ ದೀರ್ಘವಾಗಲು ಬಿಡಬಾರದು. ನ್ಯಾಯಾಂಗದಲ್ಲಿ ಮೂಲಸೌಕರ್ಯ ಹೆಚ್ಚಿಸಲು ಆದ್ಯತೆ ಕೊಡುವಂತೆಯೇ ಸಂಧಾನಕ್ಕೂ ಪ್ರಾಮುಖ್ಯ ನೀಡಬೇಕು' ಎಂದು ಹೇಳಿದರು.

ಬಿಐಎಂಎಸಿಸಿ ಅಧ್ಯಕ್ಷ ನ್ಯಾ.ಎಸ್. ಆರ್.ಬನ್ನೂರಮಠ, '2006ರಲ್ಲಿ ಆರಂಭವಾದ ಕೇಂದ್ರವು ದೇಶದ ಮುಂಚೂಣಿ ಸಂಧಾನ ಸಂಸ್ಥೆಯಾಗಿ ಬೆಳೆದಿದೆ' ಎಂದರು.



ನ್ಯಾಯಮೂರ್ತಿ ಅರವಿಂದ ಕುಮಾರ್ ಅವರನ್ನು ಥಾವರ್‌ಚಂದ್ ಗೆಹಲೋತ್ ಸನ್ಮಾನಿಸಿದರು. ನ್ಯಾಯಮೂರ್ತಿಗಳಾದ ವಿ.ಗೋಪಾಲಗೌಡ, ಸಿರಿಯಾಕ್ ಜೋಸೆಫ್, ಎಸ್‌.ಆರ್‌. ಬನ್ನೂರಮಠ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಇದೇ ವೇಳೆ 'ಕಾಮೆಂಟರಿ ಆನ್ ಮೀಡಿಯೇಷನ್ ಆ್ಯಕ್ಟ್ 2023' ಮತ್ತು 'ಬೈಮಾಕ್ಸ್ ಟ್ರೈನ್ ದ ಟ್ರೇನರ್ ಮ್ಯಾನ್ಯುವಲ್' ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಬಾಂಬೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಬಿಐಎಂಎಸಿಸಿ ಕಾರ್ಯದರ್ಶಿ ಬಿ.ಸಿ. ತಿರುವೆಂಗಡಂ, ಜೈನ್ ವಿಶ್ವವಿದ್ಯಾಲಯದ ಕುಲಪತಿ ಚನ್ನರಾಜ್ ರಾಯ್‌ಚಂದ್ ಪಾಲ್ಗೊಂಡಿದ್ದರು.

'ಮಧ್ಯಸ್ಥಿಕೆ, ಮಾತುಕತೆ ಧರ್ಮವಾಗಲಿ'

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಿರಿಯಾಕ್ ಜೋಸೆಫ್ ಮಾತನಾಡಿ, 'ನಿಮ್ಮ ಸಮುದಾಯ ಯಾವುದೇ ಆಗಿರಲಿ. ಸಂಧಾನ, ಮಾತುಕತೆಯೇ ಧರ್ಮವಾಗಬೇಕು' ಎಂದರು.

'ಬ್ರೆಜಿಲ್‌ಗೆ ಹೋಗಿದ್ದಾಗ, ಪ್ರಾರ್ಥನೆ ಮಾಡಲು 'ಕ್ಯಾಥೋಲಿಕ್ ಚರ್ಚ್ ಯಾವುದಾದರೂ ಇದೆಯಾ ಎಂದು ಅಲ್ಲಿಯ ನ್ಯಾಯಾಧೀಶರೊಬ್ಬರನ್ನು ಕೇಳಿ, 'ನೀವು ಕ್ಯಾಥೋಲಿಕ್ ಧರ್ಮೀಯರೇ' ಎಂದು ಪ್ರಶ್ನಿಸಿದ್ದೆ. ಅದಕ್ಕವರು 'ಹೌದು ನಾನು ಕ್ಯಾಥೋಲಿಕ್, ಫುಟ್‌ಬಾಲ್ ನನ್ನ ಧರ್ಮ' ಎಂದು ಉತ್ತರಿಸಿದ್ದರು. ಸಂಧಾನಕಾರರಿಗೆ ಮಧ್ಯಸ್ಥಿಕೆಯೇ ಧರ್ಮ ಹಾಗೂ ಜೀವನ ವಿಧಾನ ಆಗಬೇಕಿದೆ' ಎಂದು ಉದಾಹರಿಸಿದರು.

(ii) **Sector-wise Advances and Gross NPAs**

Sr. No.	Sector*	Current Year-2026			Previous Year-2025		
		Outstanding Total Advances	Gross NPAs	Percentage of Gross NPAs to Total Advances	Outstanding Total Advances	Gross NPAs	Percentage of Gross NPAs to Total Advances
i)	**Priority Sector**						
a)	Agriculture and allied activities	32.66	0.08	0.02	17.54	0.82	0.19
b)	Advances to industries sector eligible as priority sector lending	53.48	1.98	0.45	48.20	2.25	0.53
c)	Services	84.22	8.49	1.92	67.10	3.13	0.73
d)	Personal loans	23.60	2.61	0.59	31.41	1.47	0.34
	Subtotal (i)	193.96	13.16	2.98	164.25	7.66	1.79
ii)	**Non-priority Sector**						
a)	Agriculture and allied activities						
b)	Industry						
c)	Services						
d)	Personal loans	248.18	1.72	0.39	263.97	12.32	2.88
	Sub-total (ii)	248.18	1.72	0.39	263.97	12.32	2.88
	Total (I + ii)	442.14	14.88	3.37	428.22	19.98	4.67

(iii) Overseas assets, NPAs and revenue - NIL for current year-2026 and previous year-2025
(iv) Details of accounts subjected to restructuring (restructuring as defined as per applicable regulations :Nil
(v) Divergence in asset classification and provisioning :

Sl.No.	Particulars	Amount
1	Gross NPAs as on March 31,2025 as reported by the bank	19.98
2	Gross NPAS as on March 31 ,2025 as assessed by RBI	NA
3	Divergence in Gross NPAS (2-1)	NA
4	Net NPAS as on March 31, 2025 as reported by the bank	0
5	Net NPAS as on March 31, 2025 as assessed by RBI	NA
6	Divergence in Net NPAs (5-4)	NA
7	Provisions for NPAs as on March 31, 2025 as reported by the bank	34.80
8	Provisions for NPAs as on March 31, 2025 as assessed by RBI	NA
9	Divergence in provisioning (8-7)	0.00
10	Reported Profit before Provisions and Contingencies for the year end March 31, 2025	24.25
11	Reported Net Profit after Tax (PAT) for the year ended March 31, 2025	17.54
12	Adjusted (notional) Net Profit atter Tax (PAT) for the year ended March 31, 2025 after considering the divergence in provisioning	NA
13	Profit after adjusting previous year Loss	NA

RBI has not conducted any onsite inspection as on 31st March 2025. However, the RBI has conducted a Supervisory Risk Assessment of the Bank as on March 31, 2025, through an off site.

(vi) Disclosure of transfer of loan exposures: NIL for current year-2026 and previous year-2025
(vii) Non – Fund Based Credit Facilities : NIL for current year-2026 and previous year-2025
(viii) Fraud accounts: NIL for current year-2026 and previous year-2025
(ix) Disclosures related to Project Finance : NIL for current year-2026 and previous year-2025
(x) Disclosure under Resolution Framework for COVID-19-related Stress

Type of borrower	Exposure to accounts classified as Standard consequent to implementation of resolution plan– Position as at the end of the previous year (A)	Of (A), aggregate debt that slipped into NPA during the year	Of (A) amount paid by the borrowers during the year	Exposure to accounts classified as Standard consequent to implementation of resolution plan – Position as at the end of this year
Personal Loans	17.86	0.00	3.88	13.98
Corporate persons*				
Of which MSMEs				
Others				
Total	17.86	0.00	3.88	13.98

** As defined in section 3(7) of the Insolvency and Bankruptcy Code, 2016*

5. Exposures
(i) *Exposure to real estate sector*

Category	Current year	Previous Year
a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.		
1. Priority housing Loans	17.43	11.69
2. Other Housing Loans	63.32	52.20
b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development, and construction, etc.). Exposure would also include non-fund based (NFB) limits;	49.12	55.26
Total Exposure to Real Estate Sector	129.87	119.15

(ii) ***Exposure to capital market* - NIL for current year-2026 and previous year-2025**
(iii) ***Risk category-wise country exposure*- NIL for current year-2026 and previous year-2025**
(iv) ***Unsecured advances***

Particulars	Current Year-2026	Previous Year-2025
Total unsecured advances of the bank	20.50	21.11

(v) ***Factoring exposures*- NIL for current year-2026 and previous year-2025**
(vi) ***Unhedged foreign currency exposure- NIL for current year-2026 and previous year-2025***
(vii) **Loans against gold and silver collateral:** a) Details of loans extended against eligible gold and silver collateral

Particulars	Loan outstanding		Average ticket size (₹ crore)	Average LTV ratio	Gross NPA (%)
	₹ crore	As % of Total Loans			
1. Opening balance of the FY [(a)+(b)]	3.94	0.92	0.47	70%	-
(a) Consumption loans	3.45	0.81	0.03	70%	-
of which bullet repayment loans	3.15	0.74	0.03	70%	-
(b) Income generating loans	0.49	0.11	0.03	70%	-
2. New loans sanctioned and disbursed during the FY [(c)+(d)]	7.97	0.12		70%	NA
(c) Consumption loans	5.18		0.04	70%	NA
of which bullet repayment loans	4.43		0.04	70%	NA
(d) Income generating loans	2.79		0.08	70%	NA
3. Renewals sanctioned and disbursed during the FY	-		-	-	NA
4. Top-up loans sanctioned and disbursed during the FY	-		-	-	NA
5. Loans repaid during the FY [(e)+(f)]	3.92		0.02	NA	NA
(e) Consumption loans	3.43		0.01	NA	NA
of which bullet repayment loans	3.13		0.01	NA	NA
(f) Income generating loans	0.49		0.01	NA	NA
6. Non-Performing Loans recovered during the FY [(g) + (h)]				NA	NA
(g) Consumption loans				NA	NA
of which bullet repayment loans				NA	NA
(h) Income generating loans				NA	NA
7. Loans written off during the FY [(i) + (j)]	-	-		NA	NA
(i) Consumption loans	-	-		NA	NA
of which bullet repayment loans				NA	NA
(j) Income generating loans	-	-		NA	NA
8. Closing balance at the end of FY [(k) + (l)]	7.99	1.81	0.04	70%	-
(k) Consumption loans	5.20	1.18	0.03	70%	-
of which bullet repayment loans	4.45	1.01	0.03	70%	-
(l) Income generating loans	2.79	0.63	0.08	70%	-

Note:
(i) Information may be disclosed separately for loans against gold collateral and loans against silver collateral
(ii) Average LTV ratio is Calculated as ratio of sum of LTVs of loans at the time of sanction to total number of such loans.
(b) Details of gold and silver collateral and auctions

Sr. No.	Particulars	
(a)	Unclaimed gold or silver collateral at the end of the financial year (in grams)	-
(b)	Number of loan accounts in which auctions were conducted	-
(c)	Total outstanding in loan accounts mentioned in (b)	-
(d)	Gold or silver collateral acquired during the FY due to default of loans (in grams)	-
(e)	Gold or silver collateral auctioned during the FY (in grams)	-
(f)	Recovery made through auctions during the FY (in ₹ crore)	-
(g)	Recovery percentage:	-
(h)	as % of value of gold or silver collateral	-
(i)	as % of outstanding loan	-

(viii) ***Exposures to Related Parties*** (Amount in ₹ crore)

Sr. No.	Particulars	Previous Year	Current Year
A. Loans to Related Parties			
1	Aggregate value of loans sanctioned to related parties during the year	-	-
2	Aggregate value of outstanding loans to related parties as on 31st March	0.0793	0.0382
3	Aggregate value of outstanding loans to related parties as a proportion of total credit exposure as on 31st March (in %)	0.0185	0.0086
4	Aggregate value of outstanding loans to related parties which are categorized as:		
	(i) Special Mention Accounts as on 31st March	-	-
	(ii) Non-Performing Assets as on 31st March	-	-
5	Amount of provisions held in respect of loans to related parties as on 31st March	-	-
B. Contracts and Arrangements involving Related Parties			
6	Aggregate value of contracts and arrangements awarded to related parties during the year	Nil	Nil
7	Aggregate value of outstanding contracts and arrangements involving related parties as on 31st March	Nil	Nil

6. Concentration of deposits, advances, exposures and NPAs: *(i) Concentration of deposits*

Particulars	Current Year	Previous Year
Total deposits of the twenty largest depositors	35.55	36.05
Percentage of deposits of twenty largest depositors to total deposits of the bank	5.49	5.46

(ii) Concentration of advances*

Particulars	Current Year	Previous Year
Total advances to the twenty largest borrowers	65.73	66.15
Percentage of advances to twenty largest borrowers to total advances of the bank	14.87	15.45

(iii) ***Concentration of exposures*****

Particulars	Current Year	Previous Year
Total exposure to the twenty largest borrowers/customers	65.73	66.15
Percentage of exposures to the twenty largest borrowers/ customers to the total exposure of the bank on borrowers/customers	14.87	15.45

(iv) ***Concentration of NPAs***

Particulars	Current Year	Previous Year
Total Exposure to the twenty NPA accounts	8.63	13.46
Percentage of exposures to the twenty largest NPA exposure to total Gross NPAs.	58.01	67.37

7. Derivatives : Bank have not entered into any transactions in derivatives in the current 2026 and previous year 2025.

8. Transfers to Depositor Education and Awareness Fund (DEA Fund)

Sr.No.	Particulars	Current Year	Previous Year
i)	Opening balance of amounts transferred to DEA Fund	2.00872	1.40090
ii)	Add: Amounts transferred to DEA Fund during the year	0.35745	0.61596
iii)	Less: Amounts reimbursed by DEA Fund towards claims	0.03325	0.00814
iv)	Closing balance of amounts transferred to DEA Fund	2.33292	2.00872

9. Disclosure of complaints : (i) Summary information on complaints received by the bank from customers and from the Offices of Banking Ombudsman (OBOs) – No complaints received during current year, and Last year, Bank received one complaint.

Sr. No		Particulars	Previous year	Current year
	Complaints received by the bank from its customers			
1.		Number of complaints pending at beginning of the year	NIL	NIL
2.		Number of complaints received during the year	NIL	NIL
3.		Number of complaints disposed during the year	NIL	NIL
	3.1	Of which, number of complaints rejected by the bank	NIL	NIL
4.		Number of complaints pending at the end of the year	NIL	NIL
	Maintainable complaints received by the bank from Office of Ombudsman			
5.		Number of maintainable complaints received by the bank from Office of Ombudsman	NIL	NIL
	5.1.	Of 5, number of complaints resolved in favour of the bank by Office of Ombudsman	NIL	NIL
	5.2	Of 5, number of complaints resolved through conciliation/mediation/advisories issued by Office of Ombudsman	NIL	NIL
	5.3	Of 5, number of complaints resolved after passing of Awards by Office of Ombudsman against the bank	NIL	NIL
6.		Number of Awards unimplemented within the stipulated time (other than those appealed)	NIL	NIL
Note: Maintainable complaints refer to complaints on the grounds specifically mentioned in Integrated Ombudsman Scheme, 2021 (Previously Banking Ombudsman Scheme, 2006) and covered within the ambit of the Scheme.				

(ii) ***Top five grounds[38] of complaints received by the bank from customers: NIL***
10. Disclosure of penalties imposed by the Reserve Bank of India: NIL
11. Other Disclosures: (i) **Business ratios**

Particular	Current Year	Previous Year
i) Interest Income as a percentage to average Working Funds	9.05%	9.11%
ii) Non-interest income as a percentage to average WorkingFunds	0.17%	0.64%
iii) Average Cost of Deposits	6.31%	6.42%
iv) Average Net Interest Margin	4.15%	4.29%
v) Operating Profit as a percentage to average Working Funds	1.87%	3.08%
vi) Return on average Assets	1.69%	2.03%
vii) Business (deposits plus advances) per employee	26.57	25.32
viii) Profit per employee	0.25	0.41

(ii) **Bancassurance business: NIL**
(iii) **Marketing and distribution : NIL**
(iv) **Disclosures regarding Priority Sector Lending Certificates (PSLCs)**
During the current year the Bank has Purchased ₹ 111.00 Crore worth PSL-Micro enterprises and ₹ 25.00 Crore worth PSLC-Small and marginal farmers by paying premium of ₹ 0.19 crores

PARTICULARS	Current Year	Previous Year
The amount of PSLCs (category-wise) sold and purchased during the year	136	310

(v) **Provisions and contingencies**

	Provision debited to Profit and Loss Account	Current Year	Previous Year
i)	Provisions for IDR	1.77	
ii)	Provision towards NPA	-	2.00
iii)	Provision made towards Income tax	3.50	6.76
iv)	Other Provisions and Contingencies (with details)	-	
	Special provision U/S36(1) viii	-	0.30

(vi) **Payment of DICGC Insurance Premium**

Sl.No.	Particulars	Current Year	Previous Year
i)	Payment of DICGC Insurance Premium	0.78	0.87
ii)	Arrears in payment of DICGC premium	NIL	NIL

(vii) **Disclosure of facilities granted to directors and their relatives:**

Sl No	Name of the Director	Name of the Borrower	Relation ship	Loan Balance
1	Byranna M S	Byranna M S	Self	0.0063
2	Suresh Kumar K P	Suresh Kumar K P	Self	0.0052
3	Suresh Kumar K P	Spoorthy R	Daughter	0.0053
4	Suresh Kumar K P	Radha N	Wife	0.0065
5	Prakash	Prakash	Self	0.0214

12. **i.** The bank was presenting the financial statements in erstwhile format until the previous financial year and has changed its presentation to the format prescribed under ***Reserve Bank of India (Urban Co- operative Banks – Financial Statements: Presentation and Disclosures) Directions, 2025.***

ii. During the year , the Bank declared and paid dividends to its members for the FY 2024-25. The Bank was removed from the Supervisory Action Framework (SAF) on 2 July 2025. Prior to declaring the dividend, the Bank had submitted a communication to the RBI, confirming that the Bank had fulfilled the prescribed regulatory criteria for the declaration of dividend. Subsequently, the Bank declared a dividend at the rate of 12% in the Annual General Meeting held on 25 August 2025 and paid the same to its members on 16 September 2025. However, on 20 November 2025, the Bank received a communication from the RBI stating that prior approval for declaration of dividend had not been accorded. Thereafter, the Bank requested the RBI to conduct an off-site inspection to assess and verify the financial position of the Bank. Accordingly, a Supervisory Risk Assessment for the financial year 2024–25 was conducted by the RBI from 11 November 2025 to 13 November 2025. In the inspection report issued subsequently, the RBI did not make any adverse observations or raise any concerns regarding the declaration and payment of dividend by the Bank.

iii. The bank has not obtained an actuarial valuation of leave encashment liabilities in the current year. Leave encashment is accounted on a self-estimate basis and the bank has estimated that the provision held towards leave encashment is adequate for its liability. Hence, it has not made any additional provision during the year.

ಶ್ರೀಮತಿ ವಿನೋದ ಶಿವರಾಮಯ್ಯ	ಶ್ರೀ ವಿಜಯಸಾರಥಿ ಎಂ.ಎಸ್	ಶ್ರೀ ಅರವಿಂದ್ ಬಿ	ಶ್ರೀ ಮರಿಗೌಡ ಸಿ.ಎಲ್
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

ಲೆಕ್ಕಪರಿಶೋಧನಾ ದೃಢೀಕರಣ ಪತ್ರ

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು – 560 055, ಇದರ 2025–26ನೇ ಸಾಲಿನ ಲೆಕ್ಕ ಪುಸ್ತಕವನ್ನು ಪರಿಶಿಲಿಸಿರುತ್ತೇನೆ. ನನ್ನ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ, ಲೆಕ್ಕಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದಿದ್ದು, ತೃಪ್ತಿಕರವೆಂದು ಕಂಡುಬಂದಿರುತ್ತದೆ. ನನ್ನ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ, ಮೇಲ್ಕಂಡ ಬ್ಯಾಂಕಿನ ಆಸ್ತಿ–ಜವಾಬ್ದಾರಿ ಮತ್ತು ಲಾಭ–ನಷ್ಟ ತಃಖ್ತೆಯು ದಿನಾಂಕ 31.03.2026ಕ್ಕೆ ಬ್ಯಾಂಕಿನ ನಿಜವಾದ ಸ್ಥಿತಿಯನ್ನು ಅಲಾಯಿದ ಲಗತ್ತಿಸಿರುವ ನನ್ನ ಪ್ರತ್ಯೇಕ ವರದಿಯಲ್ಲಿನ ಅಂಶಗಳಿಗೊಳಪಟ್ಟು ಕರಾರುವಕ್ಕಾಗಿ ತೋರಿಸುತ್ತದೆ ಎಂದು ದೃಢೀಕರಿಸುತ್ತೇನೆ. ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಪ್ರಕಾರ ಬಹಿರಂಗಪಡಿಸಬೇಕಾದ ಬ್ಯಾಂಕಿನ ಮಾಹಿತಿಗಳ ಸಂಕ್ಷಿಪ್ತ ಟಿಪ್ಪಣಿಯನ್ನುಇದರೊಂದಿಗೆ ಲಗತ್ತಿಸಿದೆ.

ಪರಿಶೀಲಿಸಿದೆ
ಜಿ.ಆರ್.ಎಸ್.ಎಮ್ & ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್
FRN: 000863S
ಸಿ.ಎ. ಗೋಪಾಲ್ ಕೃಷ್ಣ ಹೆಗಡೆ
ಪಾಲುದಾರ
ಸದಸ್ಯತ್ವ ಸಂಖ್ಯೆ : 208063
ಯುಡಿಐಎನ್: 26208063OROHGT6392

ಬೆಂಗಳೂರು
ದಿನಾಂಕ: 22/06/2026

ಅಂತರ್ಜಲದಲ್ಲೂ ಪ್ಲಾಸ್ಟಿಕ್ ಕಣ

ಒಂದನೇ ಪುಟದಿಂದ...

ಇವು ಕಲ್ಲಿನ ಸೂಕ್ಷ್ಮ ಬಿರುಕುಗಳಲ್ಲಿ ನುಸುಳಬಲ್ಲವಾಗಿವೆ. ಹೀಗೆ ನುಸುಳುತ್ತಲೇ ಭೂಗರ್ಭದ ನೀರನ್ನು ಸೇರುತ್ತಿವೆ.

ದೆಹಲಿಯಲ್ಲಿ ಯಮುನಾ ನದಿಯ ತಟದಲ್ಲಿನ ಅಂತರ್ಜಲದಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಇರುವುದು ಕಳೆದ ವರ್ಷ ಪತ್ತೆಯಾಗಿತ್ತು. ಆದರೆ, ಕರಾವಳಿಯಿಂದ ದೂರದಲ್ಲಿರುವ ರಾಜ್ಯದ ಬಯಲುಸೀಮೆಯ ಗಟ್ಟಿ ಶಿಲೆಯ ಭೂಪದರಗಳಲ್ಲಿ ಹರಿಯುವ ಅಂತರ್ಜಲದಲ್ಲಿಯೂ ಸೂಕ್ಷ್ಮಪ್ಲಾಸ್ಟಿಕ್ ಕಣಗಳು ಪತ್ತೆಯಾಗಿರುವುದು ಇದೇ ಪ್ರಥಮ.

14 ಗ್ರಾಮಗಳಲ್ಲಿ ಅಧ್ಯಯನ: ಹೈಡೆನ್ಸಿಟಿ ಪಾಲಿ ಎಥಿಲೀನ್ (ಎಚ್‌ಡಿಪಿಇ), ಲೋಡೆನ್ಸಿಟಿ ಪಾಲಿ ಎಥಿಲೀನ್ ಎಲ್‌ಡಿಪಿಇ), ಪಾಲಿ ಎಥಿಲೀನ್ (ಪಿಇ), ಪಾಲಿಪ್ರೊಪೈಲೀನ್ (ಪಿಪಿ), ಪಾಲಿಸ್ಟೈಲೀನ್ (ಪಿಎಸ್), ಪಾಲಿಎಥಿಲೀನ್ ಟೆರಪ್ತಲೇಟ್ (ಪಿಇಟಿ) ಪಾಲಿಅಮೈಡ್ (ಪಿಎ) ಮುಂತಾದ ಮೈಕ್ರೊಪ್ಲಾಸ್ಟಿಕ್ ಕಣಗಳು ಅಂತರ್ಜಲದಲ್ಲಿ ಪತ್ತೆಯಾಗಿವೆ. ಮೊದಲ ಬಾರಿಗೆ ಪರೀಕ್ಷಿಸಿದಾಗ (2024ರ ನವೆಂಬರ್‌ನಲ್ಲಿ) ಕೆಲವು ಗ್ರಾಮಗಳಲ್ಲಿ ಕೆಲವು ರೀತಿಯ ಮೈಕ್ರೊಪ್ಲಾಸ್ಟಿಕ್‌ನ ಒಂದು, ಎರಡು ಕಣಗಳು ಪತ್ತೆಯಾಗಿವೆ. ಎರಡನೇ ಬಾರಿ ಒಟ್ಟು 14 ಗ್ರಾಮಗಳಲ್ಲಿ (ಮೊದಲು ಮಾದರಿ ಸಂಗ್ರಹಿಸಿದ್ದ ಏಳು ಗ್ರಾಮಗಳು ಸೇರಿ) ಮಾದರಿಗಳನ್ನು ಸಂಗ್ರಹಿಸಲಾಗಿತ್ತು. ಎರಡನೇ ಬಾರಿ ಪರೀಕ್ಷೆ ಮಾಡಿದಾಗ (2025ರ ಫೆಬ್ರುವರಿ) ಎರಡು ಗ್ರಾಮಗಳಲ್ಲಿ ಭಾರಿ ಪ್ರಮಾಣದಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಕಂಡುಬಂದಿವೆ. ಚಿಕ್ಕಬಳ್ಳಾಪುರದ ಶಿಡ್ಲಘಟ್ಟ ತಾಲ್ಲೂಕಿನ ಗಂಜಿಗುಂಟೆಯಲ್ಲಿ ಎಚ್‌ಡಿಪಿಇ, ಎಲ್‌ಡಿಪಿಇ, ಪಿಪಿ, ಪಿಇಟಿ, ಪಿಇ, ಪಿಎಸ್ ಮೈಕ್ರೊಪ್ಲಾಸ್ಟಿಕ್‌ನ 11 ಕಣಗಳು ಕಂಡುಬಂದಿದ್ದರೆ, ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಮುದಿಮಡಗು ಗ್ರಾಮದಲ್ಲಿ ಎಚ್‌ಡಿಪಿಇ, ಎಲ್‌ಡಿಪಿಇ, ಪಿಪಿ, ಪಿಎ, ಪಿಇಟಿ, ಪಿಇ, ಪಿಎಸ್ ಮೈಕ್ರೊಪ್ಲಾಸ್ಟಿಕ್‌ನ 14 ಕಣಗಳು ಕಂಡುಬಂದಿರುವುದು ಆತಂತ ಮೂಡಿಸಿದೆ.

ಅಧ್ಯಯನದಲ್ಲಿ ಕಂಡುಬಂದ ಮತ್ತೊಂದು ಪ್ರಮುಖ ವಿಚಾರವೆಂದರೆ, ಪ್ರದೇಶ ಮತ್ತು ಮಾದರಿ ಸಂಗ್ರಹದ ಕಾಲ ಬದಲಾದಂತೆ, ಅವುಗಳಲ್ಲಿ ಭಿನ್ನ ಪ್ರಮಾಣದಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳು ಕಂಡುಬಂದಿವೆ. ಉದಾಹರಣೆಗೆ, ಕೆಲವು ಬೋರ್‌ವೆಲ್‌ಗಳಲ್ಲಿ ಮೊದಲ ಬಾರಿ ಮಾದರಿ ಸಂಗ್ರಹಿಸಿದಾಗ ಮೈಕ್ರೊಪ್ಲಾಸ್ಟಿಕ್‌ಗಳು ಕಂಡುಬಂದಿರಲಿಲ್ಲ. ಆದರೆ, ಕೆಲವು ಪ್ರಕರಣಗಳಲ್ಲಿ ಮಾದರಿ ಸಂಗ್ರಹದ ಕಾಲ ಮತ್ತು ಪ್ರದೇಶ ಬದಲಾದಂತೆ ಕಣಗಳ ಪ್ರಮಾಣ ಮತ್ತು ಅವುಗಳ ಸಂಯೋಜನೆಯಲ್ಲಿ ವ್ಯತ್ಯಾಸಗಳು ಕಂಡುಬಂದಿವೆ.

ಕಡಿಮೆ ಮಾದರಿ ಸಂಗ್ರಹದಲ್ಲಿ ಕಡಿಮೆ ಕಣಗಳು ಕಂಡುಬಂದಿದ್ದು, ಹೆಚ್ಚಿನ ಮಾದರಿ ಸಂಗ್ರಹದಲ್ಲಿ ಹೆಚ್ಚು ಪ್ರಮಾಣದ ಕಣಗಳು ಕಂಡುಬಂದಿವೆ. 20 ಲೀಟರ್ ಮಾದರಿಯಲ್ಲಿ ಹೆಚ್ಚು ಪ್ರಮಾಣದ, ವೈವಿಧ್ಯಮಯವಾದ ಕಣಗಳು ಪತ್ತೆಯಾಗಿವೆ. ಮಾದರಿಯ ಕಡಿಮೆ ಸಂಗ್ರಹದಿಂದ ಅಂತರ್ಜಲದ ಮಾಲಿನ್ಯವನ್ನು ಕಡಿಮೆ ಅಂದಾಜು ಮಾಡಿದಂತಾಗಿರುವ ಸಾಧ್ಯತೆಯೂ ಇದೆ.

ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ಪ್ರಕಾರ, ವಾರ್ಷಿಕವಾಗಿ 39 ಸಾವಿರದಿಂದ 52 ಸಾವಿರದವರೆಗೆ ಮೈಕ್ರೊಪ್ಲಾಸ್ಟಿಕ್ ಮತ್ತು ನ್ಯಾನೊಪ್ಲಾಸ್ಟಿಕ್ ಕಣಗಳು ಮನುಷ್ಯನ ದೇಹವನ್ನು ಸೇರುತ್ತಿವೆ. ಉಸಿರಾಟ ಮತ್ತು ಆಹಾರ ಸೇವನೆಯ ಮೂಲಕ ಈ ಕಣಗಳು ಮನುಷ್ಯರ ದೇಹ ಪ್ರವೇಶಿಸುತ್ತಿವೆ. ಕುಡಿಯುವ ನೀರಿನ ಮೂಲಕ ಎಷ್ಟು ಕಣಗಳು ಸೇರುತ್ತಿವೆ ಎನ್ನುವುದು ಸ್ಪಷ್ಟವಿಲ್ಲ. ಲಭ್ಯ ಮಾಹಿತಿಯ ಪ್ರಕಾರ, ಪೂರ್ವ ಕರ್ನಾಟಕದ ಹಳ್ಳಿಗಳಲ್ಲಿ ವಾರ್ಷಿಕವಾಗಿ 1,100 ಮೈಕ್ರೊಪ್ಲಾಸ್ಟಿಕ್ ಕಣಗಳು ಜನರ ಹೊಟ್ಟೆ ಸೇರುತ್ತಿವೆ. ಈ ಪ್ರಮಾಣವು ತಕ್ಷಣಕ್ಕೆ ಅಪಾಯಕಾರಿಯೇನಲ್ಲ. ಜತೆಗೆ, ಹೆಚ್ಚಿನ ಹಳ್ಳಿಗಳಲ್ಲಿ ಶುದ್ಧ ನೀರಿನ ಘಟಕದ ನೀರನ್ನು ಕುಡಿಯಲು ಬಳಸಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳು ಫಿಲ್ಟರ್ ಆಗುತ್ತವೆ.

ಪ್ರಸ್ತುತ ಅಂತರ್ಜಲದಲ್ಲಿ ಕಡಿಮೆ ಪ್ರಮಾಣದ ಮೈಕ್ರೊಪ್ಲಾಸ್ಟಿಕ್‌ಗಳು ಕಂಡುಬಂದಿವೆ. ತಕ್ಷಣಕ್ಕೆ ಇದು ಅಪಾಯಕಾರಿಯಲ್ಲದಿದ್ದರೂ ಜಾಗ್ರತೆ ವಹಿಸಬೇಕಾದ ವಿಚಾರವಾಗಿದೆ ಎಂದು ಅಧ್ಯಯನಕಾರರು ಎಚ್ಚರಿಸಿದ್ದಾರೆ. ಏಕೆಂದರೆ, ಆಳದ ಭೂಗರ್ಭದಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳು ಕಂಡುಬಂದಿರುವುದು ಮಾಲಿನ್ಯದ ತೀವ್ರ ಸ್ವರೂಪವನ್ನು ಸೂಚಿಸುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯದ ಸಮರ್ಪಕ ನಿರ್ವಹಣೆ ಇಲ್ಲದಿದ್ದರೆ, ಅಂತರ್ಜಲದಲ್ಲಿ ಮೈಕ್ರೊಪ್ಲಾಸ್ಟಿಕ್ ಮತ್ತಷ್ಟು ಹೆಚ್ಚಾಗಲಿವೆ. ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಜನರು ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳ ನೀರನ್ನೇ ಅವಲಂಬಿಸಿದ್ದು, ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳುಂಟಾಗುವ ಸಾಧ್ಯತೆಗಳಿವೆ. ಜಾಗ್ರತೆ ವಹಿಸದಿದ್ದರೆ, ಮುಂದೆ ಇದು ಗಂಭೀರ ಆರೋಗ್ಯ ಹಾಗೂ ಪರಿಸರ ಸಮಸ್ಯೆಯಾಗಲಿದೆ ಎನ್ನುತ್ತಾರೆ ವೈದ್ಯರೂ ಎನ್‌ಎಬಿಎಲ್ ವೈದ್ಯಕೀಯ ಪ್ರಯೋಗಾಲಯಗಳ ಮುಖ್ಯ ಮೌಲ್ಯಮಾಪಕರೂ ಆದ ಡಾ. ಶಾಂತಕುಮಾರ ಮುರುಡ.

ಸರ್ವಾಂತರ್ಯಾಮಿ ಮೈಕ್ರೊಪ್ಲಾಸ್ಟಿಕ್: ಅತಿ ಸೂಕ್ಷ್ಮ ಪ್ಲಾಸ್ಟಿಕ್ (ಐದು ಮಿಲಿಮೀಟರ್ ಗಾತ್ರಕ್ಕಿಂತ ಕಡಿಮೆ; ಕೆಲವೊಮ್ಮೆ ಒಂದು ಮೈಕ್ರೊಮೀಟರ್) ಕಣಗಳನ್ನು ಮೈಕ್ರೊಪ್ಲಾಸ್ಟಿಕ್ ಎನ್ನಲಾಗುತ್ತದೆ. ಮೈಕ್ರೊಪ್ಲಾಸ್ಟಿಕ್ ಅನ್ನು ಉತ್ಪಾದಿಸಲಾಗುವುದಿಲ್ಲ. ಪ್ಲಾಸ್ಟಿಕ್ ಚೀಲ, ಬಾಟಲ್, ಮೀನು ಹಿಡಿಯುವ ಬಲೆ, ಸಿಂಥೆಟಿಕ್ ಬಟ್ಟೆಗಳು ಸೂರ್ಯನ ಕಿರಣ ಮತ್ತು ನೀರಿಗೆ ಒಡ್ಡಿದಾಗ ಮೈಕ್ರೊಪ್ಲಾಸ್ಟಿಕ್ ಕಣಗಳು ಬಿಡುಗಡೆಯಾಗುತ್ತವೆ. ಒಂದು ಪಾಲಿಸ್ಟರ್ ಅಂಗಿಯನ್ನು ಒಗೆದಾಗ ಸಾವಿರಾರು ಮೈಕ್ರೊಪ್ಲಾಸ್ಟಿಕ್ ಕಣಗಳು ಬಿಡುಗಡೆಯಾಗುವ ಸಂಭವ ಇದೆ. ಈ ಕಣಗಳು ಚರಂಡಿಗಳ ಮೂಲಕ ನದಿ ಸೇರಿ, ಅಲ್ಲಿಂದ ಸಮುದ್ರದ ಪಾಲಾಗುತ್ತವೆ. ಪ್ಲಾಸ್ಟಿಕ್ ಕಣಗಳು ಮಣ್ಣಿನಲ್ಲಿ ಕರಗುವುದಿಲ್ಲ. ಅವು ಸೂಕ್ಷ್ಮದಿಂದ ಅತಿಸೂಕ್ಷ್ಮ ಕಣಗಳಾಗಿ ಒಡೆಯುತ್ತಲೇ ಹೋಗುತ್ತವೆ. ಹಾಗೆ ಅವು ಮೀನು, ಏಡಿ, ಆಮೆ ಮುಂತಾದ ಜಲಚರಗಳು, ಪ್ರಾಣಿ ಪಕ್ಷಿಗಳ ಹೊಟ್ಟೆ ಸೇರುತ್ತವೆ.

ಮೈಕ್ರೊಪ್ಲಾಸ್ಟಿಕ್‌ಗಳು ಇಂದು ಸರ್ವಾಂತರ್ಯಾಮಿ ಎನ್ನುವಂತಾಗಿವೆ. ವಾತಾವರಣದಲ್ಲಿ, ಸಾಗರದಲ್ಲಿ, ನದಿ, ಕೆರೆ, ಕುಂಟೆಗಳಲ್ಲಿ, ಹಿಮಪದರಗಳಲ್ಲಿ, ಕೊನೆಗೆ ನೀರ್ಗಲ್ಲು ನದಿಗಳಲ್ಲೂ ಮೈಕ್ರೊಪ್ಲಾಸ್ಟಿಕ್ ಕಣಗಳು ಕಂಡುಬಂದಿವೆ. ಪ್ರಾಣಿಗಳಲ್ಲಿಯೂ ಕಂಡುಬಂದಿವೆ. ತರಕಾರಿಗಳಲ್ಲಿ, ಆಹಾರ, ನೀರು, ಗಾಳಿಯಲ್ಲಿ, ಮನುಷ್ಯರ ದೇಹದಲ್ಲೂ ಮೈಕ್ರೊಪ್ಲಾಸ್ಟಿಕ್ ಇರುವುದರ ಬಗ್ಗೆ ವರದಿಗಳು ಬಂದಿವೆ. ಸಮುದ್ರದ ತೀರ ಪ್ರದೇಶಗಳಲ್ಲಿ, ನದಿ ಪ್ರವಾಹದ ಪ್ರದೇಶದಲ್ಲಿ, ನದಿ ದಂಡೆಗಳಲ್ಲಿ, ಕೆರೆಗಳಲ್ಲಿ ಪ್ಲಾಸ್ಟಿಕ್ ಕಣಗಳು ಪತ್ತೆಯಾಗಿವೆ. ಆಕಾಶದಲ್ಲಿ, ಭೂಮಿಯಲ್ಲಿ, ಕೊನೆಗೆ ಪಾತಾಳದಲ್ಲೂ ಅದರ ಅಸ್ತಿತ್ವ ಕಂಡುಬಂದಿದೆ.

ಜಾಗತಿಕ ಮಟ್ಟದಲ್ಲಿ ಪ್ಲಾಸ್ಟಿಕ್ ಪೆಡಂಭೂತ ವೇಗವಾಗಿ ವ್ಯಾಪಿಸುತ್ತಿದೆ. ಭೂಮಿ ಮೇಲೆ ಪ್ಲಾಸ್ಟಿಕ್ ಇಲ್ಲದ ಜಾಗವೇ ಇಲ್ಲ ಎನ್ನುವಂತಾಗಿದೆ. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ಪ್ರಕಾರ, ಜಾಗತಿಕ ಮಟ್ಟದಲ್ಲಿ ವಾರ್ಷಿಕವಾಗಿ 40 ಕೋಟಿ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಹೆಚ್ಚಿನ ಪಾಲು ಪರಿಸರವನ್ನು ಸೇರುತ್ತಿದೆ. ಮಣ್ಣು ಮತ್ತು ನೀರಿನ ಮೂಲಕ ಆಹಾರ ಸರಪಳಿ ಪ್ರವೇಶಿಸಿ, ಮಾನವನ ದೇಹ ಸೇರುತ್ತಿವೆ; ಹಲವು ರೀತಿಯ ಗಂಭೀರ ಕಾಯಿಲೆಗಳಿಗೆ ಕಾರಣವಾಗುತ್ತಿವೆ ಎನ್ನುತ್ತಾರೆ ಭೂಗರ್ಭಶಾಸ್ತ್ರಜ್ಞರಾದ ಜಿ.ವಿ.ಶ್ರೀನಿವಾಸರೆಡ್ಡಿ.

ನ್ಯಾನೊಪ್ಲಾಸ್ಟಿಕ್ ಕಣಗಳು ಮೈಕ್ರೊಪ್ಲಾಸ್ಟಿಕ್‌ಗಿಂತಲೂ ಚಿಕ್ಕವು. ಪ್ಯಾಕೇಜಿಂಗ್ ಮೂಲಕ ಪ್ರತಿ ವರ್ಷ 1,000 ಟನ್ ಮೈಕ್ರೊಪ್ಲಾಸ್ಟಿಕ್ ಮತ್ತು ನ್ಯಾನೊಪ್ಲಾಸ್ಟಿಕ್ ಕಣಗಳು ಆಹಾರ ಪದಾರ್ಥಗಳು ಮತ್ತು ಪಾನೀಯಗಳನ್ನು ಸೇರುತ್ತಿವೆ ಎಂದು ಅಧ್ಯಯನವೊಂದು ಹೇಳಿದೆ; ಹಾಲು ಕುಡಿಸಲು ಬಳಸುವ ಬಾಟಲಿಗಳ ಮೂಲಕ ಹಸುಗೂಸುಗಳ ದೇಹ ಸೇರುತ್ತಿವೆ.

ಮನುಷ್ಯ ಗರ್ಭದಿಂದ ಭೂಗರ್ಭದವರೆಗೆ ಮೈಕ್ರೊಪ್ಲಾಸ್ಟಿಕ್ ಕಣಗಳು ಹರಡಿರುವುದು ಮಾನವ ಕುಲಕ್ಕೆ ಎಚ್ಚರಿಕೆಯ ಸಂದೇಶ ನೀಡುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಇದರಿಂದ ಘಟಿಸಬಹುದಾದ ಅಪಾಯದಿಂದ ಪಾರಾಗಬೇಕಿದೆ. ಬಯಲುಸೀಮೆಯ ಜಿಲ್ಲೆಗಳಲ್ಲಿ ಸಾವಿರ ಅಡಿ ಆಳಕ್ಕೆ ಹೋದರೂ ನೀರು ಸಿಗುವುದು ದುಸ್ತರವಾಗಿದೆ. ಅಪರೂಪಕ್ಕೆ ನೀರು ಸಿಕ್ಕರೂ ಅದರಲ್ಲಿ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳಿಂದ ಕೂಡಿ ಕಲುಷಿತವಾಗಿದ್ದರೆ ಅದು ಜನರ ಮತ್ತು ಪರಿಸರದ ಆರೋಗ್ಯಕ್ಕೆ ಮಾರಕ ಎಂದು ತಜ್ಞರು ಎಚ್ಚರಿಸಿದ್ದಾರೆ.


ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.

ಅಂತರ್ಜಲ ಅತಿ ಬಳಕೆ

ಭಾರತವು ಜಗತ್ತಿನಲ್ಲಿಯೇ ಅಂತರ್ಜಲವನ್ನು ಅತಿ ಹೆಚ್ಚು ಬಳಸುವ ದೇಶವಾಗಿದೆ. ಅಮೆರಿಕ ಮತ್ತು ಚೀನಾ ಎರಡೂ ಒಟ್ಟಾರೆ ಬಳಸುವುದಕ್ಕಿಂತಲೂ ಹೆಚ್ಚಿನ ಅಂತರ್ಜಲವನ್ನು ಭಾರತದಲ್ಲಿ ಬಳಸಲಾಗುತ್ತಿದೆ. ಅಂತರ್ಜಲದ ಮೂಲಕ ದೇಶದ ಗ್ರಾಮೀಣ ಪ್ರದೇಶದ ಶೇ 85ರಷ್ಟು ಮಂದಿಗೆ ಕುಡಿಯುವ ನೀರು ಪೂರೈಸಲಾಗುತ್ತಿದೆ; ಶೇ 60 ಮಂದಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಅಂತರ್ಜಲದ ಬಳಕೆಯಲ್ಲಿ ಕರ್ನಾಟಕವು ದೇಶದಲ್ಲಿ 10ನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ವ್ಯವಸಾಯಕ್ಕೆ ಶೇ 60ರಷ್ಟು ಅಂತರ್ಜಲ ಬಳಕೆಯಾಗುತ್ತಿದ್ದರೆ, ರಾಜ್ಯದ ಕೋಲಾರ (ಶೇ 193.35), ಬೆಂಗಳೂರು ನಗರ (ಶೇ 186.7), ಚಿಕ್ಕಬಳ್ಳಾಪುರ (ಶೇ 164.33) ಬೆಂಗಳೂರು ಗ್ರಾಮಾಂತರ (ಶೇ 147.05) ಮತ್ತು ಚಿತ್ರದುರ್ಗ (ಶೇ 144.44) ಜಿಲ್ಲೆಗಳಲ್ಲಿ ಅಂತರ್ಜಲವನ್ನು ಮಿತಿಮೀರಿ ಬಳಸಲಾಗುತ್ತಿದೆ.

ಭಾರತದ ಅನೇಕ ರಾಜ್ಯಗಳಲ್ಲಿ ನೀರಿನ ಸಮಸ್ಯೆಯು ನಿಧಾನಕ್ಕೆ ಗಂಭೀರವಾಗುತ್ತಾ ಸಾಗುತ್ತಿದೆ. ದೇಶದಲ್ಲಿ ನೀರಿಗೆ ಸಂಬಂಧಿಸಿದಂತೆ ವಿಚಿತ್ರವಾದ ಸನ್ನಿವೇಶಗಳು ಕಾಣಸಿಗುತ್ತಿವೆ. ಅನೇಕ ರಾಜ್ಯಗಳಲ್ಲಿ ಅಂತರ್ಜಲ ಮಟ್ಟವು ನಿರಂತರವಾಗಿ ಕುಸಿಯುತ್ತಾ ಸಾಗುತ್ತಿದೆ. ಅದೇ ಸಂದರ್ಭದಲ್ಲಿ ಒಂದು ದೊಡ್ಡ ಮಳೆಗೆ ಬೆಂಗಳೂರಿನಂಥ ನಗರದಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಡುತ್ತದೆ. ಇದರ ಹಿಂದೆ ಹಲವು ಸಂಕೀರ್ಣ ಕಾರಣಗಳು ಇದ್ದು, ಈ ದಿಕ್ಕಿನಲ್ಲಿ ಸರ್ಕಾರಗಳು ಮತ್ತು ಜನ ಒಟ್ಟಾಗಿ ಸವಾಲು ಎದುರಿಸಬೇಕಿದೆ ಎಂದು ತಜ್ಞರು ಎಚ್ಚರಿಸುತ್ತಲೇ ಇದ್ದಾರೆ.



ಎಐ ಚಿತ್ರ: ಕಣಕಾಲಮಠ

‘ಮಣ್ಣು, ನೀರು, ಜೀವಿಗಳಿಗೆ ಅಪಾಯಕಾರಿ’



ಕರ್ನಾಟಕದ ಕೊಳವೆ ಬಾವಿಗಳಲ್ಲಿ ಮೈಕ್ರೊ ಮತ್ತು ನ್ಯಾನೊ ಪ್ಲಾಸ್ಟಿಕ್ ಕಣಗಳು ಕಂಡುಬಂದಿರುವುದು ಆತಂಕಕಾರಿ ವಿಚಾರ. ಈ ಸೂಕ್ಷ್ಮ ಕಣಗಳು ಮಣ್ಣು, ನೀರು ಮತ್ತು ಗಾಳಿಯಲ್ಲಿ ಸೇರಿ ಕೃಷಿ ಮತ್ತು ಜೀವಿ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಪ್ಲಾಸ್ಟಿಕ್ ಕಣಗಳು ಮಣ್ಣಿನ ಭೌತಿಕ ಹಾಗೂ ರಾಸಾಯನಿಕ ಗುಣಲಕ್ಷಣಗಳು, ಮಣ್ಣಿನ ರಚನೆಯನ್ನು ಬದಲಾಯಿಸಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ, ಆಮ್ಲೀಯತೆಯನ್ನು ಹೆಚ್ಚಿಸುತ್ತವೆ ಹಾಗೂ ಮಣ್ಣಿನ ಸಾಂದ್ರತೆಯನ್ನು ಕಡಿಮೆ ಮಾಡುತ್ತವೆ. ಪ್ಲಾಸ್ಟಿಕ್ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡುವುದಲ್ಲದೇ, ಸಸ್ಯಗಳ ಬೇರುಗಳಿಗೆ ಆಮ್ಲಜನಕ, ಪೋಷಕಾಂಶ ಮತ್ತು ನೀರಿನ ಪೂರೈಕೆಯನ್ನು ತಡೆಯುತ್ತವೆ. ಜತೆಗೆ, ಸಸ್ಯಗಳ ಜೀವಕೋಶಗಳನ್ನು ಸೇರಿಕೊಂಡು ಅವುಗಳ ಬೆಳವಣಿಗೆ ಹಾಗೂ ಉತ್ಪಾದನೆಯನ್ನು ಕುಂಠಿತಗೊಳಿಸುತ್ತವೆ.

ಕೃಷಿ ತ್ಯಾಜ್ಯ, ಪ್ಲಾಸ್ಟಿಕ್ ಹೊದಿಕೆಗಳು, ತ್ಯಾಜ್ಯ ವಿಲೇವಾರಿ ಕೇಂದ್ರಗಳು, ರಾಸಾಯನಿಕ ಗೊಬ್ಬರದಿಂದ ಉಂಟಾಗುವ ಕಲುಷಿತ ನೀರಿನಿಂದ ಉತ್ಪತ್ತಿಯಾಗುವ ಮೈಕ್ರೊ ಮತ್ತು ನ್ಯಾನೊ ಪ್ಲಾಸ್ಟಿಕ್ ಕಣಗಳು, ಮಣ್ಣಿನ ಹಾಗೂ ಗಡಸು ಕಲ್ಲಿನ ಬಿರುಕುಗಳ ಮೂಲಕ, ಅಂತರ್ಜಲವನ್ನು ಸೇರಿ, ಅದರ ಗುಣಮಟ್ಟವನ್ನು ಕಲುಷಿತಗೊಳಿಸುತ್ತವೆ. ಈ ಕಣಗಳು ಭಾರಿ ಲೋಹಗಳಾದ ಆರ್ಸೆನಿಕ್, ಕ್ಯಾಡ್ಮಿಯಂ, ಪಾದರಸ ಮತ್ತು ಸೀಸದಂಥ ವಿಷಕಾರಿ ರಾಸಾಯನಿಕಗಳನ್ನು ಆಕರ್ಷಿಸುತ್ತವೆ. ನೀರಿನಲ್ಲಿ ಕರಗುವ ಈ ವಿಷಕಾರಿ ಅಂಶಗಳು, ಅಂತರ್ಜಲವನ್ನು ಸಂಪೂರ್ಣವಾಗಿ ಕಲುಷಿತಗೊಳಿಸುತ್ತವೆ.

ಮೈಕ್ರೊಪ್ಲಾಸ್ಟಿಕ್‌ನಿಂದಾಗುವ ಅಪಾಯವನ್ನು ತಪ್ಪಿಸಬೇಕಾದರೆ, ದೈನಂದಿನ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆ ತ್ಯಜಿಸಬೇಕು. ಮುಖ್ಯವಾಗಿ, ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ಬಿಡಬೇಕು. ಪ್ಲಾಸ್ಟಿಕ್ ಉತ್ಪಾದನೆಗೆ ಕಡಿವಾಣ ಹಾಕಿ, ಮರುಬಳಕೆ ಮಾಡಬಹುದಾದ ಜೈವಿಕ ಪ್ಲಾಸ್ಟಿಕ್ ಬಳಕೆಯನ್ನು ಉತ್ತೇಜಿಸಬೇಕು. ಪ್ಲಾಸ್ಟಿಕ್ ತಟ್ಟೆ, ಲೋಟಗಳಲ್ಲಿ ಬಿಸಿ ಆಹಾರ, ಪಾನೀಯ ಸೇವಿಸಬಾರದು. ಮನೆಯಲ್ಲಿ ಉತ್ತಮ ಗುಣಮಟ್ಟದ ನೀರಿನ ಫಿಲ್ಟರ್ ಅಳವಡಿಸಿಕೊಂಡು, ಕುಡಿಯುವ ನೀರಿನಲ್ಲಿ ಸೇರಿರಬಹುದಾದ ಮೈಕ್ರೊಪ್ಲಾಸ್ಟಿಕ್ ಕಣಗಳ ಸೇವನೆಯನ್ನು ತಪ್ಪಿಸಬೇಕು. ಈ ಎಲ್ಲ ಕ್ರಮಗಳನ್ನು ಅನುಸರಿಸಿದರೆ ಮಾತ್ರ ನಾವು ಪರಿಸರವನ್ನು ಮತ್ತು ಮುಂದಿನ ತಲೆಮಾರುಗಳನ್ನು ಪ್ಲಾಸ್ಟಿಕ್‌ನ ಅಪಾಯಗಳಿಂದ ರಕ್ಷಿಸಬಹುದು.

ಜಿ.ವಿ.ಶ್ರೀನಿವಾಸರೆಡ್ಡಿ, ಭೂಗರ್ಭಶಾಸ್ತ್ರಜ್ಞ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ

ರಾಜ್ಯದ ಕೊಳವೆ ಬಾವಿ ನೀರಿನಲ್ಲಿ ಪತ್ತೆಯಾದ ಮೈಕ್ರೊಪ್ಲಾಸ್ಟಿಕ್ ಕಣಗಳು (2024ರ ನವೆಂಬರ್)

ಜಿಲ್ಲೆ	ತಾಲ್ಲೂಕು	ಗ್ರಾಮ	ಮೈಕ್ರೊಪ್ಲಾಸ್ಟಿಕ್ ಕಣಗಳು
ತುಮಕೂರು	ಪಾವಗಡ	ಕ್ಯಾತಗಾನಹಳ್ಳಿ	ಎಲ್‌ಡಿಪಿಇ, ಎಚ್‌ಡಿಪಿಇ
ಬಳ್ಳಾರಿ	ಬಳ್ಳಾರಿ	ಹವಂಭಾವಿ	ಪಿಎ
ರಾಯಚೂರು	ಮಾನ್ವಿ	ಕಲ್ಲೂರು	ಪಿಪಿ
ರಾಯಚೂರು	ಸಿಂಧನೂರು	ಹಂಚಿನಹಾಳ್	ಪಿಇ
ಕೊಪ್ಪಳ	ಕೊಪ್ಪಳ	ಮುನಿರಾಬಾದ್ ಆರ್ ಎಸ್	ಪಿಪಿ
ಚಿಕ್ಕಬಳ್ಳಾಪುರ	ಬಾಗೇಪಲ್ಲಿ	ಜಿ.ಮದ್ದೇಪಲ್ಲಿ	ಪಿಎ, ಪಿಇ
ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ಗಂಜಿಗುಂಟೆ	ಪಿಇ
ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ಗಂಗನಹಳ್ಳಿ	ಎಚ್‌ಡಿಪಿಇ, ಪಿಇಟಿ
ಕೋಲಾರ	ಶ್ರೀನಿವಾಸಪುರ	ಮುದಿಮಡಗು	ಎಚ್‌ಡಿಪಿಇ, ಪಿಪಿ
ಕೋಲಾರ	ಶ್ರೀನಿವಾಸಪುರ	ಚಿಕ್ಕೇವಾರಿಪಲ್ಲಿ	ಪಿಪಿ

ರಾಜ್ಯದ ಕೊಳವೆ ಬಾವಿ ನೀರಿನಲ್ಲಿ ಪತ್ತೆಯಾದ ಮೈಕ್ರೊಪ್ಲಾಸ್ಟಿಕ್ ಕಣಗಳು (2025ರ ಫೆಬ್ರುವರಿ)

ಜಿಲ್ಲೆ	ತಾಲ್ಲೂಕು	ಗ್ರಾಮ	ಮೈಕ್ರೊಪ್ಲಾಸ್ಟಿಕ್ ಕಣಗಳು
ತುಮಕೂರು	ಮಧುಗಿರಿ	ಬಡವನಹಳ್ಳಿ	ಎಚ್‌ಡಿಪಿಇ
ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ಗಂಜಿಗುಂಟೆ	ಎಚ್‌ಡಿಪಿಇ, ಎಲ್‌ಡಿಪಿಇ, ಪಿಪಿ, ಪಿಇಟಿ, ಪಿಇ, ಪಿಎಸ್
		ಗಂಗನಹಳ್ಳಿ	ಪಿಪಿ
ಕೋಲಾರ	ಕೋಲಾರ	ಲಕ್ಷ್ಮೀಸಾಗರ	ಪಿಇ
		ನರಸಾಪುರ	ಪಿಎ, ಪಿಇಟಿ
		ಕೊಂಡರಾಜನಹಳ್ಳಿ	ಪಿಎ, ಪಿಇ
	ಶ್ರೀನಿವಾಸಪುರ	ಮುದಿಮಡಗು	ಎಚ್‌ಡಿಪಿಇ, ಎಲ್‌ಡಿಪಿಇ, ಪಿಪಿ, ಪಿಎ, ಪಿಇಟಿ, ಪಿಇ, ಪಿಎಸ್



ಪ್ಲಾಸ್ಟಿಕ್ ಅಂತರ್ಜಲ ಸೇರಿದ್ದು ಹೇಗೆ?

ಏಕಬಳಕೆಯ ಪ್ಲಾಸ್ಟಿಕ್ ಅನ್ನು ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ನಿರ್ಬಂಧ ಇಲ್ಲದೇ ಬಳಕೆ ಮಾಡಲಾಗುತ್ತಿದೆ. ಗೃಹಬಳಕೆಯ ಪ್ಲಾಸ್ಟಿಕ್ ಅನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಅಂತರ್ಜಲಕ್ಕೆ ನ್ಯಾನೋಪ್ಲಾಸ್ಟಿಕ್ ಕಣಗಳು ಸೇರಲು ಕಾರಣ ಎಂದು ಅಧ್ಯಯನ ಹೇಳಿದೆ.

- ಹಳ್ಳಿಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಹೊರವಲಯದಲ್ಲಿ ಎಸೆಯಲಾಗುತ್ತಿದೆ
- ಕೃಷಿ ಚಟುವಟಿಕೆಗಳಿಗೆ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸುತ್ತಿರುವುದು
- ಕೆರೆ-ಕುಂಟೆಗಳಲ್ಲಿ ಮೀನು ಸಾಕಲು ಪ್ಲಾಸ್ಟಿಕ್ ಬಳಸುತ್ತಿರುವುದು
- ಬಟ್ಟೆ ಒಗೆಯುವುದು ಮತ್ತು ಪ್ರಾಣಿಗಳನ್ನು ತೊಳೆಯುವುದು
- ಪ್ಲಾಸ್ಟಿಕ್ ಚೀಲಗಳು, ಬಿಸ್ಕತ್ತು, ಚಾಕೊಲೇಟ್, ಎಣ್ಣೆ, ಹಾಲು, ಹೊಗೆಸೊಪ್ಪು ಪೊಟ್ಟಣಗಳು (ಎಲ್‌ಡಿಪಿಇ, ಎಚ್‌ಡಿಪಿಇ)
- ನೀರು ಮತ್ತು ತಂಪು ಪಾನೀಯದ ಪಿಇಟಿ ಬಾಟಲಿಗಳು
- ಪಿಪಿ ಮತ್ತು ಪಿಎಸ್‌ನಿಂದ ಮಾಡಿದ ಏಕಬಳಕೆಯ ತಟ್ಟೆ, ಚಮಚಗಳು
- ಕುಂಟೆಗಳ ಸುತ್ತ ಹೊದಿಕೆಯಾಗಿ ಬಳಸಲಾಗುವ ಪಿಇ ಮತ್ತು ಇವಿಎ (ಈಥೈಲ್–ವಿನೈಲ್ ಅಸಿಟೇಟ್)
- ಮಣ್ಣಿನ ತೇವಾಂಶ ಕಾಪಾಡಲು ಬಳಸಲಾಗುವ ಪಿಇ ಫಿಲಂಗಳು
- ಪಿಇ, ಪಿಪಿಯಿಂದ ಮಾಡಿದ ಬೀಜದ ಚೀಲಗಳು

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 28-6-2001

ತಮಿಳುನಾಡು ಕಾಡಿನಿಂದ ರಾಜ್ಯ ಅರಣ್ಯದತ್ತ ವೀರಪ್ಪನ್ ತಂಡ

ಚಾಮರಾಜನಗರ, ಜೂನ್ 27– ವೀರಪ್ಪನ್ ಮತ್ತು ಆತನ ಸಹಚರರು ತಮಿಳುನಾಡು ಅರಣ್ಯದಿಂದ ಪಲಾಯನಗೊಂಡು ಕರ್ನಾಟಕದ ಅರಣ್ಯದತ್ತ ಧಾವಿಸಿದ್ದಾರೆ ಎಂಬ ಮಾಹಿತಿಯನ್ನು ಕರ್ನಾಟಕ ವಿಶೇಷ ಪಡೆ ಗುಪ್ತಚಾರ ದಳ ಎಸ್‌ಟಿಎಫ್‌ಗೆ ಒದಗಿಸಿದೆ.

ರಾಜ್ಯದ ಗಡಿಯಂಚಿನ ಅರಣ್ಯದ ಮೇಲೆ ಕರ್ನಾಟಕ ವಿಶೇಷ ಪಡೆ ಕಾರ್ಯಾಚರಣೆ ತೀವ್ರಗೊಳಿಸಿದೆ. ರಾಜ್ಯದ ವ್ಯಾಪ್ತಿಯಲ್ಲಿರುವ ಎಸ್‌ಟಿಎಫ್ ಶಿಬಿರಗಳಲ್ಲಿ ಮುನ್ನೆಚ್ಚರಿಕೆ ವಹಿಸಲು ಸೂಚಿಸಿದೆ.

75 ವರ್ಷಗಳ ಹಿಂದೆ

ಗುರುವಾರ, 28-6-1951

ಕಾಂಗ್ರೆಸ್ ಬಿಡುವ ಬಗ್ಗೆ ಸಾಕಷ್ಟು ಕಾದು ನಿರ್ಧಾರ ಕೈಗೊಳ್ಳಲಾಗಿದೆ

ನವದೆಹಲಿ, ಜೂನ್ 27– ಕಾಂಗ್ರೆಸ್ಸನ್ನು ಬಿಟ್ಟು ಪ್ರತ್ಯೇಕ ಪಕ್ಷವನ್ನು ಕಟ್ಟಿರುವವರು ಅನಗತ್ಯ ಆತುರದಿಂದ ವರ್ತಿಸಿದ್ದಾರೆಂಬ ಆಪಾದನೆಯನ್ನು ಹೊಸದಾಗಿ ರಚಿಸಲ್ಪಟ್ಟ ಪ್ರಜಾಪಾರ್ಟಿಯ ನಾಯಕ ಆಚಾರ್ಯ ಕೃಪಲಾನಿ ಅವರು ನಿರಾಕರಿಸಿ ಖಂಡಿಸಿದರು.

ಕೃಪಲಾನಿಯವರು ಈ ಬಗ್ಗೆ ದೀರ್ಘ ಹೇಳಿಕೆಯೊಂದನ್ನಿತ್ತು ಹೊಸಪಾರ್ಟಿಯನ್ನು ಕಟ್ಟಿರುವ ಕಾಂಗ್ರೆಸ್ಸಿಗರು ಆತ್ಮಪೂರ್ವಕವಾಗಿ ಸಾಕಷ್ಟು ಕಾದುನೋಡಿ ನಂತರ ನಿರ್ಧಾರ ಕೈಗೊಂಡರು ಎಂದು ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

28 ಜೂನ್ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು, ತಿಥಿ: ನಿಜ ಜ್ಯೇಷ್ಠ ಶುಕ್ಲ ಚತುರ್ದಶಿ ಗಂ. 27-07, **ನಕ್ಷತ್ರ:** ಜ್ಯೇಷ್ಠ ಗಂ. 25-09, **ಯೋಗ:** ಶುಭ ಗಂ. 13-30, **ಕರಣ:** ಗರ ಗಂ. 13-56, ಮಿಥುನ ಮಾಸದ 13 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 2 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-10, **ಸೂರ್ಯಾಸ್ತ:** 06-57, **ಮುಸ್ಲಿಂ ದಿನಾಂಕ:** 12 ಮೊಹರಂ, **ಅದೃಷ್ಟ ಸಂಖ್ಯೆ:** 7, 3

ಮೇಷ: ನಿಮ್ಮ ಬುದ್ಧಿವಂತಿಕೆ ಕೊರತೆಯಿಂದ ಸಮಸ್ಯೆಯಲ್ಲಿ ಸಿಲುಕುವ ಸಂಭವವಿರುವುದು. ನಿಮ್ಮ ಚಂಚಲ ಸ್ವಭಾವದಿಂದ ಇಂದಿನ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶಗಳಿರುತ್ತದೆ.

ವೃಷಭ: ದೇಹದಲ್ಲಿ ಉಷ್ಣಾಂಶ ಅಧಿಕವಾಗುವುದರಿಂದ ಅನಾರೋಗ್ಯ ಎದುರಾಗಬಹುದು. ಬಹುದಿನಗಳ ನಂತರ ತಾಯಿಯ ಮಮಕಾರ ದೊರೆತು ತೃಪ್ತಿ ದೊರೆಯಲಿದೆ. ದೇವತಾ ಕಾರ್ಯಗಳನ್ನು ನಡೆಸುವುದರಿಂದ ಶುಭ.

ಮಿಥುನ: ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ಹಿಂದಿನ ಪರಿಶ್ರಮದ ಫಲವನ್ನು ಈ ದಿನ ಪಡೆಯುವ ಸಾಧ್ಯತೆ ಇದೆ. ಕಾರ್ಮಿಕರಿಗೆ ಆಡಳಿತ ವರ್ಗದವರಿಂದ ಅನುಕೂಲ ಉಂಟಾಗಲಿದೆ.

ಕರ್ಕಾಟಕ: ನಿಮಗೆ ಸಂಬಂಧವಿಲ್ಲದ ವಿಚಾರಗಳಿಂದ, ವಿವಾದಗಳಿಂದ ದೂರ ಉಳಿಯುವುದು ಉತ್ತಮ. ಇಂದಿನ ಕೆಲಸವನ್ನು ಹತ್ತು ಬಾರಿ ಯೋಚಿಸಿ ಕಾರ್ಯ ಪ್ರವೃತ್ತರಾಗುವುದು ಉತ್ತಮ.

ಸಿಂಹ: ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿರುವುವು. ನೌಕರರಿಗೆ ದುಡಿಮೆಗೆ ತಕ್ಕ ಪ್ರತಿಫಲ ದೊರೆಯುವುದು.

ಕನ್ಯಾ: ದಿನದ ಆರಂಭದಲ್ಲಿ ಕೆಲಸ ಕಾರ್ಯಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ನಿಮ್ಮಲ್ಲಿ ನೈತಿಕ ಧೈರ್ಯ ಹೆಚ್ಚುತ್ತದೆ. ಇನ್ನೊಬ್ಬರಿಗೆ ಗೌರವವನ್ನು ಕೊಟ್ಟು ಗೌರವವನ್ನು ಅಪೇಕ್ಷಿಸುವ ಮನಃಸ್ಥಿತಿಯನ್ನು ಇಟ್ಟುಕೊಳ್ಳಿರಿ.

ತುಲಾ: ಅಧಿಕ ಆತ್ಮವಿಶ್ವಾಸದಿಂದ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡುವುದು ಸರಿಯಲ್ಲ. ನಿವೃತ್ತಿಯ ನಂತರದ ಕೆಲಸಗಳ ಬಗ್ಗೆ ಯೋಚನೆ ಬರಲಿದೆ. ಸಂಘ ಸಂಸ್ಥೆಯಲ್ಲಿ ಪ್ರಮುಖ ಸ್ಥಾನ ಪಡೆಯಲು ಹೆಚ್ಚಿನ ತಯಾರಿ ನಡೆಸುವಿರಿ.

ವೃಶ್ಚಿಕ: ಇತರರು ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ನಿಮ್ಮ ಸ್ವಂತ ಕೆಲಸಗಳು ನಿಧಾನ ಗತಿಯಲ್ಲಿ ಸಾಗಲಿವೆ . ನಿಮ್ಮೆದುರು ಹಲವಾರು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ.

ಧನು: ಉದ್ಯೋಗ ಸಿಗುವ ಸಮಯದಲ್ಲೇ ವೇತನದ ಬಗ್ಗೆ ಗಮನ ನೀಡುವುದು ಸರಿಯಲ್ಲ. ಮಾತಿನ ಕುಶಲತೆಯಿಂದ ಇತರರನ್ನು ಗೆಲ್ಲುವ, ಎದುರಾಳಿಯನ್ನು ಕಟ್ಟಿಹಾಕುವ ಸಾಮರ್ಥ್ಯ ನಿಮ್ಮಲ್ಲಿರುವುದು ಇಂದು ಶುಭ ತರುವುದು.

ಮಕರ: ಹಣ ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ. ವ್ಯಕ್ತಿಯ ರೂಪ ನೋಡಿ ಮರುಳುಗೊಂಡ ನೀವು ಅವರ ಗುಣದ ಪರಿಚಯವನ್ನು ಹೊಂದಿ ಅವರಿಂದ ಅಂತರವನ್ನು ಕಾಯ್ದುಕೊಳ್ಳುವಿರಿ

ಕುಂಭ: ಬಾಲ್ಯದ ಸ್ನೇಹಿತರ ಭೇಟಿಯು ಸಂತೋಷವನ್ನು ಉಂಟುಮಾಡಲಿದೆ. ದಿನಬಳಕೆಯ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ಸರಳ ವ್ಯಕ್ತಿತ್ವದಿಂದ ಹೆಚ್ಚಿನ ಮೆಚ್ಚುಗೆಯನ್ನು ಗಳಿಸುವಿರಿ.

ಮೀನ: ಮನೆಗೆ ಸಹೋದರಿಯ ಆಗಮನ ಸಂತೋಷವನ್ನು ಉಂಟುಮಾಡಲಿದೆ. ಉದ್ಯೋಗದ ನಿಮಿತ್ತವಾಗಿ ವಿದೇಶಕ್ಕೆ ಹೋಗುವ ಕನಸು ಇಂದು ಚಿಗುರೊಡೆಯಲಿದೆ.

ಪದಬಂಧ 6447


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಲ್ಲಾ ರಂಗದಲ್ಲೂ ಪರಿಣಿತಿ ಹೊಂದಿರುವ ಪಂಡಿತ (4)
3.ಸರಾಗವಾಗಿ ಬಂದಿರುವ ವಂಚಕ (4)
5.ಕುಂಬಾರನ ಚಕ್ರ (3)
7.ರಾಣಿಯ ಹತ್ತಿರವಿರುವ ತೊಗಲಿನ ಹಗ್ಗ (2)
8.ಸಸಾರವಾಗಿ ಹರಿಯುತ್ತಿರುವ ದ್ರವ (2)
10.ಸಮಯಕ್ಕೆ ಸರಿಯಾಗಿ ಬಂದಿರುವ ಮೃತ್ಯು ದೇವತೆ (2)
12.ಪಾಠಶಾಲೆಯಲ್ಲಿ ನೇಣು ಕಾಣುತ್ತಿದೆಯಲ್ಲಾ? (2)
14.ಇದು ಮೃದುವಲ್ಲ! ಒರಟು! (3)
16.ಸರಣಿಯಲ್ಲಿ ಕಾಣುತ್ತಿರುವ ಚೈನು (4)
17.ಕತ್ತಿಯನ್ನು ಹೊತ್ತಿರುವ ಕಾಡುಕೋಣ (4)

ಮೇಲಿಂದ ಕೆಳಕ್ಕೆ

1.ಪಗಾರ ತೆಗೆದುಕೊಳ್ಳಲು ಬಂದಿರುವ ಹಿಸ್ಸೆದಾರ (4)
2.ತರಬೇತಿಗಾಗಿ ಬಂದಿರುವ ಗುಂಪು (2)
3.ಓರಿಗೆಯವರೆಲ್ಲಾ ಸೇರಿ ಅಗಿದಿರುವ ಚರಂಡಿ (2)
4.ಮಣಿಧರಿಸಿ ಮರದ ಹತ್ತಿರ ಸುಂದರಿ ಬಂದಿದ್ದಾಳಲ್ಲಾ! (3)
6.ಗುಗ್ಗುರಿ ತಿನ್ನುತ್ತಿರುವವನು ದಡ್ಡ! (2)
7.ಹೆಚ್ಚು ವ್ಯಯಮಾಡದಂತೆ ಹಿಡಿತದಲ್ಲಿ ಖರ್ಚುಮಾಡುವಿಕೆ (4)
9.ವೇಷ ಧರಿಸಿದವರೆಲ್ಲರೂ ಒಟ್ಟುಗೂಡುವಿಕೆ (4)
11.ಕಲ್ಯಾಣ ಮಾಡಿಕೊಳ್ಳುತ್ತಿರುವ ಸುತ (4)
12. ಪಾಯ ತೋಡುವಾಗ ವಿತರಿಸಿದ ಸಿಹಿ ಭಕ್ಷ್ಯ (3)
13.ಹಾರಾಡುವಾಗ ಕೇಳಿಸಿದ ಗಾನ (2)
14.ಅಗಣಿತವಾಗಿ ಕಾಣುತ್ತಿರುವ ಆಶ್ರಯಸ್ಥಾನ (2)
15.ಸಖನಿಗೆ ನೆಮ್ಮದಿ ಈ ರೀತಿ ಬಂದಿದೆ (2)



6446ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಗಿ 3.ಮಾದಕ 5.ಪವಮಾನ 6.ಗಡವ 7.ಪಾರ್ಥಿವ 8.ಸಾರ್ವಜನಿಕ 9.ಸಂಧಾನ 10.ಪ್ರಶಾಂತ 13.ಪ್ರಕರಣ 14.ನಿರ್ಝರ 15.ಕುರಿ

ಮೇಲಿಂದ ಕೆಳಕ್ಕೆ: 1.ಉಪಯೋಗ 2.ಸಮಾಧಿ 4.ಕಲರವ 5.ಪರ್ಯಾವಸಾನ 7.ಪಾಕಪ್ರವೀಣ 9.ಸಂಜೀವಿನಿ 10.ತಲೋದರಿ 12.ಅಂಕಣ

ಸುಡೊಕು 6830

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		4		5			8	
	1					5		9
8		3			9		1	
3		9	5		1			8
				9			4	
5		1	6		8			
	7			3	5			4
4		5						
	8			6		3		1

6829 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇರಾನ್ ರೆಡಾರ್ ಮೇಲೆ ಅಮೆರಿಕ ದಾಳಿ

ಮಧ್ಯಂತರ ಕದನ ವಿರಾಮ ಉಲ್ಲಂಘನೆ: ಅಂತಿಮ ಮಾತುಕತೆ ಮೇಲೆ ಅನಿಶ್ಚಿತತೆ

ವಾಷಿಂಗ್ಟನ್ (ಎಪಿ): ಹೊರ್ಮುಜ್ ಜಲಸಂಧಿ ದಾಟುತ್ತಿದ್ದ ಅಮೆರಿಕದ ಸರಕು ಸಾಗಣೆ ಹಡಗಿನ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ, ಅಮೆರಿಕವು ಇರಾನ್‌ನ ರೆಡಾರ್ ಸೌಲಭ್ಯದ ಮೇಲೆ ದಾಳಿ ನಡೆಸಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಉಭಯ ದೇಶಗಳ ನಡುವೆ ಜಾರಿಯಲ್ಲಿರುವ ಮಧ್ಯಂತರ ಕದನ ವಿರಾಮವನ್ನು ಇರಾನ್ ಉಲ್ಲಂಘಿಸಿದೆ' ಎಂದು ಟ್ರಂಪ್ ಆರೋಪಿಸಿದ್ದಾರೆ.

'ಇರಾನ್ ದಾಳಿಗೆ ಪ್ರತಿದಾಳಿ ತೀವ್ರಗೊಳಿಸುವಿರಾ ಎಂಬ ಸುದ್ದಿಗಾರರ ಪ್ರಶ್ನೆಗೆ, 'ಅದಕ್ಕೆ ಶೀಘ್ರದಲ್ಲೇ ಉತ್ತರ ಲಭಿಸಲಿದೆ' ಎಂದು ಟ್ರಂಪ್ ಹೇಳಿದ್ದಾರೆ. ಇದರ ಬೆನ್ನಲ್ಲೇ, ಅಮೆರಿಕದ ಪಡೆ 'ಇರಾನ್ ರೆಡಾರ್' ಸೌಲಭ್ಯಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ದಾಳಿ ನಡೆಸಿರುವುದನ್ನು ಅಮೆರಿಕದ ಸೆಂಟ್ರಲ್ ಕಮಾಂಡ್ ದೃಢಪಡಿಸಿದೆ.

'ದಾಳಿ ಮುಂದುವರಿದಿದ್ದರೂ, ಇರಾನ್ ಜತೆಗಿನ ಅಂತಿಮ ಮಾತುಕತೆ ಒಳ್ಳೆಯ ರೀತಿಯಲ್ಲೇ ಸಾಗುತ್ತಿದೆ. ಅವರು ಸ್ವಲ್ಪ ಹಿಂದುಳಿದಿದ್ದಾರೆ' ಎಂದು ಟ್ರಂಪ್ ಹೇಳಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷಕ್ಕೆ ಶಾಶ್ವತ ತೆರೆ ಎಳೆಯುವ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲೇ ದಾಳಿ– ಪ್ರತಿದಾಳಿ ನಡೆದಿರುವುದು ಮತ್ತೆ ಅನಿಶ್ಚಿತತೆ ಹೆಚ್ಚುವಂತೆ ಮಾಡಿದೆ. ಹೊರ್ಮುಜ್ ಜಲಸಂಧಿ ಮೇಲಿನ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳಲು ಅಮೆರಿಕ ಪ್ರಯತ್ನಿಸುತ್ತಿರುವುದನ್ನು ಇರಾನ್ ತೀವ್ರವಾಗಿ ವಿರೋಧಿಸಿದೆ. ವಾಣಿಜ್ಯ ಹಡಗುಗಳ ಸಂಚಾರಕ್ಕೆ ಒಮಾನ್ ಕರಾವಳಿ ಮೂಲಕ ಪರ್ಯಾಯ ಮಾರ್ಗವನ್ನು ಸೂಚಿಸಲಾಗಿದ್ದರೂ, ಅಲ್ಲಿ ನೀರಿನ ಆಳ ಕಡಿಮೆ ಇರುವುದು ಸೇರಿದಂತೆ ಹಲವು ಕಾರಣಗಳಿಂದ ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ದಟ್ಟಣೆ ಮುಂದುವರಿದಿದೆ.

> ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಪಾಕಿಸ್ತಾನ ನಡೆಸಿದ ಪ್ರಯತ್ನಗಳಿಂದ ಅಮೆರಿಕ–ಇರಾನ್ ಒಪ್ಪಂದಕ್ಕೆ ಬಂದಿದ್ದು, ಪಾಕಿಸ್ತಾನವು ವಿಶ್ವದ 'ಶಾಂತಿ ಸ್ಥಾಪಕ' ರಾಷ್ಟ್ರವಾಗಿ ಹೊರಹೊಮ್ಮಿದೆ
> **ಶೆಹಬಾಜ್ ಷರೀಫ್,** ಪಾಕಿಸ್ತಾನದ ಪ್ರಧಾನಿ



ಅಮೆರಿಕದಲ್ಲಿರುವ ಇಸ್ರೇಲ್ ರಾಯಭಾರಿ ಯೇಚಿಯೆಲ್ ಲೇಥರ್, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಅಮೆರಿಕದಲ್ಲಿರುವ ಲೆಬನಾನ್ ರಾಯಭಾರಿ ನದಾ ಹಮಾದೆಹ್ ಮೊವಾದ್ ಶನಿವಾರ ವಾಷಿಂಗ್ಟನ್‌ನಲ್ಲಿ ಲೆಬನಾನ್–ಇಸ್ರೇಲ್ ನಡುವಿನ ಒಪ್ಪಂದಕ್ಕೆ ಸಹಿ ಹಾಕಿದರು– ಎಎಫ್‌ಪಿ ಚಿತ್ರ

> ಹೊರ್ಮುಜ್ ಜಲಸಂಧಿಯನ್ನು ಇರಾನ್ ನಿಯಂತ್ರಿಸುತ್ತದೆ. ಆದ್ದರಿಂದ ನಿಯಮಗಳನ್ನು ಗೌರವಿಸಿ. ನಿಯಂತ್ರಣವನ್ನು ಹೇರಲಿ ಎಂದು ತಪ್ಪಾಗಿ ತಿಳಿಯಬೇಡಿ
> **ಇಬ್ರಾಹಿಂ ಅಜೀಜ್,** ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತಾ ಮಂಡಳಿ ಮುಖ್ಯಸ್ಥ

> ಇತ್ತೀಚಿನ ದಿನಗಳಲ್ಲಿ 115 ಹಡಗುಗಳು ಹೊರ್ಮುಜ್ ಜಲಸಂಧಿ ದಾಟಿವೆ. ಇನ್ನೂ 500ಕ್ಕೂ ಹೆಚ್ಚು ಹಡಗುಗಳು, ನಾವಿಕರು ಜಲಸಂಧಿಯಲ್ಲಿ ಸಿಲುಕಿಕೊಂಡಿದ್ದಾರೆ
> **ಆರ್ಸೆನಿಯೊ ಡೊಮಿಂಗ್ವೆಜ್,** ವಿಶ್ವಸಂಸ್ಥೆ ಐಎಂಒ ಪ್ರಧಾನ ಕಾರ್ಯದರ್ಶಿ

ಇಸ್ರೇಲ್–ಲೆಬನಾನ್ ಒಪ್ಪಂದ

ವಾಷಿಂಗ್ಟನ್ (ಎಪಿ): 'ಇಸ್ರೇಲ್ ಮತ್ತು ಲೆಬನಾನ್ ನಡುವೆ ಸಮಗ್ರ ಶಾಂತಿ ಒಪ್ಪಂದಕ್ಕೆ ದಾರಿ ಮಾಡಿಕೊಡುವ ತ್ರಿಪಕ್ಷೀಯ ಚೌಕಟ್ಟಿನ ಒಪ್ಪಂದಕ್ಕೆ ಅಮೆರಿಕ, ಇಸ್ರೇಲ್ ಮತ್ತು ಲೆಬನಾನ್ ಶುಕ್ರವಾರ ವಾಷಿಂಗ್ಟನ್‌ನಲ್ಲಿ ಸಹಿ ಹಾಕಿದವು.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಅಮೆರಿಕದಲ್ಲಿರುವ ಇಸ್ರೇಲ್ ರಾಯಭಾರಿ ಯೇಚಿಯೆಲ್ ಲೇಥರ್, ಅಮೆರಿಕದಲ್ಲಿರುವ ಲೆಬನಾನ್ ರಾಯಭಾರಿ ನದಾ ಹಮಾದೆಹ್ ಮೊವಾದ್ ಸಹಿ ಮಾಡಲಾದ ಈ ಒಪ್ಪಂದವನ್ನು ಜಂಟಿಯಾಗಿ ಘೋಷಿಸಿದರು. ಆದರೆ, ಒಪ್ಪಂದದ ಚೌಕಟ್ಟಿನ ವಿವರಗಳನ್ನು ಬಹಿರಂಗಪಡಿಸಿಲ್ಲ.

ಲೆಬನಾನ್‌ನಲ್ಲಿ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರು ಮತ್ತು ಇಸ್ರೇಲ್ ನಡುವಿನ ಸಂಘರ್ಷಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ವಾಷಿಂಗ್ಟನ್‌ನಲ್ಲಿ ಹಲವು ಸುತ್ತಿನ ಮಾತುಕತೆಯ ಬಳಿಕ ಈ ಒಪ್ಪಂದಕ್ಕೆ ಬರಲಾಗಿದೆ. ಇಸ್ರೇಲ್ ಮತ್ತು ಹಿಜ್ಬುಲ್ಲಾ ಬಂಡುಕೋರರ ನಡುವೆ ದಾಳಿ ಮುಂದುವರಿದಿರುವುದು ಇರಾನ್ ಮತ್ತು ಅಮೆರಿಕ ನಡುವಿನ ಅಂತಿಮ ಒಪ್ಪಂದಕ್ಕೆ ಅಡ್ಡಿಯಾಗಿತ್ತು.

'ಇಸ್ರೇಲ್ ಜತೆಗಿನ ಒಪ್ಪಂದವು, ಲೆಬನಾನ್‌ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆ ಮರುಸ್ಥಾಪಿಸಿ, ಲೆಬನಾನ್ ಜನರು ಘನತೆ, ಭದ್ರತೆ ಮತ್ತು ಸಮೃದ್ಧಿಯಲ್ಲಿ ಬದುಕಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿದೆ' ಎಂದು ಅಮೆರಿಕದಲ್ಲಿರುವ ಲೆಬನಾನ್ ರಾಯಭಾರಿ ನದಾ ಹಮಾದೆಹ್ ಮೊವಾದ್ ಹೇಳಿದ್ದಾರೆ.

ಇರಾನ್ ದಾಳಿ: ಬಹರೇನ್ ಆರೋಪ

ದುಬೈ (ಎಪಿ): 'ದೇಶದ ಪ್ರಮುಖ ನೆಲೆಗಳನ್ನು ಗುರಿಯಾಗಿಸಿ ಇರಾನ್ ಶನಿವಾರ ಡ್ರೋನ್ ದಾಳಿ ನಡೆಸಿದೆ' ಎಂದು ಬಹರೇನ್ ಆರೋಪಿಸಿದೆ.

ದಕ್ಷಿಣ ಕರಾವಳಿಯಲ್ಲಿ ಅಮೆರಿಕದ ವಾಯುದಾಳಿಗೆ ಪ್ರತಿಯಾಗಿ, ಅಮೆರಿಕದ ಪಡೆಗಳಿಗೆ ಸಂಬಂಧಿಸಿದ ಸೇನಾ ನೆಲೆಗಳ ಮೇಲೆ ವಾಯು ದಾಳಿ ನಡೆಸಲಾಗಿದೆ ಎಂದು ಇರಾನ್ ಹೇಳಿದೆ.

ಬಹರೇನ್‌ನಲ್ಲಿ ಅಮೆರಿಕದ ನೌಕಾಪಡೆಯ ಐದನೆಯ ವಾಯುನೆಲೆ ಇದ್ದು, ಇಲ್ಲಿಂದ ಇರಾನ್ ಗುರಿಯಾಗಿಸಿ ದಾಳಿ ನಡೆಸಲಾಗುತ್ತದೆ.

ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೆಚ್ಚಳ ಅಗತ್ಯ: ಸಾಗರ್ ಅದಾನಿ

ಲಂಡನ್ (ಪಿಟಿಐ): 'ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಪೂರೈಸಲು ಮುಂದಿನ ಎರಡು ದಶಕದಲ್ಲಿ ದೇಶದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 2 ಸಾವಿರ ಗಿಗಾವಾಟ್‌ನಷ್ಟು ಹೆಚ್ಚಿಸಬೇಕಿದೆ' ಎಂದು ಅದಾನಿ ಗ್ರೀನ್ ಎನರ್ಜಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಸಾಗರ್ ಅದಾನಿ ಹೇಳಿದ್ದಾರೆ.


ಸಾಗರ್ ಅದಾನಿ

ಹೆಚ್ಚುತ್ತಿರುವ ಇಂಧನ ಬೇಡಿಕೆ ಪೂರೈಸುವ ಸವಾಲನ್ನು ಭಾರತ ಎದುರಿಸುತ್ತಿದೆ. ವಿದ್ಯುತ್ ಕೈಗೆಟುಕುವ, ದೊರೆಯಬಹುದಾದ ಮತ್ತು ನವೀಕರಿಸಬಹುದಾದ ಇಂಧನ ಆಗಬೇಕು. ಪಳೆಯುಳಿಕೆ ಇಂಧನ, ಕಲ್ಲಿದ್ದಲಿನಿಂದ ಉತ್ಪಾದಿಸಲಾಗುವ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆ ಮಾಡಬೇಕಿದೆ. ದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ವಿದ್ಯುತ್ ಸಾಮರ್ಥ್ಯವನ್ನು ನಿರ್ಮಿಸಬೇಕಿದೆ ಎಂದು ಹೇಳಿದ್ದಾರೆ.

ಭಾರತವು ನವೀಕರಿಸಬಹುದಾದ ಇಂಧನ, ಜಲಜನಕ, ಉಷ್ಣ ಮತ್ತು ಅಣು ವಿದ್ಯುತ್ ಬಳಸಿಕೊಳ್ಳಬೇಕು. ಮೂಲಸೌಕರ್ಯ ವಿಸ್ತರಣೆ, ನವೀಕರಿಸಬಹುದಾದ ಇಂಧನ ಅಭಿವೃದ್ಧಿ, ವಿದ್ಯುತ್ ಪರಿವರ್ತಕಗಳ ಮೇಲ್ದರ್ಜೆಗೇರಿಸುವಿಕೆಯಲ್ಲಿ ಸರ್ಕಾರದ ನಿಯಮಗಳಲ್ಲಿನ ಸುಧಾರಣೆಯಿಂದ ಕಳೆದ ದಶಕದಲ್ಲಿ ಹೂಡಿಕೆ ಹೆಚ್ಚಳವಾಗಿದೆ ಎಂದರು.

2030ರ ವೇಳೆಗೆ ಅದಾನಿ ಸಮೂಹವು ನವೀಕರಿಸಬಹುದಾದ ಮೂಲಗಳಿಂದ 50 ಗಿಗಾವಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಿದೆ. 2035ರ ವೇಳೆಗೆ 10 ಗಿಗಾವಾಟ್‌ನಷ್ಟು ಅಣುವಿದ್ಯುತ್ ಉತ್ಪಾದನೆ ಗುರಿ ಇದೆ. ಇದರ ಜೊತೆಗೆ ವಿದ್ಯುತ್ ಸಂಗ್ರಹ, ವಿದ್ಯುತ್ ಪರಿವರ್ತಕಗಳ ಮೂಲಸೌಕರ್ಯ ಮತ್ತು ಹರಡುವಿಕೆಯ ಜಾಲದಲ್ಲಿ ಹೂಡಿಕೆ ಮಾಡಲಾಗುವುದು ಎಂದಿದ್ದಾರೆ.

ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ವಿದ್ಯುತ್ ವಲಯದಲ್ಲಿ ₹9.43 ಲಕ್ಷ ಕೋಟಿಗೂ (100 ಬಿಲಿಯನ್ ಡಾಲರ್) ಹೆಚ್ಚು ಹೂಡಿಕೆ ಮಾಡಲು ನಿರ್ಧರಿಸಿದ್ದು, ಜಗತ್ತಿನ ಅತಿದೊಡ್ಡ ಖಾಸಗಿ ಹೂಡಿಕೆಗಳಲ್ಲಿ ಇದು ಒಂದಾಗಿದೆ. ವಿದ್ಯುತ್ ವಲಯಕ್ಕೆ ಸರ್ಕಾರ, ಉದ್ಯಮ ಮತ್ತು ಹಣಕಾಸುದಾರರ ನಡುವೆ ಸಹಯೋಗ ಅಗತ್ಯ ಎಂದಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

27-06-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1585 (1580)
ಒಂದು ವಾರದ ಡೆಲಿವರಿ	1580 (1575)
ಪಾಮ್ ವಾರದ ಡೆಲಿವರಿ	1453 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1575 (1575)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,42,700 (1,41,600)
ಬೆಳ್ಳಿ ಕೆ.ಜಿಗೆ	2,24,500 (2,23,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹710
12 ಕ್ಕೆ	₹94
ಮೈಸೂರು: 100 ಕ್ಕೆ	₹725

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹263
ಆರ್‌ಎಸ್‌ಎಸ್-5	₹258
ಗುಡ್ ಲಾಟ್	₹224

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹444-712
ದ್ವಿತಳಿ (ಬಿ.ವಿ)	₹377-836

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1575 (1570)
ಸೋಯಾ (ರಿಫೈನ್ಡ್)	₹1465 (1460)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1455 (1450)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23400
ಎಸಿ	₹14000
ಆರ್‌ಪಿ	₹18500
ಆರ್‌ಸಿ	₹10150

ರಾಜಕೀಯ ಪಕ್ಷಗಳು ಬಿಡದಿ ಟೌನ್‌ಶಿಪ್ ವಿಚಾರವನ್ನು ರೈತರ ಹಿತಾಸಕ್ತಿಗಿಂತಲೂ ಪ್ರತಿಷ್ಠೆಯ ವಿಷಯವಾಗಿ ಪರಿಗಣಿಸಿವೆಯೇ?

• ಹೌದು • ಇಲ್ಲ • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹500-1000

'ಎಚ್‌ಡಿಎಫ್‌ಸಿ: ಆರೋಪಕ್ಕೆ ಆಧಾರವಿಲ್ಲ'

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಅತನು ಚಕ್ರವರ್ತಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವಾಗ ವ್ಯಕ್ತಪಡಿಸಿದ್ದ ಕಳವಳಗಳು ಹಾಗೂ ನಂತರದಲ್ಲಿ ಸಾರ್ವಜನಿಕವಾಗಿ ಆಡಿದ ಮಾತುಗಳಿಗೆ ಪೂರಕವಾಗಿ ಯಾವುದೇ ಸಾಕ್ಷ್ಯವು ಬಾಹ್ಯ ಕಾನೂನು ಸಂಸ್ಥೆಗಳಿಗೆ ಸಿಕ್ಕಿಲ್ಲ ಎಂದು ಬ್ಯಾಂಕ್ ಹೇಳಿದೆ.

ಚಕ್ರವರ್ತಿ ಅವರು ಪ್ರಸ್ತಾಪಿಸಿದ ಅಂಶಗಳು ದಾಖಲೆಗಳಲ್ಲಿ ಉಲ್ಲೇಖವಾಗಿವೆಯೇ, ಅವರ ಅಧ್ಯಕ್ಷ ಅವಧಿಯಲ್ಲಿ ಭಿನ್ನ ಅಭಿಪ್ರಾಯಗಳ ರೂಪದಲ್ಲಿ ಆ ಕಳವಳಗಳನ್ನು ಹೇಳಲಾಗಿತ್ತೇ, ಅದಕ್ಕೆ ಅನುಗುಣವಾಗಿ ಯಾವುದಾದರೂ ಕ್ರಮ ಕೈಗೊಳ್ಳಲಾಗಿತ್ತೇ ಎಂಬ ಬಗ್ಗೆ ಬಾಹ್ಯ ಕಾನೂನು ಸಂಸ್ಥೆಗಳು ಪರಿಶೀಲನೆ ನಡೆಸಿವೆ ಎಂದು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ಬ್ಯಾಂಕ್ ಹೇಳಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ದೇಶದ ಎರಡನೆಯ ಅತಿದೊಡ್ಡ ಬ್ಯಾಂಕ್. ಇದರ ಅಧ್ಯಕ್ಷ ಸ್ಥಾನದಲ್ಲಿದ್ದ ಚಕ್ರವರ್ತಿ ಅವರು ನೈತಿಕತೆಗೆ ಸಂಬಂಧಿಸಿದ ಕೆಲವು ಅಂಶಗಳನ್ನು ಪ್ರಸ್ತಾಪಿಸಿ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಅಲ್ಪಾವಧಿ ಅಧ್ಯಕ್ಷರೊಬ್ಬರು ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಅವಧಿಗೆ ಮೊದಲೇ ಹೊರನಡೆದಿದ್ದು ಇದೇ ಮೊದಲು. ಹೀಗಾಗಿ ಬ್ಯಾಂಕ್‌ನ ಕಾರ್ಯಗಳ ಬಗ್ಗೆ ಕಳವಳಗಳು ಮೂಡಿದ್ದವು.

'ಬ್ಯಾಂಕ್‌ನಲ್ಲಿ ನಾನು ಕಳೆದ ಎರಡು ವರ್ಷಗಳಿಂದ ಗಮನಿಸಿರುವ ನಿರ್ದಿಷ್ಟವಾದ ಕೆಲವು ಬೆಳವಣಿಗೆಗಳು ಹಾಗೂ ಪದ್ಧತಿಗಳು ನನ್ನ ವೈಯಕ್ತಿಕ ಮೌಲ್ಯಗಳು ಹಾಗೂ ನೈತಿಕತೆಗೆ ಅನುಗುಣವಾಗಿ ಇಲ್ಲ. ಇದು ನನ್ನ ತೀರ್ಮಾನಕ್ಕೆ ಕಾರಣ' ಎಂದು ಚಕ್ರವರ್ತಿ ಅವರು ಮಾರ್ಚ್ 17ರಂದು ಸಲ್ಲಿಸಿದ ರಾಜೀನಾಮೆ ಪತ್ರದಲ್ಲಿ ಹೇಳಿದ್ದರು.

ಅವರು ವ್ಯಕ್ತಪಡಿಸಿದ್ದ ಕಳವಳಗಳ ಬಗ್ಗೆ ಎರಡು ಕಾನೂನು ಸಂಸ್ಥೆಗಳು ಪರಿಶೀಲನೆ ನಡೆಸಿವೆ. ಇವು ವಿವಿಧ ದಾಖಲೆಗಳನ್ನು ಪರಿಶೀಲಿಸಿವೆ, ಸ್ವತಂತ್ರ ನಿರ್ದೇಶಕರ ಜೊತೆ ಮಾತುಕತೆ ನಡೆಸಿವೆ ಎಂದು ಬ್ಯಾಂಕ್ ತಿಳಿಸಿದೆ. ಪರಿಶೀಲನೆ ಪ್ರಕ್ರಿಯೆಯಲ್ಲಿ ಭಾಗಿಯಾಗುವಂತೆ ಚಕ್ರವರ್ತಿ ಅವರನ್ನೂ ಕೋರಲಾಗಿತ್ತಾದರೂ ಆ ಪ್ರಕ್ರಿಯೆ ನಡೆಯಲಿಲ್ಲ ಎಂದು ಮಾಹಿತಿ ನೀಡಿದೆ.

ಸೆಷಲ್ಸ್ ತಲುಪಿದ ಪ್ರಧಾನಿ ಮೋದಿ

ವಿಕ್ಟೋರಿಯ (ಸೆಷೆಲ್ಸ್) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಪ್ರವಾಸಕ್ಕಾಗಿ ಸೆಷೆಲ್ಸ್‌ಗೆ ಶನಿವಾರ ಆಗಮಿಸಿದ್ದಾರೆ. ದೇಶದ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರು ಸೆಷಲ್ಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಮ್ಮ ಉನ್ನತ ಮಟ್ಟದ ನಿಯೋಗದೊಂದಿಗೆ ಮೋದಿ ಅವರನ್ನು ಸ್ವಾಗತಿಸಿದರು.

ಮೂರು ದಿನಗಳ ಭೇಟಿಯಲ್ಲಿ ಮೋದಿ ಅವರು ದೇಶದ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವದಲ್ಲಿ ಭಾಗಿಯಾಗಲಿದ್ದಾರೆ. ಜೊತೆಗೆ, ಉಭಯ ದೇಶಗಳ ಸ್ನೇಹವನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ದ್ವಿಪಕ್ಷೀಯ ಚರ್ಚೆ ನಡೆಸಲಿದ್ದಾರೆ.

ಈ ಭೇಟಿಯಲ್ಲಿ ಮೋದಿ ಅವರು ಸೆಷಲ್ಸ್‌ನ ರಾಷ್ಟ್ರೀಯ ಅಸೆಂಬ್ಲಿಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಅಲ್ಲದೆ, ಅಲ್ಲಿರುವ ಭಾರತೀಯ ವಲಸಿಗರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಪ್ರವಾಸದ ಬಗ್ಗೆಗಿನ ತಮ್ಮ ಹೇಳಿಕೆಯಲ್ಲಿ, 'ಸೆಷೆಲ್ಸ್ ಭಾರತದೊಂದಿಗೆ ಜಲಗಡಿ ಹಂಚಿಕೊಂಡಿರುವ ಪ್ರಮುಖ ನೆರೆಯ ದೇಶವಾಗಿದ್ದು, 'ವಿಷನ್ ಮಹಾಸಾಗರ' ಹಾಗೂ ಜಾಗತಿಕ ದಕ್ಷಿಣದ ಪ್ರಗತಿಯಲ್ಲಿ ಭಾರತದ ಮುಖ್ಯ ಪಾಲುದಾರ' ಎಂದು ಮೋದಿ ಅವರು ಹೇಳಿದ್ದಾರೆ.



ಸೆಷಲ್ಸ್‌ಗೆ ಆಗಮಿಸಿದ ಪ್ರಧಾನಿ ಮೋದಿ ಅವರು ಗೌರವ ವಂದನೆ ಸ್ವೀಕರಿಸಿದರು –ಪಿಟಿಐ ಚಿತ್ರ

ಭಾರತ್ ಟ್ಯಾಕ್ಸಿ 500 ನಗರಕ್ಕೆ ವಿಸ್ತರಣೆ: ಶಾ

ಗಾಂಧಿನಗರ (ಪಿಟಿಐ): ಭಾರತ್ ಟ್ಯಾಕ್ಸಿ ಸೇವೆಯನ್ನು ಮುಂದಿನ ಎರಡು ವರ್ಷಗಳಲ್ಲಿ 500ಕ್ಕೂ ಹೆಚ್ಚು ನಗರಗಳಿಗೆ ವಿಸ್ತರಿಸಲಾಗುವುದು ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಶನಿವಾರ ಹೇಳಿದ್ದಾರೆ.

ಗುಜರಾತ್‌ನ 14 ನಗರಗಳಲ್ಲಿ ಭಾರತ್ ಟ್ಯಾಕ್ಸಿ ಸೇವೆಗಳಿಗೆ ಅವರು ಚಾಲನೆ ನೀಡಿ ಮಾತನಾಡಿದರು. 'ಭಾರತ್ ಟ್ಯಾಕ್ಸಿ' ಸಹಕಾರ ತತ್ವದ ಆಧಾರದಲ್ಲಿ ಆ್ಯಪ್ ಮೂಲಕ ಟ್ಯಾಕ್ಸಿ ಸೇವೆ ಒದಗಿಸುವ ಮತ್ತು ಚಾಲಕರ ಮಾಲೀಕತ್ವದ ಅತಿದೊಡ್ಡ ವೇದಿಕೆ ಆಗಿದೆ.

'ಮುಂದಿನ ಎರಡು ವರ್ಷಗಳಲ್ಲಿ ನಾಗ್ಪುರ, ಪುಣೆ, ಮುಂಬೈ, ಲಖನೌ, ಚಂಡೀಗಢ, ಜೈಪುರ ಮತ್ತು ಕೋಲ್ಕತ್ತ ಸೇರಿದಂತೆ 500ಕ್ಕೂ ಅಧಿಕ ನಗರಗಳಿಗೆ ಭಾರತ್ ಟ್ಯಾಕ್ಸಿ ಸೇವೆ ವಿಸ್ತರಿಸುವ ಯೋಜನೆ ರೂಪಿಸಲಾಗಿದೆ' ಎಂದು ಶಾ ತಿಳಿಸಿದರು.

'ಭಾರತ್ ಟ್ಯಾಕ್ಸಿ' ವೇದಿಕೆ ಸೇರಿಕೊಂಡಿರುವ ಟ್ಯಾಕ್ಸಿ ಚಾಲಕರು ಇನ್ನು ಮುಂದೆ ಕೇವಲ ಚಾಲಕರಾಗಿ ಇರುವುದಿಲ್ಲ. ಅವರು 'ಸಾರಥಿಗಳು' ಮತ್ತು ಸಹ-ಮಾಲೀಕರಾಗಿದ್ದಾರೆ ಎಂದು ಹೇಳಿದರು.

ಡಿಕೆಶಿಗಾಗಿ ಕಾದು ಕುಳಿತ ಎಚ್‌ಡಿಕೆ

ಒಂದನೇ ಪುಟದಿಂದ...

'ಬಿಡದಿ ಟೌನ್‌ಶಿಪ್ ನನ್ನ ಕೂಸೆಂದು ಹೇಳುತ್ತಿರುವ ಸರ್ಕಾರ, ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ನನಗಿಂದು ಅಗ್ನಿಪರೀಕ್ಷೆ ಎದುರಾಗಿದೆ. ಟೌನ್‌ಶಿಪ್ ವಿರೋಧಿಸಿ ಬೀದಿಗಿಳಿದಿರುವ ರೈತರ ಹೋರಾಟದಲ್ಲಿ ಕಡೆಯವರೆಗೂ ಜೊತೆಗಿರುವೆ' ಎಂದು ಮಾತುಕೊಟ್ಟರು.

ಭಾಷಣ–ಘೋಷಣೆ: ಟೌನ್‌ಶಿಪ್ ವಿರುದ್ಧದ ಹೋರಾಟದ ಸ್ಥಳದಲ್ಲಿ ಜೆಡಿಎಸ್ ನಾಯಕರು ಹಾಗೂ ಹೋರಾಟಗಾರರು ಭಾಷಣ ಮಾಡುತ್ತಿದ್ದರೆ, ಕೂಗಳತೆ ದೂರದಲ್ಲಿ ಟೌನ್‌ಶಿಪ್ ಪರ ಧರಣಿ ನಡೆಸುತ್ತಿದ್ದ ರೈತರು, ಜೆಡಿಎಸ್ ನಾಯಕರ ವಿರುದ್ಧ ಹಾಗೂ ಯೋಜನೆ ಪರ ಘೋಷಣೆಗಳು ಕೂಗುತ್ತಿದ್ದರು. ಬೆಳಿಗ್ಗೆಯಿಂದ ಸಂಜೆವರೆಗೆ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಯೋಜನೆ ಪರ– ವಿರುದ್ಧದ ಹೋರಾಟ ತೀವ್ರಗೊಂಡಿರುವ ಬೆನ್ನಲ್ಲೇ ಕುಮಾರಸ್ವಾಮಿ ಬೈರಮಂಗಲಕ್ಕೆ ಭೇಟಿ ನೀಡಿದ್ದರಿಂದ, ಎತ್ತ ಕಣ್ಣು ಹಾಯಿಸಿದರೂ ಹಸಿರು ಶಾಲು ಹೊದ್ದವರೇ ಕಣ್ಣಿಗೆ ಬೀಳುತ್ತಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸ್ಥಳದಲ್ಲಿ ಸುಮಾರು 500 ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು.


ಬಿಡದಿ ಕಡೆಗೆ ಹೊರಟ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕಾರಿಗೆ ಟೌನ್‌ಶಿಪ್ ಪರ ಹೋರಾಟಗಾರರು ಕೆಂಪು ಭಾವುಟ ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದರು. ಪೊಲೀಸರ ಭದ್ರತೆಯಲ್ಲಿ ಕಾರು ಮುಂದಕ್ಕೆ ಸಾಗಿತು

ಸಚಿವರ ಕಾರಿಗೆ ಕೆಂಪು ಬಾವುಟ ಪ್ರದರ್ಶನ

ಒಂದನೇ ಪುಟದಿಂದ...

ಕೆಂಪು ಬಾವುಟಗಳನ್ನು ಹಿಡಿದು ಕುಮಾರಸ್ವಾಮಿ ವಿರುದ್ಧ ಘೋಷಣೆ ಕೂಗುತ್ತಾ ರಸ್ತೆಗೆ ಬಂದರು. ಕೂಡಲೇ ಪೊಲೀಸರು ಭದ್ರತೆ ಒದಗಿಸಿ, ರೈತರು ಕಾರಿನತ್ತ ಬಾರದಂತೆ ತಡೆದರು. ಕಾರು ಹೋಗುವಾಗ ಕೆಲವರು ಪೊಲೀಸರನ್ನು ತಳ್ಳಿ ಕೆಂಪು ಬಾವುಟವನ್ನು ಕಾರಿನತ್ತ ಎಸೆದರು. ಅಷ್ಟರೊಳಗೆ ಕಾರು ಮುಂದಕ್ಕೆ ಸಾಗಿತ್ತು.

ಮಹಾರಾಷ್ಟ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ
ಪ್ರಶ್ನೆ ಪತ್ರಿಕೆ ಸೋರಿಕೆ: ಟಿಇಟಿ ಪರೀಕ್ಷೆ ಮುಂದಕ್ಕೆ

ಠಾಣೆ/ಪುಣೆ (ಪಿಟಿಐ): ಪರೀಕ್ಷಾ ದಿನಾಂಕಕ್ಕೂ ಒಂದು ದಿನ ಮುನ್ನ ಪ್ರಶ್ನೆ-ಪತ್ರಿಕೆ ಸೋರಿಕೆಯಾದ ಕಾರಣ ಮಹಾ-ರಾಷ್ಟ್ರದಲ್ಲಿ ಭಾನುವಾರ ನಡೆಯಬೇಕಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ–2026) ಮುಂದೂಡಿಕೆಯಾಗಿದೆ.

ಶನಿವಾರ ಪ್ರಶ್ನೆಪತ್ರಿಕೆಯ ಕೆಲ ಅಂಶಗಳು ಸೋರಿಕೆಯಾಗಿದ್ದವು. ಅಂತರ ರಾಜ್ಯ ಜಾಲವೊಂದನ್ನು ಪತ್ತೆಹಚ್ಚಿದ್ದ ಭಿವಾಂಡಿ ಪೊಲೀಸರು ಬಿಹಾರ ಮತ್ತು ಹರಿಯಾಣದ ಮೂವರನ್ನು ಮೂಲ ಪ್ರತಿಗಳೊಂದಿಗೆ ಬಂಧಿಸಿದ್ದರು. ಶಿಕ್ಷಣ ಇಲಾಖೆ ಮೂಲ ಪ್ರಶ್ನೆಪತ್ರಿಕೆ ಎಂದು ದೃಢಪಡಿಸಿತ್ತು.

'ಜೂನ್ 28ರಂದು ನಿಗದಿಯಾಗಿರುವ ಪರೀಕ್ಷೆಯನ್ನು ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು' ಎಂದು ಮಹಾರಾಷ್ಟ್ರ ರಾಜ್ಯ ಪರೀಕ್ಷಾ ಪರಿಷತ್ತಿನ (ಎಂಎಸ್‌ಸಿಇ) ಉಪ ಆಯುಕ್ತರಾದ ಪ್ರಿಯಾ ಶಿಂದೆ ತಿಳಿಸಿದ್ದಾರೆ.

ಭಾನುವಾರ 37 ಸ್ಥಳಗಳ 1,728 ಕೇಂದ್ರಗಳಲ್ಲಿ 6 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಟಿಇಟಿ ಪರೀಕ್ಷೆ ಬರೆಯಬೇಕಿತ್ತು.

ಎಸ್‌ಐಟಿ ರಚಿಸಿದ್ದು, ವಿವಿಧ ರಾಜ್ಯಗಳಿಗೆ ತೆರಳಿರುವ ಪೊಲೀಸರು ಪ್ರಶ್ನೆಪತ್ರಿಕೆ ಸೋರಿಕೆಯ ಮೂಲ, ಪ್ರಮುಖ ಸೂತ್ರದಾರರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

'ಪಕ್ಷ ಒಡೆಯುವುದೇ ಬಿಜೆಪಿ ಆದ್ಯತೆ'

'ಪಾರದರ್ಶಕವಾಗಿ ಪರೀಕ್ಷೆಗಳನ್ನು ನಡೆಸಬೇಕಿದ್ದ ಬಿಜೆಪಿ ನಾಯಕರು ಪಕ್ಷಗಳನ್ನು ಒಡೆಯುವಲ್ಲಿ, ಸಂವಿಧಾನ ಬದಲಿಸುವ ಯತ್ನಗಳಲ್ಲಿ ನಿರತರಾಗಿ-ದ್ದಾರೆ' ಎಂದು ತಮ್ಮ 'ಎಕ್ಸ್' ಖಾತೆಯಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಮುಖಂಡ ಆದಿತ್ಯ ಠಾಕ್ರೆ ಟೀಕಿಸಿದ್ದಾರೆ.

'ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಪ್ರಭಾವ ಇರುವ ಠಾಣೆ ಜಿಲ್ಲೆಯಲ್ಲೆ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ. ವಂಚಕರ ಜಾಲಕ್ಕೆ ರಾಜಕೀಯ ಶ್ರೀರಕ್ಷೆ ಇದೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದೆ' ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹರ್ಷವರ್ಧನ್ ಸಪ್ಕಾಲ್ ಆರೋಪಿಸಿದ್ದಾರೆ.

> ಅಪರಾಧಿಗಳು ಯಾರೇ ಆಗಿದ್ದರೂ, ಯಾವುದೇ ಸ್ಥಾನಮಾನದಲ್ಲಿದ್ದರೂ, ಎಷ್ಟೇ ದೊಡ್ಡ ಜಾಲವಿದ್ದರೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು
> **ಏಕನಾಥ ಶಿಂದೆ,** ಮಹಾರಾಷ್ಟ್ರ ಉಪ ಮುಖ್ಯಮಂತ್ರಿ

ದೆಹಲಿ, ಉತ್ತರಾಖಂಡದಲ್ಲಿ ಖಾಲಿಸ್ತಾನ ದಾಳಿ ಸಾಧ್ಯತೆ'

ನವದೆಹಲಿ (ಪಿಟಿಐ): ದೆಹಲಿ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಪ್ರಮುಖ ಧಾರ್ಮಿಕ ಸ್ಥಳಗಳು, ಸರ್ಕಾರಿ ಸಂಸ್ಥೆಗಳು ಮತ್ತು ಪೊಲೀಸ್ ಘಟಕಗಳ ಮೇಲೆ ಖಾಲಿಸ್ತಾನಿ ಭಯೋತ್ಪಾದಕರು ದಾಳಿ ನಡೆಸುವ ಸಾಧ್ಯತೆ ಇದೆ ಎಂದು ಗುಪ್ತಚರ ಸಂಸ್ಥೆಗಳು ಶನಿವಾರ ಎಚ್ಚರಿಕೆ ನೀಡಿವೆ.

'ಮುಂಬರುವ ದಿನಗಳಲ್ಲಿ ದಾಳಿಗಳು ನಡೆಯಲಿವೆ ಎಂಬ ಬೆದರಿಕೆಯ ಇಮೇಲ್ ಬಂದಿದ್ದು, ಹಾಗಾಗಿ ಕಣ್ಗಾವಲು ತೀವ್ರಗೊಳಿಸಲಾಗಿದೆ' ಎಂದು ಗುಪ್ತಚರ ಸಂಸ್ಥೆಯ ಮೂಲಗಳು ಹೇಳಿವೆ.

ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯ ನಾಗರಸು ಗುರುದ್ವಾರದಲ್ಲಿ ನಿಹಾಂಗ್‌ಗಳ ಗುಂಪು ಮತ್ತು ಅಧಿಕಾರಿಗಳ ನಡುವೆ ಘರ್ಷಣೆ ನಡೆದ ಕಾರಣ ಈ ಬೆದರಿಕೆ ಬಂದಿದೆ.

ಎಂಜಿನಿಯರಿಂಗ್ ಕನಸು ಭಗ್ನ

ಒಂದನೇ ಪುಟದಿಂದ...

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಶೇಕಡವಾರು ಅಂಕ ಪರಿಗಣಿಸುವಾಗ ಪರೀಕ್ಷೆ ಬರೆದ ವಿಷಯಗಳ ಸರಾಸರಿ ಅಂಕಗಳನ್ನು ತೆಗೆದುಕೊಂಡು ಫಲಿತಾಂಶ ನೀಡಿತ್ತು.

ಎಂಜಿನಿಯರಿಂಗ್ ರ‍್ಯಾಂಕ್ ಅಪ್ರಕಟ: ಉತ್ತಮ ಅಂಕಗಳೊಂದಿಗೆ ದ್ವಿತೀಯ ಪಿಯು ತೇರ್ಗಡೆಯಾಗಿದ್ದ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪ್ರವೇಶದ ಕನಸುಗಳೊಂದಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ 2026–27ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿದ್ದರು. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸುವ ವಿಶ್ವಾಸ ಹೊಂದಿದ್ದ ಅವರು ಸಿಇಟಿ ಫಲಿತಾಂಶ ಪ್ರಕಟವಾದಾಗ ತಮ್ಮ ಹೆಸರು ಎಂಜಿನಿಯರಿಂಗ್ ರ‍್ಯಾಂಕ್ ಪಟ್ಟಿಯಲ್ಲಿ ಇಲ್ಲದ್ದನ್ನು ಕಂಡು ಗಾಬರಿಯಾಗಿದ್ದರು. ಫಲಿತಾಂಶ ಪ್ರಕಟಿಸಲು ಕೋರಿ ಕೆಇಎಗೆ ಮನವಿ ಸಲ್ಲಿಸಿದಾಗಲೇ ಅವರಿಗೆ ಇನ್ನೆಂದೂ ತಾವು ಎಂಜಿನಿಯಿರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಾಧ್ಯವಿಲ್ಲ ಎನ್ನುವ ಸತ್ಯದ ಅನಾವರಣವಾಗಿದೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ನಿಯಮಗಳ ಪ್ರಕಾರ ಯಾವುದೇ ವಿದ್ಯಾರ್ಥಿ ಎಂಜಿನಿಯರಿಂಗ್ ಪ್ರವೇಶ ಪಡೆಯಲು ಪಿಯುಸಿ, ಡಿಪ್ಲೊಮಾ, 12ನೇ ತರಗತಿ ಸೇರಿದಂತೆ ಯಾವುದೇ ತತ್ಸಮಾನ ಕೋರ್ಸ್‌ಗಳಲ್ಲಿ ಇಂಗ್ಲಿಷ್ ಭಾಷಾ ವಿಷಯ ಪರೀಕ್ಷೆ ತೇರ್ಗಡೆಯಾಗಿರುವುದು ಕಡ್ಡಾಯ. ಎಂಜಿನಿಯರಿಂಗ್ ರ‍್ಯಾಂಕ್ ಪ್ರಕಟವಾಗದ ಅಂಗವಿಕಲ ವಿದ್ಯಾರ್ಥಿಗಳೆಲ್ಲರೂ ರಾಜ್ಯ ಸರ್ಕಾರ ನೀಡಿದ್ದ ಭಾಷಾ ವಿನಾಯಿತಿಯಲ್ಲಿ ಇಂಗ್ಲಿಷ್ ಕೈಬಿಟ್ಟು ಪರೀಕ್ಷೆ ಬರೆದಿದ್ದವರು.

ಲಭ್ಯವಾಗದ ಮೂರು ಕೋರ್ಸ್‌ಗಳ ಸೀಟು

ಒಂದನೇ ಪುಟದಿಂದ...

'ಈಗಾಗಲೇ ವೈದ್ಯಕೀಯ ಪ್ರವೇಶಕ್ಕೆ ನೀಟ್ ಫಲಿತಾಂಶ ವಿಳಂಬವಾಗುತ್ತಿದ್ದು, ವೈದ್ಯಕೀಯ ಆಕಾಂಕ್ಷಿಗಳೂ ಸಿಇಟಿ ಕೌನ್ಸೆಲಿಂಗ್‌ನಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ನಮೂದಿಸುತ್ತಿದ್ದಾರೆ. ಫಾರ್ಮಾ ಸೇರಿದಂತೆ ಅರೆ ವೈದ್ಯಕೀಯ ಕೋರ್ಸ್‌ಗಳ ವಿದ್ಯಾರ್ಥಿಗಳೂ ಎಂಜಿನಿಯರಿಂಗ್ ನಮೂದಿಸಿದರೆ ಇತರೆ ವಿದ್ಯಾರ್ಥಿಗಳಿಗೆ ಉತ್ತಮ ಕಾಲೇಜುಗಳ ಆಯ್ಕೆಗೆ ತೊಡಕಾಗುತ್ತದೆ. ನಂತರ ಅವರು ಬಿಟ್ಟು ಹೋದರೆ ನಮಗಿಂತ ಹಿಂದಿನ ವಿದ್ಯಾರ್ಥಿಗಳಿಗೆ ಒಳ್ಳೆಯ ಕಾಲೇಜುಗಳು, ವಿಭಾಗ ಸಿಗುತ್ತವೆ. ಇದು ಸರಿಯಾದ ಕ್ರಮವಿಲ್ಲ' ಎಂದು ದೂರುತ್ತಾರೆ ವಿದ್ಯಾರ್ಥಿ ಅಂಜನ್‌ಕುಮಾರ್.

> ಎಂಜಿನಿಯರ್ ಆಗಬೇಕು ಎನ್ನುವುದು ಬಾಲ್ಯದ ಕನಸು. ದೈಹಿಕ ನ್ಯೂನತೆ ಇದ್ದರೂ ಉನ್ನತ ಸ್ಥಾನದಲ್ಲೇ ತೇರ್ಗಡೆಯಾಗಿದ್ದೇನೆ. ಇಂಗ್ಲಿಷ್ ಭಾಷಾ ವಿಷಯದ ವಿನಾಯಿತಿ ಪಡೆದದ್ದು ಕನಸನ್ನೇ ಕಿತ್ತುಕೊಂಡಿತು
> **ದುಷ್ಯಂತ್,** ಎಂಜಿನಿಯರಿಂಗ್ ಆಕಾಂಕ್ಷಿ

> ಬಿ–ಫಾರ್ಮಾ ಕೋರ್ಸ್ ಪ್ರವೇಶ ಪಡೆಯಲು ಕಾಯುತ್ತಿದ್ದೇನೆ. ಇದುವರೆಗೂ ಸೀಟು ಲಭ್ಯತಾ ಪಟ್ಟಿ ಪ್ರಕಟಿಸಿಲ್ಲ. ವಿಳಂಬದ ಕಾರಣ ಪೋಷಕರು ಎಂಜಿನಿಯರಿಂಗ್ ಆಯ್ಕೆ ನಮೂದಿಸುವಂತೆ ಒತ್ತಡ ಹಾಕುತ್ತಿದ್ದಾರೆ
> **ಅನುಷಾ,** ಬಿ–ಫಾರ್ಮಾ ಆಕಾಂಕ್ಷಿ

ಅಫ್ಗಾನಿಸ್ತಾನದಲ್ಲಿ ಭೂಕಂಪ: ದೆಹಲಿಯಲ್ಲೂ ಕಂಪನ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಶನಿವಾರ ಪ್ರಬಲ ಭೂಕಂಪ ಸಂಭವಿಸಿದ್ದು, ಇದರ ತೀವ್ರತೆಗೆ ದೆಹಲಿ, ಜಮ್ಮು ಮತ್ತು ಕಾಶ್ಮೀರ, ಉತ್ತರ ಭಾರತದ ಹಲವೆಡೆ ಕಂಪನಗಳು ವರದಿಯಾಗಿವೆ.

ಈಶಾನ್ಯ ಅಫ್ಗಾನಿಸ್ತಾನದಲ್ಲಿ ಶನಿವಾರ ಸಂಜೆ 7 ಗಂಟೆ ಸುಮಾರಿಗೆ ರಿಕ್ಟರ್ ಮಾಪಕದಲ್ಲಿ 6.2ರಷ್ಟು ತೀವ್ರತೆಯ ಕಂಪನ ದಾಖಲಾಗಿದೆ. ಇದರ ಕೇಂದ್ರ ಬಿಂದು 215 ಕಿ.ಮೀ ಆಳದಲ್ಲಿ ಇತ್ತು ಎಂದು ರಾಷ್ಟ್ರೀಯ ಭೂಕಂಪ ಮಾಪನ ಕೇಂದ್ರ (ಎನ್‌ಸಿಎಸ್) ಹೇಳಿದೆ.

ಈಶಾನ್ಯ ಅಫ್ಗಾನಿಸ್ತಾನದ ಜುಮ್‌ನಿಂದ ದಕ್ಷಿಣಕ್ಕೆ 43 ಕಿ.ಮೀ ದೂರದಲ್ಲಿ ಭೂಕಂಪ ಸಂಭವಿಸಿದೆ ಎಂದು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ ಹೇಳಿದೆ.

ರಾಷ್ಟ್ರ ರಾಜಧಾನಿ ದೆಹಲಿಯ ಕೆಲವು ಪ್ರದೇಶಗಳಲ್ಲಿ ಭೂಕಂಪದ ಅನುಭವ ಆಗುತ್ತಿದ್ದಂತೆ ಜನರು ಭೀತಿಯಿಂದ ಮನೆ ಮತ್ತು ಕಚೇರಿಗಳಿಂದ ಹೊರಗೆ ಓಡಿ ಬಂದರು. ಪಾಕಿಸ್ತಾನದ ಇಸ್ಲಾಮಾಬಾದ್, ಸ್ವಾತ್, ಉತ್ತರ ವಜೀರಿಸ್ತಾನ, ಚಿತ್ರಾಲ್ ಮತ್ತು ರಾವಲ್ಪಿಂಡಿಯಲ್ಲೂ ಕಂಪನದ ಅನುಭವವಾಗಿದೆ. ಭೂಕಂಪದಿಂದ ಯಾವುದೇ ಸಾವು, ಹಾನಿ ವರದಿಯಾಗಿಲ್ಲ.



ಭಾರತ ಮಹಿಳಾ ಹಾಕಿ ತಂಡ

ಒಡಿಶಾ ಮತ್ತು ಜಾರ್ಖಂಡ್‌ನ ಆದಿವಾಸಿ ಹಳ್ಳಿಗಳಿಂದ ಆರಂಭವಾದ ಹುಡುಗಿಯರ ಹಾಕಿ ಪಯಣ ಇಂದು ಅಂತರರಾಷ್ಟ್ರೀಯ ವೇದಿಕೆಗೆ ತಲುಪಿದೆ. ಬಿದಿರಿನ ಕೋಲುಗಳಿಂದ ಆರಂಭವಾದ ಈ ಕಥೆ ಈಗ ಭಾರತದ ಮಹಿಳಾ ಹಾಕಿಯ ಹೊಸ ಶಕ್ತಿಯ ಸಂಕೇತವಾಗಿದೆ.



ದೀಪಿಕಾ ಸೊರೆಂಗ್

ಹಾಕಿ ಮೈದಾನದಲ್ಲಿ ಆದಿವಾಸಿ ಹುಡುಗಿಯರು

• ಗಿರೀಶ ದೊಡ್ಡಮನಿ

ಬೆಳ್ಳಂಬೆಳಿಗ್ಗೆ, ಕುಗ್ರಾಮದ ಆಕಾಶ ಮಬ್ಬು ಹೊದ್ದಂತಿತ್ತು; ಸೂರ್ಯನ ಬೆಳಕು ಇನ್ನೂ ಮೂಡಿರಲಿಲ್ಲ. ಆ ಮೌನವನ್ನು ಒಡೆದು ಎಂಟು ವರ್ಷದ ಆ ಹುಡುಗಿಯ ಚಿಕ್ಕ ಹೆಜ್ಜೆಗಳ ಸದ್ದು ಮಾತ್ರ ಗುಡಿಸಲಿನೊಳಗೆ ಪ್ರತಿಧ್ವನಿಸುತ್ತಿತ್ತು. ನಿದ್ದೆಯ ಮಂಪರು ಇನ್ನೂ ಕಣ್ಣುಗಳಲ್ಲಿ ತೇಲುತ್ತಿದ್ದರೂ, ಆಕೆ ಯಾವುದೋ ಹುಡುಕಾಟದಲ್ಲಿ ತೊಡಗಿದ್ದಳು. ಮನೆಯಂತೆ ಕಾಣುವ ಆ ಗುಡಿಸಲಿನ ಮೂಲೆಮೂಲೆಗಳನ್ನು ತಡಕಾಡುತ್ತಿದ್ದಾಗ ಕೊನೆಗೆ ಬಿದಿರಿನ ಅಂಕುಡೊಂಕಾದ ಕೋಲು ಒಂದು ಕೈಗೆ ಸಿಕ್ಕಿತು. ಅದನ್ನು ಕಂಡ ಕ್ಷಣವೇ ಆಕೆಯ ಮುಖದಲ್ಲಿ ಮೂಡಿದ ಸಂತೋಷ, ಆ ಬಾಲ್ಯದ ಕನಸುಗಳಿಗೆ ಮೊದಲ ಬೆಳಕು ಸಿಕ್ಕಂತೆ ಇತ್ತು.

ಆ ಕೋಲನ್ನು ಹಿಡಿದುಕೊಂಡು ಆಕೆ ಬರಿಗಾಲಲ್ಲಿಯೇ ಓಡತೊಡಗಿದಳು. ಮನೆಯ ಮುಂದಿನ ಮಣ್ಣುದಾರಿ ದಾಟಿ, ಗದ್ದೆಗಳ ಅಂಚು ಹಾದು, ಮೈದಾನದತ್ತ ಅವಳ ಓಟ ವೇಗವಾಯಿತು. ದೂರದಿಂದಲೇ ‘ಟಕ್… ಟಕ್… ಕಟ್… ಕಟ್…’ ಎಂಬ ಚೆಂಡು ಬಡಿದ ಸದ್ದು ಕೇಳತೊಡಗಿದಾಗ ಆಕೆಯ ಹೃದಯದ ಬಡಿತವೂ ಜೋರಾಯಿತು. ಅಲ್ಲಿ ಆಟದಲ್ಲಿ ಮುಳುಗಿದ್ದ ಮಕ್ಕಳ ಗುಂಪಿನ ಮಧ್ಯೆ ಆಕೆ ಸೇರಿಕೊಂಡಳು. ಆ ಬಿದಿರಿನ ಕೋಲು ಕ್ಷಣಾರ್ಧದಲ್ಲಿ ಹಾಕಿ ಸ್ಟಿಕ್ ಆಗಿ ರೂಪಾಂತರಗೊಂಡಿತು. ಆ ಕ್ಷಣವೇ ಅವಳ ಜೀವನದ ದಾರಿ ಈಗಾಗಲೇ ಬರೆದಂತೆ ಕಾಣುತ್ತಿತ್ತು.

ಅದೇ ಹುಡುಗಿ ಇಂದು ಕೇವಲ ಆ ಕುಗ್ರಾಮದ ಹೆಮ್ಮೆಯಲ್ಲ, ಇಡೀ ದೇಶದ ಮಹಿಳಾ ಹಾಕಿ ತಂಡದ ಭರವಸೆಯ ತಾರೆ. ಕಳೆದ ಜೂನ್ 21ರಂದು ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ನಡೆದ ನೇಷನ್ಸ್ ಕಪ್ ಹಾಕಿ ಟೂರ್ನಿಯ ಫೈನಲ್‌ನಲ್ಲಿ ಅವರು ಹೊಡೆದ ಗೋಲು, ಭಾರತ ತಂಡದ ಗೆಲುವಿಗೆ ಬಲ ತುಂಬಿತು. ಆಕೆಯ ಹೆಸರು ಸುನಿಲಿತಾ ಟೊಪ್ಪೊ. ಇವತ್ತು ಅವರ ವಯಸ್ಸು 19. ಒಡಿಶಾದ ಸುಂದರಗಢ ಜಿಲ್ಲೆಯ ಕುಕುಡಾ ಗ್ರಾಮದ ಆದಿವಾಸಿ ಕುಟುಂಬದಿಂದ ಬಂದ ಈ ಹುಡುಗಿಯ ಬದುಕು, ಭಾರತದ ಗ್ರಾಮೀಣ ಕ್ರೀಡಾ ಕ್ರಾಂತಿಯ ಪ್ರತಿರೂಪವಾಗಿದೆ.

ತಂದೆ ಸುರೇಶ್ ಟೊಪ್ಪೊ ಸಣ್ಣ ರೈತ. ಜೀವನದ ಕಷ್ಟಗಳ ನಡುವೆಯೂ ಮಗಳ ಆಸಕ್ತಿಗೆ ತಡೆಯೊಡ್ಡಲಿಲ್ಲ. ಬದಲಾಗಿ ಅವಳ ಕೈಗೆ ಬಿದಿರಿನ ಕೋಲಿಗೆ ಬದಲಾಗಿ ನಿಜವಾದ ಹಾಕಿ ಸ್ಟಿಕ್ ಹಿಡಿಯುವ ದಾರಿ ಮಾಡಿಕೊಟ್ಟರು. ಒಡಿಶಾ ಮತ್ತು ಜಾರ್ಖಂಡ್‌ನ ಆದಿವಾಸಿ ಗ್ರಾಮಗಳಲ್ಲಿ ಹಾಕಿ ಈಗ ಕೇವಲ ಆಟವಲ್ಲ, ಅದು ಬದುಕಿನ ದಾರಿ. ಅಲ್ಲಿ ಆಟಗಾರ್ತಿಯರ ಕನಸುಗಳು ಸರ್ಕಾರಿ ನೌಕರಿಗಳವರೆಗೆ, ಅಂತರರಾಷ್ಟ್ರೀಯ ಟೂರ್ನಿಗಳವರೆಗೆ ಹಬ್ಬಿವೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಅದು ಹೊಸ ಬೆಳಕಿನ ದಾರಿ ತೋರಿಸಿದೆ.

ಸುನಿಲಿತಾ ಬದುಕಿನಲ್ಲಿ ಹಾಕಿಯ ಪ್ರವೇಶವೂ ಆಕಸ್ಮಿಕವಲ್ಲ. ಅವರ ಚಿಕ್ಕಮ್ಮ, ರಾಷ್ಟ್ರೀಯ ಮಾಜಿ ಆಟಗಾರ್ತಿ ಅನುಪಾ ಬಾರ್ಲಾ ಅವರೇ ಮೊದಲ ಪ್ರೇರಣೆ. ಮನೆಯಂಗಳದಲ್ಲೇ ಬಿದಿರಿನ ಕೋಲುಗಳಿಂದ ಚೆಂಡು ತಳ್ಳುತ್ತಾ ಆಟ ಆರಂಭಿಸಿದ ಹುಡುಗಿ, ಕ್ರಮೇಣ ಸ್ಥಳೀಯ ತರಬೇತಿ ಕೇಂದ್ರದ ಗಮನ ಸೆಳೆದರು. ಸುಂದರಗಢದ ಕ್ರೀಡಾ ವಸತಿ ನಿಲಯಕ್ಕೆ (SAI) ಆಯ್ಕೆಗೊಂಡ ನಂತರ ಅವರ ಬದುಕು ಸಂಪೂರ್ಣವಾಗಿ ಬದಲಾಯಿತು. ಫಾರ್ವರ್ಡ್ ಆಟಗಾರ್ತಿಯಾಗಿ ರೂಪುಗೊಂಡ ಅವರು, ವೇಗ, ಚುರುಕುತನ ಮತ್ತು ಗೋಲುಗಳ ಬೇಟೆಯ ಸಾಮರ್ಥ್ಯದಿಂದ ಕೋಚ್‌ಗಳ ಗಮನ ಸೆಳೆದರು.

ಆ ತರಬೇತಿ ದಿನಗಳಲ್ಲಿ ಸುನಿಲಿತಾ ಅವರ ಆಟವನ್ನು ಗಮನಿಸಿದ ಕೋಚ್‌ಗಳು ಮತ್ತು ಹಿರಿಯರು, ಅವರು ವೇಗದ ಆಟಗಾರ್ತಿಯಾಗಿದ್ದರೂ ಒತ್ತಡದ ಕ್ಷಣಗಳಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಗುರುತಿಸಿದ್ದರು. ಸಣ್ಣ ಮೈದಾನದಲ್ಲೂ, ಮಣ್ಣು ತುಂಬಿದ ಕಠಿಣ ನೆಲದಲ್ಲೂ ಚೆಂಡಿನ ಮೇಲೆ ಅವರ ಹಿಡಿತ ಮತ್ತು ನಿಯಂತ್ರಣವೇ ಅವರನ್ನು ಇತರರಿಂದ ಭಿನ್ನವಾಗಿಸಿತು. ಇದೇ ಗುಣಗಳು ಅವರನ್ನು ಕ್ರಮೇಣ ರಾಷ್ಟ್ರೀಯ ಮಟ್ಟದವರೆಗೂ ಕೊಂಡೊಯ್ದವು.

2023ರಲ್ಲಿ ಜೂನಿಯರ್ ಏಷ್ಯಾ ಕಪ್‌ನಲ್ಲಿ ಭಾರತ ಪರ ಪದಾರ್ಪಣೆ ಮಾಡಿದ ಸುನಿಲಿತಾ, ಒಂದು ವರ್ಷದಲ್ಲೇ ಸೀನಿಯರ್ ತಂಡ ಪ್ರವೇಶಿಸಿದರು. ರಾಜ್‌ಗೀರ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಚಿನ್ನ ಗೆದ್ದ ತಂಡದಲ್ಲೂ ಅವರು ಇದ್ದರು. ನಂತರ ಚೀನಾದಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಬೆಳ್ಳಿ ಗೆದ್ದ ತಂಡದ ಭಾಗವಾಗಿದ್ದರು. ಈಗ ನ್ಯೂಜಿಲೆಂಡ್‌ನ ವೇದಿಕೆಯಲ್ಲಿ ಅವರ ಗೋಲು ಭಾರತಕ್ಕೆ ಎಫ್‌ಐಎಚ್ ಪ್ರೊ ಲೀಗ್‌ಗೆ ಮರುಪ್ರವೇಶದ ಹಾದಿ ತೆರೆದಿದೆ. ಇದು ಕೇವಲ ವೈಯಕ್ತಿಕ ಸಾಧನೆ ಅಲ್ಲ, ಒಡಿಶಾದ ಸಾವಿರಾರು ಹುಡುಗಿಯರಿಗೆ ‘ನಾವು ಕೂಡ ಮಾಡಬಹುದು’ ಎಂಬ ಸಂದೇಶವಾಗಿದೆ.

ಈ ಯಶೋಗಾಥೆಯ ಹಿಂದೆ ಒಬ್ಬ ವ್ಯಕ್ತಿಯ ಕಥೆಯಷ್ಟೇ ಅಲ್ಲ, ಒಂದು ಸಮುದಾಯದ ಉನ್ನತಿಯ ಕಥೆಯೂ ಇದೆ. ಒಂದು ಕಾಲದಲ್ಲಿ ಭಾರತ ಮಹಿಳಾ ಹಾಕಿಯಲ್ಲಿ ಪಂಜಾಬ್ ಮತ್ತು ಹರಿಯಾಣದ ಪ್ರಾಬಲ್ಯವಿತ್ತು. ಆದರೆ ಕಳೆದ ಎರಡು ದಶಕಗಳಲ್ಲಿ ಚಿತ್ರವೇ ಬದಲಾಗಿದೆ. ಈಗ ಜಾರ್ಖಂಡ್ ಮತ್ತು ಒಡಿಶಾದ ಆದಿವಾಸಿ ಪ್ರದೇಶಗಳು ಭಾರತದ ಮಹಿಳಾ ಹಾಕಿಯ ಹೊಸ ಶಕ್ತಿಕೇಂದ್ರಗಳಾಗಿ ಹೊರಹೊಮ್ಮಿವೆ. ಇದರ ಜೀವಂತ ಉದಾಹರಣೆ ಭಾರತ ಮಹಿಳಾ ತಂಡದ ನಾಯಕಿ ಸಲೀಮಾ ಟೆಟೆ.

ಸಲೀಮಾಳಂತಹ ಆಟಗಾರ್ತಿಯರ ಹೆಚ್ಚಳಕ್ಕೆ ಮತ್ತೊಂದು ಕಾರಣ ಎಂದರೆ ಒಡಿಶಾ ರಾಜ್ಯ ಸರ್ಕಾರದ ಕ್ರೀಡಾ ನೀತಿ. ಭುವನೇಶ್ವರದಲ್ಲಿ ನಿರ್ಮಿಸಿರುವ ಅಂತರರಾಷ್ಟ್ರೀಯ ಮಟ್ಟದ ಹಾಕಿ ಸ್ಟೇಡಿಯಂಗಳು, ಕ್ರೀಡಾ ಹಾಸ್ಟೆಲ್‌ಗಳು ಮತ್ತು ಗ್ರಾಮೀಣ ತರಬೇತಿ ಕೇಂದ್ರಗಳು ಇಂದು ಸಾವಿರಾರು ಮಕ್ಕಳಿಗೆ ವೇದಿಕೆ ಒದಗಿಸುತ್ತಿವೆ. ಕೇವಲ ಪ್ರತಿಭೆ ಇದ್ದರೆ ಸಾಕು, ಉಳಿದ ವ್ಯವಸ್ಥೆಯನ್ನು ರಾಜ್ಯವೇ ನೋಡಿಕೊಳ್ಳುವ ಮಾದರಿ ಇಲ್ಲಿ ರೂಪುಗೊಂಡಿದೆ. ಜೊತೆಗೆ ಕ್ರೀಡಾ ಪೋಷಣಾ ಯೋಜನೆಗಳು, ಯುವ ಪ್ರತಿಭೆಗಳಿಗೆ ಆರ್ಥಿಕ ನೆರವು ಮತ್ತು ನಿಯಮಿತ ಟೂರ್ನಿಗಳ ಅವಕಾಶವೂ ಈ ಬದಲಾವಣೆಗೆ ಚಾಲನಶಕ್ತಿಯಾಗಿವೆ.

ಜಾರ್ಖಂಡ್‌ನ ಹಳ್ಳಿಗಳಲ್ಲಿ ಕಂಡುಬರುವ ದೃಶ್ಯವೂ ಅದೇ ರೀತಿಯದು. ಮಣ್ಣು ಮೈದಾನ, ಬಿದಿರಿನ ಸ್ಟಿಕ್, ಹಳೆಯ ಚೆಂಡು–ಇವೇ ಮೊದಲ ತರಬೇತಿ ವಸ್ತುಗಳು. ಆದರೆ ಅದೇ ಸ್ಥಳದಿಂದ ಇಂದು ಒಲಿಂಪಿಕ್ಸ್ ವೇದಿಕೆ ತಲುಪಿದ ಕಥೆಗಳು ಹುಟ್ಟಿವೆ. ಇದು ಕೇವಲ ಕ್ರೀಡೆ ಅಲ್ಲ, ಸಾಮಾಜಿಕ ಬದಲಾವಣೆಯೂ ಹೌದು. ಹೆಣ್ಣುಮಕ್ಕಳು ಮನೆಯಿಂದ ಹೊರಬಂದು ಗುರುತಿಸಿಕೊಳ್ಳುವ ಶಕ್ತಿ ಹಾಕಿಯಿಂದ ಬಂದಿದೆ. ಕೆಲವೊಂದು ಹಳ್ಳಿಗಳಲ್ಲಿ ಈಗ ಹುಡುಗಿಯರ ಬೆಳಗಿನ ದಿನಚರಿ ಶಾಲೆಯ ಬದಲು ಮೊದಲು ಮೈದಾನದಿಂದ ಆರಂಭವಾಗುತ್ತಿದೆ ಎಂಬುದು ಗಮನಾರ್ಹ ಬದಲಾವಣೆ.


ಅದೇ ಸಮುದಾಯದಿಂದ ಬಂದ ಇನ್ನೊಬ್ಬ ಆಟಗಾರ್ತಿ ದೀಪಿಕಾ ಸೊರೆಂಗ್. ಅವರ ಕಥೆಯೂ ಪ್ರೇರಣಾದಾಯಕ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡ ದೀಪಿಕಾ, ತಾಯಿ ದಿನಗೂಲಿ ಕೆಲಸಕ್ಕೆ ಹೋಗುತ್ತಿದ್ದ ಪರಿಸ್ಥಿತಿಯಲ್ಲಿ ಬೆಳೆದರು. ಅಣ್ಣನ ನೆರವಿನಿಂದ ಹಾಕಿ ಅಭ್ಯಾಸ ಮುಂದುವರಿಸಿದ ಅವರು ಇಂದು ರಾಷ್ಟ್ರೀಯ ತಂಡದ ಪ್ರಮುಖ ಫಾರ್ವರ್ಡ್ ಆಗಿದ್ದಾರೆ. ಅವರ ಕಥೆ ಗ್ರಾಮೀಣ ಭಾರತದ ಸಂಕಷ್ಟಗಳ ನಡುವೆಯೂ ಪ್ರತಿಭೆ ಹೇಗೆ ಅರಳುತ್ತದೆ ಎಂಬುದಕ್ಕೆ ಸಾಕ್ಷಿ. ಅವರ ಆಟದಲ್ಲಿ ಕಾಣುವ ನಿರ್ಭಯತೆ, ವೇಗ ಮತ್ತು ನೇರ ದಾಳಿ ಮನೋಭಾವ ತಂಡದ ಆಟದ ಶೈಲಿಯನ್ನೇ ಬದಲಿಸುತ್ತಿದೆ.

ಈ ಎಲ್ಲ ಆಟಗಾರ್ತಿಯರ ನಡುವೆ ಹಿರಿಯ ಅನುಭವದ ಸೇತುವೆಯಂತೆ ನಿಂತವರು ನಿಕ್ಕಿ ಪ್ರಧಾನ್. 200ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿರುವ ಅವರು, ಒಲಿಂಪಿಕ್ಸ್, ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್–ಎಲ್ಲ ವೇದಿಕೆಗಳಲ್ಲಿ ತಮ್ಮ ಅನುಭವವನ್ನು ಪಸರಿಸಿದ್ದಾರೆ. ಇಂದಿಗೂ ಯುವ ಆಟಗಾರ್ತಿಯರೊಂದಿಗೆ ಸಮಾನ ಸ್ಪರ್ಧಾತ್ಮಕತೆಯಿಂದ ಆಡುವುದು ಅವರ ಶಿಸ್ತು ಮತ್ತು ಸಮರ್ಪಣೆಯ ಪ್ರತೀಕ. ತಂಡದ ಡ್ರೆಸ್ಸಿಂಗ್ ರೂಮ್‌ನಲ್ಲಿ ಅವರು ಮಾರ್ಗದರ್ಶಕಿ; ಮೈದಾನದಲ್ಲಿ ನಾಯಕತ್ವದ ವಿಸ್ತರಣೆ.

9ನೇ ಪುಟಕ್ಕೆ...



ವೇಲ್ಸ್ ತಂಡದ ಆಟಗಾರ್ತಿ ಜೊತೆ ಸಲೀಮಾ ಟೆಟೆ ಸೆಣಸಾಟ



ಸ್ಮಾರಕದಲ್ಲಿರುವ ಅರ್ಜುನನ ಪ್ರತಿರೂಪ

ಸ್ಮಾರಕವಾದ ಅರ್ಜುನ

• ಚಿದಂಬರಪ್ರಸಾದ

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದಬ್ಬಳಿಕಟ್ಟೆ ಅರಣ್ಯದ ಬಯಲಿನತ್ತ ಮುಖ್ಯ ರಸ್ತೆಯಿಂದ ಎರಡು ಕಿಲೋಮೀಟರ್ ಕಚ್ಚಾ ದಾರಿಯಲ್ಲಿ ಸಾಗಿದರೆ, ಕಾಡಿನ ಮೌನದ ನಡುವೆ ಒಂದು ಮಹಾಕಾಯ ಆಕೃತಿ ನಿಧಾನವಾಗಿ ಕಣ್ಣಿಗೆ ಬೀಳುತ್ತದೆ. ಹತ್ತಿರವಾಗುತ್ತಿದ್ದಂತೆ ಅದು ಕೇವಲ ಶಿಲ್ಪವಲ್ಲ; ಜೀವಂತ ಗಜರಾಜನೇ ಎದುರು ನಿಂತಿದ್ದಾನೇನೋ ಎನ್ನುವ ಭಾವ ಮೂಡಿಸುತ್ತದೆ.

ತಲೆ ಎತ್ತಿ ಗಾಂಭೀರ್ಯದಿಂದ ನಿಂತಿರುವ ಆ ಪ್ರತಿಕೃತಿ, ಒಂದು ಕಾಲದಲ್ಲಿ ಮೈಸೂರು ದಸರೆಯ ವೈಭವದ ಕೇಂದ್ರಬಿಂದುವಾಗಿದ್ದ ಗಜರಾಜ ಅರ್ಜುನನದ್ದು.

ಸಮಾಧಿಯ ಮೇಲೆಯೇ ನಿರ್ಮಿಸಲಾಗಿರುವ ಈ ಸ್ಮಾರಕದ ಸುತ್ತ ಈಗ ಮೌನ ಆವರಿಸಿಕೊಂಡಿದೆ. ಆದರೆ ಆ ಮೌನದೊಳಗೆ ಅನೇಕ ನೆನಪುಗಳು ಮಾತಾಡುತ್ತವೆ. ಜಂಬೂಸವಾರಿಯ ವೇಳೆ ಮೊಳಗುತ್ತಿದ್ದ ನಾದ, ಚಿನ್ನದ ಅಂಬಾರಿ ಹೊತ್ತು ಸಾಗುತ್ತಿದ್ದ ತೂಕದ ಹೆಜ್ಜೆಗಳ ಸದ್ದು, ಜನರ ಕರತಾಡನ, ಕಾಡಿನ ಸಾಹಸ ಕಾರ್ಯಾಚರಣೆಗಳೆಲ್ಲವೂ ಇಲ್ಲಿಯೇ ಎಲ್ಲೋ ಉಳಿದುಕೊಂಡಂತೆ ಭಾಸವಾಗುತ್ತದೆ.

10 ಅಡಿ ಎತ್ತರ ಮತ್ತು 13 ಅಡಿ ಉದ್ದದ ಈ ಪ್ರತಿಕೃತಿ ಸಾಕ್ಷಾತ್ ಅರ್ಜುನನೇ ಮತ್ತೊಮ್ಮೆ ಜೀವಂತವಾಗಿ ನಿಂತಂತೆ ಭಾಸವಾಗುತ್ತದೆ. ಶಿಲ್ಪಿ ಧನಂಜಯ ಅವರ ಕೈಚಳಕದಲ್ಲಿ ಇದು ಮೂಡಿಬಂದಿದೆ.

ಸ್ಮಾರಕದ ಎದುರು ನಿಂತವರಲ್ಲಿ ಹಲವರು ಮೊಬೈಲ್ ತೆಗೆದು ಚಿತ್ರ ಸೆರೆಹಿಡಿಯುತ್ತಾರೆ. ಕೆಲವರು ಭಕ್ತಿಯಿಂದ ಕೈಮುಗಿಯುತ್ತಾರೆ. ಇನ್ನೂ ಕೆಲವರು ಮಕ್ಕಳಿಗೆ ಅರ್ಜುನನ ಕಥೆ ಹೇಳುತ್ತಾರೆ. ಅವರಿಗೆ ಅದು ಕೇವಲ ಆನೆಯ ಸಮಾಧಿಯಲ್ಲ; ನೆನಪುಗಳ ತಾಣ.

ಅರ್ಜುನ ಮೃತಪಟ್ಟಿದ್ದು ಎರಡೂವರೆ ವರ್ಷಗಳಾಗುತ್ತ ಬಂದರೂ, ಆತನ ಮೇಲಿನ ಅಭಿಮಾನ ಮಾತ್ರ ಕಡಿಮೆಯಾಗಿಲ್ಲ. ದಸರಾ ಬಂದಾಗಲೆಲ್ಲ ಅರಮನೆ ಆವರಣದಲ್ಲಿ ಅವನನ್ನು ಹುಡುಕುವ ಕಣ್ಣುಗಳಷ್ಟೇ ಅಲ್ಲ, ಈ ಸ್ಮಾರಕದ ಮುಂದೆ ಬಂದು ನಿಂತವರ ಮನಸ್ಸಿನಲ್ಲೂ ಆತ ಮತ್ತೆ ಜೀವಂತನಾಗುತ್ತಾನೆ.



ಸಾಕ್ಷಾತ್ ಅರ್ಜುನನೇ ನಿಂತಂತ ಅನುಭವ...

ಅರ್ಜುನ ಸಾಮಾನ್ಯ ಆನೆಯಾಗಿರಲಿಲ್ಲ. ಮೈಸೂರಿನ ದಸರಾ ಇತಿಹಾಸದಲ್ಲಿ ಅನೇಕ ಆನೆಗಳು ಚಿನ್ನದ ಅಂಬಾರಿ ಹೊತ್ತಿವೆ. ಆದರೆ ಕೆಲವೇ ಕೆಲವು ಆನೆಗಳು ಜನರ ಭಾವನೆಗಳ ಭಾಗವಾಗುತ್ತವೆ. ಅರ್ಜುನ ಅಂತಹ ಅಪರೂಪದ ಗಜರಾಜ.

ಬಲರಾಮನ ನಂತರ ಅಂಬಾರಿ ಹೊರುವ ಜವಾಬ್ದಾರಿ ಅವನ ಹೆಗಲ ಮೇಲೆ ಬಂದಾಗ, ಅದು ಕೇವಲ ಒಂದು ಸಂಪ್ರದಾಯದ ಮುಂದುವರಿಕೆ ಆಗಿರಲಿಲ್ಲ. ನಾಡಿನ ಗೌರವವನ್ನು ಹೊರುವ ಹೊಣೆಗಾರಿಕೆಯಾಗಿತ್ತು. 2012ರಿಂದ 2019ರವರೆಗೆ ಎಂಟು ಬಾರಿ ಚಿನ್ನದ ಅಂಬಾರಿ ಹೊತ್ತು ಜಂಬೂಸವಾರಿಯ ಮುಂಚೂಣಿಯಲ್ಲಿ ಸಾಗಿದ ಅರ್ಜುನ, ದಸರೆಯ ಜೀವಂತ ಸಂಕೇತವಾಗಿ ರೂಪುಗೊಂಡ.

ಜಂಬೂಸವಾರಿಯ ವೇಳೆ ಅವನ ನಡಿಗೆಯಲ್ಲಿದ್ದ ಗಾಂಭೀರ್ಯ ಜನರನ್ನು ಸೆಳೆಯುತ್ತಿತ್ತು. ಚಾಮುಂಡೇಶ್ವರಿಯ ಚಿನ್ನದ ಅಂಬಾರಿ ಹೊತ್ತು ಸಾಗುತ್ತಿದ್ದ ಅವನನ್ನು ನೋಡಲು ಸಾವಿರಾರು ಜನರು ಕಾದಿರುತ್ತಿದ್ದರು. ಅನೇಕರು ದೇವಿಗೆ ನಮಸ್ಕರಿಸಿದ ಬಳಿಕ ಅರ್ಜುನನತ್ತಲೂ ಕೈಮುಗಿಯುತ್ತಿದ್ದರು.

ಆದರೆ ಅರಮನೆಯ ಬೆಳಕಿನಾಚೆಗೂ ಮತ್ತೊಂದು ಅರ್ಜುನನಿದ್ದ. ಕಾಡಿನಲ್ಲಿ ಆತ ನಿಜವಾದ ಯೋಧ. ಮದವೇರಿದ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಳಲ್ಲಿ ಆತ ಅರಣ್ಯ ಇಲಾಖೆಯ ಅತ್ಯಂತ ವಿಶ್ವಾಸಾರ್ಹ ಆನೆಯಾಗಿದ್ದ. ಅಪಾಯದ ಕ್ಷಣಗಳಲ್ಲಿ ಮುಂಚೂಣಿಯಲ್ಲಿ ನಿಂತು ಕಾರ್ಯಾಚರಣೆ ಯಶಸ್ವಿಗೊಳಿಸಿದ ಅವನ ಬಗ್ಗೆ ಅಧಿಕಾರಿಗಳು ಮತ್ತು ಮಾವುತರು ಹೆಮ್ಮೆಯಿಂದ ಇನ್ನೂ ಮಾತನಾಡುತ್ತಾರೆ.

ಅಂತಹ ಅರ್ಜುನನ ಬದುಕು 2023ರ ಡಿಸೆಂಬರ್ 4ರಂದು ಹಾಸನ ಜಿಲ್ಲೆಯ ಯಸಳೂರು ಅರಣ್ಯ ಪ್ರದೇಶದಲ್ಲಿ ದುರಂತ ಅಂತ್ಯ ಕಂಡಿತು. ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದಗಜದೊಂದಿಗಿನ ಕಾದಾಟದಲ್ಲಿ ಆತ ಮೃತಪಟ್ಟ ಸುದ್ದಿ ಹರಡುತ್ತಿದ್ದಂತೆ ಇಡೀ ರಾಜ್ಯ ಮೌನಕ್ಕೆ ಜಾರಿತ್ತು.

ಆ ದಿನವನ್ನು ನೆನಪಿಸಿಕೊಂಡರೂ ಅರ್ಜುನನ ಮಾವುತ ವಿನು ಭಾವುಕರಾಗುತ್ತಾರೆ. ಸಮಾಧಿಯ ಬಳಿ ಬಂದಾಗಲೆಲ್ಲ ಅವರ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ. ‘ಅರ್ಜುನ ನಮ್ಮ ಮನೆಯ ಸದಸ್ಯನಂತಿದ್ದ. ಮನೆಯ ಎಲ್ಲರ ಜೊತೆಯೂ ಅವನಿಗೆ ಆತ್ಮೀಯತೆ ಇತ್ತು. ಅವನನ್ನು ಕಳೆದುಕೊಂಡ ಮೇಲೆ ನಮ್ಮ ಕುಟುಂಬವೇ ಏನೋ ಕಳೆದುಕೊಂಡಂತಿದೆ’ ಎಂದು ಅವರು ಹೇಳುತ್ತಾರೆ.

ಅವರ ಪಾಲಿಗೆ ಅರ್ಜುನ ಒಂದು ಪ್ರಾಣಿ ಮಾತ್ರವಾಗಿರಲಿಲ್ಲ. ಬದುಕಿನ ಅನೇಕ ವರ್ಷಗಳನ್ನು ಜೊತೆಯಾಗಿ ಕಳೆದ ಕುಟುಂಬದ ಒಬ್ಬ ಸದಸ್ಯ.

‘ಅರ್ಜುನ ಸತ್ತಿಲ್ಲ. ನಮ್ಮಂತಹ ಸಾವಿರಾರು ಜನರ ಮನಸ್ಸಿನಲ್ಲಿ ಇನ್ನೂ ಬದುಕಿದ್ದಾನೆ. ಅವನನ್ನು ಮರೆಯಲು ಸಾಧ್ಯವಿಲ್ಲ’ ಎಂಬ ಅವರ ಮಾತುಗಳಲ್ಲಿ ಒಬ್ಬ ಮಾವುತನ ನೋವಷ್ಟೇ ಅಲ್ಲ, ಲಕ್ಷಾಂತರ ಅಭಿಮಾನಿಗಳ ಭಾವನೆಯೂ ಪ್ರತಿಧ್ವನಿಸುತ್ತಿತ್ತು.

7ನೇ ಪುಟಕ್ಕೆ...

ಶಿರಗಾಂವ ಪಾಲಿಹೌಸ್ ವೀಳ್ಯದೆಲೆ ಕೃಷಿ ಕಥೆ

• ಚಿತ್ರ–ಬರಹ: ಇಮಾಮ್‌ಹುಸೇನ್ ಗೂಡುನವರ

ಗುರುವಾರದ ಸಂಜೆ. ಚಿಕ್ಕೋಡಿಯ ಶಿರಗಾಂವಕ್ಕೆ ತಲುಪಿದಾಗ ಗ್ರಾಮ ಪಂಚಾಯಿತಿ ಮಾರುಕಟ್ಟೆಯ ಸುತ್ತಮುತ್ತ ದಟ್ಟಣೆ ಇತ್ತು. ಚಕ್ಕಡಿಗಳು, ಬೈಕ್‌ಗಳು, ಆಟೊರಿಕ್ಷಾಗಳು, ಟಂಟಂಗಳು ಒಂದರ ಹಿಂದೆ ಒಂದರಂತೆ ಬಂದು ನಿಲ್ಲಲಾರಂಭಿಸಿದವು. ಅವುಗಳಿಂದ ಒಪ್ಪವಾಗಿ ಜೋಡಿಸಿದ ವೀಳ್ಯದೆಲೆ ಕರಂಡೆಗಳು ಕೆಳಗಿಳಿದವು. ಕೆಲವೇ ಕ್ಷಣಗಳಲ್ಲಿ ರೈತರು, ದಲ್ಲಾಳಿಗಳು ಮತ್ತು ಖರೀದಿದಾರರು ಒಂದೆಡೆ ಸೇರಿದರು.

‘₹800ಕ್ಕೆ ಒಂದು ಕರಂಡೆ...’ ಎಂದು ದಲ್ಲಾಳಿಯೊಬ್ಬ ಕೂಗುತ್ತಿದ್ದಂತೆ ಖರೀದಿದಾರರ ಧ್ವನಿಗಳೂ ಮೊಳಗಿದವು. ಕ್ಷಣಾರ್ಧದಲ್ಲೇ ಸವಾಲ್ ಜೋರಾಯಿತು. ಕೊನೆಗೆ ಹೆಚ್ಚಿನ ದರ ಕೂಗಿದವರು ಕರಂಡೆಗಳನ್ನು ಕೊಂಡೊಯ್ದರು. ಇದೇ ವೇಳೆ ಊರಿನ ಇನ್ನೆರಡು ಸ್ಥಳಗಳಲ್ಲಿಯೂ ಇಂತಹದ್ದೇ ಸಂತೆ ನಡೆಯುತ್ತಿತ್ತು.

‘ಒಂದೇ ಊರಲ್ಲಿ ಮೂರು ಕಡೆ ಏಕಕಾಲಕ್ಕೆ ಸಂತೆ ಏಕೆ?’ ಎಂಬ ಪ್ರಶ್ನೆಗೆ ಸ್ಥಳೀಯ ಗೆಳೆಯ ಲಗಮಣ್ಣ ಉತ್ತರ ನೀಡಿದರು.

‘ಕುಸ್ತಿಗೆ ಹೆಸರಾದ ಈ ಊರು ವೀಳ್ಯದೆಲೆ ಕೃಷಿಗೂ ಪ್ರಸಿದ್ಧ. ಪಾಲಿಹೌಸ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ವೀಳ್ಯದೆಲೆ ಬೆಳೆಯುವುದರಿಂದ ವಾರದಲ್ಲಿ ಮೂರು ದಿನ ಸಂತೆ ನಡೆಯುತ್ತದೆ’ ಎಂದರು.

ಆ ಉತ್ತರ ಕೇಳಿದ ಕೂಡಲೇ ವೀಳ್ಯದೆಲೆ ತೋಟಗಳನ್ನು ನೋಡಬೇಕೆಂಬ ಆಸೆ ಮೂಡಿತು. ಚಿಕ್ಕೋಡಿ–ಇಚಲಕರಂಜಿ ರಸ್ತೆಯಲ್ಲಿ ಹೊರಟಾಗ ಒಂದರ ಹಿಂದೆ ಒಂದರಂತೆ ಪಾಲಿಹೌಸ್‌ಗಳು ಕಣ್ಣಿಗೆ ಬಿದ್ದವು. ಕೆಲವು ಕಡೆ ಬಯಲಿನಲ್ಲಿಯೂ ವೀಳ್ಯದೆಲೆ ಬೆಳೆದಿತ್ತು. ಆದರೆ ಶಿರಗಾಂವದ ಹೊಸ ಗುರುತಾಗಿ ನಿಂತಿದ್ದು ಈ ಪಾಲಿಹೌಸ್‌ಗಳೇ.

ಕಬ್ಬು, ಶೇಂಗಾ, ತಂಬಾಕು, ನುಗ್ಗೆಕಾಯಿ... ಈ ಭಾಗದ ರೈತರು ಹಲವು ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಅವರ ಬದುಕಿಗೆ ಹೊಸ ದಿಕ್ಕು ತೋರಿಸಿದ್ದು ವೀಳ್ಯದೆಲೆ.

ಶಿರಗಾಂವದಲ್ಲಿ ವೀಳ್ಯದೆಲೆ ಕೃಷಿ ಹೊಸದೇನಲ್ಲ. ತಲೆತಲಾಂತರಗಳಿಂದ ರೈತರು ಈ ಬೆಳೆ ಬೆಳೆಯುತ್ತಿದ್ದಾರೆ. ಹಿಂದೆ ಬಯಲು ಪ್ರದೇಶಕ್ಕೆ ಸೀಮಿತವಾಗಿದ್ದ ಈ ಕೃಷಿ ಇಂದು ಪಾಲಿಹೌಸ್‌ಗಳಿಗೆ ವರ್ಗಾವಣೆಯಾಗಿದೆ.

ಬಯಲಿನಲ್ಲಿ ಬೆಳೆಯುವಾಗ ಮಳೆ, ಗಾಳಿ, ಅತಿವೃಷ್ಟಿ, ಬರ–ಯಾವುದೇ ಪ್ರಕೃತಿ ವೈಪರೀತ್ಯ ಬಂದರೂ ಬೆಳೆ ಹಾನಿಯಾಗುತ್ತಿತ್ತು. ಇಳುವರಿಯೂ ಕಡಿಮೆಯಾಗುತ್ತಿತ್ತು. ಆದರೆ ಪಾಲಿಹೌಸ್‌ನಲ್ಲಿ ನಿಯಂತ್ರಿತ ವಾತಾವರಣ ಮತ್ತು ಹನಿ ನೀರಾವರಿಯಿಂದ ಉತ್ಪಾದನೆ ಹೆಚ್ಚಿದ್ದು, ಆದಾಯವೂ ಹೆಚ್ಚಾಗಿದೆ.

2017ರಲ್ಲಿ ಊರಿನಲ್ಲಿ ಒಂದೇ ಒಂದು ಪಾಲಿಹೌಸ್ ಇತ್ತು. ಇಂದು ಅದರ ಸಂಖ್ಯೆ 50ರ ಗಡಿ ದಾಟಿದೆ.

ಈ ಬದಲಾವಣೆಯ ಹಿಂದಿನ ಕಥೆಯನ್ನು ರೈತ ಭೀಮಾ ಉದಗಟ್ಟಿ ನೆನಪಿಸಿಕೊಳ್ಳುತ್ತಾರೆ.

‘2013ರಲ್ಲಿ ಹಂಚಿನಾಳಕ್ಕೆ ಹೋಗಿದ್ದಾಗ ಗೆಳೆಯನೊಬ್ಬ ಪಾಲಿಹೌಸ್‌ನಲ್ಲಿ ವೀಳ್ಯದೆಲೆ ಬೆಳೆದಿದ್ದ. ಅದೇ ಸ್ಥಳದಲ್ಲಿ ನಾನೂ ಒಂದು ಎಲೆಬಳ್ಳಿ ಪ್ರತ್ಯೇಕವಾಗಿ ನೆಟ್ಟಿದ್ದೆ. ಅದು ಚೆನ್ನಾಗಿ ಬೆಳೆಯುವುದನ್ನು ಕಂಡಾಗ ಈ ಪದ್ಧತಿಯ ಸಾಮರ್ಥ್ಯ ಅರ್ಥವಾಯಿತು. ಅದೇ ಪ್ರೇರಣೆಯಿಂದ 2017ರಲ್ಲಿ ಶಿರಗಾಂವದಲ್ಲಿ ಮೊದಲ ಪಾಲಿಹೌಸ್ ನಿರ್ಮಿಸಿ ವೀಳ್ಯದೆಲೆ ಕೃಷಿ ಆರಂಭಿಸಿದೆ’ ಎನ್ನುತ್ತಾರೆ.

‘ನಮ್ಮ ಬಳಿ ಮೂರೂವರೆ ಎಕರೆ ಜಮೀನಿದೆ. ಹಿಂದೆ ಕಬ್ಬು, ತಂಬಾಕು ಸೇರಿದಂತೆ ಹಲವು ಬೆಳೆಗಳನ್ನು ಬೆಳೆಯುತ್ತಿದ್ದೆವು. ಬಯಲಿನಲ್ಲಿ ಒಂದು ಎಕರೆ ವೀಳ್ಯದೆಲೆಯಿಂದ ವರ್ಷಕ್ಕೆ ನಾಲ್ಕು ಲಕ್ಷ ರೂಪಾಯಿ ಆದಾಯ ಸಿಗುತ್ತಿತ್ತು. ಆದರೆ ಪಾಲಿಹೌಸ್‌ನಲ್ಲಿ ಅದೇ ಜಮೀನಿನಿಂದ ಸುಮಾರು ಹದಿನೈದು ಲಕ್ಷ ರೂಪಾಯಿ ಆದಾಯ ಬರುತ್ತಿದೆ’ ಎಂದು ಅವರು ಹೇಳುತ್ತಾರೆ.

‘ಬೇರೆ ಬೆಳೆಗಳು ಜೀವನ ಸಾಗಿಸಲು ನೆರವಾಗಿವೆ. ಆದರೆ ಬದುಕಿಗೆ ನಿಜವಾದ ಹೊಳಪು ತಂದಿದ್ದು ವೀಳ್ಯದೆಲೆ ಕೃಷಿ. ಒಂದು ಎಕರೆಯಿಂದ ವರ್ಷಕ್ಕೆ ₹15 ಲಕ್ಷ ಆದಾಯ ಬಂದಾಗ ರೈತನ ಆತ್ಮವಿಶ್ವಾಸವೇ ಬದಲಾಗುತ್ತದೆ’ ಎನ್ನುತ್ತಾರೆ ರೈತ ಅಪ್ಪಾಸಾಹೇಬ ಉದಗಟ್ಟಿ.



ವೀಳ್ಯದೆಲೆ ಕೃಷಿ ಲಾಭದಾಯಕ ಎನ್ನುವುದು ಸತ್ಯ. ಆದರೆ ಅಷ್ಟೇ ಶ್ರಮದಾಯಕವೂ ಹೌದು. ಒಂದು ಎಕರೆ ಪಾಲಿಹೌಸ್ ನಿರ್ವಹಣೆಗೆ ಎಂಟು ಮಂದಿ ಕಾರ್ಮಿಕರು ಬೇಕಾಗುತ್ತಾರೆ. ಬಳ್ಳಿ ಕಟ್ಟುವುದು, ಎಲೆ ಕತ್ತರಿಸುವುದು, ಗೊಬ್ಬರ ಹಾಕುವುದು, ನೀರುಣಿಸುವುದು ಸೇರಿದಂತೆ ಪ್ರತಿಯೊಂದು ಕೆಲಸಕ್ಕೂ ಕೌಶಲ ಬೇಕು.

ಕಾರ್ಮಿಕರ ಕೊರತೆ ರೈತರನ್ನು ಕಾಡುತ್ತಿದೆ. ಕೆಲವೊಮ್ಮೆ ಇಡೀ ಕುಟುಂಬವೇ ಪಾಲಿಹೌಸ್‌ಗೆ ಇಳಿದು ಕೆಲಸ ಮಾಡಬೇಕಾಗುತ್ತದೆ. ‘ಬಾಲ್ಯದಿಂದಲೂ ವೀಳ್ಯದೆಲೆ ತೋಟಗಳಲ್ಲೇ ಕೆಲಸ ಮಾಡುತ್ತಿದ್ದೇವೆ. ಮೂರು ಸಾವಿರ ಎಲೆ ಕತ್ತರಿಸಿದರೆ ₹150 ಸಿಗುತ್ತದೆ. ಒಂದು ದಿನ ಬಳ್ಳಿ ಕಟ್ಟಿದರೆ ₹500 ಕೂಲಿ ಸಿಗುತ್ತದೆ. ನಮ್ಮ ಬದುಕಿಗೆ ಆಸರೆ ನೀಡಿರುವುದು ಈ ತೋಟಗಳೇ’ ಎನ್ನುತ್ತಾರೆ ಕಾರ್ಮಿಕರಾದ ಸದಾಶಿವ ಪನ್ನಾಶೆ ಮತ್ತು ಮುನ್ನಾ ಶಿರಗುಪ್ಪಿ.

ವೀಳ್ಯದೆಲೆ ಬೆಳೆ ಸೂಕ್ಷ್ಮವಾದದ್ದು. ಪಾಲಿಹೌಸ್‌ನೊಳಗೆ ಸಾಲುಗಳ ಮಧ್ಯೆ 1.25 ಮೀಟರ್ ಅಂತರ ಹಾಗೂ ಪ್ರತಿ ಬಳ್ಳಿಯ ಮಧ್ಯೆ 0.3 ಮೀಟರ್ ಅಂತರ ಇರುತ್ತದೆ. ಬಯಲಿನಲ್ಲಿ ಚಗಚಿ ಮತ್ತು ನುಗ್ಗೆ ಮರಗಳ ಮೇಲೆ 15 ಅಡಿ ಎತ್ತರದವರೆಗೆ ಬಳ್ಳಿ ಬೆಳೆಯುತ್ತದೆ. ಪಾಲಿಹೌಸ್‌ನಲ್ಲಿ ಬಿದಿರಿನ ಬಂಬುಗಳ ಮೇಲೆ 13.5 ಅಡಿ ಎತ್ತರದವರೆಗೆ ಬೆಳೆಸಲಾಗುತ್ತದೆ. ಬಯಲಿನಲ್ಲಿ ಏಳು ತಿಂಗಳ ನಂತರ ಕಟಾವಿಗೆ ಬರುವ ಬೆಳೆ, ಪಾಲಿಹೌಸ್‌ನಲ್ಲಿ 70 ದಿನಗಳಲ್ಲೇ ಕಟಾವಿಗೆ ಸಿದ್ಧವಾಗುತ್ತದೆ.

8ನೇ ಪುಟಕ್ಕೆ...

ವಾರದಲ್ಲಿ ಮೂರು ದಿನ ಸಂತೆ

ಶಿರಗಾಂವದಲ್ಲಿ ಪ್ರತಿ ಮಂಗಳವಾರ, ಗುರುವಾರ ಮತ್ತು ಭಾನುವಾರ ವೀಳ್ಯದೆಲೆ ಸಂತೆ ನಡೆಯುತ್ತದೆ. ಶಿರಗಾಂವದ ರೈತರಷ್ಟೇ ಅಲ್ಲ; ಖಡಕಲಾಟ, ನಾಗರಾಳ, ಗಳತಗಾ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರೂ ತಮ್ಮ ಉತ್ಪನ್ನವನ್ನು ಇಲ್ಲಿ ತರುತ್ತಾರೆ.

ಇಲ್ಲಿಂದ ಹೊರಡುವ ವೀಳ್ಯದೆಲೆಗಳು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಗೋವಾ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಮಾರುಕಟ್ಟೆಗಳನ್ನು ತಲುಪುತ್ತವೆ.

ಇಲ್ಲಿ ಹೆಚ್ಚಾಗಿ ಬೆಳೆಯುವುದು ಮಧ್ಯಮ ಖಾರದ ‘ಅಂಬಾಡಿ’ ತಳಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ತಳಿಯ ಎಲೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ವರ್ಷಪೂರ್ತಿ ಮಾರುಕಟ್ಟೆ ಇರುತ್ತದೆ.



ಶಿರಗಾಂವದಲ್ಲಿ ಪಾಲಿಹೌಸ್‌ನಲ್ಲಿ ಬೆಳೆದ ವೀಳ್ಯದೆಲೆ ಬೆಳೆ

ನಕ್ಷೆಗಳಾಚೆಗಿನ ಪಂಚಗಂಗಾವಳಿ


ಪಂಚಗಂಗಾವಳಿಯಲ್ಲಿ ಹಕ್ಕಿಗಳ ಕಲರವ

ಉಡುಪಿ ಜಿಲ್ಲೆಯ ಪಂಚಗಂಗಾವಳಿಯ ನದಿಮುಖದ ಬದುಕನ್ನು ನಕ್ಷೆಯಾಚೆ ಹೋಗಿ ನೋಡಿದಾಗ ಕಾಣಿಸುವುದು ಇಲ್ಲಿ ನೀರು, ನೆಲ ಮತ್ತು ಜನರ ನಡುವೆ ಇರುವ ಜೀವಂತ ಸಂಬಂಧ. ಸ್ಥಳೀಯ ಜ್ಞಾನ, ಪರಿಸರದ ಬದಲಾವಣೆ ಮತ್ತು ಅಭಿವೃದ್ಧಿಯ ಒತ್ತಡಗಳ ನಡುವೆ ರೂಪುಗೊಳ್ಳುತ್ತಿರುವ ಈ ಕರಾವಳಿ ಪ್ರದೇಶದ ನಿಜವಾದ ಚಿತ್ರಣವನ್ನು ಈ ಲೇಖನ ಅನಾವರಣಗೊಳಿಸುತ್ತದೆ.

• ಶ್ರೀನಿಧಿ ಅಡಿಗ

ಬೆಳಗಿನ ಜಾವ ಪಂಚಗಂಗಾವಳಿಯ ನದಿಮುಖದ ಬಳಿ ನಿಂತರೆ, ಅಲ್ಲಿ ನಕ್ಷೆಗಳಲ್ಲಿ ಕಾಣುವ ಗಡಿಗಳು ಕಾಣಿಸುವುದಿಲ್ಲ. ನೀರು ತನ್ನದೇ ದಾರಿಯಲ್ಲಿ ಹರಿಯುತ್ತದೆ. ಮರಳು ತನ್ನದೇ ರೂಪ ಬದಲಿಸಿಕೊಳ್ಳುತ್ತದೆ. ಸಮುದ್ರದ ಅಲೆಗಳು ನದಿಯನ್ನು ಅಪ್ಪಿಕೊಳ್ಳುತ್ತವೆ. ಉಬ್ಬರವಿಳಿತದ ಜೊತೆ ಭೂದೃಶ್ಯವೇ ಬದಲಾಗುತ್ತದೆ.

ಇಲ್ಲಿನ ಮೀನುಗಾರರು ಅಲೆಗಳ ಏರಿಳಿತ ನೋಡಿ ಸಮಯ ಊಹಿಸುತ್ತಾರೆ. ಹಾರುವ ಪಕ್ಷಿಗಳ ದಿಕ್ಕು ಗಮನಿಸಿ ಹವಾಮಾನ ಅಂದಾಜಿಸುತ್ತಾರೆ. ಮಣ್ಣಿನ ವಾಸನೆಯಲ್ಲಿ ಮಳೆಯ ಸುಳಿವು ಹಿಡಿಯುತ್ತಾರೆ. ನೀರಿನ ಹರಿವಿನ ಮೇಲೆ ಬೆಳೆ ಲೆಕ್ಕ ಹಾಕುತ್ತಾರೆ. ಈ ಜ್ಞಾನ ಪುಸ್ತಕಗಳಲ್ಲಿ ಇಲ್ಲ; ಅದು ತಲೆಮಾರುಗಳಿಂದ ಬಂದ ಬದುಕಿನ ಜ್ಞಾನ.

ಒಂದು ಭೂ ಪ್ರದೇಶವೆಂದರೆ ಕೇವಲ ನಕ್ಷೆಯಲ್ಲ. ಮನುಷ್ಯ ಎಳೆದ ಗಡಿಗಳೊಳಗೆ ಅದು ಬಂಧಿಯಾಗುವುದಿಲ್ಲ. ದೂರದಿಂದ ಕಾಣುವುದು ಅದರ ಆಕಾರ ಮಾತ್ರ; ಆತ್ಮವಲ್ಲ. ಪ್ರತಿ ಪ್ರದೇಶಕ್ಕೂ ತನ್ನದೇ ಸ್ಮೃತಿಗಳು, ಭಾಷೆ ಇವೆ. ಮರಳು, ಕೆಸರು, ಮಣ್ಣು ಮತ್ತು ನೀರು ಕೂಡ ಕಥೆ ಹೇಳುತ್ತವೆ.

ಆದರೆ ಆಧುನಿಕ ಯೋಜನೆಗಳು ಸ್ಥಳಗಳನ್ನು ನಕ್ಷೆಗಳ ಮೂಲಕವೇ ಅರ್ಥಮಾಡಿಕೊಳ್ಳುತ್ತವೆ. ನಕ್ಷೆಗಳು ಭೂಮಿಯನ್ನು ಅಳೆಯುತ್ತವೆ; ಆದರೆ ಅನುಭವಿಸುವುದಿಲ್ಲ. ಗಡಿಗಳನ್ನು ಗುರುತಿಸುತ್ತವೆ; ಆದರೆ ನೀರು–ನೆಲದ ಜೀವಂತ ಸಂಬಂಧವನ್ನು ದಾಖಲಿಸುವುದಿಲ್ಲ.

ಉಡುಪಿ ಜಿಲ್ಲೆಯ ಕುಂದಾಪುರದ ಪಂಚಗಂಗಾವಳಿಯನ್ನು ನಕ್ಷೆಗಳಾಚೆ ಹೋಗಿ ನೋಡಿದಾಗ ವಿಭಿನ್ನ ಜಗತ್ತು ತೆರೆದುಕೊಳ್ಳುತ್ತದೆ. ಬೆಂಗಳೂರಿನ ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್‌ನ ದ್ವೀಪ (DWEEPA) ಕೇಂದ್ರದ ಪ್ರೊ. ದೀಪ್ತಾ ಸತೀಶ್ ನೇತೃತ್ವದ ತಂಡದ ಅಧ್ಯಯನವು ಈ ಪ್ರದೇಶವನ್ನು ಸ್ಥಳೀಯ ಜ್ಞಾನ ಮತ್ತು ಜಲ–ಭೂ ಸಂಬಂಧಗಳ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ.

ನೀರು ಮತ್ತು ನೆಲದ ಸಂಗಮ

ಪಂಚಗಂಗಾವಳಿ ಕೇವಲ ನದಿ ತಟವಲ್ಲ. ಇಲ್ಲಿ ಐದು ನದಿಗಳು ಸಮುದ್ರ ಸೇರುತ್ತವೆ. ನದಿ, ಸಮುದ್ರ, ಜೌಗು ಪ್ರದೇಶ, ದ್ವೀಪಗಳು ಮತ್ತು ಕೃಷಿಭೂಮಿಗಳು ಸೇರಿ ವಿಶಿಷ್ಟ ಪರಿಸರ ರೂಪಿಸಿವೆ.

ಇಲ್ಲಿನ ಭೂದೃಶ್ಯವನ್ನು ಕುಂದ, ಕುದ್ರು ಮತ್ತು ಕೂಡುಗ್ರಾಮ ಎಂದು ಸ್ಥಳೀಯರು ಗುರುತಿಸುತ್ತಾರೆ.

ಕುಂದ ಪ್ರದೇಶದಲ್ಲಿ ಉಪ್ಪು ಮತ್ತು ತಾಜಾ ನೀರು ಬೆರೆತು ಜೀವಸಂಕುಲಕ್ಕೆ ಅವಕಾಶ ಮಾಡಿಕೊಡುತ್ತವೆ. ಆದರೆ ಇತ್ತೀಚೆಗೆ ಜೌಗು ಪ್ರದೇಶಗಳನ್ನು ತುಂಬಿಸಿ ವಸತಿ ಪ್ರದೇಶಗಳಾಗಿ ಪರಿವರ್ತಿಸಲಾಗುತ್ತಿದೆ. ನದಿಯ ಸ್ವಾಭಾವಿಕ ಚಲನೆ ಕುಗ್ಗುತ್ತಿದೆ.

ಕುದ್ರು ಪ್ರದೇಶದ ಜನರಿಗೆ ನೀರೇ ರಸ್ತೆ. ಹಿರಿಯರ ಮಾತಿನಲ್ಲಿ, 'ಎಲ್ಲ ನೀರಿನ ದಾರಿಗಳೂ ಎಲ್ಲರಿಗೂ ಗೊತ್ತಿರಲಿಲ್ಲ. ಕೆಲವು ದಾರಿಗಳನ್ನು ಅನುಭವದಿಂದ ಮಾತ್ರ ಕಲಿಯಬೇಕಾಗುತ್ತಿತ್ತು. ಮಳೆಗಾಲದಲ್ಲಿ ನದಿಯ ಬಣ್ಣ ನೋಡಿ ಆಳ ಅಂದಾಜಿಸುತ್ತಿದ್ದೆವು' ಎನ್ನುವ ಮಾತು ಇದು ಸ್ಥಳೀಯ ಜ್ಞಾನವನ್ನು ತಿಳಿಸುತ್ತದೆ.

ಬಸ್ರೂರು ಸೇರಿದಂತೆ ಕೂಡುಗ್ರಾಮಗಳು ಗ್ರೀಕರು, ಪೋರ್ಚುಗೀಸರು ಮತ್ತು ಬ್ರಿಟಿಷರ ಕಾಲದಲ್ಲಿ ಪ್ರಮುಖ ಬಂದರು


ನದಿ ತಟದಲ್ಲಿ ಜೀವ ವೈವಿಧ್ಯ ಸಂಶೋಧಕರು

ಪಟ್ಟಣವಾಗಿದ್ದವು. ವರಾಹಿ ನದಿಯಿಂದ ಕಾಲುವೆಗಳ ಮೂಲಕ ನೀರು ಹರಿಯುತ್ತಿತ್ತು. ಇಂದು ಆ ಇತಿಹಾಸದ ಕುರುಹುಗಳು ಮಾತ್ರ ಉಳಿದಿವೆ.

ಮರಳು, ಕೆಸರು ಮತ್ತು ಮಣ್ಣು

ಪಂಚಗಂಗಾವಳಿಯ ಪರಿಸರವನ್ನು ಅರ್ಥಮಾಡಿಕೊಳ್ಳಲು ಮರಳು, ಕೆಸರು ಮತ್ತು ಮಣ್ಣಿನ ಕಥೆ ಮುಖ್ಯ.

ಮರಳು ಪ್ರದೇಶದಲ್ಲಿ ಅಲೆಗಳು ಶಂಖುಗಳು ಮತ್ತು ಮರಳನ್ನು ತಂದು ಹಾಕುತ್ತವೆ. ನದಿಮುಖದಿಂದ ಮ್ಯಾಂಗ್ರೋವ್ ಬೀಜಗಳು ತೇಲಿ ಬರುತ್ತವೆ. ಅವು ಹೊಸ ಜೀವವಲಯ ರೂಪಿಸುತ್ತವೆ. ಆದರೆ ಈ ಸಸ್ಯವರ್ಗಗಳ ಬಗ್ಗೆ ಗಮನ ಕಡಿಮೆ.

ಕೆಸರು ಪ್ರದೇಶಗಳು ಜೀವನೋಪಾಯದ ಕೇಂದ್ರಗಳು. ಏಡಿ ಮತ್ತು ಚಿಟ್ಲಿ ಹಿಡಿದು ಬದುಕು ಸಾಗಿಸುವ ಸಮುದಾಯಗಳಿಗೆ ಅವು ಆಧಾರ.

ಮಣ್ಣಿನ ಕಥೆಯೂ ವಿಶೇಷ. ಇಲ್ಲಿನ ತೇವಭರಿತ ಮಣ್ಣು ಅಕ್ಕಿ ಬೆಳೆಗೆ ಪ್ರಸಿದ್ಧ. ಅದೇ ಮಣ್ಣು ಹೆಂಚು ತಯಾರಿಕೆಗೂ ಬಳಸಲಾಗುತ್ತದೆ. ಆದರೆ ಜೌಗು ಪ್ರದೇಶಗಳನ್ನು 'ಅಭಿವೃದ್ಧಿಗೆ ಯೋಗ್ಯ ಭೂಮಿ'ಯಾಗಿ ಪರಿವರ್ತಿಸುವುದರಿಂದ ಗುಲ್ವಾಡಿ ಅಕ್ಕಿಯಂತಹ ತಳಿಗಳು ಕಣ್ಮರೆಯಾಗುತ್ತಿವೆ.

ಈ ವ್ಯವಸ್ಥೆ ಮಾನವರಿಗಷ್ಟೇ ಅಲ್ಲ; ಮೀನು, ಏಡಿ, ಹಕ್ಕಿ, ಮ್ಯಾಂಗ್ರೋವ್, ಕೆಸರು ಮತ್ತು ಮಣ್ಣು ಎಲ್ಲವೂ ಸೇರಿ ಜೀವಂತ ಜಾಲ.


ದಡದಲ್ಲಿ ಸಿಕ್ಕ ಶಂಖುಗಳು

ಇತ್ತೀಚೆಗೆ ಪಂಚಗಂಗಾವಳಿ ಭೌಗೋಳಿಕವಾಗಿ ವೇಗವಾದ ಬದಲಾವಣೆಗಳನ್ನು ಎದುರಿಸುತ್ತಿದೆ. ಹವಾಮಾನ ಬದಲಾವಣೆ, ಹೆದ್ದಾರಿ–ಬಂದರು ಯೋಜನೆಗಳು, ಪ್ರವಾಸೋದ್ಯಮ ಮತ್ತು ಕುಂದಾಪುರ ಮಾಸ್ಟರ್ ಪ್ಲಾನ್–2041 ಇದಕ್ಕೆ ಕಾರಣ.

ನದಿಮುಖಗಳನ್ನು ಕಾಂಕ್ರೀಟ್ ಮಾಡಲಾಗುತ್ತಿದೆ. ಜೌಗು ಪ್ರದೇಶಗಳನ್ನು ಮಣ್ಣಿನಿಂದ ತುಂಬಿಸಲಾಗುತ್ತಿದೆ. ತೇವಭೂಮಿಗಳನ್ನು ಅಭಿವೃದ್ಧಿ ಭೂಮಿಯಾಗಿ ಪರಿವರ್ತಿಸಲಾಗುತ್ತಿದೆ. ಆಮೆಗಳು ಮೊಟ್ಟೆ ಇಡುವ ತೀರ ಪ್ರದೇಶಗಳೂ ಅಪಾಯದಲ್ಲಿವೆ. ಮ್ಯಾಂಗ್ರೋವ್ ವಲಯಗಳು ಕುಗ್ಗುತ್ತಿವೆ.

ನಕ್ಷೆಗಳ ಮಿತಿಗಳು

ಈ ಬದಲಾವಣೆಗಳ ಹಿಂದೆ ಒಂದು ಪ್ರಶ್ನೆ ಇದೆ: ನಾವು ಭೂಮಿಯನ್ನು ಹೇಗೆ ನೋಡುತ್ತೇವೆ?

ವಸಾಹತುಶಾಹಿ ಕಾಲದಲ್ಲಿ ಭೂಮಿಯನ್ನು ಸರ್ವೇ ಮಾಡಿ ನಕ್ಷೆಗಳ ಮೂಲಕ ಸಂಪನ್ಮೂಲಗಳಾಗಿ ಗುರುತಿಸಲಾಯಿತು. ಅದು ನಿಯಂತ್ರಣದ ಸಾಧನವಾಗಿತ್ತು. ಇಂದು ಉಪಗ್ರಹ ಚಿತ್ರಗಳು ಮತ್ತು ಡಿಜಿಟಲ್ ಮ್ಯಾಪಿಂಗ್ ಇದ್ದರೂ ದೃಷ್ಟಿಕೋನ ಬದಲಾಗಿಲ್ಲ. ನಕ್ಷೆಗಳು ಒಂದು ಕ್ಷಣದ ಚಿತ್ರ ಮಾತ್ರ. ಅವು ಋತುಮಾನ, ನೆನಪು ಮತ್ತು ಸ್ಥಳೀಯ ಜ್ಞಾನವನ್ನು ಹಿಡಿಯುವುದಿಲ್ಲ.

ಹೀಗಾಗಿ ಅಭಿವೃದ್ಧಿ ಯೋಜನೆಗಳು ಜೌಗು ಪ್ರದೇಶಗಳನ್ನು 'ಖಾಲಿ ಜಾಗ'ವೆಂದು, ನೀರಿನ ಮಾರ್ಗಗಳನ್ನು 'ಅಡ್ಡಿ'ಯೆಂದು ನೋಡುತ್ತವೆ.

ಪಂಚಗಂಗಾವಳಿಯ ಕಥೆ ಅಭಿವೃದ್ಧಿ ಮತ್ತು ಪರಿಸರದ ಸಂಬಂಧದ ಪ್ರಶ್ನೆಯಾಗಿದೆ.

ಈ ನೆಲವನ್ನು ಉಳಿಸಲು ನಕ್ಷೆಗಳಾಚೆ ಹೋಗಬೇಕು. ಜನರ ಅನುಭವ, ನೀರು–ಮಣ್ಣು–ಮರಳಿನ ಭಾಷೆ ಮತ್ತು ಸ್ಥಳೀಯ ಜ್ಞಾನವನ್ನು ಆಲಿಸಬೇಕು. ಭೂಮಿಯನ್ನು ಅಳೆಯುವುದಲ್ಲ, ಅನುಭವಿಸಬೇಕು.

ಏಕೆಂದರೆ ಪಂಚಗಂಗಾವಳಿ ನಕ್ಷೆಗಳಲ್ಲಿ ಸಂಪೂರ್ಣ ಕಾಣುವುದಿಲ್ಲ; ಅದನ್ನು ಅರ್ಥಮಾಡಿಕೊಳ್ಳಬೇಕಾದರೆ ನೆಲದ ಮೇಲೆ ನಿಂತು ನೀರಿನ ಸದ್ದನ್ನು ಕೇಳಬೇಕು.


ಮಲೆ ಮಹದೇಶ್ವರ ಬೆಟ್ಟದ ತಾಳುಬೆಟ್ಟದಲ್ಲಿ ಧೂಪ ಹಾಕುತ್ತಿರುವ ಭಕ್ತರು

ಮಾದಪ್ಪನ ಸನ್ನಿಧಿಯಲ್ಲಿ ಧೂಪದವರ ಬದುಕಿನ ಘಮಲು...

• ಬಾಲಚಂದ್ರ ಎಚ್.

'ಎಪ್ಪತ್ತೇಳು ಮಲೆಯ ಒಡೆಯ ಮುದ್ದು ಮಾಯ್ಕಾರ ಮಾದಪ್ಪನಿಗೊಂದಪ ಉಘೇ ಅನ್ರಪ್ಪೋ... ಉಘೇ... ಉಘೇ... ಧೂಪ ದೀಪದೊಡೆಯನ ಪಾದಕ್ಕೊಂದ್ಸಲ ಉಘೇ ಅನ್ರಪ್ಪೋ... ಉಘೇ... ಉಘೇ...'

ತಾಳುಬೆಟ್ಟದ ಬಳಿ ಬಂದು ನಿಲ್ಲುವ ಬಸ್ಸು, ಕಾರು, ಬೈಕ್‌ಗಳತ್ತ ಈ ಕೂಗು ಮೊದಲು ತಲುಪುತ್ತದೆ. ನಂತರ ಕಾಣಿಸಿಕೊಳ್ಳುವುದು ಕೈಯಲ್ಲಿ ಧೂಪದ ಬುಟ್ಟಿ ಹಿಡಿದು ಭಕ್ತರತ್ತ ಸರಸರನೆ ಓಡುವ ಸರಸಕ್ಕ. 'ಅಣ್ಣೋ ಧೂಪ ತಕ್ಕಳಿ... ಅಕ್ಕೋ ಧೂಪ ತಕ್ಕಳಿ... ಮಾದಪ್ಪನಿಗೆ ಧೂಪ ಹಾಕಿ ಸ್ವಾಮೇ...' ಎಂದು ಓಲೈಸುವ ಅವರ ಧ್ವನಿ, ಮಲೆಮಹದೇಶ್ವರನ ದಾರಿಯಲ್ಲಿ ಬದುಕು ಕಟ್ಟಿಕೊಂಡಿರುವ ನೂರಾರು ಕುಟುಂಬಗಳ ಬದುಕಿನ ಪ್ರತಿಧ್ವನಿಯಂತೆ ಕೇಳಿಸುತ್ತದೆ.

ಧೂಪ ಖರೀದಿಸದೆ ಹೋಗುವವರನ್ನು ತಡೆದು ನಿಲ್ಲಿಸಿ, 'ಮಾದಪ್ಪನ ಕ್ಷೇತ್ರಕ್ಕೆ ಬಂದು ಬರಿಗೈಲಿ ಹೋದ್ರೆ ಆಯ್ತುದಾ? ತಕ್ಕಳಿ ಒಂದು ಹಿಡಿ ಧೂಪ, ಕೊಂಡಕ್ಕೆ ಹಾಕಿ ಭಕ್ತಿಯಿಂದ ನಮ್ಮಪ್ಪನ ಬೇಡ್ಕಳಿ, ಅನ್ಕಂಡಿದ್ದೆಲ್ಲ ಆಯ್ತದೆ...' ಎಂದು ಹೇಳುತ್ತಾ ಕೊನೆಗೂ ಧೂಪ ಮಾರುವ ಕಾರ್ಯದಲ್ಲಿ ಯಶಸ್ವಿಯಾಗುತ್ತಾರೆ.

ಭಕ್ತರ ಮುಖಭಾವ, ವೇಷಭೂಷಣ, ಮಾತಿನ ಶೈಲಿ ನೋಡಿ ಇವರು ತಮ್ ಕಾಡಿನವ್ರಾ ಅಥವಾ ಹೊರ ಊರಿನವ್ರಾ ಎಂದು ಅಳೆದು ತೂಗಿ ವ್ಯಾಪಾರ ಮಾಡುವ ಜಾಣ್ಮೆಯೂ ಅವರಿಗೆ ಕರಗತವಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಭಕ್ತರು 'ಧೂಪಕ್ಕೆ ರೇಟು ಎಷ್ಟು?' ಎಂದು ಕೇಳಿದರೆ, 'ಎಷ್ಟೋ ಕೊಡಿ ಸ್ವಾಮೇ, ಮಾದಪ್ಪನ ಧೂಪಕ್ಕೆ ಇಷ್ಟೇ ಕೊಡಿ ಅಂತಾ ಕೇಳಕಾಯ್ತದಾ?' ಎಂಬ ಉತ್ತರ ಸಿದ್ಧ.

ಆದರೆ ಸ್ಥಳೀಯರ ಕಥೆ ಬೇರೆ. ಅವರು ಐದೋ, ಹತ್ತೋ ರೂಪಾಯಿಯನ್ನು ಕೈಗಿಟ್ಟು ಧೂಪ ಪಡೆದು ಮುಂದೆ ಸಾಗುತ್ತಾರೆ. ಇಲ್ಲಿ ಬೆಲೆಗಿಂತ ನಂಬಿಕೆಗೆ ಬೆಲೆ ಹೆಚ್ಚು. ಪ್ರತಿ ಹುಣ್ಣಿಮೆ, ಅಮಾವಾಸ್ಯೆ, ಯುಗಾದಿ, ಶಿವರಾತ್ರಿ, ದೀಪಾವಳಿಗೆ ಮಾದಪ್ಪನ ಕ್ಷೇತ್ರಕ್ಕೆ ಬರುವುದನ್ನು ವ್ರತದಂತೆ ಪಾಲಿಸುವವರು ಚಾಮರಾಜನಗರ ಜಿಲ್ಲೆಯಾದ್ಯಂತ ಇದ್ದಾರೆ.

ಧೂಪಪ್ರಿಯ ಮಾದಪ್ಪ

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟದ ಮೇಲೆ ನೆಲೆಸಿರುವ ಮಾದಪ್ಪ 'ಧೂಪಪ್ರಿಯ' ಎಂದೇ ಪ್ರಸಿದ್ಧ. ಕ್ಷೇತ್ರಕ್ಕೆ ಬರುವ ಹೆಚ್ಚಿನ ಭಕ್ತರು ಮೊದಲು ತಾಳುಬೆಟ್ಟದಲ್ಲಿ ನಿಂತು ಮಾದಪ್ಪನ ಪಾದಗಳಿಗೆ ಅಡ್ಡಬಿದ್ದು, ವಿಭೂತಿ ಹಚ್ಚಿಸಿಕೊಂಡು ಧೂಪ ಹಾಕುತ್ತಾರೆ. ನಂತರವೇ ಎಪ್ಪತ್ತೇಳು ಮಲೆಯ ಮೇಲಿರುವ ಮಾದಪ್ಪನ ದರ್ಶನಕ್ಕೆ ತೆರಳುತ್ತಾರೆ.

ಧೂಪ ಹಾಕುವ ಈ ಸಂಪ್ರದಾಯ ಶತಮಾನಗಳಿಂದ ಜನಪದರ ಬದುಕಿನೊಂದಿಗೆ ಬೆರೆತುಕೊಂಡಿದೆ. ಕ್ಷೇತ್ರಕ್ಕೆ ಹೊರಡುವ ಮೊದಲು ಮನೆಯಲ್ಲೇ ಧೂಪ ಹಾಕಿ ಹೊರಡುವ ಪ್ರತೀತಿಯೂ ಇಂದಿಗೂ ಇದೆ. ಆದರೆ ಈ ಸಂಪ್ರದಾಯ ಯಾವಾಗ ಆರಂಭವಾಯಿತು ಎಂಬುದಕ್ಕೆ ಸ್ಪಷ್ಟ ಉತ್ತರ ಸಿಗುವುದಿಲ್ಲ.

ಧೂಪ ಮಾರುವ ಕಾಯಕದ ಇತಿಹಾಸವೂ ಇದೇ ರೀತಿ. 'ಅಪ್ಪ-ಅವ್ವ ಧೂಪ ಮಾರ್ತಿದ್ರು, ಅವರ ಬಳಿಕ ನಾವು ಮುಂದುವರಿಸ್ತಿದ್ದೀವಿ' ಎಂಬುದೇ ಬಹುತೇಕರ ಉತ್ತರ. ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟ. ಮಾದಪ್ಪನ ಕ್ಷೇತ್ರದ ತುಂಬೆಲ್ಲ ಘಮಿಸುವ ಈ ಧೂಪ, ಬೆಟ್ಟದ ಸುತ್ತಮುತ್ತಲಿನ ಹಳ್ಳಿಗಳು ಮತ್ತು ಕಾಡಂಚಿನ ನೂರಾರು ಕುಟುಂಬಗಳನ್ನು ತಲೆಮಾರುಗಳಿಂದ ಪೊರೆಯುತ್ತಾ ಬಂದಿದೆ.


ಧೂಪ ಮಾರುತ್ತಿರುವ ಸರಸಕ್ಕ ಮತ್ತು ಮುತ್ತರಾಜಿ

ಧೂಪದಲ್ಲಿ ಬೆರೆತ ಬದುಕುಗಳು

'ಹಿಂದೆಲ್ಲ ಕೂಲಿ ಕಂಬಳ ಅಂತಾ ಸಿಗ್ತಾ ಇರಲಿಲ್ಲ, ಒಂದೊತ್ತಿನ ಊಟಕ್ಕೂ ತತ್ವಾರ, ಏಳು ವರ್ಷದವಳಿದ್ದಾಗ ಅಪ್ಪ ಶಾಲೆ ಬಿಡಿಸಿ ಮಾದಪ್ಪನ ಬೆಟ್ಟಕ್ಕೆ ಧೂಪ ಮಾರೋದಕ್ಕೆ ಕಳಿಸಿದ್ರು. ಓದು–ಬರಹ ಕಲಿಯೋದಕ್ಕಿಂತ ಧೂಪ ಮಾರೋದು ಸುಲಭ ಅಂತಾ ಗೊತ್ತಾದ್ಮೇಲೆ ಇದೇ ಕಾಯಕನಾ ಮಾಡ್ಕೊಂಡು ಬಂದಿದ್ದೀನಿ. ಒಂದಾಣೆ, ಎರಡಾಣೆಯಿಂದ ಸುರುವಾದ ವ್ಯಾಪಾರ ಮಾದಪ್ಪನ ಕೃಪೆಯಿಂದ ನಡ್ಕೊಂಡು ಬಂದ್ಯೆತೆ, ಧೂಪ ಮಾರಿದ್ ದುಡ್ಡಿಂದ್ಲೇ ಮೂರು ಹೆಣ್ಮಕ್ಕಳ ಮದುವೆ ಮಾಡಿದ್ದೀನಿ ಸ್ವಾಮೇ' ಎಂದು ಆತ್ಮವಿಶ್ವಾಸದ ನಗೆ ಬೀರುತ್ತಾರೆ ಸರಸಕ್ಕ.

'ಮೂವತ್ತು ವರ್ಷದವಳಿದ್ದಾಗ ಧೂಪ ಮಾರೋಕೆ ಬಂದೆ, ನನಗೀಗ ಎಂಬತ್ತು ವರ್ಷ ತುಂಬ್ಯೆತಂತೆ. ಐದು ಹೆಣ್ಣುಮಕ್ಕಳ ಮದುವೆ ಮಾಡಿದ್ದೀನಿ, ದೇಹದಲ್ಲಿ ಶಕ್ತಿ ಇರೋವರ್ಗೂ ಧೂಪ ಮಾರಿ ಬದುಕ್ತೀನಿ' ಎನ್ನುತ್ತಾರೆ ಮುನಿಯಮ್ಮ.

'ಮೂರು ಹೆಣ್ಣುಮಕ್ಕಳನ್ನ ಸಾಕ್ಬೇಕಿತ್ತು. ದುಡ್ಕಂಡು ತಿನ್ನೋಕೆ ಜಮೀನಿಲ್ಲ. ಕೂಲಿ ಕಂಬಳನೂ ಸಿಗ್ತಾ ಇರ್ನಿಲ್ಲ. ಕೆಲಸ ಸಿಗದೆ ಪಟ್ಟ ಕಷ್ಟ ಮಾದಪ್ಪನ್ಗೇ ಗೊತ್ತು. ಧೂಪ ಮಾರೋಕೆ ನಿಂತ ಮೇಲೆ ಒಂದಷ್ಟು ಕಾಸು ನೋಡೋ ಹಾಗಾಯ್ತು. ಎಲ್ಲ ಹೆಣ್ಣುಮಕ್ಕಳ ಮದುವೆ ಮಾಡಿದೆ. ಮೂಲೆ ಹಿಡಿದಿರೋ ಪತಿನೂ ನೋಡ್ಕೋತಿದ್ದೀನಿ' ಎನ್ನುತ್ತಾರೆ ಮುತ್ತರಾಜಿ.

ಈ ಮಹಿಳೆಯರ ಕಥೆಗಳು ವಿಭಿನ್ನವಾಗಿರಬಹುದು. ಆದರೆ ಅವುಗಳ ಮೂಲ ಒಂದೇ. ಧೂಪ, ಭಕ್ತಿ ಮತ್ತು ಬದುಕು.

ಕಾಡಿನಿಂದ ಕೊಂಡದವರೆಗೆ

ಜನಪದೀಯವಾಗಿ ಶ್ರೀಮಂತವಾಗಿರುವ ಚಾಮರಾಜನಗರ ಜಿಲ್ಲೆಯಲ್ಲಿ ಧೂಪ ನೂರಾರು ಬುಡಕಟ್ಟು ಸಮುದಾಯಗಳ ಬದುಕಿನ ಭಾಗವಾಗಿದೆ. ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ, ಚಿಕ್ಕಲ್ಲೂರು ಮಂಟೇಸ್ವಾಮಿ ಕ್ಷೇತ್ರ, ನಾಗಮಲೆ, ಕಪ್ಪೂರೆ, ಚಾಮರಾಜೇಶ್ವರನ ದೇಗುಲ ಸೇರಿದಂತೆ ಗದ್ದುಗೆ ಆರಾಧನೆಯ ಸಂಪ್ರದಾಯ ಇರುವ ಬಹುತೇಕ ಸ್ಥಳಗಳಲ್ಲಿ ಧೂಪ ಮಾರುವವರನ್ನು ಕಾಣಬಹುದು ಎಂದು ಸಾಹಿತಿ ಸ್ವಾಮಿ ಪೊನ್ನಾಚಿ ಹೇಳುತ್ತಾರೆ.

ಮಲೆ ಮಹದೇಶ್ವರ, ಕಾವೇರಿ ವನ್ಯಧಾಮ ಹಾಗೂ ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಅರಣ್ಯಗಳಲ್ಲಿ ಬೆಳೆಯುವ ಕಾನು ಧೂಪದ ಮರಗಳಿಂದ ಹೊರಹೊಮ್ಮುವ ಅಂಟನ್ನು ಧೂಪವಾಗಿ ಬಳಸಲಾಗುತ್ತದೆ.

ಸೋಲಿಗರು ಹಾಗೂ ಬೇಡಗಂಪಣರು ಈ ಅಂಟನ್ನು ಸಂಗ್ರಹಿಸುತ್ತಾರೆ. ನಂತರ ಅದನ್ನು ಒಣಗಿಸಿ, ಧೂಪದ ಮರದ ಚೆಕ್ಕೆಯ ಪುಡಿಯೊಂದಿಗೆ ಬೆರೆಸಿ ಮಾರಾಟ ಮಾಡಲಾಗುತ್ತದೆ. ಶತಮಾನಗಳಿಂದ ಈ ಕಾಯಕ ನಡೆದುಕೊಂಡು ಬಂದರೂ ಅರಣ್ಯದಲ್ಲಿ ಧೂಪದ ಮರಗಳು ಉಳಿದಿರುವುದು ಸೋಲಿಗರ ಪ್ರಕೃತಿಯೊಂದಿಗಿನ ಸಹಬಾಳ್ವೆಗೆ ಸಾಕ್ಷಿ ಎಂದು ಏಟ್ರೀ ಸಂಸ್ಥೆಯ ವಿಜ್ಞಾನಿ ಸಿ. ಮಾದೇಗೌಡ ಅಭಿಪ್ರಾಯಪಡುತ್ತಾರೆ.

'ಹಿಂದೆಲ್ಲ ಶುದ್ಧವಾದ ಧೂಪದ ಅಂಟು ಸಿಗುತ್ತಿತ್ತು, ಕೆಂಡಕ್ಕೆ ಹಾಕಿದಾಕ್ಷಣ ಘಮಲು ಇಡೀ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿತ್ತು. ಕ್ಷೇತ್ರಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಿದಂತೆಲ್ಲ ಧೂಪಕ್ಕೆ ವಿಪರೀತ ಬೇಡಿಕೆ ಸೃಷ್ಟಿಯಾಗಿ ಅಂಟು ಪೂರೈಸಲು ಸಾಧ್ಯವಾಗುತ್ತಿಲ್ಲ. ಒಣಗಿದ ಧೂಪದ ಮರಗಳ ಚೆಕ್ಕೆಯನ್ನು ಪುಡಿಮಾಡಿ ಸ್ವಲ್ಪ ಅಂಟಿನೊಂದಿಗೆ ಬೆರೆಸಿ ಸೇರಿಗೆ ₹100 ರಿಂದ ₹200ಕ್ಕೆ ಮಾರಾಟ ಮಾಡುತ್ತೇವೆ. ಕೆಲವರು ಸಾಂಬ್ರಾಣಿ ಪುಡಿಯನ್ನೂ ಮರದ ಪುಡಿಯೊಂದಿಗೆ ಬೆರೆಸಿ ಮಾರಾಟ ಮಾಡುತ್ತಾರೆ' ಎನ್ನುತ್ತಾರೆ ವ್ಯಾಪಾರಿಗಳು.

ಧೂಪದ ಘಮಲಿನ ಹಿಂದೆ...

ಮಹದೇಶ್ವರನ ಬೆಟ್ಟದಲ್ಲಿ ಹರಡುವ ಧೂಪದ ಘಮಲು ಕೇವಲ ಭಕ್ತಿಯ ಸಂಕೇತವಲ್ಲ. ಅದು ಕಾಡಿನಿಂದ ಬಂದ ಅಂಟಿನ ಪರಿಮಳ, ಮಹಿಳೆಯರ ಶ್ರಮ ಮತ್ತು ತಲೆಮಾರುಗಳಿಂದ ಮುಂದುವರಿದ ಬದುಕಿನ ಕಥೆಯೂ ಹೌದು.

ಭಕ್ತರು ಕೊಂಡಕ್ಕೆ ಹಾಕುವ ಒಂದು ಹಿಡಿ ಧೂಪದಲ್ಲಿ ಕೇವಲ ಪ್ರಾರ್ಥನೆ ಅಷ್ಟೇ ಇರುವುದಿಲ್ಲ. ಸರಸಕ್ಕ, ಮುನಿಯಮ್ಮ, ಮುತ್ತರಾಜಿಯಂತಹ ನೂರಾರು ಮಹಿಳೆಯರ ಬದುಕೂ ಬೆರೆತಿರುತ್ತದೆ. ಕಾಡಿನಿಂದ ಹೊರಟ ಅಂಟು, ಅವರ ಕೈಗಳಲ್ಲಿ ವ್ಯಾಪಾರವಾಗಿ, ಭಕ್ತರ ನಂಬಿಕೆಯಲ್ಲಿ ಆರಾಧನೆಯಾಗಿ ರೂಪಾಂತರಗೊಳ್ಳುತ್ತದೆ.


ಚಿನ್ನದ ಅಂಬಾರಿ ಹೊತ್ತ ಅರ್ಜುನ

ಸ್ಮಾರಕವಾದ ಅರ್ಜುನ

6ನೇ ಪುಟದಿಂದ...

ಜನರ ಒತ್ತಾಯದ ಫಲವಾಗಿ ನಿರ್ಮಾಣವಾಗಿರುವ ಈ ಸ್ಮಾರಕ ಈಗ ನಿಧಾನವಾಗಿ ಭಾವನಾತ್ಮಕ ತಾಣವಾಗಿ ರೂಪುಗೊಳ್ಳುತ್ತಿದೆ. ಆದರೆ ಅಲ್ಲಿಗೆ ತಲುಪುವ ದಾರಿ ಇನ್ನೂ ಸರಿಯಾಗಿಲ್ಲ. ಮುಖ್ಯ ರಸ್ತೆಯಿಂದ ಒಳಗೆ ಕಚ್ಚಾ ರಸ್ತೆಯಲ್ಲಿ ಸಾಗಬೇಕು. ದಾರಿ ತೋರಿಸುವ ಫಲಕಗಳು ವಿರಳ. ಪ್ರವಾಸಿಗರಿಗೆ ಅಗತ್ಯ ಮೂಲಸೌಕರ್ಯಗಳ ಕೊರತೆಯೂ ಇದೆ.

ಹೀಗಾಗಿ ಅರ್ಜುನನನ್ನು ಪ್ರೀತಿಸಿದ ಅನೇಕ ಜನರು ಈ ತಾಣದ ಬಗ್ಗೆ ತಿಳಿದಿದ್ದರೂ, ಭೇಟಿ ನೀಡುವವರ ಸಂಖ್ಯೆ ಇನ್ನೂ ಕಡಿಮೆಯೇ. ಆದರೂ ಅಲ್ಲಿಗೆ ತಲುಪಿದವರು ಖಾಲಿ ಮನಸ್ಸಿನಿಂದ ಹಿಂದಿರುಗುವುದಿಲ್ಲ. ಸಮಾಧಿಯ ಮುಂದೆ ಕೆಲ ಕ್ಷಣ ನಿಂತರೆ ಸಾಕು. ದಸರೆಯ ಜಂಬೂಸವಾರಿಯ ಘೋಷ ಮತ್ತೆ ಕಿವಿಯಲ್ಲಿ ಮೊಳಗಿದಂತೆ ಆಗುತ್ತದೆ. ಅಂಬಾರಿ ಹೊತ್ತ ಹೆಜ್ಜೆಗಳು ಕಣ್ಣ ಮುಂದೆ ಮೂಡುತ್ತವೆ. ಕರ್ತವ್ಯದ ಮಧ್ಯೆಯೇ ಜೀವ ತೆತ್ತ ಗಜರಾಜನ ಕಥೆ ಮನಸ್ಸನ್ನು ತಟ್ಟುತ್ತದೆ.

ದಸರಾ ಮುಂದುವರಿಯುತ್ತದೆ. ಹೊಸ ಕುಮ್ಕಿ ಆನೆಗಳು ಬರುತ್ತವೆ. ಚಿನ್ನದ ಅಂಬಾರಿಯೂ ವರ್ಷದಿಂದ ವರ್ಷಕ್ಕೆ ಸಾಗುತ್ತದೆ. ಆದರೆ ಕೆಲವು ಜೀವಗಳು ತಮ್ಮ ಕಾಲವನ್ನು ಮೀರಿ ಬದುಕುತ್ತವೆ. ಅರ್ಜುನ ಅಂತಹ ಅಪರೂಪದ ನೆನಪು.

ಆತ ಇಂದು ಕೇವಲ ಒಂದು ಆನೆಯಲ್ಲ; ಮೈಸೂರು ದಸರೆಯ ಇತಿಹಾಸದಲ್ಲಿ ಅಚ್ಚಳಿಯದ ಅಧ್ಯಾಯ. ಸಾವಿರಾರು ಜನರ ಹೃದಯದಲ್ಲಿ ಇನ್ನೂ ರಾಜನಂತೆ ಜೀವಂತವಾಗಿರುವ ಅಂಬಾರಿ ಒಡೆಯ.

ಮುನ್ನೋಟ 28-06-2026 ರಿಂದ 04-07-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹಣಗಳಿಸುವತ್ತ ಗಮನ ಕೊಡುವಿರಿ. ಕೃಷಿಯಿಂದ ಆದಾಯವನ್ನು ಪಡೆಯಬಹುದು. ಹಿರಿಯರು ನಿಮ್ಮಿಂದ ಸಹಕಾರ ನಿರೀಕ್ಷೆ ಮಾಡುತ್ತಾರೆ. ಆಸ್ತಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಫಲಿತಾಂಶ ಕಡಿಮೆ ಇರುತ್ತದೆ. ಧರ್ಮವಿದ್ಯೆ ಕಲಿಯುತ್ತಿರುವವರಿಗೆ ಉತ್ತಮ ಅಭಿವೃದ್ಧಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮನಸ್ಸಿನಲ್ಲಿ ಹೊಸ ಹುಮ್ಮಸ್ಸು ತುಂಬಿರುತ್ತದೆ. ಆದಾಯವು ಅಗತ್ಯವನ್ನು ಪೂರೈಸುತ್ತದೆ. ಸಾವಯವ ಕೃಷಿಕರಿಗೆ ಪ್ರೋತ್ಸಾಹ ದೊರೆಯುತ್ತದೆ. ಆಸ್ತಿ ಮಾರಾಟ ಮಾಡುವವರಿಗೆ ನಿರೀಕ್ಷಿತ ಲಾಭ ಇರುವುದಿಲ್ಲ. ನಿಮ್ಮ ಚಟುವಟಿಕೆಗಳಿಂದ ಅನಾರೋಗ್ಯಕ್ಕೆ ದಾರಿ ಮಾಡಿಕೊಳ್ಳುವಿರಿ. ಮುನಿದಿದ್ದ ಸಂಗಾತಿ ಸರಿ ಹೋಗುವರು. ಹಿರಿಯರು ನಿಮ್ಮ ವಿರುದ್ಧ ಇದ್ದರೂ ಹಣಕಾಸು ನೆರವು ನೀಡುವರು. ಕಚ್ಚಾವಸ್ತು ಪೂರೈಸುವವರಿಗೆ ಆದಾಯ ಹೆಚ್ಚುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆತ್ಮಗೌರವದ ಕಡೆಗೆ ಗಮನ ಕೊಡುವಿರಿ. ಆದಾಯವು ನಿರೀಕ್ಷೆಯಷ್ಟಿರುತ್ತದೆ. ಧಾರ್ಮಿಕ ಮುಖಂಡರ ಪರಿಚಯ ಆಗುವ ಸಾಧ್ಯತೆ ಇದೆ. ಸ್ವಉದ್ಯೋಗ ಮಾಡು-ತ್ತಿರುವವರಿಗೆ ಲಾಭ ಹೆಚ್ಚುತ್ತದೆ. ಸಂಗೀತಗಾರರಿಗೆ ಉತ್ತಮ ಅವಕಾಶಗಳು ದೊರೆತು ಆದಾಯ ಹೆಚ್ಚುತ್ತದೆ. ಶೀತಬಾಧೆ ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಕುಟುಂಬಕ್ಕೆ ಹೆಚ್ಚು ಆರ್ಥಿಕ ಸಹಕಾರ ದೊರೆಯುತ್ತದೆ. ಕಠಿಣ ಪರಿಶ್ರಮದಿಂದ ವೃತ್ತಿಯಲ್ಲಿ ಮೇಲ್ದರ್ಜೆಗೆ ಹೋಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮನಸ್ಸಿನಲ್ಲಿ ಹೆಚ್ಚು ಪ್ರಸನ್ನತೆ ಇರುತ್ತದೆ. ಆದಾಯ ಕಡಿಮೆ ಇದ್ದರೂ ಹಳೆಯ ಬಂಡವಾಳಗಳು ಕಾಪಾಡುತ್ತದೆ. ಧಾರ್ಮಿಕ ಪ್ರವಚನಕಾರರಿಗೆ ಅವಕಾಶಗಳು ಹೆಚ್ಚು. ನಡವಳಿಕೆಯಲ್ಲಿ ಚುರುಕುತನ ಹೆಚ್ಚಲಿದೆ. ಬಂಧುಗಳ ನಡುವೆ ಉತ್ತಮ ಸಂಬಂಧ ಕಂಡುಕೊಳ್ಳುವಿರಿ. ಆಸ್ತಿ ಕೊಳ್ಳಬಹುದು ಮತ್ತು ಮಾರಾಟ ಮಾಡಬಹುದು. ಈಗ ಉದರ ಸಂಬಂಧಿ ತೊಂದರೆಗಳು ಕಾಡಬಹುದು. ಸಂಗಾತಿಯ ಕಡೆಯ ಹಿರಿಯರಿಂದ ಅನುಕೂಲವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆರಂಭದಲ್ಲಿ ಮೌನಿಗಳಾಗಿರುವಿರಿ. ಆದಾಯವು ಕಡಿಮೆ ಇದ್ದು ವೆಚ್ಚ ಹೆಚ್ಚಿರಲಿದೆ. ಬಂಧುಗಳೊಡನೆ ಸಂಬಂಧ ಸುಧಾರಿಸಿಕೊಳ್ಳುವುದರಿಂದ ಒಳಿತಾಗಲಿದೆ. ಆಸ್ತಿ ವ್ಯವಹಾರ ಮಾಡುವವರಿಗೆ ಅಲ್ಪ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಕಡಿಮೆ ಫಲಿತಾಂಶ ಇರುತ್ತದೆ. ಮೂಳೆಗೆ ಸಂಬಂಧ ಪಟ್ಟ ತೊಂದರೆಗಳು ಕಡಿಮೆಯಾಗುತ್ತವೆ. ಸಂಸಾರಕ್ಕೆ ಸಂಗಾತಿ ಸಾಕಷ್ಟು ಶ್ರಮ ಪಡುವರು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿರೀಕ್ಷಿಸಿದ ಆದಾಯ ಬರುತ್ತದೆ. ಸ್ವಲ್ಪ ಚುರುಕಾಗಿ ಕೆಲಸ ಮಾಡಿ ಎಲ್ಲರ ಗಮನ-ಸೆಳೆಯುವಿರಿ. ಆಸ್ತಿ ಕೊಳ್ಳಲು ಅವಕಾಶ ಬರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ವಿದೇಶದಲ್ಲಿ ಹೆಚ್ಚು ಬಂಡವಾಳ ಹೂಡುವುದು ಬೇಡ. ಸಂಗಾತಿಯಿಂದ ನಿರೀಕ್ಷಿತ ಸಹಕಾರ ಸಿಗುವುದಿಲ್ಲ. ಕೃಷಿಕರಿಗೆ ಸ್ವಲ್ಪ ಅಭಿವೃದ್ಧಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಈ ವಾರ ವೃತ್ತಿಪರತೆ ಹೆಚ್ಚಾಗಿರುತ್ತದೆ. ಆದಾಯ ಸಾಮಾನ್ಯ ಸ್ಥಿತಿಯಲ್ಲಿರುತ್ತದೆ. ಕೆಲವು ಸ್ನೇಹಿತರು ಸಹಾಯಕ್ಕೆ ಬರುವರು. ಹಳೆಯ ವಸ್ತುಗಳ ಸಂಗ್ರಹಕಾರರಿಗೆ ಹೆಚ್ಚು ಅನುಕೂಲವಿದೆ. ವಿದೇಶದಲ್ಲಿ ಕಲಿಯಲು ಅವಕಾಶ ಖಂಡಿತ ದೊರೆಯುತ್ತದೆ. ವಯಸ್ಸಾದವರು ಆರೋಗ್ಯದ ಕಡೆ ಗಮನ ಕೊಡುವುದು ಒಳ್ಳೆಯದು. ಸಂಗಾತಿಯ ಕಠಿಣ ಮಾತುಗಳು ಬೇಸರ ತರಿಸುತ್ತವೆ. ವೃತ್ತಿಯಲ್ಲಿ ಅಭಿವೃದ್ಧಿಯ ಜೊತೆಗೆ ಆದಾಯವನ್ನೂ ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆರಂಭದಲ್ಲಿ ಒಂದು ಸಂತಸದ ಸುದ್ದಿ ಕೇಳುವಿರಿ. ಆದಾಯ ಮಧ್ಯಮಗ-ತಿಯಲ್ಲಿ ಇರುತ್ತದೆ. ಬಂಧುಗಳು ದ್ವೇಷವನ್ನು ಸ್ವಲ್ಪ ಕಡಿಮೆ ಮಾಡುವರು. ವಿದೇಶದಲ್ಲಿರುವವರ ಕುಟುಂಬ ನಿರ್ವಹಣೆ ಉತ್ತಮವಾಗಿರುತ್ತದೆ. ಗಣಿಗಾರಿಕೆ ಅಭ್ಯಾಸ ಮಾಡುತ್ತಿರುವವರಿಗೆ ಅನುಕೂಲ ಹೆಚ್ಚು. ಸಂಗಾತಿ ಆರೋಗ್ಯದಲ್ಲಿ ವ್ಯತ್ಯಾಸ ಆಗಬಹುದು. ಸರ್ಕಾರಿ ಕೆಲಸಗಳಲ್ಲಿ ನಿರೀಕ್ಷಿತ ಪ್ರಗತಿ ಇಲ್ಲ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಎಲ್ಲರೊಡನೆ ಹೆಚ್ಚು ವಿಶ್ವಾಸ ಗಳಿಸುವಿರಿ. ಆದಾಯ ಕಡಿಮೆ ಇದ್ದರೂ ನಿರ್ವಹಣೆ ಮಾಡುವಿರಿ. ಬಂಧುಗಳು ಅವರಾಗಿಯೇ ಸ್ನೇಹ ಬಯಸುವರು. ನ್ಯಾಯವಾದಿಗಳಿಗೆ ಹೆಚ್ಚು ದಾವೆಗಳು ದೊರೆಯಲಿವೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ. ಹಳೆಯ ಕೃಷಿ ಪದ್ಧತಿಯನ್ನು ಬಿಡಲು ತೀರ್ಮಾನ ಮಾಡುವಿರಿ. ಸಂಗಾತಿಯ ಸಹಕಾರದಿಂದ ಸರ್ಕಾರಿ ಕೆಲಸಗಳಲ್ಲಿ ಅನುಕೂಲಗಳಾಗಲಿವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸಂಗಾತಿಯ ಪ್ರೋತ್ಸಾಹದಿಂದ ಹೆಚ್ಚು ಕ್ರಿಯಾಶೀಲರಾಗುವಿರಿ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಬಂಧುಗಳ ನ್ಯಾಯಸಮ್ಮತ ಕೆಲಸಗಳಿಗೆ ಮಾತ್ರ ಸಹಕಾರಕೊಡುವಿರಿ. ಕೃಷಿಭೂಮಿ ಕೊಳ್ಳಬಹುದು. ಕೃಷಿ ಅಧ್ಯಯನ ಮಾಡು-ತ್ತಿರುವವರಿಗೆ ಅನುಕೂಲ ಹೆಚ್ಚು. ಸಂಗಾತಿಯ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ. ಸಂಗಾತಿಯಿಂದ ಹಣಕಾಸು ಸಹಕಾರ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಮಾತಿನಲ್ಲಿ ಕಠಿಣತೆ ಬೇಡ. ರಾಜಕಾರಣಗಳ ಮಾತಿಗೆ ಬೆಲೆ ಕಡಿಮೆ ಆಗಬಹುದು. ಆದಾಯವು ಕಡಿಮೆ ಇರುತ್ತದೆ. ಬಂಧುಗಳ ಸಹಕಾರದಿಂದ ಆಸ್ತಿ ಮಾಡಿಕೊಳ್ಳಬ-ಹುದು. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲ. ಮರೆತ ಹಲವು ವಿಷಯಗಳು ನೆನಪಾಗಿ ಅನುಕೂಲ ಆಗಬಹುದು. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಕೇಶಾಲಂಕಾರ ಮಾಡುವವರಿಗೆ ಬೇಡಿಕೆ, ಆದಾಯವು ಕಡಿಮೆಯಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆಲಸಿತನ ಮೈದುಂಬಿರುತ್ತದೆ. ಆದಾಯ ಕಡಿಮೆ ಇರುತ್ತದೆ. ಬಂಧುಗಳ ಸಹಕಾರದಿಂದ ಆದಾಯ ಹೆಚ್ಚಿಸಿಕೊಳ್ಳಬಹುದು. ಸರ್ಕಾರಿ ಕಂಪನಿಗಳಿಗೆ ಭೂಮಿ ಒದಗಿಸಿಕೊಡುವ ಕೆಲಸ ಮಾಡುವವರ ಆದಾಯ ಹೆಚ್ಚುತ್ತದೆ. ಉದರ ಸಂಬಂಧಿ ತೊಂದರೆಗಳು ಕೆಲವರನ್ನು ಕಾಡಬಹುದು.

ಪದಬಂಧ 2950



ಮೇಲಿಂದ ಕೆಳಕ್ಕೆ

1.	ಏಳು ಪೂಜನೀಯ ತಾಯಂದಿರ ಸಮೂಹ	5
2.	ಅವಯವ ಪಡೆದ ಮಂದಿಯ ಗುಂಪು	3
4.	ಅರ್ಜುನ ದುರ್ಯೋಧನ ಸಂಬಂಧ	3
5.	ವಿಷ್ಣುವಿನ ಹತ್ತು ರೂಪ	5
7.	ನಳಿನಳಿಸುವಳು ನಾನೆನ್ನುವ ಹುಡುಗಿ	3
8.	ಕಾಪಾಡುವವನೀತ	3
9.	ಕಾಲಗಣನೆಯಲ್ಲಿ ಹೊಸ ಮಜಲಿನ ರೂಪ	3
10.	ಮನುಷ್ಯತ್ವ ವ್ಯಕ್ತಪಡಿಸುವ ಗುಣ	3
13.	ಎರಡೂ ಕೈಚಾಚಿ ತೋರಿಸಿದರೂ ಸಾಕಾಗದ ಹರಹು	3
15.	ಕೊಡಗಿನ ಅತಿ ದೊಡ್ಡ ಸಾಂಪ್ರದಾಯಿಕ ಕೃಷಿ ಸುಗ್ಗಿ	3
16.	ಗಾಳಿ ಸೇವನೆಗಾಗಿ ಸಂತೋಷದ ಸಂಚಾರ	5
17.	ಉದಾಸೀನ ಮಾಡಿ, ಕಡೆಗಣಿಸುವ ನಡವಳಿಕೆ	3
18.	ಬಟ್ಟೆಯ ಮೇಲೆ ಚಿತ್ತಾರದ ಸೂಕ್ಷ್ಮ ಕೈ ಕೆಲಸ	3
19.	ಗುರುಗಳಿಗೆ ಆಂಗ್ಲದಿಂದ ಬಂದ ಕನ್ನಡದ ಹೆಸರು	3
20.	ನೋಡೋಣ ಎನ್ನುವ ದೃಷ್ಟಿ	3
21.	ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸುವ ಚಾರ	5
24.	ನೀರಡಿಕೆ, ಆಹಾರದ ಬೇಡಿಕೆಗಳಿಲ್ಲದವ	3
26.	ಆರ್ಯನಲ್ಲದ ದಕ್ಷಿಣ ಭಾರತದ ಮೂಲ ಪುರುಷ	3

ಎಡದಿಂದ ಬಲಕ್ಕೆ

1.	ಒಟ್ಟಿಗೆ ಸಾಮೂಹಿಕವಾಗಿ ಊಟಮಾಡುವ ವ್ಯವಸ್ಥೆ	5
3.	ಕಾಲಡಿಯಲ್ಲಿ ಅರಳಿದ ತಾವರೆ ಗೋವಿಂದನಿಗೆ ಸೇರಿದ್ದು	5
6.	ಇದ್ದಕ್ಕಿದ್ದಹಾಗೆ ಕಣ್ಮರೆಯಾಗುವ ಮಯ ನಿರ್ಮಿಸಿದ ಕನಸಿನ ಪಟ್ಟಣವೇ ಇದು?	5
9.	ವಿಕಾಸತತ್ವದಲ್ಲಿ ಆರಂಭದ ಮೂಲ ಪುರುಷ	5
11.	ಚಾತುರ್ವರ್ಣದಲ್ಲಿ ಶೌರ್ಯಕ್ಕೆ ಹೆಸರಾದವ	3
12.	ಈ ಜೀವನದ ದೋಣಿಯನ್ನು ಕಡೆಯತನಕ ಹಾಯ್ಸ ಅಂಬಿಗ	3
14.	ಇಂದ್ರ ಪದವಿಗೆ ಆಸೆಪಟ್ಟು ತಲೆಕೆಳಗಾದ ರಾಜ	3
17.	ನಕ್ಷತ್ರದ ತನಕ ಮುಟ್ಟುವ ರಾಮನಾಮ	3
19.	ಮಾರಿ ಕಣಿವೆಯಲ್ಲಿ ನಿಂತು ಈ ದೇವತೆಯನ್ನು ಕೂಗಿ	3
22.	ಪಡುವಣದಲ್ಲಿ ನೆತ್ತರ ವರ್ಣ ಕಂಡಾಗ ನೇಸರನ ಸ್ಥಿತಿ	3
23.	ಮಹಾಭಾರತದ ದಾಸಿ ಪುತ್ರ ತಿಳಿಹೇಳಿದ ಬುದ್ಧಿಮಾತು	5
25.	ಶಿವ ಕೋಪಗೊಂಡು ಭೂಮಿಗೆ ಬಂದು ತಾಳಿದ ಸ್ವರೂಪ	5
27.	ದ್ರವಕ್ಕೆ ಕಾರಣವಾಗುವ ವಸ್ತು	5
28.	ಮಂದ ಮುನಿಯಾದ ರಾಜ, ಲೇಖಕರೊಬ್ಬರ ಕಾವ್ಯನಾಮ	5

ಪದಬಂಧ ಉತ್ತರ -2949

ಮೇಲಿಂದ ಕೆಳಕ್ಕೆ

1.ನವಮಾಸ 2.ನೆಲ 3.ಭಾರತೀಸುತ 4.ಯದುನಂದನ 6.ವಸಿಷ್ಠ 10. ವಿದೇಶ 11.ಜೀವಮಾನ 12.ಭಾಷಾಭಿಮಾನ 13. ರಜತಗಿರಿ 14.ಪ್ರಸೇನ 15. ತ್ರಿವಿಕ್ರಮ 18.ನಗು

ಎಡದಿಂದ ಬಲಕ್ಕೆ

1.ನಮ್ಮಮನೆ 3.ಭಾನುಪ್ರಿಯ 5.ಲವಣಾಸುರ 7.ತಿರುಓಣಂ 8.ಸಮರಶ್ರೇಷ್ಠ 10.ವಿಶ್ರಾಂತಜೀವನ 12.ಭಾವಪರವಶ 14.ಪ್ರಧಾನಮಂತ್ರಿ 16.ಭಿನ್ನಮತ 17.ಗಿರಿಕಾನನ 19.ನವಸಿರಿ 20.ಗುರುಗ್ರಾಮ

ಅನುಪಯುಕ್ತ ವಸ್ತುಗಳಲ್ಲಿ ಜೀವ ಪಡೆದ ಪಕ್ಷಿಗಳು!

• ಸ್ವರೂಪ್ ಕೊಟ್ಟೂರು

ವಿಜಯನಗರ ಜಿಲ್ಲೆಯ ಕೂಡ್ಲಿಗಿಯ ಚಿತ್ರ ಕಲಾವಿದೆ ಎ.ಎಂ. ಭಾರತಿ ಅವರ ಮನೆಗೆ ಕಾಲಿಟ್ಟ ಕ್ಷಣವೇ ಅದು ಸಾಮಾನ್ಯ ಮನೆಯೋ ಅಥವಾ ಜೀವಂತ ಪಕ್ಷಿಧಾಮವೋ ಎಂಬ ಗೊಂದಲ ಮೂಡುತ್ತದೆ. ತಾರಸಿಯಲ್ಲಿ ದಿನವಿಡೀ ಹಕ್ಕಿಗಳ ಚಿಲಿಪಿಲಿ, ನಿರಂತರ ಹಾರಾಟ, ಕಾಳುಕುಡಿಯ ಧಾವಂತ; ಒಳಗೆ ಹೋದರೆ ಬಣ್ಣಬಣ್ಣದ ಪಕ್ಷಿಗಳ ಲೋಕವೇ ಕಣ್ಣೆದುರು ಜೀವಂತವಾಗಿ ನಿಂತಿರುವಂತೆ ಅನಿಸುತ್ತದೆ. ಹಾರಲು ಕ್ಷಣ ಮಾತ್ರ ಬಾಕಿಯಿರುವ ಪಕ್ಷಿ, ಮೊಟ್ಟೆಗಳಿಗೆ ಕಾವು ಕೊಡುವ ತಾಯಿ ಪಕ್ಷಿ, ಮರಿಗೆ ಆಹಾರ ನೀಡುತ್ತಿರುವ ದೃಶ್ಯಗಳು... ಇವೆಲ್ಲವೂ ಭಾರತಿ ಅವರ ಕೈಚಳಕದಲ್ಲಿ ನೈಜವಾಗಿ ಮೂಡಿಬಂದಿವೆ. ಚಿತ್ರಗಳನ್ನೂ ಜೀವಂತ ಪಕ್ಷಿಗಳನ್ನೂ ಬೇರ್ಪಡಿಸುವುದೇ ಅಸಾಧ್ಯ ಎಂಬಷ್ಟು ಗೊಂದಲ ಉಂಟುಮಾಡುತ್ತವೆ.

ತರಗೆಲೆ, ಒಣಗಿದ ಪಕಳೆ, ವೆಡ್ಡಿಂಗ್ ಕಾರ್ಡ್, ಔಷಧಿ ಬಾಕ್ಸ್, ಪೇಪರ್ ಕಪ್ ಸೇರಿದಂತೆ ಸಾಮಾನ್ಯವಾಗಿ ಬೇಡವಾದ, ಬಳಕೆಯಿಲ್ಲದಂತೆ ಕಾಣುವ ವಸ್ತುಗಳೇ ಇವರ ಕಲೆಯ ಮೂಲಸಾಮಗ್ರಿ. ಇವುಗಳನ್ನೇ ತಮ್ಮ ಕೈಚಳಕ, ಕಲ್ಪನೆ, ಪರಿಶೀಲನೆ, ಸೂಕ್ಷ್ಮಗಮನ, ಸಹನೆ ಮತ್ತು ಶ್ರಮದ ಮೂಲಕ ಜೀವಂತ ಪಕ್ಷಿಗಳಾಗಿ ಪರಿವರ್ತಿಸುವ ಭಾರತಿ ಅವರ ಮನೆ ಒಂದು ಆರ್ಟ್ ಗ್ಯಾಲರಿಯಂತಾಗಿದೆ. ಪ್ರತಿಯೊಂದು ಕಲಾಕೃತಿಯಲ್ಲೂ ಸಹಜ, ಚಲನೆ, ಭಾವ, ಬಣ್ಣ, ಆಳ ಮತ್ತು ಜೀವಂತಿಕೆಯ ಸೌಂದರ್ಯ ಸ್ಪಷ್ಟವಾಗಿ ಕಾಣಿಸುತ್ತದೆ. ಇವುಗಳನ್ನು ನೋಡಿದವರು ನಿಜ ಪಕ್ಷಿಗಳೇ ಎಂದು ತಪ್ಪಾಗಿ ಗ್ರಹಿಸುವಷ್ಟು ನೈಜತೆ ಇವರ ಕಲೆಯ ಪ್ರಮುಖ ವಿಶೇಷತೆ ಎನ್ನುವುದು ಅವರ ಶೈಲಿಯ ಗುರುತು.

ಭಾರತಿಗೆ ಚಿತ್ರಕಲೆಯು ಸಹಜವಾಗಿ ಒಲಿದ ವರ. ಮೂರನೇ ತರಗತಿಯಲ್ಲಿ ಮಣ್ಣಿನ ಗಣೇಶವನ್ನು ರೂಪಿಸಿದ ಕ್ಷಣವೇ ಅವರೊಳಗಿನ ಕಲಾವಿದೆ ಎಚ್ಚರಗೊಂಡಳು. ಆ ಕ್ಷಣದಿಂದಲೇ ಚಿತ್ರಕಲೆಯತ್ತ ಅವರ ಆಸಕ್ತಿ ಗಾಢವಾಗಿ ಬೆಳೆದಿತು ಮತ್ತು ಕ್ರಮೇಣ ಅದು ಜೀವನದ ಅವಿಭಾಜ್ಯ ಭಾಗವಾಯಿತು. ರಂಗೋಲಿ, ಪೆನ್ಸಿಲ್ ಆರ್ಟ್, ವಾಟರ್ ಪೇಂಟಿಂಗ್, ಡ್ರಾಯಿಂಗ್, ಮಣ್ಣಿನ ಮೂರ್ತಿಗಳು, ಗೊಂಬೆಗಳ ತಯಾರಿಕೆ ಸೇರಿದಂತೆ ಹಲವು ರೂಪಗಳಲ್ಲಿ ತಮ್ಮ ಪ್ರತಿಭೆಯನ್ನು ವಿಸ್ತರಿಸಿಕೊಂಡ ಅವರು ಇಂದು ಕೊಲಾಜ್ ಕಲೆಯಲ್ಲಿ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ವಿಶೇಷವಾಗಿ ಪಕ್ಷಿಗಳ ಚಿತ್ರಣವೇ ಇವರ ಕಲೆಯ ಗುರುತು ಹಾಗೂ ಆತ್ಮವಾಗಿದೆ.

ಈ ಕಲಾ ಪಯಣದಲ್ಲಿ ಮಾರ್ಗದರ್ಶಕರಾಗಿ ನಿಂತವರು ಕೊಟ್ಟೂರಿನ ಎಸ್.ವಿ. ಹಿರೇಮಠ. 'ಡ್ರಾಯಿಂಗ್ ಪೇಪರ್ ತಂದು ನೀಟಾಗಿ ಕತ್ತರಿಸಿ ಪಕ್ಷಿಗಳನ್ನು ಮಾಡಲು ಪ್ರೋತ್ಸಾಹ ನೀಡಿದವರು ಅವರೇ. ಅವರಿಗೆ ನಾನು ಚಿರಋಣಿ' ಎಂದು ಭಾರತಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಇದೇ ವೇಳೆ ಅಣ್ಣಂದಿರಾದ ಡಾ. ಶ್ರೀನಿವಾಸುಲು, ಗೋವಿಂದರಾಜುಲು, ಶಿಕ್ಷಕ ನಾಗರಾಜ್ ರಾವ್ ಅವರ ನಿರಂತರ ಬೆಂಬಲವೂ ಅವರ ಪ್ರತಿಭೆಗೆ ಹೊಸ ದಾರಿ ತೆರೆಯಿತು. ಗದಗಿನ ವಿಜಯ ಕಲಾ ಮಂದಿರ ಮಹಾವಿದ್ಯಾಲಯದಲ್ಲಿ ಪ್ರೇಮಾ ಹಿರೇಮಠ, ರಾಮಚಂದ್ರ ಹೆಗಡೆ, ವಿ.ವೈ. ಬಡಿಗೇರ್ ಅವರ ಮಾರ್ಗದರ್ಶನದಲ್ಲಿ ಅವರ ಕಲೆಯು ಮತ್ತಷ್ಟು ಪಕ್ವವಾಗಿ ರೂಪುಗೊಂಡಿತು. ಈ ಎಲ್ಲಾ ಮಾರ್ಗದರ್ಶನ, ಪ್ರೋತ್ಸಾಹ ಮತ್ತು ಪರಿಸರವೇ ಅವರ ಕಲೆಯ ಮೂಲ ಶಕ್ತಿ.



ಭಾರತಿ

ವೃತ್ತಿಜೀವನದಲ್ಲಿ ಸರ್ಕಾರಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಭಾರತಿ, ಮಕ್ಕಳಲ್ಲಿ ಕಲೆಯ ಬೀಜವನ್ನು ಬಿತ್ತಿದರು. ಶಾಲೆಯಲ್ಲಿ ಚಿತ್ರಕಲೆಯ ವಾತಾವರಣ ನಿರ್ಮಿಸಿದ ಅವರು, ಮಕ್ಕಳಿಗೆ ಕಡಿಮೆ ವೆಚ್ಚದಲ್ಲಿ ಕಲೆಯ ಅಭ್ಯಾಸ ಸಾಧ್ಯವಾಗುವಂತೆ ಮಾಡಿದರು. ಅನೇಕ ಬಾರಿ ಸ್ವಂತ ಖರ್ಚಿನಲ್ಲಿ ಡ್ರಾಯಿಂಗ್ ಸಾಮಗ್ರಿಗಳನ್ನು ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ ಉದಾಹರಣೆಗಳು ಇವೆ. 'ಮಕ್ಕಳು ಚಿತ್ರಕಲೆಯತ್ತ ಹೆಚ್ಚು ಆಕರ್ಷಿತರಾದರೆ ಅದೇ ನನ್ನ ಜೀವನದ ದೊಡ್ಡ ಸಾಧನೆ' ಎಂಬ ಅವರ ನಂಬಿಕೆ ಅವರ ಶಿಕ್ಷಕ ಜೀವನದ ಸಾರವಾಗಿದೆ ಮತ್ತು ಶಿಕ್ಷಣದತ್ತ ಅವರ ಬದ್ಧತೆಯನ್ನು ತೋರಿಸುತ್ತದೆ. ಅವರ ಮಾರ್ಗದರ್ಶನದಲ್ಲಿ ಬೆಳೆದ ಅನೇಕ ವಿದ್ಯಾರ್ಥಿಗಳು ಇಂದು ಚಿತ್ರಕಲೆಯನ್ನೇ ವೃತ್ತಿಯಾಗಿ ಆಯ್ಕೆ ಮಾಡಿಕೊಂಡಿರುವುದು ಅವರ ಕಾರ್ಯದ ಪ್ರಭಾವವನ್ನು ತೋರಿಸುತ್ತದೆ.

ಅವರ ಕೈಯಲ್ಲಿ ರೂಪುಗೊಂಡ ಕಲಾಕೃತಿಗಳು ರಾಜ್ಯದ ಅನೇಕ ಸರ್ಕಾರಿ ಕಚೇರಿಗಳು, ಶಾಲೆಗಳು, ಮನೆಗಳು, ಪ್ರದರ್ಶನಗಳು ಹಾಗೂ ಸಮಾರಂಭಗಳಲ್ಲಿ ಕಾಣಿಸಿಕೊಂಡಿವೆ. ಉಡುಗೊರೆಯಾಗಿ ನೀಡಿದ ಅವರ ಪಕ್ಷಿ ಚಿತ್ರಗಳು ಅನೇಕ ಕಡೆಗಳಲ್ಲಿ ಕಲೆಯ ಗುರುತು ಮೂಡಿಸಿವೆ. ಕೆಲವೊಮ್ಮೆ ದೂರದ ಊರುಗಳಿಗೂ ಈ ಕಲಾಕೃತಿಗಳು ತಲುಪಿದ್ದು, ಅಲ್ಲಿನ ಕಲಾಸಕ್ತರ ಮೆಚ್ಚುಗೆಗೆ ಪಾತ್ರವಾಗಿವೆ. ಆದರೆ ಇಷ್ಟೆಲ್ಲ ಸಾಧನೆಯ ನಡುವೆಯೂ ಭಾರತಿ ಅವರು ಪ್ರಶಸ್ತಿ, ಬಿರುದು, ಸನ್ಮಾನಗಳ ಹಿಂದೆ ಹೋಗಲಿಲ್ಲ. 'ಕಲಾರಸಿಕರ ಮೆಚ್ಚುಗೆಯೇ ನನಗೆ ದೊಡ್ಡ ಪ್ರಶಸ್ತಿ' ಎಂಬ ಅವರ ಸರಳ, ವಿನೀತ ನುಡಿ ಅವರ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಹೇಳುತ್ತದೆ. ಪ್ರಶಸ್ತಿಗಿಂತಲೂ ಅವರಿಗಿರುವ ತೃಪ್ತಿ ತಮ್ಮ ಕುಂಚದ ಮೂಲಕ ಜೀವಂತ ಲೋಕವನ್ನು ನಿರ್ಮಿಸುವುದಲ್ಲಿದೆ.

ಪ್ರಚಾರದ ಬೆಳಕಿನಿಂದ ದೂರ ಉಳಿದರೂ, ತಮ್ಮ ಕುಂಚದ ಮೂಲಕ ಭಾರತಿ ಅವರು ಪಕ್ಷಿಗಳ ಲೋಕವನ್ನೇ ಬದುಕಿಸುತ್ತಿದ್ದಾರೆ. ಅವರ ಮನೆ ಇಂದು ಕೇವಲ ವಾಸಸ್ಥಾನವಲ್ಲ, ಬಣ್ಣ, ಭಾವ, ಕಲ್ಪನೆ, ಸೃಜನಶೀಲತೆ, ಸೂಕ್ಷ್ಮ ಗಮನ, ಪರಿಶ್ರಮ, ತ್ಯಾಗ ಮತ್ತು ಪಕ್ಷಿಗಳ ಜೀವಂತ ಕಾವ್ಯವಾಗಿ ಪರಿವರ್ತಿತವಾಗಿದೆ. ಮನೆಯ ಪ್ರತಿಯೊಂದು ಮೂಲೆಯಲ್ಲೂ ಒಂದು ಕಥೆ, ಒಂದು ಪಕ್ಷಿ, ಒಂದು ಭಾವ ಜೀವಂತವಾಗಿ ಉಸಿರಾಡುವಂತೆ ಕಾಣುತ್ತದೆ. ಇದು ಅವರ ಕಲೆಯಷ್ಟೇ ಅಲ್ಲ, ಅವರ ಬದುಕಿನ ಉಸಿರೂ ಆಗಿದೆ.

❖







ದೇಹ, ಲಿಂಗ ಮತ್ತು ಪ್ರತಿರೋಧದ ಡಾಲ್‌ಹೌಸ್

• ಪುನೀತ್ ಕುಮಾರ್ ಎಲ್.

'ಬಯಸಿ ಪಡೆದ ಹೆಣ್ತನವನ್ನು ಕಾಪಾಡಿಕೊಳ್ಳುವುದು ಎಷ್ಟು ಕಷ್ಟ' ಎಂಬ ಸಂಭಾಷಣೆಯಲ್ಲೇ 'ಡಾಲ್ ಹೌಸ್' ನಾಟಕದ ಇಡೀ ಭಾವಲೋಕ ಅಡಗಿದೆ. ಆ ಒಂದೇ ವಾಕ್ಯ ಪ್ರೇಕ್ಷಕರನ್ನು ಮೌನಕ್ಕೂ, ಮರುಚಿಂತನೆಗೂ ದೂಡುತ್ತದೆ. ಮಾತನಾಡುವ ಗೊಂಬೆಯ ಕಲಾವಿದೆಯಾಗಿ ಅಂತರರಾಷ್ಟ್ರೀಯ ಮನ್ನಣೆ ಪಡೆದ ಜಾನು ಅವರ ಏಕವ್ಯಕ್ತಿ ರಂಗಪ್ರಯೋಗ ಭಾವತೀವ್ರತೆಯನ್ನು ಪ್ರೇಕ್ಷಕರಿಗೆ ನೇರವಾಗಿ ತಲುಪಿಸುತ್ತದೆ.

ಲಿಂಗತ್ವ ಅಲ್ಪಸಂಖ್ಯಾತೆಯೊಬ್ಬಳ ಬದುಕನ್ನು ಕೇಂದ್ರವಾಗಿಟ್ಟುಕೊಂಡ ಈ ನಾಟಕ ಕೇವಲ ವೈಯಕ್ತಿಕ ನೋವಿನ ಕಥೆಯಾಗಿ ಉಳಿಯುವುದಿಲ್ಲ. ಮನುಷ್ಯ ಸಂಬಂಧಗಳು, ದೇಹದ ರಾಜಕಾರಣ, ಪುರುಷಾಧಿಪತ್ಯದ ದೃಷ್ಟಿ ಹಾಗೂ ಸಮಾಜದ ದ್ವಂದ್ವ ನೈತಿಕತೆಯನ್ನು ಪ್ರಶ್ನಿಸುವ ಚಿಂತನಶೀಲ ರಂಗಕೃತಿಯಾಗಿ ರೂಪುಗೊಳ್ಳುತ್ತದೆ. ಜಾನು ಅವರ ಬದುಕಿನ ಪಯಣವನ್ನು ಆಧರಿಸಿ ಸಮುದಾಯ ಎದುರಿಸುವ ತಿರಸ್ಕಾರ, ಹಿಂಸೆ ಮತ್ತು ಏಕಾಂತವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಅಗಲಿದ ಕುಟುಂಬವನ್ನು ಮತ್ತೆ ಒಂದಾಗಿಸಿದ ಘಟನೆಯು ನಾಟಕಕ್ಕೆ ಅಪರೂಪದ ಸಾಮಾಜಿಕ ಆಯಾಮ ನೀಡಿದೆ.

ಲಿಂಗತ್ವ ಅಲ್ಪಸಂಖ್ಯಾತರ ಬದುಕನ್ನು ನಿರಂತರವಾಗಿ ರಂಗಭಾಷೆಗೆ ತರುತ್ತಿರುವ ಬೇಲೂರು ರಘುನಂದನ್ ಅವರ ರಚನೆ ಮತ್ತು ನಿರ್ದೇಶನ ವಿಷಯದ ಮೇಲಿನ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸುತ್ತದೆ. 'ಭೂಮಿ', 'ಅಕ್ಕೈ', 'ಮಾತಾ' ನಂತರದ ಅವರ ಮತ್ತೊಂದು ಮಹತ್ವದ ಪ್ರಯತ್ನವಾಗಿ 'ಡಾಲ್ ಹೌಸ್' ಗುರುತಿಸಿಕೊಳ್ಳುತ್ತದೆ. ಉಪದೇಶಕ್ಕಿಂತ ಪಾತ್ರಗಳ ಅನುಭವಗಳ ಮೂಲಕವೇ ಪ್ರಶ್ನೆಗಳನ್ನು ಎತ್ತುವುದು ನಾಟಕದ ಬಲ.

ಗೊಂಬೆಗಳೊಂದಿಗೆ ತನ್ನ ನೋವು, ಸಂತೋಷ ಮತ್ತು ಪ್ರೀತಿಯನ್ನು ಹಂಚಿಕೊಳ್ಳುವ ಜಾನು, ಅವುಗಳ ಮೂಲಕವೇ ಸಮಾಜದ ಕ್ರೂರ ಮುಖವನ್ನು ತೆರೆದಿಡುತ್ತಾರೆ. ಗೊಂಬೆಗಳು ಇಲ್ಲಿ ಕೇವಲ ವಸ್ತುಗಳಲ್ಲ; ಮಾನವ ಸಂಬಂಧಗಳ ಪ್ರತಿರೂಪಗಳಾಗುತ್ತವೆ. ಜಾನುವಿನ ಏಕಾಂತ ಮತ್ತು ಪ್ರೀತಿಯ ಹಂಬಲವನ್ನು ಅವು ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತವೆ.

'ರಾತ್ರಿಯಾದರೆ ಮೈಮೇಲಿನ ಬಟ್ಟೆ ಮತ್ತು ಮೈಯ ಬಣ್ಣ ಒಂದೇ ಈ ಜಗತ್ತಿಗೆ' ಎಂಬ ಸಂಭಾಷಣೆ ನಾಟಕದ ಅತ್ಯಂತ ತೀಕ್ಷ್ಣ ಕ್ಷಣ. ಹಗಲಿನಲ್ಲಿ ಗುರುತುಗಳ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸುವ ಸಮಾಜ, ರಾತ್ರಿ ದೇಹವನ್ನು ಮಾತ್ರ ನೋಡುವ ದ್ವಂದ್ವ ಮನಸ್ಥಿತಿಯನ್ನು ಈ ಒಂದು ಸಾಲು ಬಯಲು ಮಾಡುತ್ತದೆ. ಈ ಸಂಭಾಷಣೆಯ ನಂತರ ಸಭಾಂಗಣದಲ್ಲಿ ಮೂಡುವ ಮೌನವೇ ಅದರ ಪರಿಣಾಮಕ್ಕೆ ಸಾಕ್ಷಿಯಾಗುತ್ತದೆ.

ಮಾತನಾಡುವ ಗೊಂಬೆಯ ಕಲೆಯಲ್ಲಿ ಜಾನು ಅವರ ಪ್ರಾವೀಣ್ಯವನ್ನು ನಿರ್ದೇಶಕರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಅವರ ಅಭಿನಯ ಸಹಜ, ಅತಿರೇಕವಿಲ್ಲದ ಮತ್ತು ಭಾವಪೂರ್ಣ. ಅತೀ ನಾಟಕೀಯತೆಯ ಮೊರೆ ಹೋಗದೆ ಸಣ್ಣ ಹಾವಭಾವ ಮತ್ತು ಧ್ವನಿಯ ಏರಿಳಿತಗಳ ಮೂಲಕವೇ ಪಾತ್ರದ ಒಳತೋಳಲನ್ನು ತಲುಪಿಸುತ್ತಾರೆ. ಬೆಳಕಿನ ವಿನ್ಯಾಸವೂ ದೃಶ್ಯಗಳ ಭಾವತೀವ್ರತೆಯನ್ನು ಹೆಚ್ಚಿಸುತ್ತದೆ.

ಆದರೆ, ಪಾತ್ರ ಮತ್ತು ಜಾನು ಅವರ ನೈಜ ಬದುಕಿನ ನಡುವಿನ ಗೆರೆ ಕೆಲವೆಡೆ ಮಸುಕಾಗುತ್ತದೆ. ಇದರಿಂದ ಕೆಲವೊಮ್ಮೆ ಇದು ಪಾತ್ರದ ಕಥೆಯೋ, ಜಾನು ಅವರ ಬದುಕಿನ ಕಥೆಯೋ ಎಂಬ ಗೊಂದಲ ಉಂಟಾಗುತ್ತದೆ. ಈ ಗೆರೆಯನ್ನು ನಿರ್ದೇಶಕರು ಇನ್ನಷ್ಟು ಸ್ಪಷ್ಟವಾಗಿ ಕಟ್ಟಿಕೊಟ್ಟಿದ್ದರೆ ನಾಟಕ ಇನ್ನಷ್ಟು ಬಿಗಿಯಾಗುತ್ತಿತ್ತು.

ನಾಟಕ ಲೈಂಗಿಕ ಕಾರ್ಯಕರ್ತೆಯರ ಬದುಕಿನ ಸಂಕಟ, ಪುರುಷಾಧಿಪತ್ಯದ ವಿಕೃತ ಕಾಮನೆ ಹಾಗೂ ದೇಹವನ್ನು ಉಪಭೋಗದ ವಸ್ತುವಾಗಿ ನೋಡುವ ಮನಸ್ಥಿತಿಯನ್ನು ನಿರ್ದಾಕ್ಷಿಣ್ಯವಾಗಿ ಪ್ರಶ್ನಿಸುತ್ತದೆ. ಜಾನುವಿನ ಪ್ರಿಯತಮನಿಂದ ಗೊಂಬೆಯ ಮೇಲೆ ನಡೆಯುವ ಅತ್ಯಾಚಾರದ ಪ್ರಸಂಗ ಅಧಿಕಾರ, ಕಾಮನೆ ಮತ್ತು ಹಿಂಸೆಯ ನಡುವಿನ ಸಂಬಂಧವನ್ನು ತೀಕ್ಷ್ಣವಾಗಿ ಹೇಳುವ ರಂಗರೂಪಕವಾಗಿದೆ. ಪ್ರೇಕ್ಷಕರನ್ನು ಆಘಾತಗೊಳಿಸುವ ಈ ದೃಶ್ಯ ನಾಟಕದ ಆಶಯವನ್ನು ಪರಿಣಾಮಕಾರಿಯಾಗಿ ತಲುಪಿಸುತ್ತದೆ.

ತಾಯಿಯಾಗುವ, ಗೆಳತಿಯಾಗುವ, ಗೆಳೆಯನಾಗುವ ಗೊಂಬೆಗಳು ನಿರ್ಜೀವ ವಸ್ತುಗಳಾಗಿ ಉಳಿಯದೆ ಜೀವಂತ ಪಾತ್ರಗಳಾಗಿ ರೂಪುಗೊಳ್ಳುವುದು ನಾಟಕದ ಕಲಾತ್ಮಕ ಯಶಸ್ಸು. ಸಿಹಿಮೊಗೆ ಪವನ್ ಅವರ ಸಂಗೀತ ಮತ್ತು ಚಾಂದಿನಿ ಗರ್ತಿಕರೆ ಅವರ ಗಾಯನ ಭಾವತೀವ್ರತೆಯನ್ನು ಮತ್ತಷ್ಟು ಗಾಢಗೊಳಿಸುತ್ತವೆ. ಸಂಗೀತವು ದೃಶ್ಯಗಳ ಭಾವವನ್ನು ಮತ್ತಷ್ಟು ಗಾಢಗೊಳಿಸುತ್ತದೆ.

ನಾಟಕದ ಅಂತ್ಯದಲ್ಲಿ ಹನ್ನೊಂದು ವರ್ಷಗಳಿಂದ ದೂರವಾಗಿದ್ದ ಕುಟುಂಬ ಮತ್ತೆ ಜಾನು ಅವರನ್ನು ಅಪ್ಪಿಕೊಳ್ಳುವ ಕ್ಷಣ ಇಡೀ ಪ್ರದರ್ಶನದ ಅತ್ಯಂತ ಪ್ರಭಾವಶಾಲಿ ಘಟ್ಟ. ತಾಯಿ ರಂಗದ ಮೇಲೆಯೇ ಮಗಳ ಕಾಲಿಗೆರಗಿದ ದೃಶ್ಯ ಸಭಾಂಗಣವನ್ನು ಮೌನದಲ್ಲಿ ಮುಳುಗಿಸುತ್ತದೆ. ಆ ಕ್ಷಣ ನಾಟಕದ ಭಾವುಕತೆಯಷ್ಟೇ ಅಲ್ಲ, ರಂಗಭೂಮಿಯ ಸಾಮಾಜಿಕ ಶಕ್ತಿಗೂ ಸಾಕ್ಷಿಯಾಗುತ್ತದೆ. ನಾಟಕವು ರಂಗದ ಆಚೆಯೂ ಬದುಕಿನಲ್ಲಿ ಬದಲಾವಣೆಗೆ ಕಾರಣವಾಗಬಲ್ಲದು ಎಂಬುದನ್ನು ಈ ಅಂತ್ಯ ಮನದಟ್ಟಾಗಿಸುತ್ತದೆ.

ಕಲೆ ಮನರಂಜನೆಯಾಚೆಗೆ ಬದುಕುಗಳನ್ನು ಜೋಡಿಸುವ, ಸಂಬಂಧಗಳನ್ನು ಮರುಸ್ಥಾಪಿಸುವ ಮತ್ತು ಸಮಾಜವನ್ನು ಪ್ರಶ್ನಿಸುವ ಶಕ್ತಿಯುತ ಮಾಧ್ಯಮ ಎಂಬುದನ್ನು 'ಕಾಜಾಣ' ಪ್ರಸ್ತುತಿಯ 'ಡಾಲ್ ಹೌಸ್' ಪರಿಣಾಮಕಾರಿಯಾಗಿ ಸಾಬೀತುಪಡಿಸುತ್ತದೆ.

❖

...ವೀಳ್ಯದೆಲೆ ಕೃಷಿ ಕಥೆ



ಹೊರ ಪ್ರದೇಶಗಳಿಗೆ ಹೊರಟ ವೀಳ್ಯದೆಲೆ

6ನೇ ಪುಟದಿಂದ...

ಪಾಲಿಹೌಸ್‌ನ ಶಕ್ತಿ

ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ ಅವರ ಪ್ರಕಾರ, ವೀಳ್ಯದೆಲೆ ಕೃಷಿಗೆ ಪಾಲಿಹೌಸ್ ಸೂಕ್ತ ಆಯ್ಕೆಯಾಗಿದೆ.

'ವೀಳ್ಯದೆಲೆ ಸೂಕ್ಷ್ಮ ಬೆಳೆ. ಬಯಲಿನಲ್ಲಿ ಬೆಳೆಯುವಾಗ ಮಳೆ, ಗಾಳಿ ಮತ್ತು ಹವಾಮಾನ ವೈಪರೀತ್ಯಗಳು ಬೆಳೆ ಮೇಲೆ ಪರಿಣಾಮ ಬೀರುತ್ತವೆ. ಆದರೆ ಪಾಲಿಹೌಸ್‌ನಲ್ಲಿ ನಿಯಂತ್ರಿತ ವಾತಾವರಣ ಸಿಗುವುದರಿಂದ ಬೆಳವಣಿಗೆ ಉತ್ತಮವಾಗುತ್ತದೆ. ಹನಿ ನೀರಾವರಿ ಮೂಲಕ ಅಗತ್ಯವಿರುವಷ್ಟು ನೀರು ಮತ್ತು ಗೊಬ್ಬರ ನೀಡಬಹುದು. ಹೀಗಾಗಿ ಇಳುವರಿಯೂ ಹೆಚ್ಚುತ್ತದೆ' ಎನ್ನುತ್ತಾರೆ.

ಬಯಲಿನಲ್ಲಿ ಒಂದು ಎಕರೆಯಲ್ಲಿ ವರ್ಷಕ್ಕೆ ಸುಮಾರು 25 ಲಕ್ಷ ಎಲೆಗಳು ದೊರೆಯುತ್ತಿದ್ದರೆ, ಪಾಲಿಹೌಸ್‌ನಲ್ಲಿ 60ರಿಂದ 80 ಲಕ್ಷ ಎಲೆಗಳವರೆಗೆ ಉತ್ಪಾದನೆ ಸಾಧ್ಯವಾಗುತ್ತದೆ.

'ವೀಳ್ಯದೆಲೆಗೆ ನಿಗದಿತ ದರ ಇಲ್ಲ. ಬೇಡಿಕೆ ಮತ್ತು ಗುಣಮಟ್ಟದ ಮೇಲೆ ಬೆಲೆ ನಿರ್ಧಾರವಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಪಾಲಿಹೌಸ್‌ನ ಒಂದು ಕರಂಡೆಗೆ ₹1,500ರಿಂದ ₹2,500 ಸಿಗುತ್ತದೆ.

ಗಣೇಶೋತ್ಸವ, ನವರಾತ್ರಿ ಸಮಯದಲ್ಲಿ ಬೇಡಿಕೆ ಹೆಚ್ಚಾದರೆ ದರವೂ ಏರುತ್ತದೆ' ಎಂದು ಅಪ್ಪಾಸಾಹೇಬ ಉದಗಟ್ಟಿ ವಿವರಿಸುತ್ತಾರೆ.

ಒಮ್ಮೆ ವೀಳ್ಯದೆಲೆ ಬೆಳೆ ನೆಟ್ಟರೆ ಐದು ವರ್ಷಗಳವರೆಗೆ ಉತ್ಪಾದನೆ ದೊರೆಯುತ್ತದೆ. ವರ್ಷಕ್ಕೊಮ್ಮೆ ಬಳ್ಳಿಯನ್ನು ಇಳಿಸಿ ಪುನಃ ಚಿಗುರಲು ಬಿಡಲಾಗುತ್ತದೆ. ವೆಚ್ಚವೂ ಕಡಿಮೆ ಇಲ್ಲ. ಆದರೂ ಲಾಭದಾಯಕತೆಯಿಂದ ರೈತರು ಈ ಬೆಳೆಯತ್ತ ಆಕರ್ಷಿತರಾಗಿದ್ದಾರೆ.


ವಿದೇಶಕ್ಕೆ ರಫ್ತು ಮಾಡುವ ಗುಣಮಟ್ಟದ ವೀಳ್ಯದೆಲೆಯೂ ಇಲ್ಲಿ ಬೆಳೆಯುತ್ತದೆ. ಆದರೆ ಸ್ಥಳೀಯ ಮತ್ತು ದೇಶೀಯ ಮಾರುಕಟ್ಟೆಯೇ ಸಾಕಷ್ಟು ಲಾಭ ನೀಡುತ್ತಿರುವುದರಿಂದ ರೈತರು ಇನ್ನೂ ರಫ್ತು ಕಡೆ ಹೆಚ್ಚಿನ ಗಮನ ಹರಿಸಿಲ್ಲ.

ಗುರುವಾರ ಸಂಜೆ ಕಂಡ ಆ ಸಂತೆ ಈಗ ನೆನಪಾಗುತ್ತದೆ. ಕರಂಡೆಗಳಲ್ಲಿ ಜೋಡಿಸಲಾದ ಹಸಿರು ಎಲೆಗಳು ಕೇವಲ ಕೃಷಿ ಉತ್ಪನ್ನವಲ್ಲ; ಅವು ಶಿರಗಾಂವದ ಬದಲಾಗುತ್ತಿರುವ ಬದುಕಿನ ಸಂಕೇತ. ಬಿದಿರಿನ ಬಂಬುಗಳನ್ನು ಏರುತ್ತ ಸಾಗುವ ಎಲೆಬಳ್ಳಿಗಳಂತೆ, ಈ ಗ್ರಾಮದ ರೈತರ ಕನಸುಗಳೂ ಹೊಸ ಎತ್ತರಗಳನ್ನು ತಲುಪುತ್ತಿವೆ.

❖

ಮೊದಲ ಓದು

ಕೊರಚ ಸಮುದಾಯದ ಜ್ಞಾನಕೋಶ



ಕೊರಚ ಮಾತುಕತೆ (ಕುಡ್ರ್ ವಾತಕತ)
ಲೇ: ಹೆಚ್.ಆರ್. ಸ್ವಾಮಿ
ಪ್ರ: ನೇಗಿಲ ಯೋಗಿ ಟ್ರಸ್ಟ್
ಸಂ: 7760040888


ಅಳಿವಿನಂಚಿನಲ್ಲಿರುವ ಕೊರಚ ಭಾಷೆಯನ್ನು ದಾಖಲೆ ಮಾಡುವ ಜೊತೆಗೆ ಆ ಭಾಷೆಯನ್ನು ಕಲಿಯುವ ಆಸಕ್ತರಿಗೆ ನೆರವಾಗುವಂತೆ 'ಕೊರಚ ಮಾತುಕತೆ' ಕೃತಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಹೆಚ್.ಆರ್. ಸ್ವಾಮಿ ನಿರೂಪಿಸಿದ್ದಾರೆ. ಮೂಲ ಅಲೆಮಾರಿ ಸಮುದಾಯ ಕೊರಚರ (ಕುಡ್ರ್) ಮೌಖಿಕ ಮಾತಿನ ಬೆಡಗನ್ನು ಶಾಸ್ತ್ರೀಯ ಹಿನ್ನೆಲೆಯಲ್ಲಿ ಸಂಗ್ರಹಿಸಿದ್ದಾರೆ. ಭಾಷಾಶಾಸ್ತ್ರ ಮೂಲತತ್ವವನ್ನು ಅನುಸರಿಸಿ 'ಕುಡ್ರ್ ವಾತಕತ' ವಿನ್ಯಾಸಗೊಂಡಿದೆ.

ಕೊರಚ ಭಾಷೆಯನ್ನು ಚೆನ್ನಾಗಿ ಬಲ್ಲ ಸ್ವಾಮಿ ಅವರು, ಕೃತಿ ರಚನೆಗೆ ಶ್ರಮದಾಯಕ ಸುತ್ತಾಟ ಮಾಡಿದ್ದಾರೆ. ತಮ್ಮ ಅಧ್ಯಯನದ ಸಾರವನ್ನು ಸೃಜನಶೀಲವಾಗಿ ಕಟ್ಟಿಕೊಟ್ಟಿದ್ದಾರೆ. 'ಕುಡ್ರ್' ಭಾಷೆಯ ಪದ, ವಾಕ್ಯ, ನಿರೂಪಣೆ, ಕಥನಗಳನ್ನು ತ್ರಿಭಾಷೆಯಲ್ಲಿ ನೀಡಿದ್ದಾರೆ. ಆ ಮೂಲಕ ಕೊರಚರ ಭಾಷೆ ಮತ್ತು ಅವರ ಬದುಕು, ಸಂಸ್ಕೃತಿಯನ್ನು ಅರಿಯಲು ಕನ್ನಡ, ಇಂಗ್ಲಿಷ್ ಮೂಲಕ ಅನ್ಯಭಾಷಿಕರಿಗೂ ಅವಕಾಶವನ್ನು ಈ ಕೃತಿ ಕಲ್ಪಿಸಿದೆ. ಶಬ್ದಕ್ಕೆ ಸಮಾನಾರ್ಥ ಮಾತ್ರವಲ್ಲದೆ ನುಡಿ ವ್ಯಾಕರಣದ ನಾಡಿಯನ್ನೂ ಹಿಡಿಯುವ ಪ್ರಯತ್ನವನ್ನು ಮಾಡಿದ್ದಾರೆ.

ಮೌಖಿಕ ಪರಂಪರೆಯಲ್ಲೇ ಉಳಿದಿರುವ ಭಾಷೆಯನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವ ಹಿನ್ನೆಲೆಯಲ್ಲಿ ಮಹತ್ವದ ಕಾರ್ಯವನ್ನು ಲೇಖಕರು ಮಾಡಿದ್ದಾರೆ. ಪದ ವಿವರಣೆಯ ಜೊತೆಗೆ ಆ ಸಮುದಾಯದ ಸಾಂಸ್ಕೃತಿಕ ಹಿನ್ನೆಲೆಯನ್ನೂ ಗುರುತಿಸಿದ್ದಾರೆ. ಲಭ್ಯ ಇರುವ ಕೊರಚರ ಜನಪದ ಸಾಹಿತ್ಯವನ್ನೂ ಸಂಗ್ರಹಿಸಿರುವ ಲೇಖಕರು, ಆ ಭಾಷೆಯಲ್ಲಿ ವಚನ ಸಾಹಿತ್ಯವನ್ನು ಪರಿಚಯಿಸಿದ್ದಾರೆ. ಜೇಡರ ದಾಸಿಮಯ್ಯ, ಬಸವಣ್ಣ, ನುಲಿಯ ಚಂದಯ್ಯ, ಅಲ್ಲಮ ಪ್ರಭು, ಆಯ್ದಕ್ಕಿ ಲಕ್ಕಮ್ಮ, ಬುದ್ಧನ ಕಥೆಗಳು ಸೇರಿದಂತೆ ಕೆಲವು ಜನಪದ ಕಥೆಗಳನ್ನೂ ಸಂಗ್ರಹಿಸಿ ಕೊರಚ (ಕನ್ನಡ ಲಿಪಿ) ಮತ್ತು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿದ್ದಾರೆ. ಕೊರಚರ ಸಂಪ್ರದಾಯ, ಆಚರಣೆ, ಆಹಾರ ಪದ್ಧತಿ, ಭಾಷೆಯ ಪದ ವಿವರಣೆ ಇರುವ 'ಕೊರಚ ಮಾತುಕತೆ' ಸಮುದಾಯ ಒಂದರ ಜ್ಞಾನಕೋಶದಂತೆ ಇದೆ. ಸಂವಿಧಾನ ಪೀಠಿಕೆ, ಅಂಬೇಡ್ಕರ್ ಮತ್ತು ಜಗದೀಶ ಚಂದ್ರ ಬೋಸ್ ಅವರ ವ್ಯಕ್ತಿಚಿತ್ರಗಳೂ ಇದರಲ್ಲಿ ಸೇರಿವೆ.

ಪುಟ: 516 ₹800

ಕೋಲ್ಮನ್: ಮೈಸೂರು ಕೃಷಿ ಕ್ರಾಂತಿಯ ಶಿಲ್ಪಿ



ಕೋಲ್ಮಿಂಚು
ಲೇ: ಪ್ರೊ.ಎಂ. ನಾರಾಯಣಸ್ವಾಮಿ
ಪ್ರ: ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ, ಮಂಡ್ಯ
ಸಂ: 9845154587

ಮೈಸೂರು ಸಂಸ್ಥಾನದ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಕಾಲದಲ್ಲಿ ಸೇವೆ ಸಲ್ಲಿಸಿದ ಪ್ರಮುಖ ಅಧಿಕಾರಿಗಳಲ್ಲಿ ಕೃಷಿ ವಿಜ್ಞಾನಿ ಡಾ. ಲೆಸ್ಲಿ ಸಿ. ಕೋಲ್ಮನ್ ಅವರ ಹೆಸರು ವಿಶೇಷವಾಗಿ ಉಲ್ಲೇಖಾರ್ಹ. ಅವರ 26 ವರ್ಷಗಳ ಸೇವಾವಧಿಯಲ್ಲಿ ಮೈಸೂರು ಪ್ರಾಂತ್ಯದ ಕೃಷಿ ಕ್ಷೇತ್ರದಲ್ಲಿ ಕಂಡುಬಂದ ಗಣನೀಯ ಪ್ರಗತಿಯೆಲ್ಲವೂ 'ಕೋಲ್ಮಿಂಚು' ಎಂಬ ಕೃತಿಯಲ್ಲಿ ಅಕ್ಷರ ರೂಪ ಪಡೆದಿದೆ.


ರಾಜ್ಯದ ಪತ್ರಾಗಾರ ಇಲಾಖೆಯ 'ಮೈಸೂರಿನ ಕೃಷಿ ಇತಿಹಾಸ' ಕುರಿತ ಸಂಶೋಧನೆಯಡಿ ಸಂಗ್ರಹಿಸಿದ ಮಾಹಿತಿಗಳನ್ನು ಆಧರಿಸಿ ಪ್ರೊ. ಎಂ. ನಾರಾಯಣಸ್ವಾಮಿ ಅವರು ಈ ದಿನ.ಕಾಮ್‌ನಲ್ಲಿ ಲೇಖನ ಬರೆದಿದ್ದರು. ಅದನ್ನೇ ಆಧಾರವಾಗಿ ತೆಗೆದುಕೊಂಡು ಮಂಡ್ಯದ 'ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ' ಈ ಕಿರುಹೊತ್ತಿಗೆಯನ್ನು ಪ್ರಕಟಿಸಿದೆ.

'ದೇಶಿ ಕೃಷಿಗಾಗಿ ಬಾಳಿದ ಡಾ. ಲೆಸ್ಲಿ ಚಾರ್ಲ್ಸ್ ಕೋಲ್ಮನ್ ಅವರ ಜೀವಯಾನ'ವನ್ನು ಕಟ್ಟಿಕೊಡುವ ಈ ಕೃತಿ, ಕೋಲ್ಮನ್ ಅವರ ಕೃಷಿ ಪರವಾದ ಪ್ರಯೋಗಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ದಾಖಲಿಸುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅವಿಭಜಿತ ಮೈಸೂರು ಜಿಲ್ಲೆಯ ಈಗಿನ ಮಂಡ್ಯದಲ್ಲಿ 1931ರಲ್ಲಿ 650 ಎಕರೆ ಪ್ರದೇಶದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದ್ದರು. ಅದು ಇಂದಿನ ವಿಶ್ವೇಶ್ವರಯ್ಯ ಕೆನಾಲ್ ಫಾರಂ (ವಿ.ಸಿ. ಫಾರಂ) ಆಗಿ ಪ್ರಸಿದ್ಧವಾಗಿದೆ. ಕೆನಡಾದ ಟೊರೊಂಟೊ ವಿಶ್ವವಿದ್ಯಾಲಯದ ಚಿನ್ನದ ಪದಕ ವಿಜೇತರಾದ ಡಾ. ಲೆಸ್ಲಿ ಕೋಲ್ಮನ್ ಅವರು ಮೈಸೂರು ರಾಜ್ಯದ ಕೃಷಿ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ಅದಕ್ಕೂ ಮೊದಲು ಕೃಷಿ ಕೀಟಶಾಸ್ತ್ರ ಹಾಗೂ ಶಿಲೀಂಧ್ರರೋಗ ವಿಜ್ಞಾನಿಯಾಗಿ 26 ವರ್ಷಗಳ ಕಾಲ ಅವರು ಸಲ್ಲಿಸಿದ ಸೇವೆಯ ವಿವರಗಳು ಈ ಕೃತಿಯಲ್ಲಿ ದಾಖಲಾಗಿವೆ. ಮೈಸೂರು ಸಕ್ಕರೆ ಕಾರ್ಖಾನೆ ಸ್ಥಾಪನೆ, ಅಧಿಕ ಇಳುವರಿಯ ರಾಗಿ ತಳಿ ಅಭಿವೃದ್ಧಿ ಹಾಗೂ ವಿವಿಧ ಕೃಷಿ ಸಂಶೋಧನಾ ಕೇಂದ್ರಗಳ ಸ್ಥಾಪನೆ ಅವರ ಸಾಧನೆಗಳಲ್ಲಿ ಪ್ರಮುಖವಾಗಿವೆ. ಕೋಲ್ಮನ್ ಅವರ ಅಗಾಧ ಕೃಷಿ ಸಾಧನೆಯನ್ನು ಈ ಕಿರುಹೊತ್ತಿಗೆಯಲ್ಲಿ ಸಮಗ್ರವಾಗಿ ದಾಖಲಿಸುವ ಪ್ರಯತ್ನ ನಡೆದಿದೆ.

ಪುಟ: 80 ₹50

ಕನ್ನಡಕ್ಕೆ ಕೊಡುಗೆ ನೀಡಿದ ಪಾಶ್ಚಾತ್ಯರ ಸ್ಮರಣೆ



ಕನ್ನಡಕ್ಕೆ ಬೆಳಕಿತ್ತ ಪಶ್ಚಿಮದ ಹಣತೆಗಳು
ಲೇ: ಟಿ.ಕೆ.ಗಂಗಾಧರ ಪತ್ತಾರ
ಪ್ರ: ಸವಿಗಂಗಾ ಪ್ರಕಾಶನ
ಸಂ:90082 26702

'ಹಚ್ಚೇವು ಕನ್ನಡದ ದೀಪ....' ಎಂಬುದು ಕಾವ್ಯವೊಂದರ ಜನಪ್ರಿಯ ಸಾಲು. ಕನ್ನಡ ಭಾಷೆಯ ಪ್ರಗತಿಗೆ ಹೀಗೆ ದೀಪ ಬೆಳಗಿದವರ ಪಟ್ಟಿ ದೊಡ್ಡದು. ಇವರಲ್ಲಿ ಕೆಲ ಬ್ರಿಟಿಷ್ ಅಧಿಕಾರಿಗಳು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಅಂಥ 16 ಮಹನೀಯರನ್ನು ಗುರುತಿಸಿ, ಅವರು ಕನ್ನಡಕ್ಕೆ ನೀಡಿದ ಕೊಡುಗೆಯನ್ನು ದಾಖಲಿಸುವ ಯತ್ನವೇ 'ಕನ್ನಡಕೆ ಬೆಳಕಿತ್ತ ಪಶ್ಚಿಮದ ಹಣತೆಗಳು'.

ಕನ್ನಡ ಪ್ರಾಧ್ಯಾಪಕರಾಗಿದ್ದ ಪಿ.ಬಿ.ದೇಸಾಯಿ ಅವರಿಂದ ಪ್ರೇರಿತರಾಗಿ ಹಳಗನ್ನಡ ಲಿಪಿ, ಸಂಕ್ಷಿಪ್ತ ಇತಿಹಾಸ, ಶಾಸನ ಓದಲು ಆರಂಭಿಸಿದ ಟಿ.ಕೆ.ಗಂಗಾಧರ ಪತ್ತಾರ ಇದರ ಲೇಖಕರು. ಬ್ರಿಟಿಷರ ಆಡಳಿತಾವಧಿಯಲ್ಲಿದ್ದ ಹಲವು ಅಧಿಕಾರಿಗಳನ್ನು 'ತಾವು ಕರ್ತವ್ಯ ನಿರ್ವಹಿಸಿದ ಪರಿಸರವನ್ನು, ಜನರನ್ನು ಆತ್ಮೀಯ ಭಾವದಿಂದ ಕಂಡು ಸಾಮರಸ್ಯದಿಂದ ಬದುಕಿ ನೆಲದ ಪ್ರಗತಿಗೆ ನೆರವಾದವರು' ಎಂದು ಲೇಖಕರು ಒಂದೆಡೆ ಪರಿಚಯಿಸುತ್ತಾರೆ.

1820ರಲ್ಲಿ ಕನ್ನಡ ಶಾಲೆ ತೆರೆಯಲು ಆಂದೋಲನ ರೂಪದಲ್ಲಿ ಶ್ರಮಿಸಿದ, ಧಾರವಾಡದಲ್ಲಿ ಜಿಲ್ಲಾ ಅಸಿಸ್ಟೆಂಟ್ ಕಲೆಕ್ಟರ್ ಆಗಿದ್ದ ವಾಲ್ಟರ್ ಎಲಿಯೆಟ್, ದಶಕಗಳ ಕಾಲ ಶ್ರಮಿಸಿ ಕನ್ನಡದ ಪ್ರಥಮ ಕನ್ನಡ ಇಂಗ್ಲಿಷ್ ಶಬ್ದಕೋಶ ನೀಡಿದ ರೆವರೆಂಡ್ ಫರ್ಡಿನಾಂಡ್ ಕಿಟೆಲ್, ಕನ್ನಡದಲ್ಲಿ ಕ್ರೈಸ್ತ ಮತೀಯ ಸಾಹಿತ್ಯ ರಚನೆಗೆ ನಾಂದಿ ಹಾಡಿದ ಬೆಂಜಮಿನ್ ಹೋಲ್ಸ್ ರೈಸ್, ಬಳ್ಳಾರಿ–ವಿಜಯನಗರ ಭಾಗದ ಇತಿಹಾಸದ ದಾಖಲಿಸಿರುವ, ದಕ್ಷಿಣಭಾರತದ ಭೂವಿಜ್ಞಾನ ಪಿತಾಮಹ ಎಂದು ಹೇಳುವ ರಾಬರ್ಟ್ ಬ್ರೂಸ್ ಫೂಟ್, ಬ್ರಿಟಿಷ್ ಆಡಳಿತದಲ್ಲಿ ಐಸಿಎಸ್ ಅಧಿಕಾರಿಯಾಗಿದ್ದು ಭಾರತದ ಇತಿಹಾಸದ ಅಧ್ಯಯನದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಜಾನ್ ಫೇತ್ ಫುಲ್ ಪ್ಲೀಟ್ ಹೀಗೆ.. 16 ಪ್ರಮುಖರು ನೀಡಿದ ಕೊಡುಗೆಗಳನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ.

ಪ್ರಮುಖರ ವ್ಯಕ್ತಿಗತ ವಿವರಗಳೊಂದಿಗೆ ಆ ಕಾಲಘಟ್ಟದ ಕನ್ನಡ ನೆಲದ ಚಿತ್ರಣವನ್ನು ನೀಡುತ್ತದೆ ಎಂಬ ಕಾರಣದಿಂದ ಈ ಕೃತಿ ಗಮನಸೆಳೆಯಲಿದೆ.

ಪುಟ: 156 ₹150

ಐಸ್‌ಲ್ಯಾಂಡ್ ರಸ್ತೆಯಲ್ಲಿ ಪ್ರಯಾಣಿಸುತ್ತಾ



ಆಕಾಶದಲ್ಲಿ ಉತ್ತರ ಧ್ರುವ ಬೆಳಕಿನ ಚಿತ್ತಾರ



ಪ್ರವಾಸ

• ಅಲಂಕಾರ್ ಚಂದ್ರ

ಐಸ್‌ಲ್ಯಾಂಡ್ ಎಂಬ ಹೆಸರು ಕೇಳಿದ ತಕ್ಷಣ ಕಣ್ಣು ಮುಂದೆ ಬರುವ ಚಿತ್ರಗಳು ಒಂದೇ ರೀತಿಯವು– ಹಿಮ ಹೊದ್ದ ಪರ್ವತಗಳು, ಜ್ವಾಲಾಮುಖಿಯ ಉಸಿರಾಟ, ಜಲಪಾತಗಳ ಗರ್ಜನೆ ಮತ್ತು ನಿಶ್ಶಬ್ದವಾದ ವಿಶಾಲ ರಸ್ತೆಗಳು. 'ಮಂಜುಗಡ್ಡೆ ಮತ್ತು ಬೆಂಕಿಯ ನಾಡು' ಎಂಬ ಪದವು ಇಲ್ಲಿ ಕೇವಲ ಉಪಮೆ ಅಲ್ಲ; ಅದು ಪ್ರತಿಯೊಂದು ತಿರುವಿನಲ್ಲೂ ಬದುಕುವ ವಾಸ್ತವ. ಇಂತಹ ದೇಶವನ್ನು ನೋಡಲು ಸೆಲ್ಫ್ ಡ್ರೈವ್ ಪ್ರಯಾಣಕ್ಕಿಂತ ಸೂಕ್ತ ಮಾರ್ಗ ಮತ್ತೊಂದಿಲ್ಲ.

ಐಸ್‌ಲ್ಯಾಂಡ್‌ನಲ್ಲಿ ಕಾರು ಓಡಿಸುವುದು ಒಂದು ಪ್ರಯಾಣ ಮಾತ್ರವಲ್ಲ, ಅದು ನಿಧಾನವಾಗಿ ತೆರೆದುಕೊಳ್ಳುವ ಪುಸ್ತಕದಂತೆ. ರಿಂಗ್ ರೋಡ್ ಮೇಲೆ ಸಾಗುತ್ತಾ ಇದ್ದಾಗ, ಒಂದೇ ದಿನದಲ್ಲಿ ಜಲಪಾತಗಳು, ಕಪ್ಪು ಮರಳು ಕಡಲತೀರಗಳು, ಹಿಮನದಿಗಳು ಮತ್ತು ಹೊಗೆ ಉಗುಳುವ ಭೂತಾಪೀಯ ಪ್ರದೇಶಗಳು ಎದುರಾಗುತ್ತವೆ. ಪ್ರತಿ ಕೆಲ ಕಿಲೋಮೀಟರ್‌ಗಳ ನಂತರ ದೃಶ್ಯವೇ ಬದಲಾಗುತ್ತದೆ. ಇಲ್ಲಿ ನಿಲ್ಲುವುದು ಪೂರ್ವನಿರ್ಧಾರದಿಂದ ಅಲ್ಲ, ಅಚ್ಚರಿಯಿಂದ.

ಭಾರತದಿಂದ ಐಸ್‌ಲ್ಯಾಂಡ್‌ಗೆ ಪ್ರಯಾಣ ಸಾಮಾನ್ಯವಾಗಿ ಯುರೋಪಿಯನ್ ನಗರಗಳಾದ ಲಂಡನ್, ಫ್ರಾಂಕ್‌ಫರ್ಟ್ ಅಥವಾ ಆಮ್‌ಸ್ಟರ್‌ಡ್ಯಾಮ್ ಮೂಲಕ ಸಾಗುತ್ತದೆ. ಅಂತಿಮವಾಗಿ ಪ್ರವೇಶ ಸಿಗುವುದು ಕೆಫ್ಲಾವಿಕ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ. ಶೆಂಗೆನ್ ವಲಯದ ಭಾಗವಾಗಿರುವುದರಿಂದ ಶೆಂಗೆನ್ ವೀಸಾ ಅಗತ್ಯ. ಆದರೆ ಐಸ್‌ಲ್ಯಾಂಡ್ ತಲುಪಿದ ಕ್ಷಣದಿಂದಲೇ ಪ್ರಯಾಣದ ನಿಜವಾದ ಅಧ್ಯಾಯ ಆರಂಭವಾಗುತ್ತದೆ. ವಿಮಾನ ನಿಲ್ದಾಣದಿಂದ ಹೊರಬಂದ ತಕ್ಷಣ ಅನುಭವಕ್ಕೆ ಬರುವ ಗಾಳಿಯ ತೀವ್ರತೆ ಮತ್ತು ನಿರಂತರವಾಗಿ ಬದಲಾಗುವ ಆಕಾಶವೇ ಮೊದಲ ಸೂಚನೆ.

ಐಸ್‌ಲ್ಯಾಂಡ್‌ನಲ್ಲಿ ಎರಡು ಮುಖಗಳ ಕಾಲವಿದೆ. ಮೇ ಇಂದ ಸೆಪ್ಟೆಂಬರ್‌ವರೆಗೆ ಬೆಳಕು ನಿದ್ರಿಸುವುದಿಲ್ಲ. ದಿನವೂ 20 ಗಂಟೆಗಳಿಗಿಂತ ಹೆಚ್ಚು ಕಾಲ ಸೂರ್ಯನ ಬೆಳಕು ಜೊತೆಯಾಗಿರುತ್ತದೆ. ಆ ಕಾಲದಲ್ಲಿ ರಸ್ತೆ ಪ್ರಯಾಣವು ನಿರಂತರವಾಗಿ ಹರಿಯುವ ದೃಶ್ಯಮಾಲೆಯಂತೆ. ಮತ್ತೊಂದು ಕಡೆ ಅಕ್ಟೋಬರ್‌ನಿಂದ ಮಾರ್ಚ್–ಹಿಮದ ನಿಶ್ಶಬ್ದ ಕಾಲ. ಆಕಾಶ ಹಸಿರು ಬೆಳಕಿನಲ್ಲಿ ಹೊಳೆಯುವ ಉತ್ತರ ಧ್ರುವ ಬೆಳಕು (Northern Lights) ಕಾಣಿಸಿಕೊಳ್ಳುವ ಸಾಧ್ಯತೆ ಇರುವ ಸಮಯ. ಆದರೆ ಈ ಕಾಲದಲ್ಲಿ ರಸ್ತೆ ಬಂದ್, ಹಿಮಪಾತ ಎಲ್ಲೆಡೆಯೂ ಸಾಮಾನ್ಯ.

ಐಸ್‌ಲ್ಯಾಂಡ್‌ನ ಜೀವನಾಡಿಯಂತಿರುವ ರಿಂಗ್ ರೋಡ್ ಸುಮಾರು 1,322 ಕಿಲೋಮೀಟರ್ ಉದ್ದದ ವಲಯ. ಇದನ್ನು ಸಂಪೂರ್ಣವಾಗಿ ಸುತ್ತಲು ಕನಿಷ್ಠ 7 ರಿಂದ 10 ದಿನ ಬೇಕು. ಆದರೆ ನಿಜವಾಗಿ ಹೇಳಬೇಕೆಂದರೆ ಇಲ್ಲಿ ಸಮಯ ಅಳೆಯಲು ಯಾರೂ ಗಡಿಯಾರ ನೋಡೋದಿಲ್ಲ. ಪ್ರತಿಯೊಂದು ತಿರುವು ನಿಲ್ಲುವಂತೆ ಕರೆಯುತ್ತದೆ. ಸಣ್ಣ ಹಳ್ಳಿಗಳು, ಹಿಮನದಿಗಳ ನಿಶ್ಶಬ್ದತೆ, ಜಲಪಾತಗಳ ಗರ್ಜನೆ– ಎಲ್ಲವೂ ಒಂದೇ ಕಥೆಯ ಭಾಗಗಳಂತೆ.

ನಗರಗಳ ಹೊರಗೆ ಸಾರ್ವಜನಿಕ ಸಾರಿಗೆ ಬಹಳ ಕಡಿಮೆ. ಅದರಿಂದ ಕಾರು ಬಾಡಿಗೆ ಅನಿವಾರ್ಯ ವಾಗುತ್ತದೆ. ಬೇಸಿಗೆಯಲ್ಲಿ ಸಣ್ಣ ಕಾರು ಸಾಕಾಗುತ್ತದೆ. ಆದರೆ ಒಳನಾಡಿನ ಎಫ್-ರಸ್ತೆಗಳ ಕಡೆ ಹೋಗಬೇಕಾದರೆ ಶಕ್ತಿಯುತ ಕಾರುಗಳು ಅವಶ್ಯ. ಕೆಲವರು ಕ್ಯಾಂಪರ್ ವ್ಯಾನ್ ಆಯ್ಕೆ ಮಾಡುತ್ತಾರೆ. ಅದು ಚಲಿಸುವ ಮನೆ. ಆದರೆ ಐಸ್‌ಲ್ಯಾಂಡ್‌ನಲ್ಲಿ ಸ್ವಾತಂತ್ರ್ಯಕ್ಕೂ ನಿಯಮಗಳಿವೆ; ಕ್ಯಾಂಪಿಂಗ್ ಸ್ಥಳಗಳ ಹೊರಗೆ ನಿಲ್ಲುವುದು ಕಾನೂನುಬಾಹಿರ. ಇಂಧನ ಸ್ಟೇಷನ್‌ಗಳು ದೂರ ದೂರವಿರುವುದರಿಂದ ಅವಕಾಶ ಸಿಕ್ಕಾಗಲೇ ಟ್ಯಾಂಕ್ ತುಂಬಿಸಿಕೊಳ್ಳುವುದು ಇಲ್ಲಿ ಒಂದು ರೀತಿಯ ಶಿಸ್ತಾಗಿಬಿಡುತ್ತದೆ.

ಐಸ್‌ಲ್ಯಾಂಡ್‌ನಲ್ಲಿ ಹೋಟೆಲ್‌ಗಳು ಐಷಾರಾಮಿಯಾಗಿಲ್ಲ. ಆದರೆ ಅವುಗಳಲ್ಲಿ ಸರಳತೆ ಇದೆ. ಗ್ರಾಮೀಣ ಭಾಗದಲ್ಲಿ ಮಧ್ಯಮ ಶ್ರೇಣಿಯ ಹೋಟೆಲ್‌ಗಳು ಹೆಚ್ಚು. ಆದರೆ ಅವುಗಳ ಕಿಟಕಿಯಿಂದ ಕಾಣುವ ದೃಶ್ಯವೇ ಐಷಾರಾಮಿಯನ್ನು ಮೀರಿಸುತ್ತದೆ. ಬೇಸಿಗೆಯಲ್ಲಿ ಮುಂಚಿತ ಬುಕ್ಕಿಂಗ್ ಇಲ್ಲದೆ ವಸತಿ ಹುಡುಕುವುದು ಬಹುತೇಕ ಅಸಾಧ್ಯ. ಕಾರಣ ಈ ಅವಧಿಯಲ್ಲಿ ಪ್ರವಾಸಿಗರ ಹರಿವು ಹೆಚ್ಚು.

ಈ ದೇಶದಲ್ಲಿ ಪ್ರಯಾಣವೆಂದರೆ ಬಜೆಟ್ ಕೂಡ ಒಂದು ಅನುಭವ. ಐಸ್‌ಲ್ಯಾಂಡ್ ದುಬಾರಿ ಎಂದು ತಿಳಿದುಕೊಳ್ಳುವುದು ಮೊದಲ ಕಾಫಿ ಕಪ್ ಅಥವಾ ರೆಸ್ಟೋರೆಂಟ್ ಊಟದ ನಂತರ. ಆದರೆ ಪ್ರಯಾಣಿಕರು ಬೇಗ ಕಲಿಯುವ ಪಾಠವೆಂದರೆ ಸೂಪರ್ ಮಾರ್ಕೆಟ್‌ಗಳು ಮತ್ತು ಸರಳ ಆಹಾರವೇ ಬದುಕಿನ ಸಹಾಯಕರು. ಒಂದು ವಾರದ ಪ್ರವಾಸವು ಸಾಮಾನ್ಯವಾಗಿ ಲಕ್ಷಾಂತರ ರೂಪಾಯಿಗಳ ಮಟ್ಟಕ್ಕೆ ಹೋಗಬಹುದು. ಆದರೆ ಇಲ್ಲಿ ನಲ್ಲಿ ನೀರು ತುಂಬಾ ಶುದ್ಧ. ಹೀಗಾಗಿ ಬಾಟಲಿ ನೀರಿನ ಅಗತ್ಯವೇ ಇಲ್ಲ.

ಪ್ರಯಾಣದ ಜೊತೆಗೆ ಇನ್ನೊಂದು ಕಲಿಕೆಯಿದೆ. ಅದು ತಯಾರಿ. ಜಲನಿರೋಧಕ ಜಾಕೆಟ್, ಹೈಕಿಂಗ್ ಶೂಗಳು, ಬೆಚ್ಚಗಿನ ಉಡುಪುಗಳು ಮತ್ತು ತಕ್ಷಣ ಒಣಗುವ ಟವೆಲ್ ಇಲ್ಲದೆ ಐಸ್‌ಲ್ಯಾಂಡ್ ಪ್ರಯಾಣ ಅಪೂರ್ಣ. ಇಲ್ಲಿ ಹವಾಮಾನವೇ ಅನಿಶ್ಚಿತ ಸಹಪ್ರಯಾಣಿಕ. ಕೆಲವೇ ನಿಮಿಷಗಳಲ್ಲಿ ಮಳೆ, ಗಾಳಿ, ಸೂರ್ಯ ಎಲ್ಲವೂ ಪಾತ್ರ ಬದಲಾಯಿಸುತ್ತವೆ. ಕಾರಿನ ಬಾಗಿಲು ತೆರೆಯುವಾಗ ಗಾಳಿಯ ವೇಗ ಎಚ್ಚರವಾಗಿರುವಂತೆ ನೆನಪಿಸುತ್ತದೆ.

ಆದರೆ ಈ ಎಲ್ಲ ನಿಯಮಗಳ ನಡುವೆ ಐಸ್‌ಲ್ಯಾಂಡ್ ತನ್ನ ನಿಜವಾದ ಮ್ಯಾಜಿಕ್ ಅನ್ನು ನಿಧಾನವಾಗಿ ತೋರಿಸುತ್ತದೆ. ಗೋಲ್ಡನ್ ಸರ್ಕಲ್ ಮಾರ್ಗದಲ್ಲಿ ಥಿಂಗ್ವೆಲ್ಲಿರ್ ರಾಷ್ಟ್ರೀಯ ಉದ್ಯಾನ, ಗೈಸರ್ ಭೂತಾಪೀಯ ಪ್ರದೇಶ ಮತ್ತು ಗುಲ್ಫಾಸ್ ಜಲಪಾತಗಳು ಪ್ರಕೃತಿಯ ನಾಟಕದಂತೆ ಕಾಣುತ್ತವೆ. ದಕ್ಷಿಣ ಕರಾವಳಿಯಲ್ಲಿ ಕಪ್ಪು ಮರಳು ಕಡಲತೀರಗಳು ತಣ್ಣಗೆ ಕಥೆ ಹೇಳುತ್ತವೆ. ಹುಸಾವಿಕ್ ಮತ್ತು ಅಕುರೇರಿಯಿಂದ ಸಾಗುವ ತಿಮಿಂಗಿಲ ವೀಕ್ಷಣಾ ಪ್ರವಾಸಗಳು ಸಮುದ್ರದ ವಿಶಾಲತೆಯನ್ನು ನೆನಪಿಸುತ್ತವೆ. ಬ್ಲೂ ಲಗೂನ್, ಸ್ಕೈ ಲಗೂನ್ ಮತ್ತು ಸೀಕ್ರೆಟ್ ಲಗೂನ್‌ನ ಬಿಸಿನೀರಿನಲ್ಲಿ ಕುಳಿತುಕೊಳ್ಳುವುದು ಈ ಹಿಮನಾಡಿನಲ್ಲಿ ಸಿಗುವ ಶಾಂತಿ ಎನ್ನಬಹುದು!

ಸೆಪ್ಟೆಂಬರ್‌ನಿಂದ ಏಪ್ರಿಲ್‌ವರೆಗೆ, ಅದೃಷ್ಟ ಇದ್ದರೆ ಆಕಾಶದಲ್ಲಿ ಹಸಿರು ಬೆಳಕು ಕಾಣುತ್ತದೆ. ಆ ಕ್ಷಣಗಳಲ್ಲಿ ರಸ್ತೆ ಪ್ರಯಾಣ ಕೇವಲ ಚಲನೆಯಲ್ಲ, ನಿಂತು ಅನುಭವಿಸಬೇಕಾದ ಜೀವನ ಅನುಭವವಾಗುತ್ತದೆ.

ಐಸ್‌ಲ್ಯಾಂಡ್‌ನಲ್ಲಿ ಚಾಲನೆ ಮಾಡುವಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಇಲ್ಲಿ ಪ್ರಕೃತಿ ಯಾವತ್ತೂ ಹಿನ್ನೆಲೆಯಲ್ಲಿಲ್ಲ, ಅದು ಮುಖ್ಯ ಪಾತ್ರ. ಹವಾಮಾನ, ಬೆಳಕು, ಗಾಳಿ ಎಲ್ಲವೂ ಸೇರಿ ಪ್ರತಿದಿನ ಹೊಸ ಕಥೆ ಬರೆಯುತ್ತವೆ. ಆದ್ದರಿಂದ ಪ್ರಯಾಣಕ್ಕೂ ಮೊದಲು ರಸ್ತೆ ಮತ್ತು ಹವಾಮಾನ ಮಾಹಿತಿಯನ್ನು ಪರಿಶೀಲಿಸುವುದನ್ನು ಮರೆಯಲೇಬಾರದು.

ಐಸ್‌ಲ್ಯಾಂಡ್ ಕೇವಲ 'ಒಮ್ಮೆ ನೋಡಲೇಬೇಕಾದ ತಾಣ' ಅಲ್ಲ. ಅದು ಚೆಕ್‌ಲಿಸ್ಟ್‌ನಲ್ಲಿ ಗುರುತು ಹಾಕಿ ಮುಗಿಸುವ ಸ್ಥಳವೂ ಅಲ್ಲ. ಇಲ್ಲಿ ಪ್ರಯಾಣವು ನೋಡಲು ಅಲ್ಲ, ಬದುಕಲು ಆರಂಭವಾಗುತ್ತದೆ. ನಿಧಾನವಾಗಿ ಸಾಗುತ್ತಾ, ರಸ್ತೆ, ಹವಾಮಾನ ಮತ್ತು ಪ್ರಕೃತಿಯ ಜೊತೆ ಮಾತನಾಡುತ್ತಾ ಹೋಗುವಾಗಲೇ ಈ ದೇಶ ತನ್ನ ನಿಜವಾದ ಅರ್ಥವನ್ನು ತೆರೆದಿಡುತ್ತದೆ. ಕಸ ಹಾಕದೇ, ರಸ್ತೆ ಹೊರಗೆ ವಾಹನ ಓಡಿಸದೇ, ಪ್ರಕೃತಿಯನ್ನು ಗೌರವಿಸುವುದು ಇಲ್ಲಿ ನಿಯಮವಲ್ಲ; ಅದು ಈ ನಾಡನ್ನು ಅನುಭವಿಸುವ ಏಕೈಕ ದಾರಿ.



ಭಾರತ ಮಹಿಳಾ ಹಾಕಿ ತಂಡದ ನಾಯಕಿ ಸಲೀಮಾ ಟೆಟೆ ಮತ್ತು ಸುನಿಲಿತಾ ಟೊಪ್ಪೊ

ಹಾಕಿ ಮೈದಾನದಲ್ಲಿ ಆದಿವಾಸಿ ಹುಡುಗಿಯರು

6ನೇ ಪುಟದಿಂದ...

ಭಾರತ ಮಹಿಳಾ ಹಾಕಿಯ ಇತಿಹಾಸವನ್ನು ನೋಡಿದರೆ, 1970ರ ದಶಕದಿಂದಲೇ ಹಲವಾರು ಪ್ರಯತ್ನಗಳು ನಡೆದಿದ್ದರೂ, ಸ್ಥಿರ ಯಶಸ್ಸು ಸಿಕ್ಕಿರಲಿಲ್ಲ. ಒಲಿಂಪಿಕ್ಸ್ ಪದಕ ಇನ್ನೂ ದೂರದ ಕನಸಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ತರಬೇತಿ ವಿಜ್ಞಾನ, ಪೋಷಣಾ ವ್ಯವಸ್ಥೆ, ಮನೋವೈಜ್ಞಾನಿಕ ಬೆಂಬಲ ಎಲ್ಲವೂ ವ್ಯವಸ್ಥೆಯಲ್ಲಿ ಸೇರಿಕೊಂಡಿವೆ. ಫಿಟ್ನೆಸ್ ಟ್ರ್ಯಾಕಿಂಗ್, ವಿಡಿಯೊ ಅನಾಲಿಸಿಸ್ ಮತ್ತು ಸ್ಪೋರ್ಟ್ಸ್ ಸೈನ್ಸ್ ತರಬೇತಿ ಈಗ ತಂಡದ ಭಾಗವಾಗಿದೆ. ಇದು ಆಟಗಾರ್ತಿಯರ ಪ್ರದರ್ಶನವನ್ನು ಮತ್ತೊಂದು ಮಟ್ಟಕ್ಕೆ ಕೊಂಡೊಯ್ದಿದೆ.

ಇದರ ಮಧ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಹಾಕಿ ಇಂಡಿಯಾದ ಆಡಳಿತ ವ್ಯವಸ್ಥೆ. ಆದಿವಾಸಿ ಹಿನ್ನೆಲೆಯಿಂದ ಬಂದವರು ಮಾಜಿ ಆಟಗಾರ ದಿಲೀಪ್ ಟಿರ್ಕಿ. ಅವರ ನಾಯಕತ್ವದಲ್ಲಿ ಸಂಸ್ಥೆ ಗ್ರಾಮೀಣ ಪ್ರತಿಭೆಗಳತ್ತ ಹೆಚ್ಚು ಗಮನ ಹರಿಸುತ್ತಿದೆ. ಇದು ಕೇವಲ ಆಡಳಿತಾತ್ಮಕ ಬದಲಾವಣೆ ಅಲ್ಲ, ದೃಷ್ಟಿಕೋನದ ಬದಲಾವಣೆ. ಪ್ರತಿಭೆಯನ್ನು ನಗರಗಳಿಂದ ಮಾತ್ರವಲ್ಲ, ಹಳ್ಳಿಗಳಿಂದಲೇ ಹುಡುಕುವ ಹೊಸ ವ್ಯವಸ್ಥೆ ರೂಪುಗೊಂಡಿದೆ. ಇದರ ಪರಿಣಾಮವಾಗಿ ಆಯ್ಕೆ ಪ್ರಕ್ರಿಯೆಯು ಹೆಚ್ಚು ಸ್ಪರ್ಧಾತ್ಮಕ ಮತ್ತು ನ್ಯಾಯಸಮ್ಮತವಾಗಿದೆ.

ಇಂದು ಭಾರತ ಮಹಿಳಾ ತಂಡದ ಶಕ್ತಿ ಕೇವಲ ಮೊದಲ ಹನ್ನೊಂದರಲ್ಲಿ ಮಾತ್ರವಲ್ಲ, ಬೆಂಚ್‌ನಲ್ಲಿಯೂ ಕಾಣಿಸುತ್ತದೆ. ಜೂನಿಯರ್ ಹಂತದಿಂದಲೇ ತಯಾರಾಗುತ್ತಿರುವ ಆದಿವಾಸಿ ಆಟಗಾರ್ತಿಯರು, ಭವಿಷ್ಯದ ರಾಷ್ಟ್ರೀಯ ತಂಡದ ಭದ್ರ ಆಧಾರವಾಗುತ್ತಿದ್ದಾರೆ. ಇದರಿಂದ ಸ್ಪರ್ಧಾತ್ಮಕತೆ ಹೆಚ್ಚಾಗಿ, ತಂಡದ ಒಳಗಿನ ಗುಣಮಟ್ಟವೂ ಏರಿದೆ. ತಂಡದಲ್ಲಿ ಸ್ಥಾನ ಪಡೆಯುವುದು ಈಗ ಕಠಿಣವಾದರೂ, ಅದು ಗುಣಮಟ್ಟವನ್ನು ಹೆಚ್ಚಿಸುವ ಆರೋಗ್ಯಕರ ಸ್ಪರ್ಧೆಯಾಗಿದೆ.

ಮತ್ತೊಂದು ಮುಖ್ಯ ಅಂಶ ಎಂದರೆ ಮಾನಸಿಕ ಬಲ. ಗ್ರಾಮೀಣ ಹಿನ್ನೆಲೆಯಿಂದ ಬಂದ ಈ ಆಟಗಾರ್ತಿಯರು ಕಷ್ಟಗಳನ್ನು ಎದುರಿಸುವಲ್ಲಿ ಚಿಕ್ಕ ವಯಸ್ಸಿನಿಂದಲೇ ಪಳಗಿದ್ದಾರೆ. ಆದ್ದರಿಂದ ಯಾವುದೇ ಒತ್ತಡದ ಪರಿಸ್ಥಿತಿಗಳಲ್ಲೂ ಅವರು ಸಮಾಧಾನದಿಂದ ಆಡುತ್ತಾರೆ. ಇದೇ ಗುಣ ಅವರನ್ನು ವಿಶೇಷವಾಗಿಸುತ್ತದೆ. ದೊಡ್ಡ ಕ್ರೀಡಾಂಗಣದ ಬೆಳಕು, ಸಾವಿರಾರು ಪ್ರೇಕ್ಷಕರ ಕೂಗಾಟ ಇವೆಲ್ಲವೂ ಅವರಿಗೆ ಹೊಸದೇನಲ್ಲ, ಜೀವನವೇ ಅದಕ್ಕಿಂತ ಕಠಿಣವಾಗಿತ್ತು.

ಇದರ ಪರಿಣಾಮವಾಗಿ ಭಾರತ ಈಗ ಕೇವಲ ಭಾಗವಹಿಸುವ ತಂಡವಲ್ಲ, ಗೆಲ್ಲಬಲ್ಲ ತಂಡವಾಗಿ ರೂಪುಗೊಂಡಿದೆ. ವಿಶ್ವಕಪ್ ಅರ್ಹತೆಗಳು, ಪ್ರೊ ಲೀಗ್ ಪ್ರವೇಶ–ಎಲ್ಲವೂ ಪ್ರಗತಿಯನ್ನು ಸೂಚಿಸುತ್ತಿವೆ. ಮುಂದಿನ ಗುರಿ ಸ್ಪಷ್ಟವಾಗಿದೆ. ಒಲಿಂಪಿಕ್ಸ್ ಪದಕ. ಅದು ಈಗ ದೂರದ ಕನಸಲ್ಲ, ಸಾಧ್ಯತೆಯ ಗುರಿಯಾಗಿ ಕಾಣುತ್ತಿದೆ.

ಸುನಿಲಿತಾ ಟೊಪ್ಪೊ ಬಿದಿರಿನ ಕೋಲಿನಿಂದ ಆರಂಭಿಸಿದ ಆ ಓಟ ಇಂದು ಆಕ್ಲೆಂಡ್‌ನ ಹಸಿರು ಮೈದಾನದಲ್ಲಿ ಮುಕ್ತಾಯವಾಗಿಲ್ಲ. ಅದು ಇನ್ನೂ ಮುಂದುವರಿಯುತ್ತಿದೆ. ಆ ಓಟದ ಹಿಂದೆ ಸಾವಿರಾರು ಹುಡುಗಿಯರ ಕನಸುಗಳು ಓಡುತ್ತಿವೆ. ಪ್ರತಿಯೊಂದು ಪಾಸ್, ಪ್ರತಿಯೊಂದು ಗೋಲು, ಪ್ರತಿಯೊಂದು ಪಂದ್ಯ–ಇವೆಲ್ಲವೂ ಒಂದು ಹೊಸ ಭಾರತದ ಕಥೆಯನ್ನು ಬರೆಯುತ್ತಿವೆ. ಆ ಕಥೆ ಗ್ರಾಮಗಳ ಮಣ್ಣಿನಿಂದ ಆರಂಭವಾಗಿ ಜಗತ್ತಿನ ಕ್ರೀಡಾಂಗಣಗಳವರೆಗೆ ವಿಸ್ತರಿಸುತ್ತಿದೆ.

ಮಣ್ಣು ಮೈದಾನದಿಂದ ಆರಂಭವಾದ ಈ ಪ್ರಯಾಣ ಈಗ ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದೆ. ಮತ್ತು ಈ ಕಥೆಯ ಅತ್ಯಂತ ದೊಡ್ಡ ಸತ್ಯವೆಂದರೆ–ಇದು ಅಂತ್ಯವಲ್ಲ, ಆರಂಭ ಮಾತ್ರ.



ಗೋಲು ಹೊಡೆದು ಆಟಗಾರ್ತಿಯರು ಸಂಭ್ರಮಿಸಿದಾಗ...


ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಬೆದರಿದ ಮರದ ಕುದುರೆ!

majakoora@prajavani.co.in

ಗುಂಡ ಮನೆಯ ಅಂಗಳದಲ್ಲಿದ್ದ ಮರದ ಕುದುರೆ ಮೇಲೆ ಕುಳಿತು ಆಟವಾಡುತ್ತಿದ್ದ. ಹಿಂದೆ ಮುಂದೆ ಆಡುತ್ತಾ ಖುಷಿಪಡುತ್ತಿದ್ದ. ಅಷ್ಟರಲ್ಲೇ ಬಂದ ಮನೆಯ ನಾಯಿ, ಮರದ ಕುದುರೆಯ ಚಲನೆಯನ್ನು ನೋಡಿ ಜೋರಾಗಿ ಬೊಗಳಲು ಆರಂಭಿಸಿತು. ಏಕಾಏಕಿ ಬಂದ ಈ ಶಬ್ದಕ್ಕೆ ಬೆದರಿ ಮರದ ಕುದುರೆಯು ಅಲ್ಲಿಂದ ಓಡಿತು. ಗುಂಡ ಕುಳಿತ ಸ್ಥಿತಿಯಲ್ಲೇ ಗಾಳಿಯಲ್ಲಿ ತೇಲುತ್ತಿದ್ದ.





ಜಾಣಪದ ಆಟ

1.ಇಲ್ಲಿ ಮೂರಕ್ಷರದ ಪದ ಕೊಡಲಾಗಿದೆ. ನೀವು ಅಕ್ಷರ ಪಟ್ಟಿಯಿಂದ ಒಂದೊಂದು ಅಕ್ಷರ ಆಯ್ದು ಬಿಟ್ಟಿರುವ ಸ್ಥಳದಲ್ಲಿ ತುಂಬಿ ನಾಲ್ಕಕ್ಷರದ ಪದ ಮಾಡಿ.

1	ಕ		ಳಿ	ಸು	
2	ಬೆ		ರಿ	ಕೆ	
3	ಸಂ		ಧಾ	ನ	
4	ಹ		ರ	ಡು	
5	ಚ		ವ	ಳಿ	
6	ಆ		ಳಿ	ಕೆ	
7	ಅ		ಪಾ	ಯ	
8	ಭ		ವ	ತಿ	
9	ಸು		ತ್ತಿ	ಗೆ	
10	ಕ		ವ	ಳ	

ಅಕ್ಷರ ಪಟ್ಟಿ

ನ್ನೆ	ಳ	ವಿ	ಪ್ಪ	ದ	ದ್ರಾ	ಡಿ	ಬ	ಕ	ಳ

2. ಇಲ್ಲಿ ಕೊಟ್ಟಿರುವ 'ನವ' ಎಂಬ ಪದಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ನ	ವ			
2	ನ	ವ			
3	ನ	ವ			
4	ನ	ವ			
5	ನ	ವ			

ಅಕ್ಷರ ಪಟ್ಟಿ

ರಾ	ಜಾ	ತ	ತ್ರಿ	ಸ	ರ	ಧ	ವಿ	ತ್ನ	ರ

ಚಿಕ್ಕ ಲೆಕ್ಕ

ಚಿಹ್ನಾಟ

+ –X ಚಿಹ್ನೆಗಳನ್ನು ಬಳಸಿ ಸಮೀಕರಣ ಸರಿ ಮಾಡಿ

3		2		7		7	= 91

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದಶೋಧ

ಇಲ್ಲಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಪ್ರಸಿದ್ಧ ಚಿತ್ರರಂಗದ ಸಂಗೀತ ನಿರ್ದೇಶಕನ ಹೆಸರನ್ನು ಹುಡುಕಿ.

1.ಇವಳ ಗುರುತು
2.ಮಳೆಯ ಕೊರತೆ
3.ಸಮಯ ಪಾಲನೆ
4.ದಘೂತಿ ರಾಕ್ಷಸ
5.ದೇವರ ಭಜನೆ

ಉತ್ತರ:___________

ಮೋಜಿನ ಇಂಗ್ಲಿಷ್

WN ಅಕ್ಷರಗಳಿಂದ ಕೊನೆಗೊಳ್ಳುವ ಯಾವುದಾದರೂ ಐದು ಪದಗಳನ್ನು ಬರೆಯಿರಿ.

1		WN
2		WN
3		WN
4		WN
5		WN

ಶಬ್ದಾಟ

ಇಲ್ಲಿ ಕೊಟ್ಟಿರುವ ಪದದ ಅಕ್ಷರಗಳನ್ನೇ ಪುನಃ ಬಳಸಿ ಕೊಂಡು ಹೊಸ ಪದ ಮಾಡಿ.

ಕ	ಸ	ಹ	ರಿ	ಸು



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಬನ	+	ಜಡ	+	ರು	=	
2	ಕಳಿ	+	ದನ	+	ವ	=	
3	ಕರು	+	ಸುಮ	+	ಳಿ	=	
4	ಸುಬ್ಬಿ	+	ಹಳ್ಳಿ	+	ಬ	=	
5	ಕುಳ್ಳಿ	+	ಬಡಿ	+	ಯ	=	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ವರ್ಡ್ ಗೇಮ್

ಇಲ್ಲಿರುವ ಎರಡು ಇಂಗ್ಲಿಷ್ ಪದಗಳನ್ನು ಮರು ಜೋಡಿಸಿ ಒಂದೇ ಪದ ಮಾಡಿ

BALL	+	BASKET

ಕೊಂಚತಂತ್ರ

ಕಂಪ್ಯೂಟರ್‌ನಲ್ಲಿ ಕನ್ನಡದಲ್ಲಿ ಟೈಪ್ ಮಾಡಲು ಬರಹ, ಯುನಿಕೋಡ್ ಹಾಗೂ ನುಡಿಯನ್ನು ಬಳಸುತ್ತೇವೆ. ಇದನ್ನು ನೆನಪಿಡಲು BUN ಎಂಬ ಪದ ನೆನಪಿಟ್ಟರೆ ಸಾಕು.

B = ಬರಹ
U = ಯುನಿಕೋಡ್
N = ನುಡಿ



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ
1.ಭೂಪತಿರಂಗ 2.ಜನುಮದಿನ
3.ಪರಿಕಲ್ಪನೆ 4.ಪಾರದರ್ಶಕ
5.ನುಡಿದಮಾತು

ಸಾಹಿತಿ ಕ್ವಿಜ್
1.ಶಿವರಾಮ ಕಾರಂತ 2.ಚೆನ್ನವೀರ ಕಣವಿ
3.ದಿನಕರ ದೇಸಾಯಿ 4.ಡುಂಡಿರಾಜ್
5.ಮಾಸ್ತಿ ವೆಂಕಟೇಶ ಅಯ್ಯಂಗಾರ್

ಶಬ್ದಾಟ
ಅವರವರ ವರಮಾನ

ಹುಡುಕಾಟ
ವಿರಾಟ ಕೊಹ್ಲಿ

ಗಣಿತದಲ್ಲಿ ಗರ್ದಿಗಮ್ಮತ್ತು
16X3 = 48, 19X2 = 38

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಕಾರುಣ್ಯ ಕೆ.
ಹಿರಿಯೂರು



ಪ್ರಾಪ್ತಿ ಬಡಾನಿಡಿಯೂರು
ಮಲ್ಪೆ




ಕಲಾವತಿ ಎಂ.ಕೆ.
ಕೆ.ಆರ್.ನಗರ




ಸಂಹಿತ್ ಎಚ್. ಶೆಟ್ಟಿ
ಮಣಿಪಾಲ



ಆಶ್ವಿ ಧಾನೆನವರ
ಉಡುಪಿ



ಮನಸ್ವಿ ಬಾತಿ ಬಾಗಲಕೋಟೆ



ಇತಿಹಾಸ ಸೃಷ್ಟಿಸಿದ ಕೇಪ್ ವರ್ಡ್

ಪದಾರ್ಪಣೆಯ ಟೂರ್ನಿಯಲ್ಲೇ ನಾಕೌಟ್ ತಲುಪಿದ ಪುಟ್ಟ ದ್ವೀಪ ರಾಷ್ಟ್ರ

ಹ್ಯೂಸ್ಟನ್ (ಎಎಫ್‌ಪಿ): ಅಟ್ಲಾಂಟಿಕ್ ಸಾಗರದ ಪುಟ್ಟ ದ್ವೀಪ ಕೇಪ್ ವರ್ಡ್ ಫಿಫಾ ವಿಶ್ವಕಪ್‌ನಲ್ಲಿ ಕನಸಿನ ಓಟವನ್ನು ಮುಂದುವರಿಸಿ ನಾಕೌಟ್‌ಗೆ ಲಗ್ಗೆಯಿಟ್ಟು ಇತಿಹಾಸ ಸೃಷ್ಟಿಸಿತು. ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ್ದ ಆಫ್ರಿಕಾದ ಈ ತಂಡ ಎಚ್ ಗುಂಪಿನ ಪಂದ್ಯದಲ್ಲಿ ಶುಕ್ರವಾರ ಸೌದಿ ಅರೇಬಿಯಾ ಜೊತೆ ಗೋಲಿಲ್ಲದೇ ಡ್ರಾ ಮಾಡಿಕೊಂಡಿತು.

ಮೆಕ್ಸಿಕೊದ ವದುಲಹಾರ ಕ್ರೀಡಾಂಗಣದಲ್ಲಿ ಸ್ಪೇನ್ ತಂಡ 1–0 ಗೋಲಿನಿಂದ ಉರುಗ್ವೆ ತಂಡವನ್ನು ಸೋಲಿಸುತ್ತಿದ್ದಂತೆ ಕೇಪ್ ವರ್ಡ್ ತನ್ನ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು 32ರ ಸುತ್ತಿಗೆ ತಲುಪಿತು. ತವಕದಿಂದ ಕಾಯುತ್ತಿದ್ದ ಫಲಿತಾಂಶವನ್ನು ಮೊಬೈಲ್‌ನಲ್ಲಿ ತಿಳಿದ ತಕ್ಷಣ ಕೇಪ್ ವರ್ಡ್ ಆಟಗಾರರ ಸಂಭ್ರಮಕ್ಕೆ ಪಾರವಿರಲಿಲ್ಲ. ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಕೆಲವರು ಭಾವೋದ್ವೇಗಕ್ಕೆ ಒಳಗಾದರು. ಆನಂದಭಾಷ್ಪಗಳು ಹರಿದವು.

ಕೇವಲ ಐದು ಲಕ್ಷ ಜನಸಂಖ್ಯೆ ಹೊಂದಿರುವ ಈ ರಾಷ್ಟ್ರದ ತಂಡ ಜುಲೈ 4 ರಂದು ವಿಶ್ವ ಚಾಂಪಿಯನ್ ಲಯೊನೆಲ್ ಮೆಸ್ಸಿ ಅವರ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ. ಉರುಗ್ವೆ ಟೂರ್ನಿಯಿಂದ ಹೊರಬಿತ್ತು.

‘ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಾನಿನ್ನೂ ಕನಸಿನಿಂದ ಹೊರಬಂದಿಲ್ಲ’ ಎಂದು ಮಿಡ್‌ಫೀಲ್ಡರ್ ಡೆರೊಯ್ ಡುಆರ್ಟೆ ಪ್ರತಿಕ್ರಿಯಿಸಿದರು. ಆಫ್ರಿಕಾ ಕರಾವಳಿಯ ಪಶ್ಚಿಮದಲ್ಲಿರುವ ಕೇಪ್‌ವರ್ಡ್ ದೇಶದ ರಾಜಧಾನಿ ಪ್ರಯಿಯಾದಲ್ಲಿ ಬೆಳಗಿನ ಜಾವ ತಮ್ಮ ತಂಡ ಮುನ್ನಡೆದ ವಿಷಯ ತಿಳಿದ ತಕ್ಷಣ ಜನರು ಸಂಭ್ರಮ ಆಚರಿಸಿದರು. ನಾಕೌಟ್ ತಲುಪಿದ ಅತಿ ಪುಟ್ಟ ರಾಷ್ಟ್ರವೆಂಬ ದಾಖಲೆ ಬರೆಯಿತು.

‘ನಾವು ಈ ಹಂತಕ್ಕೆ ತಲುಪಬಹುದೆಂಬ ಯೋಚನೆ ನಮ್ಮ ತಲೆಯೊಳಗೆ, ಮನಸ್ಸಿನೊಳಗೆ ಇತ್ತು’ ಎಂದು ಕೇಪ್ ವರ್ಡ್ ಧ್ವಜವನ್ನು ಹೊದ್ದುಕೊಂಡು ಮಾಧ್ಯಮಗೋಷ್ಠಿಗೆ ಹಾಜರಾದ ಕೋಚ್ ಬುಬಿಸ್ತಾ ಹೇಳಿದರು. ‘ಈ ಹಂತಕ್ಕೆ ತಲುಪಿದ್ದರಿಂದ ಹೆಮ್ಮೆಯೆನಿಸುತ್ತದೆ. ನಾವು ಸಣ್ಣ ದೇಶವಾದರೂ ಬಯಸಿದ್ದನ್ನು ಪಡೆಯಲು ಹೋರಾಡುತ್ತೇವೆ. ನಮಗೆ ಯಾವುದೂ ಅಸಾಧ್ಯವಲ್ಲ’ ಎಂದು ಹರ್ಷ ವ್ಯಕ್ತಪಡಿಸಿದರು.

ಸ್ಪೇನ್ ಆಡಿದ 3 ಪಂದ್ಯಗಳಲ್ಲಿ 2 ಗೆದ್ದು, ಒಂದು ಡ್ರಾ ಮಾಡಿಕೊಂಡು 7 ಅಂಕ ಗಳಿಸಿತು. ಕೇಪ್ ವರ್ಡ್ ಆಡಿದ ಮೂರೂ ಪಂದ್ಯಗಳನ್ನು ಡ್ರಾ ಮಾಡಿಕೊಂಡು 3 ಅಂಕ ಪಡೆಯಿತು. 1930 ಮತ್ತು 1950ರ ವಿಶ್ವಕಪ್ ವಿಜೇತ ಉರುಗ್ವೆ ಎರಡು ಡ್ರಾ ಮಾಡಿಕೊಂಡು, ಒಂದರಲ್ಲಿ ಸೋತು 2 ಅಂಕ ಪಡೆದು ನಿರ್ಗಮಿಸಿತು.

ಇತಿಹಾಸ: ಬುಬಿಸ್ತಾ ಈ ಪಂದ್ಯಕ್ಕೆ ಸಾಕಷ್ಟು ಬದಲಾವಣೆ ಮಾಡಿದ್ದರು. ಆದರೆ ತಂಡದ ಹೀರೊ ಆಗಿರುವ ಗೋಲ್‌ಕೀಪರ್ ವೊಝಿನಾ ಅವರನ್ನು ಉಳಿಸಿಕೊಂಡರು. 40 ವರ್ಷ ವಯಸ್ಸಿನ ಈ ಗೋಲ್ ಕೀಪರ್ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಯುರೋಪಿನ ಚಾಂಪಿಯನ್ ಸ್ಪೇನ್ ತಂಡಕ್ಕೆ ಗೋಲು ಬಿಟ್ಟುಕೊಡದೇ ಫುಟ್‌ಬಾಲ್ ಜಗದ ಗಮನಸೆಳೆದಿದ್ದರು.

ಕೇಪ್ ವರ್ಡ್ ಎರಡನೇ ಪಂದ್ಯದಲ್ಲಿ ಉರುಗ್ವೆ ವಿರುದ್ಧ ವೀರೋಚಿತ ಆಟವಾಡಿ 2–2 ಡ್ರಾ ಮಾಡಿಕೊಂಡಿತ್ತು. ಹೀಗಾಗಿ ಸ್ಪೇನ್– ಉರುಗ್ವೆ ಪಂದ್ಯದ ಫಲಿತಾಂಶ ನಿರ್ಣಾಯಕವಾಗಿತ್ತು.

ಹ್ಯೂಸ್ಟನ್‌ನಲ್ಲಿ ನಡೆದ ಪಂದ್ಯದ ಮೊದಲ ಭಾಗದಲ್ಲಿ ಕೇಪ್ ವರ್ಡ್ ಸ್ವಲ್ಪ ಮೇಲುಗೈ ಸಾಧಿಸಿತ್ತು. 33ನೇ ನಿಮಿಷ ಡಿಫೆಂಡರ್ ಹಸನ್ ಅಲ್ ತಂಬಕ್ತಿ ಗಾಯಾಳಾಗಿ ಹೊರನಡೆದಿದ್ದು ಸೌದಿ ಅರೇಬಿಯಾಕ್ಕೆ ಹಿನ್ನಡೆಯಾಯಿತು. ಆದರೆ ಹೋರಾಟದಿಂದ ಕೂಡಿದ್ದ ಪೂರ್ವಾರ್ಧದಲ್ಲಿ ಎರಡೂ ತಂಡಗಳಿಗೆ ಅತ್ಯುತ್ತಮ ಎನ್ನಬಹುದಾದ ಅವಕಾಶಗಳು ದೊರೆಯಲಿಲ್ಲ. ಉತ್ತರಾರ್ಧದ ಮೂರನೇ ನಿಮಿಷ ಜೆಮಿರೊ ಮೊಂತೇತೊ ಅವರಿಗೆ ಉತ್ತಮ ಅವಕಾಶ ವಿದ್ದರೂ ‘ಫಿನಿಶಿಂಗ್’ ದುರ್ಬಲವಾಗಿತ್ತು. ಕೆವಿನ್ ಪಿನಾ ಕೂಡ ಗುರಿತಪ್ಪಿದರು.

ಗುಂಪು ಹಂತದಿಂದ ನಾಕೌಟ್ ತಲುಪಿದ ತಂಡಗಳು

- ಎ: ಮೆಕ್ಸಿಕೊ, ದಕ್ಷಿಣ ಆಫ್ರಿಕಾ
- ಬಿ: ಸ್ವಿಟ್ಜರ್ಲೆಂಡ್, ಕೆನಡಾ, ಬೋಸ್ನಿಯಾ
- ಸಿ: ಬ್ರೆಜಿಲ್, ಮೊರಾಕ್ಕೊ
- ಡಿ: ಅಮೆರಿಕ, ಆಸ್ಟ್ರೇಲಿಯಾ, ಪರಗ್ವೆ
- ಇ: ಜರ್ಮನಿ, ಐವರಿಕೋಸ್ಟ್, ಈಕ್ವೆಡಾರ್
- ಎಫ್: ನೆದರ್ಲೆಂಡ್ಸ್, ಜಪಾನ್, ಸ್ವೀಡನ್
- ಜಿ: ಬೆಲ್ಜಿಯಂ, ಈಜಿಪ್ಟ್
- ಎಚ್: ಸ್ಪೇನ್, ಕೇಪ್ ವರ್ಡ್
- ಐ: ಫ್ರಾನ್ಸ್, ನಾರ್ವೆ, ಸೆನೆಗಲ್
- ಜೆ: ಅರ್ಜೆಂಟೀನಾ
- ಕೆ: ಕೊಲಂಬಿಯಾ, ಪೋರ್ಚುಗಲ್
- ಎಲ್: ಇಂಗ್ಲೆಂಡ್, ಘಾನಾ

(32ರ ಘಟ್ಟಕ್ಕೆ ಇನ್ನೂ ನಾಲ್ಕು ತಂಡಗಳು ಅರ್ಹತೆ ಪಡೆಯಲಿವೆ)



ನಾಕೌಟ್ ಪ್ರವೇಶಿಸಿದ ಸಂಭ್ರಮದಲ್ಲಿ ಕೇಪ್ ವರ್ಡ್ ತಂಡದ ಆಟಗಾರರು ಎಎಫ್‌ಪಿ ಚಿತ್ರಗಳು

ಒಸ್ಮಾನ್ ಡೆಂಬೆಲೆ ಹ್ಯಾಟ್ರಿಕ್ ಗೋಲು: ಫ್ರಾನ್ಸ್‌ಗೆ ಜಯ

ಬೋಸ್ಟನ್ (ಎಎಫ್‌ಪಿ): ಒಸ್ಮಾನ್ ಡೆಂಬೆಲೆ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಫ್ರಾನ್ಸ್ ತಂಡ ಐ ಗುಂಪಿನ ಪಂದ್ಯದಲ್ಲಿ ಶುಕ್ರವಾರ ನಾರ್ವೆ ವಿರುದ್ಧ 4–1 ಗೆಲುವು ಪಡೆಯಿತು.

ಡೆಂಬೆಲೆ 32 ನಿಮಿಷಗಳಲ್ಲಿ ಹ್ಯಾಟ್ರಿಕ್ ಸಾಧಿಸಿದರು. ಇದು ವಿಶ್ವಕಪ್ ಇತಿಹಾಸದಲ್ಲಿ ದಾಖಲಾದ ಎರಡನೇ ಅತಿ ವೇಗದ ಹ್ಯಾಟ್ರಿಕ್. ಆಸ್ಟ್ರೇಲಿಯಾದ ಎರಿಕ್ ಪ್ರೋಬ್ಸ್ ಅವರು 1954ರ ವಿಶ್ವಕಪ್‌ನಲ್ಲಿ ಝೆಕೊಸ್ಲಾವಾಕಿಯಾ ವಿರುದ್ಧ 24 ನಿಮಿಷಗಳ ಒಳಗೆ ಹ್ಯಾಟ್ರಿಕ್ ಗಳಿಸಿದ್ದು ದಾಖಲೆಯಾಗಿ ಉಳಿದಿದೆ.

ಡೆಂಬೆಲೆ ಅವರು 7, 20 ಮತ್ತು 32ನೇ ನಿಮಿಷ ಗೋಲು ಹೊಡೆದರು. ಡೇಝಿರೆ ಡ್ವೆ ಪಂದ್ಯದ ಮುಕ್ತಾಯದ ಕ್ಷಣಗಳಲ್ಲಿ (90 + 4) ಗೋಲು ಹೊಡೆದು ಗೆಲುವಿನ ಅಂತರ ಹೆಚ್ಚಿಸಿದರು. ಥೇಲೊ ಆಸ್ಗಾರ್ಡ್ ಅವರು 21ನೇ ನಿಮಿಷ ನಾರ್ವೆ ಪರ ಏಕೈಕ ಗೋಲು ಗಳಿಸಿದರು.

ಫ್ರಾನ್ಸ್ ಮೂರೂ ಪಂದ್ಯ ಗೆದ್ದು 9 ಅಂಕ ಪಡೆದರೆ, ಎರಡು ಪಂದ್ಯ ಗೆದ್ದ ನಾರ್ವೆ 6 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಜಪಾನ್– ಸ್ವೀಡನ್ ಡ್ರಾ: ಎಫ್ ಗುಂಪಿನಲ್ಲಿ ಜಪಾನ್ ಮತ್ತು ಸ್ವೀಡನ್ ನಡುವಣ ಪಂದ್ಯ 1–1 ಡ್ರಾ ಆಯಿತು. ಜಪಾನ್ ಪರ ದೈಝುನ್ ಮೀಡಾ (56ನೇ ನಿಮಿಷ) ಮತ್ತು ಸ್ವೀಡನ್ ಪರ ಆ್ಯಂಥನಿ ಇಲಾಂಗ (62ನೇ ನಿಮಿಷ) ಗೋಲು ಹೊಡೆದರು.

ಈಜಿಪ್ಟ್ ಮತ್ತು ಇರಾನ್ ತಂಡಗಳ ನಡುವಣ ಜಿ ಗುಂಪಿನ ಪಂದ್ಯ 1–1 ಡ್ರಾ ಆಯಿತು. ಮಹಮದ್ ಸಬೆರೆ 5ನೇ ನಿಮಿಷ ಈಜಿಪ್ಟ್‌ಗೆ ಮುನ್ನಡೆ ಒದಗಿಸಿದರೆ, ರಮಿನ್ ರಝೈನ್ 14ನೇ ನಿಮಿಷ ಸ್ಕೋರ್ ಸಮ ಮಾಡಿದರು.

ಜೋರ್ಡನ್ ವಿರುದ್ಧ ಪಂದ್ಯ: ಬೆಂಚ್‌ನಲ್ಲಿ ಲಯೊನೆಲ್ ಮೆಸ್ಸಿ



ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ

ಅರ್ಲಿಂಗ್ಟನ್, ಅಮೆರಿಕ (ಎಪಿ): ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಅತ್ಯಧಿಕ ಗೋಲು ಗಳಿಸಿರುವ ಲಯೊನೆಲ್ ಮೆಸ್ಸಿ ಅವರು ಭಾನುವಾರ ನಡೆಯಲಿರುವ ಜೋರ್ಡನ್ ಎದುರಿನ ಪಂದ್ಯದಲ್ಲಿ ಬೆಂಚ್‌ನಲ್ಲಿ ಇರುವರು.

‘ಜೆ’ ಗುಂಪಿನ ಕೊನೆಯ ಪಂದ್ಯ ಇದಾಗಿದೆ. ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವು ಗುಂಪಿನ ಎರಡೂ ಪಂದ್ಯಗಳನ್ನು ಗೆದ್ದುಕೊಂಡಿದೆ. ಮೆಸ್ಸಿ ಒಟ್ಟು ಐದು ಗೋಲು ಗಳಿಸಿದ್ದಾರೆ. ಆರು ವಿಶ್ವಕಪ್ ಟೂರ್ನಿಗಳಿಂದ ಅವರು 18 ಗೋಲು ಗಳಿಸಿದ್ದಾರೆ. ತಂಡವೂ ಈಗಾಗಲೇ ನಾಕೌಟ್ ಹಂತ ಪ್ರವೇಶಿಸಿದೆ.

‘ನಾಯಕರೂ ಆಗಿರುವ ಮೆಸ್ಸಿ ಜೋರ್ಡಾನ್ ಎದುರು ಪಂದ್ಯದ ಆರಂಭದಲ್ಲಿ ಬೆಂಚ್‌ನಲ್ಲಿ ಕುಳಿತುಕೊಳ್ಳುವರು. ಪಂದ್ಯ ಸಾಗಿದಂತೆ ನಿಧಾನವಾಗಿ ಕಣಕ್ಕಿಳಿಯುವರು’ ಎಂದೂ ತಂಡದ ಕೋಚ್ ಲಯೊನೆಲ್ ಸ್ಕ್ಯಾಲೊನಿ ಹೇಳಿದ್ದಾರೆ.

ಇಂದಿನ ಪಂದ್ಯ

ಅಲ್ಜೀರಿಯಾ	V/s	ಆಸ್ಟ್ರಿಯಾ
ಬೆಳಿಗ್ಗೆ: 7.30		
ಜೋರ್ಡನ್	V/s	ಅರ್ಜೆಂಟೀನಾ
ಬೆಳಿಗ್ಗೆ: 7.30		
ದಕ್ಷಿಣ ಆಫ್ರಿಕಾ	V/s	ಕೆನಡಾ
ರಾತ್ರಿ: 12.30		

ಲೈವ್ ಯುನೈಟ್‌8 ನೆಟ್‌ವರ್ಕ್, ಜೀ5 ಆ್ಯಪ್



ಪಾಸ್ ಪೋರ್ಟ್ ನಾಗರಿಕತ್ವದ ರುಜುವಾತಿನ ಬಗ್ಗೆ

ಗೋಲ್‌ಕೀಪರ್ ಮುಸ್ಲೇರಾ ಎಸಗಿದ ಲೋಪ

ನಾಕೌಟ್‌ಗೆ ಸ್ಪೇನ್; ಉರುಗ್ವೆ ಔಟ್

ಗಾಡಲ್ಜರಾ, ಮೆಕ್ಸಿಕೊ (ಎಪಿ): ಗೋಲ್‌ಕೀಪರ್ ಫರ್ನಾಂಡೊ ಮುಸ್ಲೇರಾ ಅವರು ಮಾಡಿದ ತಪ್ಪಿನಿಂದಾಗಿ ಎರಡು ಬಾರಿಯ ಚಾಂಪಿಯನ್ ಉರುಗ್ವೆ ತಂಡವು ಫಿಫಾ ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದಿತು. ಅಲೆಕ್ಸ್ ಬರೇನಾ ಗಳಿಸಿದ ಏಕೈಕ ಗೋಲಿನ (1-0) ನೆರವಿನಿಂದ ಸ್ಪೇನ್ ನಾಕೌಟ್ ಹಂತಕ್ಕೆ ಲಗ್ಗೆ ಇಟ್ಟಿತು.

‘ಎಚ್’ ಗುಂಪಿನಲ್ಲಿ ಆಡಿದ ಉರುಗ್ವೆ ತಂಡವು ಈ ಸಲ ಒಂದೂ ಗೆಲುವು ಸಾಧಿಸದೇ ನಿರ್ಗಮಿಸಿತು. ಯುರೋಪಿಯನ್ ಚಾಂಪಿಯನ್ ಸ್ಪೇನ್ ತಂಡವು ಗುಂಪಿನಲ್ಲಿ ಒಟ್ಟು ಏಳು ಅಂಕ ಗಳಿಸಿತು. 32ರ ಘಟ್ಟದಲ್ಲಿ ಸ್ಪೇನ್ ತಂಡವು ಜೆ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯುವ ತಂಡವನ್ನು ಎದುರಿಸುವರು. ಕ್ಯಾಲಿಫೋರ್ನಿಯಾದ ಇಂಗ್ಲೆವುಡ್‌ನಲ್ಲಿ ಗುರುವಾರ ಪಂದ್ಯ ನಡೆಯಲಿದೆ.

ಪಂದ್ಯದ ಆರಂಭದಿಂದಲೂ ಉಭಯ ತಂಡಗಳ ಆಟಗಾರರು ತುರುಸಿನ ಪೈಪೋಟಿ ನಡೆಸಿದರು. 42ನೇ ನಿಮಿಷದಲ್ಲಿ ಅಲೆಕ್ಸ್ ಅವರು ಗುರಿಯತ್ತ ಒದ್ದ ಚೆಂಡನ್ನು ತಡೆಯುವಲ್ಲಿ ಗೋಲ್‌ಕೀಪರ್ 40 ವರ್ಷ ವಯಸ್ಸಿನ ಮುಸ್ಲೆರಾ ಎಡವಿದರು. ಇದು ಸ್ಪೇನ್ ತಂಡಕ್ಕೆ ವರದಾನವಾಯಿತು. ನಂತರದ ಹಂತದಲ್ಲಿ ಉರುಗ್ವೆ ತಂಡದ ಫಾರ್ವರ್ಡ್ ಆಟಗಾರರು ಗೋಲು ದಾಖಲಿಸಲು ಮಾಡಿದ ಯಾವುದೇ ಪ್ರಯತ್ನವೂ ಕೈಗೂಡದಂತೆ ಸ್ಪೇನ್ ರಕ್ಷಣಾ ಪಡೆ ನೋಡಿಕೊಂಡಿತು.

ಪಂದ್ಯದಲ್ಲಿ ಸ್ಪೇನ್ ತಂಡದ ಮಿಡ್‌ಫೀಲ್ಡರ್ ಯರೇಮಿ ಪಿನೊ ಅವರು ಗಾಯಗೊಂಡರು. ‘ಅವರ ಕಾಲರ್‌ಬೋನ್ ಮುರಿದಿರುವುದರಿಂದ ಈ ಟೂರ್ನಿಯಿಂದಲೇ ಅವರು ಹೊರಬಿದ್ದಿದ್ದಾರೆ. ಸುದೀರ್ಘ ಅವಧಿಯ ಚಿಕಿತ್ಸೆ ಮತ್ತು ವಿಶ್ರಾಂತಿ ಅಗತ್ಯವಿದೆ’ ಎಂದು ಸ್ಪೇನ್ ಕೋಚ್ ಡೆಲಾಫಾಂಟೆ ಹೇಳಿದರು.

ಟರ್ಕಿಗೆ ಮಣಿದ ಅಮೆರಿಕ

ಟರ್ಕಿ ತಂಡವು ಲಾಸ್ ಏಂಜಲಿಸ್‌ನಲ್ಲಿ ನಡೆದ ‘ಡಿ’ ಗುಂಪಿನ ಪಂದ್ಯದಲ್ಲಿ 3–2 ಗೋಲುಗಳಿಂದ ಆತಿಥೇಯ ಅಮೆರಿಕ ತಂಡವನ್ನು ಸೋಲಿಸಿತು. ಅರ್ದಾ ಗುಲೆರ್ (10ನೇ), ಬರಿಸ್ ಅಲ್ಪರ್ ಇಲ್ಮಾಝ್ (31ನೇ) ಮತ್ತು ಕಾನ್ ಇಹಾನ್ (90 + 8) ಅವರು ಟರ್ಕಿ ಪರ ಗೋಲು ಗಳಿಸಿದರು. ಅಮೆರಿಕ ಪರ ಆಸ್ಟಿನ್ ಟ್ರಸ್ಟಿ (3ನೇ) ಮತ್ತು ಸೆಬಾಸ್ಟಿಯನ್ ಬರೇಲ್ಟರ್ (49ನೇ ನಿಮಿಷ) ಚೆಂಡನ್ನು ಗುರಿ ತಲುಪಿಸಿದರು.

ಇದೇ ಗುಂಪಿನಲ್ಲಿ ಪರಗ್ವೆ ಮತ್ತು ಆಸ್ಟ್ರೇಲಿಯಾ ನಡುವಣ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ನಡೆದ ಪಂದ್ಯ ಗೋಲಿಲ್ಲದೇ ಡ್ರಾ ಆಯಿತು. ಅಮೆರಿಕ (6 ಅಂಕ), ಆಸ್ಟ್ರೇಲಿಯಾ (4), ಪರಗ್ವೆ (4) ತಂಡಗಳು ಡಿ ಗುಂಪಿನಿಂದ ನಾಕೌಟ್ ತಲುಪಿವೆ.

ಸೆನೆಗಲ್, ಬೆಲ್ಜಿಯಂಗೆ ಸುಲಭ ಜಯ: ಸೆನೆಗಲ್ ತಂಡವು ‘ಐ’ ಗುಂಪಿನ ಪಂದ್ಯದಲ್ಲಿ ಇರಾಕ್ ತಂಡವನ್ನು 5–0 ಗೋಲಿನಿಂದ ಸುಲಭವಾಗಿ ಮಣಿಸಿತು. ವಿರಾಮದ ವೇಳೆ 1–0 ಗೋಲಿನಿಂದ ಮುಂದಿದ್ದ ಸೆನೆಗಲ್, ಉತ್ತರಾರ್ಧದಲ್ಲಿ ನಾಲ್ಕು ಗೋಲುಗಳನ್ನು ಗಳಿಸಿತು.

ಬೆಲ್ಜಿಯಂ ತಂಡ ‘ಜಿ’ ಗುಂಪಿನ ಪಂದ್ಯದಲ್ಲಿ 5–0 ಯಿಂದ ನ್ಯೂಜಿಲೆಂಡ್ ತಂಡವನ್ನು ಸದೆಬಡಿಯಿತು. ಲಿಯೊನಾರ್ಡ್ ಟ್ರಸ್ಸಾರ್ಡ್ ಅವರ ಗೋಲಿನಿಂದ ವಿಜೇತ ‘ರೆಡ್ ಡೇವಿಲ್ಸ್’ ಪಡೆ ವಿರಾಮದ ವೇಳೆಗೆ 1–0 ಗೋಲಿನಿಂದ ಮುಂದಿತ್ತು.

ಅಮೆರಿಕ ಓಪನ್: ಸೆಮಿಗೆ ದೇವಿಕಾ, ರೌನಕ್, ಶ್ರೀಕಾಂತ್

ಫುಲ್ಲರ್‌ಟನ್ (ಅಮೆರಿಕ), (ಪಿಟಿಐ): ಮೂರನೇ ಶ್ರೇಯಾಂಕದ ರಿಕೊ ಗುಂಜಿ ಅವರಿಗೆ ನೇರ ಆಟಗಳಿಂದ ಆಘಾತ ನೀಡಿದ ಭಾರತದ ದೇವಿಕಾ ಸಿಹಾಗ್ ಅವರು ಅಮೆರಿಕ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ಗೆ ಮುನ್ನಡೆದರು. ಪುರುಷರ ವಿಭಾಗದಲ್ಲಿ ರೌನಕ್ ಚೌಹಾನ್ ಮತ್ತು ಕಿದಂಬಿ ಶ್ರೀಕಾಂತ್ ಸಹ ಸೂಪರ್ 300 ಶ್ರೇಣಿಯ ಈ ಟೂರ್ನಿಯ ನಾಲ್ಕರ ಘಟ್ಟ ತಲುಪಿದರು.

ಶುಕ್ರವಾರ ನಡೆದ ದೇವಿಕಾ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎರಡೂ ಗೇಮ್‌ಗಳ ಅಂತಿಮ ಕ್ಷಣಗಳಲ್ಲಿ ಒತ್ತಡ ತಾಳಿಕೊಂಡ 22–20, 21–19ರಿಂದ ಜಪಾನ್ ಆಟಗಾರ್ತಿಯನ್ನು ಮಣಿಸಿದರು.

ಚೌಹಾನ್ ಅವರು 23–21, 21–11 ರಿಂದ ಇಸ್ರೇಲ್‌ನ ಮಿಶಾ ಜಿಲ್ಬರ್‌ಮನ್ ಅವರನ್ನು ಸೋಲಿಸಲು 38 ನಿಮಿಷ ತೆಗೆದುಕೊಂಡರು. ಮೊದಲ ಬಾರಿ ಸೂಪರ್ 300 ಶ್ರೇಣಿಯ ಟೂರ್ನಿಯಲ್ಲಿ ನಾಲ್ಕರ ಘಟ್ಟ ತಲುಪಿದರು.

ಶ್ರೀಕಾಂತ್ 21–9, 12–21, 21–8 ರಿಂದ ಚೀನಾ ತೈಪೆಯ ಲಿಯಾವೊ–ಝೌ–ಫು ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಚೌಹಾನ್, ಎಂಟನೇ ಶ್ರೇಯಾಂಕದ ಸು ಲಿ ಯಾಂಗ್ (ಚೀನಾ ತೈಪೆ) ಅವರನ್ನು, ಶ್ರೀಕಾಂತ್ ಅವರು ನಾಲ್ಕನೇ ಶ್ರೇಯಾಂಕದ ಯುದೈ ಒಕಿಮೊಟೊ (ಜಪಾನ್) ಅವರನ್ನು ಎದುರಿಸಲಿದ್ದಾರೆ.

ಟಿ20 ಕ್ರಿಕೆಟ್: ಐತಿಹಾಸಿಕ ಸರಣಿ ಜಯದ ಮೇಲೆ ಐರ್ಲೆಂಡ್ ಕಣ್ಣು

ಶ್ರೇಯಸ್ ಬಳಗಕ್ಕೆ ಆಘಾತ ಮರೆಯುವ ಒತ್ತಡ

ಬೆಲ್‌ಫಾಸ್ಟ್ (ಪಿಟಿಐ): ತಾರಾ ವರ್ಚಸ್ಸಿನ ಆಟಗಾರರು ತುಂಬಿರುವ ಭಾರತ ತಂಡಕ್ಕೆ ಅನನುಭವಿ ಐರ್ಲೆಂಡ್ ಬಳಗವು ನೀಡಿರುವ ಆಘಾತ ಮರೆಯಲು ಬಹುಕಾಲ ಬೇಕು. ಶ್ರೇಯಸ್ ಅಯ್ಯರ್ ಅವರಿಗಂತೂ ನಾಯಕರಾಗಿ ಕಾಲಿಟ್ಟ ಮೊದಲ ಪಂದ್ಯದಲ್ಲಿಯೇ ಆಗಿರುವ ಮುಖಭಂಗ ಕೂಡ ಸಣ್ಣದಲ್ಲ.

ಕೇವಲ ಎರಡು ಪಂದ್ಯಗಳ ಟಿ20 ಸರಣಿಯಲ್ಲಿ ಐರ್ಲೆಂಡ್ ಮೊದಲ ಪಂದ್ಯವನ್ನು ಗೆದ್ದಿದೆ. ಉಳಿದಿರುವ ಇನ್ನೊಂದು ಪಂದ್ಯವು ಭಾನುವಾರ ನಡೆಯಲಿದೆ. ಇದರಲ್ಲಿ ಭಾರತ ತಂಡವು ಸೋತರೆ ಐರ್ಲೆಂಡ್ ತಂಡವು ಐತಿಹಾಸಿಕ ಸರಣಿ ಗೆಲುವು ಸಾಧಿಸಲಿದೆ. ಇದೇ ಮೊದಲ ಸಲ ಭಾರತದ ಎದುರು ಅಂತರರಾಷ್ಟ್ರೀಯ ಪಂದ್ಯ ಗೆದ್ದಿರುವ ಆತಿಥೇಯ ತಂಡವು ಭರ್ತಿ ಆತ್ಮವಿಶ್ವಾಸದಲ್ಲಿದೆ. ಇನ್ನೊಂದೆಡೆ ಶ್ರೇಯಸ್ ಬಳಗವು ಈಗ ಸರಣಿ ಸಮಬಲ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಈ ಪಂದ್ಯದಲ್ಲಿ ಬ್ಯಾಟರ್‌ಗಳು ಎಚ್ಚರಿಕೆಯಿಂದ ಆಡ ಬೇಕಾದ ಒತ್ತಡವಿದೆ. ಮೊದಲ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅವರು ಅಬ್ಬರದ ಬ್ಯಾಟಿಂಗ್ ಮಾಡಿದ್ದರು. ಆದರೂ 182 ರನ್‌ಗಳ ಗುರಿಯನ್ನು ಸಾಧಿಸುವಲ್ಲಿ ಭಾರತ ಎಡವಿತು. ಕೇವಲ 148 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಮುಂದಿನ ವಾರ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಐದು ಪಂದ್ಯಗಳ ಸರಣಿಯನ್ನು ಆಡಲಿದೆ. ತಂಡವು ಟಿ20 ವಿಶ್ವಕಪ್ ಜಯಿಸಿದ್ದ ಸಂದರ್ಭದಲ್ಲಿ ನಾಯಕರಾಗಿದ್ದ ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ಲಯ ಕಳೆದುಕೊಂಡಿರುವುದರಿಂದ ಸ್ಥಾನವಂಚಿತರಾಗಿದ್ದಾರೆ. ಅವರ ಬದಲಿಗೆ ಬಂದಿರುವ ಶ್ರೇಯಸ್ ಕೂಡ ಕಳೆದ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಅಲ್ಲದೇ ಅವರ ನಾಯಕತ್ವದಲ್ಲಿ ಅನುಭವದ ಕೊರತೆಯೂ ಎದ್ದುಕಂಡಿತು.

ಅವರಷ್ಟೇ ಅಲ್ಲ. ಸಂಜು ಸ್ಯಾಮ್ಸನ್, ಇಶಾನ್ ಕಿಶನ್ ಕೂಡ ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಲಿಲ್ಲ. ಪವರ್‌ಪ್ಲೇಯಲ್ಲಿ ಅಭಿಷೇಕ್ ಮಾತ್ರ ನಿರೀಕ್ಷೆಗೆ ತಕ್ಕಂತೆ ಆಡಿದರು. ತಿಲಕ್ ವರ್ಮಾ, ವಾಷಿಂಗ್ಟನ್ ಸುಂದರ್ ಮತ್ತು ಶಿವಂ ದುಬೆ ಅವರು ಒಂದಿಷ್ಟು ಪ್ರಯತ್ನ ಮಾಡಿದರೂ ತಂಡವನ್ನು ಗೆಲುವಿನ ದಡ ಸೇರಿಸಲಿಲ್ಲ.

ಮ್ಯಾಥ್ಯೂ ಹಂಪ್ರಿಸ್ , ಜೈ ಮೂಂದ್ರಾ ಮತ್ತು ಮ್ಯಾಥ್ಯೂ ಹೊಲಾರ್ಡ್ ಅವರ ಬೌಲಿಂಗ್ ಅಮೋಘವಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಐರ್ಲೆಂಡ್ ಆಟಗಾರರ ಫೀಲ್ಡಿಂಗ್ ಸೊಗಸಾಗಿತ್ತು. ಯಾವುದೇ ಕ್ಯಾಚ್ ಕೈಜಾರದಂತೆ ಶಿಸ್ತಿನ ಕ್ಷೇತ್ರರಕ್ಷಣೆಯಿಂದ ಪ್ರವಾಸಿ ತಂಡದ ಮೇಲೆ ಅಪಾರ ಒತ್ತಡ ಹಾಕಿದರು.

ಭಾರತದ ಬೌಲಿಂಗ್ ಪಡೆಯು ಉತ್ತಮವಾಗಿದೆ. ಐರ್ಲೆಂಡ್ ಇನಿಂಗ್ಸ್‌ಗೆ ಆರಂಭದಲ್ಲಿಯೇ ಕಟ್ಟಿಹಾಕುವ ಪ್ರಯತ್ನ ಮಾಡಿತ್ತು. ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾ ಅವರ ಸ್ವಿಂಗ್ ಎಸೆತಗಳಿಗೆ ಐರ್ಲೆಂಡ್ ಬ್ಯಾಟರ್‌ಗಳು ಕಂಗೆಟ್ಟಿದ್ದರು. ಮಧ್ಯಮ ಕ್ರಮಾಂಕದಲ್ಲಿ ನಾಯಕ ಲಾರ್ಕನ್ ಟಕರ್ ಮತ್ತು ಗರೆತ್ ಡೆಲಾನಿ ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ನೆರವಾಗಿದ್ದರು. ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಯಶಸ್ವಿಯಾಗಿದ್ದರೆ ಮೊತ್ತ ಇನ್ನೂ ಚಿಕ್ಕದಾಗಿರುತ್ತಿತ್ತು.

ಭಾರತ ತಂಡವನ್ನು ಸೋಲಿನಿಂದ ಹೊರ ತರಲು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಹೆಣೆಯುವ ತಂತ್ರಗಾರಿಕೆಯೂ ಇಲ್ಲಿ ಮುಖ್ಯವಾಗಲಿದೆ.

ಪಂದ್ಯ ಆರಂಭ: ಸಂಜೆ 6 ರಿಂದ
ನೇರಪ್ರಸಾರ: ಸೋನಿ ಸ್ಪೋರ್ಟ್ಸ್



ಭಾರತ ತಂಡದ ನಾಯಕ ಶ್ರೇಯಸ್ ಅಯ್ಯರ್

ಪದಾರ್ಪಣೆ ಮಾಡುವರೇ ವೈಭವ್?



15 ವರ್ಷದ ವೈಭವ್ ಸೂರ್ಯವಂಶಿ ಅವರಿಗೆ ಐರ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ ಕಣಕ್ಕಿಳಿಸಿರಲಿಲ್ಲ. ಆದರೆ ಆ ಪಂದ್ಯದಲ್ಲಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾಗಿದ್ದರಿಂದ ಭಾನುವಾರ ವೈಭವ್ ಅವರಿಗೆ ಅವಕಾಶ ಸಿಗಬಹುದು ಎಂಬ ನಿರೀಕ್ಷೆಯೂ ಇದೆ.

ಆದರೆ ಕೇವಲ ಒಂದು ಸೋಲಿನ ಹಿನ್ನೆಲೆಯಲ್ಲಿ ಅನುಭವಿ ಸಂಜು ಸ್ಯಾಮ್ಸನ್ ಅಥವಾ ಇಶಾನ್ ಕಿಶನ್ ಅವರಿಗೆ ವಿಶ್ರಾಂತಿ ನೀಡುವ ಸಾಧ್ಯತೆ ಕಡಿಮೆ. ವೈಭವ್ ಅವರನ್ನು ಆಡಿಸಲು ಸಂಜುಗೆ ಮೂರನೇ ಕ್ರಮಾಂಕ ನೀಡಬಹುದು. ಇದರಿಂದ ವಾಷಿಂಗ್ಟನ್ ಸುಂದರ್ ಅವರಿಗೆ ವಿಶ್ರಾಂತಿ ಕೊಡಬಹುದು. ನಾಲ್ಕನೇ ಕ್ರಮಾಂಕದಲ್ಲಿ ಇಶಾನ್ ಆಡಬಹುದು. ಆದರೆ ಈ ಎಲ್ಲ ಕಸರತ್ತು ಮಾಡುವ ಸಾಧ್ಯತೆಗಳು ತೀರಾ ಕಡಿಮೆ. ಆದ್ದರಿಂದ ಈ ಪಂದ್ಯದಲ್ಲಿಯೂ ವೈಭವ್ ಪದಾರ್ಪಣೆ ಖಚಿತವಿಲ್ಲ.

ವಿಶ್ವ ಯುವ ಚೆಸ್ ಪ್ರತೀತಿಗೆ ಬೆಳ್ಳಿ



ಬೆಂಗಳೂರು: ನಗರದ ಚೆಸ್ ಪ್ರತಿಭೆ, 13 ವರ್ಷ ವಯಸ್ಸಿನ ಪ್ರತೀತಿ ಬೊರ್ದೋಲಾಯಿ, ಇಟಲಿಯ ಮಾಂಟೆಸಿಲ್ವಾನೊದಲ್ಲಿ ನಡೆದ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ 18 ವರ್ಷದೊಳಗಿನವರ ವಿಭಾಗದಲ್ಲಿ ಅಜೇಯ ಸಾಧನೆಯೊಡನೆ ಬೆಳ್ಳಿ ಪದಕ ಗೆದ್ದುಕೊಂಡಿದ್ದಾಳೆ. ಈ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಭಾರತದ ಏಕೈಕ ಆಟಗಾರ್ತಿ ಎಂಬ ಶ್ರೇಯವೂ ಪ್ರತೀತಿ ಅವಳದಾಯಿತು.

ಶಿಷ್ಯ ಬೆಮೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿರುವ ಪ್ರತೀತಿ ಈ ಟೂರ್ನಿಯ 11 ಸುತ್ತುಗಳಲ್ಲಿ ಏಳನ್ನು ಗೆದ್ದು, ನಾಲ್ಕನ್ನು ಡ್ರಾ ಮಾಡಿಕೊಂಡು 9 ಅಂಕ ಗಳಿಸಿದ್ದಾಳೆ. ಈ ಸಾಧನೆಯ ಮೂಲಕ ಮೊದಲ ಡಬ್ಲ್ಯುಐಎಂ ನಾರ್ಮ್ ಪಡೆದಳು. 129 ಇಎಲ್‌ಒ ಪಾಯಿಂಟ್ಸ್ ಸಹ ಅವರ ಖಾತೆಗೆ ಸೇರಿತು. ಅವರ ರೇಟಿಂಗ್ ಪರ್ಫಾರ್ಮೆನ್ಸ್ 2350.

ಈ ಟೂರ್ನಿ ಜೂನ್ 15 ರಿಂದ 26ರ ವರೆಗೆ ನಡೆಯಿತು.

ಏಳನೇ ಸುತ್ತಿನಲ್ಲಿ ವೆಲೇರಿಯಾ ಕ್ಲಮೆನೋವಾ ಅವರ ವಿರುದ್ಧ ಸ್ಪಷ್ಟ ಮೇಲುಗೈ ಹೊಂದಿದ್ದರೂ ಪ್ರತೀತಿ ಅಂತಿಮವಾಗಿ ಡ್ರಾಕ್ಕೆ ಸಹಿ ಮಾಡಬೇಕಾಯಿತು.

ಕ್ಲೆಮೆನೋವಾ, ಅಂತಿಮವಾಗಿ ಚಾಂಪಿಯನ್ ಆದಳು. ರಷ್ಯಾದ ಆಟಗಾರ್ತಿ 9 ಗೆಲುವು, 2 ಡ್ರಾ ಸೇರಿದಂತೆ 10 ಅಂಕ ಗಳಿಸಿದಳು.

ಹರ್ಮನ್ ಪಡೆಗೆ ಮಾಡು– ಮಡಿ ಪಂದ್ಯ

ಲಂಡನ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾನುವಾರ ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಗೆದ್ದರೆ ಭಾರತಕ್ಕೆ ಸೆಮಿಫೈನಲ್ ಹಾದಿ ಸುಗಮವಾಗಲಿದೆ.

ಈ ಟೂರ್ನಿಯಲ್ಲಿ ಎರಡು ಗುಂಪುಗಳಿವೆ. ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ನಾಲ್ಕರ ಘಟ್ಟಕ್ಕೆ ಪ್ರವೇಶಿಸಲಿವೆ. ಎ ಗುಂಪಿನಲ್ಲಿ ಎಂಟು ಅಂಕ ಗಳಿಸಿರುವ ಆಸ್ಟ್ರೇಲಿಯಾ ತಂಡವು ಅಗ್ರಸ್ಥಾನದಲ್ಲಿದೆ. ಆಡಿರುವ ನಾಲ್ಕು ಪಂದ್ಯಗಳಲ್ಲಿಯೂ ಗೆದ್ದಿದೆ. ಭಾರತ ತಂಡವು ನಾಲ್ಕರಲ್ಲಿ ಮೂರು ಗೆದ್ದು ಆರು ಅಂಕ ಗಳಿಸಿದೆ. ಎರಡನೇ ಸ್ಥಾನದಲ್ಲಿದೆ. ಆರು ಅಂಕ ಗಳಿಸಿ ಮೂರನೇ ಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ಭಾನುವಾರ ನಡೆಯಲಿರುವ ಇನ್ನೊಂದು ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ.

ಒಂದೊಮ್ಮೆ ಭಾರತವು ಆಸ್ಟ್ರೇಲಿಯಾ ಎದುರು ಸೋತು, ಬಾಂಗ್ಲಾ ಎದುರು ದಕ್ಷಿಣ ಆಫ್ರಿಕಾ ಗೆದ್ದರೆ ಹರ್ಮನ್ ಬಳಗದ ಸೆಮಿಫೈನಲ್ ಕನಸು ಭಗ್ನವಾಗುವುದು ಖಚಿತ. ಉಭಯ ಪಂದ್ಯಗಳಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ಎರಡೂ ಸೋತರೆ ನಿವ್ವಳ ರನ್ ಸರಾಸರಿಯ ಲೆಕ್ಕಾಚಾರ ಮುಂಚೂಣಿಗೆ ಬರಲಿದೆ. ಆದರೆ ದಕ್ಷಿಣ ಆಫ್ರಿಕಾ ತಂಡವು ಬಾಂಗ್ಲಾಗಿಂತ ಹೆಚ್ಚು ಬಲಾಢ್ಯವಾಗಿದೆ. ಆಸ್ಟ್ರೇಲಿಯಾ ತಂಡವನ್ನು ಮಣಿಸುವುದು ಭಾರತಕ್ಕೆ ಸುಲಭವಲ್ಲ.

ಅದರಲ್ಲೂ ಕಳಪೆ ಫೀಲ್ಡಿಂಗ್‌ನಿಂದಾಗಿ ಟೂರ್ನಿಯುದ್ದಕ್ಕೂ ಕ್ಯಾಚ್‌ಗಳನ್ನು ಕೈಚೆಲ್ಲುತ್ತಿರುವ ಹರ್ಮನ್ ಬಳಗವು ಎಚ್ಚರಿಕೆ ಯಿಂದ ಆಡುವ ಒತ್ತಡವೂ ಇದೆ. ಆದರೂ ಸ್ಪಿನ್ನರ್ ಶ್ರೀಚರಣಿ (12 ವಿಕೆಟ್), ದೀಪ್ತಿ ಶರ್ಮಾ (6 ವಿಕೆಟ್) ಹಾಗೂ ಮಧ್ಯಮ ವೇಗಿ ಕ್ರಾಂತಿ ಗೌಡ್ ಅವರು ತಮ್ಮ ಲಯ ಉಳಿಸಿಕೊಂಡಿರುವುದು ಸಮಾಧಾನಕರ.

ಆದರೂ ಬ್ಯಾಟಿಂಗ್ ವಿಭಾಗದಲ್ಲಿ ಸ್ಮೃತಿ ಮಂದಾನ (167 ರನ್) ಮತ್ತು ಶಫಾಲಿ ವರ್ಮಾ (145) ಉತ್ತಮವಾಗಿ ಆಡುತ್ತಿದ್ದಾರೆ. ಆದರೆ ನಾಯಕಿ ಹರ್ಮನ್‌ಪ್ರೀತ್ ಕೌರ್ (85) ಮತ್ತು ಜೆಮಿಮಾ ರಾಡ್ರಿಗಸ್ (58) ಒಳಗೊಂಡ ಭಾರತದ ಮಧ್ಯಮ ಕ್ರಮಾಂಕವು ವಿಫಲವಾಗಿದೆ.

ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿದ ಇತಿಹಾಸ ಇದೆ. ಆ ಪಂದ್ಯದಲ್ಲಿ ಜೆಮಿಮಾ ಅವರು ತಮ್ಮ ಜೀವನಶ್ರೇಷ್ಠ ಇನಿಂಗ್ಸ್ ಆಡಿದ್ದರು. ಇದೀಗ ಅಂತಹದೇ ಮತ್ತೊಂದು ಆಟದ ನಿರೀಕ್ಷೆ ಗರಿಗೆದರಿದೆ.

ಸೋಫಿ ಮಾಲಿನೆ ನಾಯಕತ್ವದ ಆಸ್ಟ್ರೇಲಿಯಾ ತಂಡಕ್ಕೆ ಸೆಮಿಫೈನಲ್ ಪ್ರವೇಶ ಬಹುತೇಕ ಖಚಿತವಾಗಿದೆ.



ಭಾರತ ತಂಡದ ಸ್ಪಿನ್ನರ್ ಶ್ರೀಚರಣಿ

ಇಂದಿನ ಪಂದ್ಯ

ದಕ್ಷಿಣ ಆಫ್ರಿಕಾ	V/s	ಬಾಂಗ್ಲಾದೇಶ
ಪಂದ್ಯ ಆರಂಭ: ಮಧ್ಯಾಹ್ನ 3		
ಭಾರತ	V/s	ಆಸ್ಟ್ರೇಲಿಯಾ
ಪಂದ್ಯ ಆರಂಭ: ರಾತ್ರಿ 7		

ಲೈವ್ ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ವಿಂಡೀಸ್‌ಗೆ ಆಘಾತ

ಬ್ರಿಸ್ಟಲ್: ಐರ್ಲೆಂಡ್ ತಂಡವು ಶನಿವಾರ ನಡೆದ ಐಸಿಸಿ ಟಿ20 ಮಹಿಳಾ ವಿಶ್ವಕಪ್‌ನ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡಕ್ಕೆ ಆಘಾತ ನೀಡಿತು.

ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್ ತಂಡವು 7 ವಿಕೆಟ್‌ಗೆ 128 ರನ್ ಗಳಿಸಿತು. ಐಮಿ ಮ್ಯಾಗೈರ್ (22ಕ್ಕೆ 2) ಮತ್ತು ಕಾರಾ ಮುರ್ರೆ (13ಕ್ಕೆ 2) ಪರಿಣಾಮಕಾರಿ ದಾಳಿ ನಡೆಸಿದರು.

ಗುರಿ ಬೆನ್ನಟ್ಟಿದ ಐರ್ಲೆಂಡ್ ತಂಡವು ಓರ್ಲಾ ಪ್ರೆಂಡರ್‌ಗ್ಯಾಸ್ಟ್ (63;44ಎ) ಅವರ ಅರ್ಧಶತಕದ ನೆರವಿನಿಂದ 18.1 ಓವರ್‌ಗಳಲ್ಲಿ 4 ವಿಕೆಟ್‌ಗೆ 129 ರನ್ ಗಳಿಸಿ, ಆರು ವಿಕೆಟ್‌ಗಳ ಜಯ ದಾಖಲಿಸಿತು. ಐರ್ಲೆಂಡ್‌ಗೆ ವೆಸ್ಟ್ ಇಂಡೀಸ್ ವಿರುದ್ಧ 12 ವರ್ಷಗಳಲ್ಲಿ ಇದು ಮೊದಲ ಗೆಲುವಾಗಿದೆ.

ವಿಂಡೀಸ್‌ಗೆ ಗೆದ್ದಿದ್ದರೆ ಸೆಮಿಫೈನಲ್‌ಗೆ ಅರ್ಹತೆ ಪಡೆಯುತ್ತಿತ್ತು. ಇದೀಗ, ಈ ಸೋಲಿನಿಂದಾಗಿ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡಕ್ಕೂ ನಾಕೌಟ್ ಅವಕಾಶ ಜೀವಂತವಾಗಿದೆ.

ರಾಜ್ಯದ ಯಶಸ್, ಸ್ನೇಹಾಗೂ ಏಷ್ಯನ್ ಗೇಮ್ಸ್ ಟಿಕೆಟ್

ಆ್ಯನ್ಸಿ, ಸರ್ವೇಶ್ ನೂತನ ದಾಖಲೆ



ಆ್ಯನ್ಸಿ ಸೋಜನ್

ಭುವನೇಶ್ವರ (ಪಿಟಿಐ): ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ಸ್ ಕೂಟವು ಶನಿವಾರ ಮತ್ತೆರಡು ದಾಖಲೆಗಳ ಮೂಲಕ ಅವಿಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾಯಿತು. ಕೇರಳದ ಆ್ಯನ್ಸಿ ಸೋಜನ್ ಅವರು ಲಾಂಗ್ ಜಂಪ್‌ನಲ್ಲಿ ಮತ್ತು ಮಹಾರಾಷ್ಟ್ರದ ಸರ್ವೇಶ್ ಅನಿಲ್ ಕುಶಾರೆ ಅವರು ಹೈಜಂಪ್‌ನಲ್ಲಿ ನೂತನ ರಾಷ್ಟ್ರೀಯ ದಾಖಲೆಗಳನ್ನು ಬರೆದರು.

ಕರ್ನಾಟಕದ ಯಶಸ್ ಪಾಲಾಕ್ಷ 400 ಮೀ. ಓಟದಲ್ಲಿ ಚಿನ್ನ ಗೆದ್ದು, ಏಷ್ಯನ್ ಗೇಮ್ಸ್‌ಗೆ ಅರ್ಹತೆಯನ್ನೂ ಗಳಿಸಿದರು. 24 ವರ್ಷ ವಯಸ್ಸಿನ ತುಮಕೂರಿನ ಓಟಗಾರ ಮತ್ತು ತಮಿಳುನಾಡಿನ ಟಿ.ಸಂತೋಷ್ ಇಬ್ಬರೂ 49.1 ಸೆ.ಗಳಲ್ಲಿ ಗುರಿತಲುಪಿದರು. ಫೋಟೊ ಫಿನಿಷ್ ಆಧಾರದಲ್ಲಿ ಯಶಸ್ ಜಯಶಾಲಿಯಾದರು. ಕರ್ನಾಟಕದ ಆರ್ಯನ್ ಕಶ್ಯಪ್ (59.95 ಸೆ.) ಕಂಚಿನ ಪದಕ ಗಳಿಸಿದರು.

ಹಾಲಿ ಋತುವಿನಲ್ಲಿ ಉತ್ತಮ ಲಯದಲ್ಲಿರುವ ಆ್ಯನ್ಸಿ 6.88 ಮೀ. ದೂರ ಜಿಗಿದು, 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಅಂಜು ಬಾಬಿ ಜಾರ್ಜ್ ಸ್ಥಾಪಿಸಿದ್ದ 6.83 ಮೀ.ಗಳ ದಾಖಲೆ ಮುರಿದರು. 25 ವರ್ಷ ವಯಸ್ಸಿನ ಆ್ಯನ್ಸಿ ಅವರಿಗೆ ಪೈಪೋಟಿ ನೀಡಿದ ಉತ್ತರ ಪ್ರದೇಶದ ಶೈಲಿ ಸಿಂಗ್ (6.67 ಮೀ.) ಎರಡನೇ ಸ್ಥಾನ ಪಡೆದರು.

ದೇಶದ ಅಗ್ರ ಹೈಜಂಪ್ ಸ್ಪರ್ಧಿ ಸರ್ವೇಶ್ 2.30 ಮೀ. ಎತ್ತರ ಜಿಗಿದು, ತೇಜಸ್ವಿನ್ ಶಂಕರ್ 2018ರಲ್ಲಿ ಸ್ಥಾಪಿಸಿದ್ದ 2.29 ಮೀ.ಗಳ ದಾಖಲೆ ಮುರಿದರು. ಸರ್ವೇಶ್ ಮತ್ತು ಆ್ಯನ್ಸಿ – ಇಬ್ಬರೂ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದರು.

ಹೈಜಂಪ್‌ನಲ್ಲಿ ತಮಿಳುನಾಡಿನ ಆದರ್ಶ್ ರಾಮ್ (2.27 ಮೀ.) ಮತ್ತು ಕರ್ನಾಟಕದ ಜೆಸ್ಸಿ ಸಂದೇಶ್ (2.19 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಮಹಿಳೆಯರ 100 ಮೀ. ಓಟದಲ್ಲಿ ಮಹಾರಾಷ್ಟ್ರದ ಸುದೇಷ್ಣಾ ಶಿವಣಕರ್ (11.59 ಸೆ.) ಮತ್ತು ಕರ್ನಾಟಕದ ಎಸ್.ಎಸ್.ಸ್ನೇಹಾ (11.65) ಇಬ್ಬರೂ ಏಷ್ಯನ್ ಗೇಮ್ಸ್ ಅರ್ಹತಾ ಮಟ್ಟ ದಾಟಿದರು.

400 ಮೀ. ಹರ್ಡಲ್ಸ್ ಓಟದಲ್ಲಿ ಕರ್ನಾಟಕದ ಸಿಂಚಲ್ ಕಾವೇರಮ್ಮ (58.90 ಸೆ.) ಕಂಚಿನ ಪದಕ ಪಡೆದರೆ, ಜಾವೆಲಿನ್ ಥ್ರೋನಲ್ಲಿ ಕರಿಷ್ಮಾ ಸನಿಲ್ (53.06 ಮೀ.) ಬೆಳ್ಳಿ ಪದಕ ಗೆದ್ದರು. ಉತ್ತರಾಖಂಡದ ಅನ್ನುರಾಣಿ (56.74 ಮೀ.) ಮೊದಲಿಗರಾದರು.

ಬೆಂಗಳೂರು ಬ್ಲಾಸ್ಟರ್ಸ್ ಗೆಲುವಿನ ಓಟ

• ಸತೀಶ ಬಿ.

ಹುಬ್ಬಳ್ಳಿ: ರೋಹನ್ ಪಾಟೀಲ ಅವರ ಅರ್ಧಶತಕದ (62 ರನ್, 46 ಎ) ಬಲದಿಂದ ಶಿವಮೊಗ್ಗ ಯೋಧಾಸ್ ತಂಡವನ್ನು ಮಣಿಸಿದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶಿವಮೊಗ್ಗ ಒಡ್ಡಿದ್ದ 174 ರನ್‌ಗಳ ಗುರಿ ಬೆನ್ನತ್ತಿದ ಬೆಂಗಳೂರು 7 ವಿಕೆಟ್‌ಗಳಿಂದ ಜಯಿಸಿತು. ಬೆಂಗಳೂರು ತಂಡದ ಭುವನ್ ರಾಜು (29) ಮತ್ತು ರೋಹನ್ ಮೊದಲ ವಿಕೆಟ್ ಜತೆಯಾಟದಲ್ಲಿ 45 ಎಸೆತಗಳಲ್ಲಿ 65 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಭುವನ್ ಔಟಾದ ಬಳಿಕ ಕೆ.ಎಲ್.ಶ್ರೀಜಿತ್ (21) ಜತೆ ಸೇರಿದ ರೋಹನ್ ಎರಡನೇ ವಿಕೆಟ್‌ಗೆ ಅರ್ಧಶತಕದ (54 ರನ್, 40 ಎ) ಜತೆಯಾಟವಾಡಿ ರನ್ ವೇಗ ಹೆಚ್ಚಿಸಿದರು. ಉತ್ತಮವಾಗಿ ಆಡುತ್ತಿದ್ದ ರೋಹನ್ ಅವರನ್ನು ಶ್ರೀಷ ಆಚಾರ್ ಎಲ್‌ಬಿ ಬಲೆಗೆ ಕೆಡವಿದರು.



ರೋಹನ್ ಪಾಟೀಲ್ ಅವರ ಬ್ಯಾಟಿಂಗ್ ವೈಖರಿ
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಬೆಂಗಳೂರು ತಂಡಕ್ಕೆ ಕೊನೆಯ ಐದು ಓವರ್‌ಗಳಲ್ಲಿ ಗೆಲುವಿಗೆ 50 ರನ್‌ಗಳ ಅಗತ್ಯವಿತ್ತು. 16.4 ಓವರ್‌ನಲ್ಲಿ ಪ್ರವೀಣ್ ದುಬೆ ಅವರ ಕ್ಯಾಚ್ ಕೈಚೆಲ್ಲಿದ್ದು, ಶಿವಮೊಗ್ಗ ತಂಡಕ್ಕೆ ದುಬಾರಿಯಾಯಿತು. ಕೊನೆಯಲ್ಲಿ ಅಬ್ಬರಿಸಿದ ಪ್ರವೀಣ್ (39 ರನ್, 15 ಎ, 4X3, 6X3) ತಂಡಕ್ಕೆ ಗೆಲುವು ತಂದಿತ್ತರು.

ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡ ಬೇಗನೇ ಮೊದಲ ವಿಕೆಟ್ ಕಳೆದುಕೊಂಡಿತು. ಲವನಿತ್ ಸಿಸೋಡಿಯಾ ಬಿರುಸಿನ ಅರ್ಧಶತಕ (51 ರನ್, 32ಎ) ಗಳಿಸಿ ತಂಡಕ್ಕೆ ಆಸರೆಯಾದರು. ನಾಯಕ ಸ್ಮರಣ್ ಆರ್., ಉಪಯುಕ್ತ ಕಾಣಿಕೆ ನೀಡಿದರು. ಬೆಂಗಳೂರು ಪರ ರೋಹನ್ ರಾಜು 21 ರನ್ ನೀಡಿ 3 ವಿಕೆಟ್ ಕಿತ್ತು ಎದುರಾಳಿ ತಂಡವನ್ನು ಕಟ್ಟಿಹಾಕಿದರು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಯೋಧಾಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 173 (ಲವನಿತ್ ಸಿಸೋಡಿಯಾ 51, ಸ್ಮರಣ್ 36; ರೋಹನ್ ರಾಜು 21ಕ್ಕೆ 3). ಬೆಂಗಳೂರು ಬ್ಲಾಸ್ಟರ್ಸ್: 19 ಓವರ್‌ಗಳಲ್ಲಿ 3 ವಿಕೆಟ್‌ಗೆ 177 (ರೋಹನ್ ಪಾಟೀಲ 62, ಪ್ರವೀಣ್ ದುಬೆ 39; ಶ್ರೀಷ ಆಚಾರ್ಯ 34ಕ್ಕೆ1). ಪಂದ್ಯದ ಆಟಗಾರ: ರೋಹನ್ ಪಾಟೀಲ

ಇಂದಿನ ಪಂದ್ಯ: ಶಿವಮೊಗ್ಗ ಯೋಧಾಸ್– ಕೋಸ್ಟಲ್ ಕಿಂಗ್ಸ್ ಮಂಗಳೂರು (ಮಧ್ಯಾಹ್ನ 1)

ಮಿಸ್ಟಿಕ್ಸ್‌ಗೆ ಜಯ

ಹುಬ್ಬಳ್ಳಿ: ಶರತ್ ಬಿ.ಆರ್ (49 ರನ್, 28 ಎ) ಮತ್ತು ಅನುಭವಿ ಮನೀಷ್ ಪಾಂಡೆ (43 ರನ್, 31 ಎ) ಅವರ ಆಟದಿಂದಾಗಿ ಮೈಸೂರು ವಾರಿಯರ್ಸ್ ತಂಡವನ್ನು ಮಣಿಸಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು, ಹ್ಯಾಟ್ರಿಕ್ ಜಯದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಶನಿವಾರ ನಡೆದ ಮತ್ತೊಂದು ಪಂದ್ಯದಲ್ಲಿ ಮೈಸೂರು ನೀಡಿದ 156 ರನ್‌ಗಳ ಗುರಿಯನ್ನು ಗುಲ್ಬರ್ಗ ತಂಡವು 18.5 ಓವರ್‌ಗಲ್ಲಿ 7 ವಿಕೆಟ್ ಕಳೆದುಕೊಂಡು ಮುಟ್ಟಿತು. ಮನೀಷ್ ಮತ್ತು ಕ್ರಾಂತಿಕುಮಾರ್ ಏಳನೇ ವಿಕೆಟ್ ಜತೆಯಾಟದಲ್ಲಿ 31 ಎಸೆತಗಳಲ್ಲಿ 52 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಮೈಸೂರು ಪರ ರಿತೇಶ ಭಟ್ಕಳ 20 ರನ್ ನೀಡಿ 4 ವಿಕೆಟ್ ಪಡೆದರು.